ಶುಕ್ರವಾರ, ಫೆಬ್ರುವರಿ 2, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 33 | ಪುಟ 18

www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಗಂಟುಮೂಟೆ' ಸಿನಿಮಾ ಖ್ಯಾತಿಯ ನಿಶ್ಚಿತ್ ಕರೋಡಿ 'ಸಪ್ಲಯರ್ ಶಂಕರ'ನಾಗಿ ತೆರೆಗೆ ಬಂದಿದ್ದಾರೆ

ಸಾಹಿತ್ಯದ ಮಹಾಮೇಳದಲ್ಲಿ ಪ್ರಜಾಪ್ರಭುತ್ವದ್ದೇ ಪ್ರತಿಧ್ವನಿ 15
'ಇ-ಶ್ರಮ್: ವಯೋಮಿತಿ 70ಕ್ಕೆ ಏರಿಕೆ' 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,645 ▼	21,695 ▼	₹65,080 (ಬೆಂಗಳೂರು) ▲	₹73,700 (ಬೆಂಗಳೂರು) ▼	82.98 ▲

ಬಜೆಟ್ ಗಾತ್ರ ₹47.66 ಲಕ್ಷ ಕೋಟಿ | ಬಡ್ಡಿ ಪಾವತಿ ₹11.90 ಲಕ್ಷ ಕೋಟಿ | ವಿತ್ತೀಯ ಕೊರತೆ ₹16.85 ಲಕ್ಷ ಕೋಟಿ | ಆದಾಯ ತೆರಿಗೆ ಸಂಗ್ರಹ ಗುರಿ ₹11.56 ಲಕ್ಷ ಕೋಟಿ

ಕನಸು 'ವಿಕಸಿತ', ನೀಲನಕ್ಷೆ ಸಂಕುಚಿತ

ಬಡವರು, ಮಹಿಳೆಯರು, ರೈತರು, ಯುವಜನರತ್ತ ಚಿತ್ತ

ಇದೊಂದು ಐತಿಹಾಸಿಕ ಬಜೆಟ್. ₹ 11.11 ಲಕ್ಷ ಕೋಟಿ ಬಂಡವಾಳ ವೆಚ್ಚಕ್ಕೆ ಅವಕಾಶ ಕಲ್ಪಿಸುವ ಜೊತೆಗೆ ವಿತ್ತೀಯ ಕೊರತೆಯನ್ನು ನಿಯಂತ್ರಣದಲ್ಲಿ ಇರಿಸಿದೆ.
ನರೇಂದ್ರ ಮೋದಿ, ಪ್ರಧಾನಿ

ಕೇಂದ್ರದ ಮಧ್ಯಂತರ ಬಜೆಟ್‌ನಲ್ಲಿ ಹೊಣೆಗಾರಿಕೆ ಮತ್ತು ಮುನ್ನೋಟ ಎರಡೂ ಕಾಣೆಯಾಗಿವೆ! ಬಡವರು ಮತ್ತು ಮಧ್ಯಮ ವರ್ಗದವರ ನೋವನ್ನು ಕಡಿಮೆ ಮಾಡುವ ಯಾವ ಯೋಜನೆಗಳೂ ಇಲ್ಲ
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತವನ್ನು 2047ರ ಹೊತ್ತಿಗೆ ಜಗತ್ತಿನ ಅತ್ಯಂತ ಶ್ರೀಮಂತ ಹಾಗೂ 'ವಿಕಸಿತ' ದೇಶವಾಗಿಸುವ ಸಂಕಲ್ಪವನ್ನು ಹೊತ್ತಿರುವ 2024–25ನೇ ಸಾಲಿನ ಮಧ್ಯಂತರ ಬಜೆಟ್ ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಗುರುವಾರ ಮಂಡಿಸಿದ್ದಾರೆ. ಆದರೆ, ಇದಕ್ಕಾಗಿ ಸ್ಪಷ್ಟವಾದ ನೀಲನಕ್ಷೆಯನ್ನು ನಿರ್ಮಲಾ ಅವರು ಹಾಕಿಕೊಂಡಿಲ್ಲ.

ಸಂಪ್ರದಾಯದಂತೆಯೇ, ಮಧ್ಯಂತರ ಬಜೆಟ್‌ನಲ್ಲಿ ಪ್ರತ್ಯಕ್ಷ, ಪರೋಕ್ಷ ಮತ್ತು ಕಾರ್ಪೊರೇಟ್ ತೆರಿಗೆ ದರಗಳಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ. ಲೋಕಸಭೆಗೆ ಇನ್ನು ಕೆಲವೇ ತಿಂಗಳುಗಳಲ್ಲಿ ಚುನಾವಣೆ ನಡೆಯಲಿದೆ. ಹಾಗಿದ್ದರೂ ಮತದಾರರ ಮೇಲೆ ಪರಿಣಾಮ ಬೀರಬಲ್ಲ ವಿಶೇಷ ಘೋಷಣೆ ಮಾಡಲಾಗಿಲ್ಲ. ಆದರೆ, ಚುನಾವಣೆಯ ಮೇಲೆ ಪ್ರಭಾವ ಬೀರಬಹುದಾದ ಕೆಲವು ಸಾಮಾಜಿಕ ಸಮೀಕರಣಗಳನ್ನು ರೂಪಿಸುವ ಪ್ರಯತ್ನ ನಡೆಸಲಾಗಿದೆ.

ಬಡವರು, ಮಹಿಳೆಯರು, ಯುವಜನರು ಮತ್ತು ರೈತರು ಎಂಬ ನಾಲ್ಕು 'ಜಾತಿ'ಗಳಿಗೆ ನಾವು ಹೆಚ್ಚಿನ ಒತ್ತು ಕೊಡಬೇಕಾಗಿದೆ ಎಂದು ನಿರ್ಮಲಾ ಅವರು ಪ್ರತಿಪಾದಿಸಿದ್ದಾರೆ. ಈ ನಾಲ್ಕು ವರ್ಗಗಳ ಮತಬ್ಯಾಂಕ್ ಅನ್ನು ಗಟ್ಟಿಗೊಳಿಸುವ ಪ್ರಯತ್ನವನ್ನು ಬಿಜೆಪಿ ಹಿಂದಿನಿಂದಲೂ ಮಾಡುತ್ತಲೇ ಬಂದಿದೆ.

2024–25ನೇ ಆರ್ಥಿಕ ವರ್ಷದಲ್ಲಿ ಬಂಡವಾಳ ವೆಚ್ಚವನ್ನು ಶೇ 11ರಷ್ಟು ಏರಿಕೆ ಮಾಡಲಾಗಿದೆ. ಒಟ್ಟು ₹11,11,111 ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿದೆ. ಆರ್ಥಿಕ ಕೊರತೆಯನ್ನು ಕಡಿಮೆ ಮಾಡುವುದು ಮತ್ತು ಬಂಡವಾಳ ವೆಚ್ಚವನ್ನು ಹೆಚ್ಚಿಸುವುದು ಆರ್ಥಿಕತೆಯ ಕುರಿತು ಸಕಾರಾತ್ಮಕವಾದ ಸಂದೇಶವನ್ನು ನೀಡುತ್ತದೆ.

9ನೇ ಪುಟ ನೋಡಿ | ವಿಶೇಷ ಪುಟಗಳು 12, 13

ಜನಸಂಖ್ಯೆ ಏರಿಕೆ: ಅಧ್ಯಯನಕ್ಕೆ ಸಮಿತಿ

ಜನಸಂಖ್ಯೆ ಹೆಚ್ಚಳ ಮತ್ತು ಜನಸಂಖ್ಯಾ ಸ್ವರೂಪದಲ್ಲಿ ಆಗಿರುವ ಬದಲಾವಣೆಯ ಸಮಗ್ರ ಅಧ್ಯಯನ ನಡೆಸುವುದಕ್ಕಾಗಿ ಉನ್ನತಾಧಿಕಾರದ ಸಮಿತಿಯೊಂದನ್ನು ರಚಿಸಲಾಗುವುದು ಎಂದು ನಿರ್ಮಲಾ ಹೇಳಿದ್ದಾರೆ. ಮಧ್ಯಂತರ ಬಜೆಟ್ ಮಂಡನೆ ವೇಳೆ ಈ ವಿಷಯವನ್ನು ಅವರು ಪ್ರಕಟಿಸಿದರು. ಜನಸಂಖ್ಯೆ ನಿಯಂತ್ರಿಸಬೇಕು ಎಂಬುದು ಸಂಘ ಪರಿವಾರದ ಪ್ರಮುಖ ಬೇಡಿಕೆಗಳಲ್ಲಿ ಒಂದಾಗಿದೆ.

ಈ ಘೋಷಣೆಗೆ ವಿರೋಧವೂ ವ್ಯಕ್ತವಾಗಿದೆ. ಮುಸ್ಲಿಂ ಸಮುದಾಯಕ್ಕೆ ಹೊಡೆತ ನೀಡುವುದು ಆರ್‌ಎಸ್‌ಎಸ್–ಬಿಜೆಪಿಯ ಅಚ್ಚುಮೆಚ್ಚಿನ ವಿಚಾರವಾಗಿದೆ. ಹಾಗಾಗಿ, ಈ ಪ್ರಸ್ತಾವವನ್ನು ಅನುಮಾನದಿಂದಲೇ ನೋಡಬೇಕಾಗುತ್ತದೆ ಎಂದು ಸಿಪಿಎಂನ ರಾಜ್ಯಸಭಾ ಸದಸ್ಯ ಜಾನ್ ಬ್ರಿಟ್ಟಾಸ್ ಹೇಳಿದ್ದಾರೆ.

'ಮುಸ್ಲಿಂ ಸಮುದಾಯವನ್ನು ಕೆಟ್ಟದಾಗಿ ಬಿಂಬಿಸುವ ಪ್ರಯತ್ನ ಇದು ಎಂಬಂತೆ ಕಾಣಿಸುತ್ತಿದೆ. ಮುಸ್ಲಿಮರಲ್ಲಿ ಜನಸಂಖ್ಯೆ ಏರಿಕೆಯ ದರವು ಇಳಿಕೆಯಾಗಿದೆ. ಹಾಗಿದ್ದರೂ ಜನಸಂಖ್ಯೆ ಏರಿಕೆಗೆ ಆ ಸಮುದಾಯದತ್ತ ಬೆರಳು ತೋರಲಾಗುತ್ತಿದೆ. ಶಿಕ್ಷಣ ನೀಡುವ ಮೂಲಕ ಜನಸಂಖ್ಯೆ ಏರಿಕೆಯ ದರವನ್ನು ಕಡಿಮೆ ಮಾಡಲು ಸಾಧ್ಯವಿದೆ. ಆದರೆ, ಈ ಸರ್ಕಾರವು ಬೇರೆ ದಿಕ್ಕಿನತ್ತ ನೋಡುತ್ತಿದೆ' ಎಂದು ಬ್ರಿಟ್ಟಾಸ್ ಟೀಕಿಸಿದ್ದಾರೆ.

ಜನಸಂಖ್ಯೆ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಬಿಜೆಪಿಯ ಹಲವು ಸಂಸದರು ಈ ಹಿಂದೆ ಖಾಸಗಿ ಮಸೂದೆಗಳನ್ನು ಮಂಡಿಸಿದ್ದರು. ಕೆಲವು ಜಿಲ್ಲೆಗಳಲ್ಲಿ ಜನಸಂಖ್ಯೆ ಏರಿಕೆ ಆಗುತ್ತಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಇತ್ತೀಚೆಗೆ ಕಳವಳ ವ್ಯಕ್ತಪಡಿಸಿದ್ದರು.

ಆರ್ಥಿಕ ಶಿಸ್ತಿಗೆ ಒತ್ತು

5.1% ಕ್ಕೆ ಆರ್ಥಿಕ ಕೊರತೆಯನ್ನು ಇಳಿಸುವ ಗುರಿ ನಿಗದಿ ಮಾಡಲಾಗಿದೆ. ಕಳೆದ ಬಾರಿ ಇದು ಶೇ 5.9ರಷ್ಟು ಇತ್ತು

ರಕ್ಷಣೆಗೆ ಹೆಚ್ಚು ಹಣ

₹6.21 ಲಕ್ಷ ಕೋಟಿ ನಿಗದಿ ಮಾಡಲಾಗಿದೆ

ರೈಲು: ರಾಜ್ಯಕ್ಕೆ ₹7,524 ಕೋಟಿ

ನವದೆಹಲಿ: ಕರ್ನಾಟಕದಲ್ಲಿ ಹೊಸ ರೈಲು ಮಾರ್ಗಗಳ ನಿರ್ಮಾಣ, ದ್ವಿಪಥ ಹಾಗೂ ಗೇಜ್ ಪರಿವರ್ತನೆ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳಿಗೆ ಮಧ್ಯಂತರ ಬಜೆಟ್‌ನಲ್ಲಿ ₹7,524 ಕೋಟಿ ಹಂಚಿಕೆ ಮಾಡಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ರಾಜ್ಯಕ್ಕೆ ರೈಲ್ವೆ ಅನುದಾನ ₹37 ಕೋಟಿ ಕಡಿಮೆಯಾಗಿದೆ. ಬೆಂಗಳೂರಿನ ಉಪನಗರ ರೈಲು ಹಾಗೂ ಪೆರಿಫೆರಲ್ ವರ್ತುಲ ರಸ್ತೆ ಯೋಜನೆಗಳಿಗೂ ಈ ಸಲ ಯಾವುದೇ ಅನುದಾನ ಮೀಸಲಿಟ್ಟಿಲ್ಲ.

ಹನಿ ನೀರಾವರಿ ಮೂಲಕ ಮಧ್ಯ ಕರ್ನಾಟಕ ಜಿಲ್ಲೆಗಳಿಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಅನುದಾನ ನೀಡಲಾಗುವುದು ಎಂದು ಕಳೆದ ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ಆದರೆ, ಕೇಂದ್ರ ಅನುದಾನ ನೀಡಿರಲಿಲ್ಲ. ಈ ವರ್ಷದ ಬಜೆಟ್‌ನಲ್ಲಾದರೂ ಅನುದಾನ ಹಂಚಿಕೆ ಮಾಡುವಂತೆ ಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವರು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಿದ್ದರು. ಆದರೆ, ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಯಾವುದೇ ಪ್ರಸ್ತಾಪ ಇಲ್ಲ.

12ನೇ ಪುಟ ನೋಡಿ

ಲೆಕ್ಕಕ್ಕೆ ಸಿಗದ ಒಂದು ಪೈಸೆ

ಸರ್ಕಾರಕ್ಕೆ ಯಾವೆಲ್ಲಾ ಮೂಲಗಳಿಂದ ಬಂದ ಆದಾಯ ಹಾಗೂ ಆ ಆದಾಯವನ್ನು ಯಾವೆಲ್ಲಾ ಕ್ಷೇತ್ರಗಳಿಗೆ ಹಂಚಿಕೆ ಮಾಡಿದ ಕುರಿತ ಸ್ಥೂಲ ಚಿತ್ರಣವನ್ನು 'ರೂಪಾಯಿ ಜಮೆ ಮತ್ತು ವೆಚ್ಚ' ಸ್ವರೂಪದಲ್ಲಿ ವಿವರಿಸಲಾಗುತ್ತದೆ. ಸರ್ಕಾರದ ಒಂದು ರೂಪಾಯಿ ಆದಾಯವು ಯಾವೆಲ್ಲಾ ಮೂಲಗಳಿಂದ ಬರುತ್ತದೆ ಎಂಬುದನ್ನು ಪೈಸೆಗಳ ಲೆಕ್ಕಾಚಾರದಲ್ಲಿ ವಿವರಿಸಲಾಗುತ್ತದೆ. ಆ ಎಲ್ಲಾ ಮೂಲಗಳನ್ನು ಒಟ್ಟುಗೂಡಿಸಿದಾಗ ಅದು ಒಂದು ರೂಪಾಯಿ ಅಥವಾ ನೂರು ಪೈಸೆ ಆಗಬೇಕು. ವೆಚ್ಚಕ್ಕೂ ಇದೇ ನಿಯಮ. ಆದರೆ, ಈ ಬಜೆಟ್‌ನಲ್ಲಿ ನೀಡಲಾದ 'ರೂಪಾಯಿ ಜಮೆ ಮತ್ತು ವೆಚ್ಚ' ವಿವರದಲ್ಲಿ 99 ಪೈಸೆಗಳಷ್ಟು ಮಾಹಿತಿ ಮಾತ್ರವಿದೆ. ಉಳಿದ ಒಂದು ಪೈಸೆಯ ಮಾಹಿತಿ ಇಲ್ಲವೇ ಇಲ್ಲ. ಜಮೆ ಮತ್ತು ವೆಚ್ಚ ಎರಡರಲ್ಲೂ ಹೀಗೆ ಆಗಿದೆ.

ಜಮೆ (ಪೈಸೆಗಳಲ್ಲಿ)



ವೆಚ್ಚ (ಪೈಸೆಗಳಲ್ಲಿ)



ಜೂನ್ 7ರಿಂದ ಸಾಹಿತ್ಯ ಸಮ್ಮೇಳನ

ಬೆಂಗಳೂರು: ಮಂಡ್ಯದಲ್ಲಿ ಜೂನ್ 7, 8 ಮತ್ತು 9ರಂದು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ, 'ಅದ್ದೂರಿ ಎನ್ನುವುದಕ್ಕಿಂತ ಅರ್ಥಪೂರ್ಣವಾಗಿ ಸಮ್ಮೇಳನ ಹಮ್ಮಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಜಿಲ್ಲಾಡಳಿತದ ಸಹಕಾರ ಪಡೆದು ಸಮ್ಮೇಳನ ಆಯೋಜಿಸಬೇಕು. ಕನ್ನಡ ಸಂಘಟನೆಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಸಮ್ಮೇಳನಾಧ್ಯಕ್ಷರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಹಿರಿಯರು, ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಕೆಲಸ ಮಾಡಿದವರನ್ನು ಪರಿಗಣಿಸಬೇಕು' ಎಂದೂ ಮುಖ್ಯಮಂತ್ರಿ ಸೂಚಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಮಾತನಾಡಿ, 'ಸಮ್ಮೇಳನದಲ್ಲಿ ಕನ್ನಡ ರಥ ಜಾಥಾ, 87 ಸಾಧಕರಿಗೆ ಸನ್ಮಾನ, ಮೂರು ದಿನ ವಿಚಾರ ಗೋಷ್ಠಿ ಮತ್ತಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ' ಎಂದರು. ಅಲ್ಲದೆ, ಸಮ್ಮೇಳನಕ್ಕೆ ₹30 ಕೋಟಿ ಅನುದಾನ ಒದಗಿಸಬೇಕು ಎಂದು ಮುಖ್ಯಮಂತ್ರಿಗೆ ಅವರು ಮನವಿ ಸಲ್ಲಿಸಿದರು.

ಸರ್ಕಾರ ರಚನೆ: ಚಂಪೈಗೆ ರಾಜ್ಯಪಾಲರ ಆಹ್ವಾನ

ರಾಂಚಿ(ಪಿಟಿಐ): ಜೆಎಂಎಂ ಶಾಸಕಾಂಗ ಪಕ್ಷದ ನಾಯಕ ಚಂಪೈ ಸೊರೇನ್ ಅವರನ್ನು ಮುಖ್ಯಮಂತ್ರಿಯಾಗಿ ಗುರುವಾರ ನಾಮನಿರ್ದೇಶನ ಮಾಡಿರುವ ಜಾರ್ಖಂಡ್ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರು, ಪ್ರಮಾಣ ವಚನ ಸ್ವೀಕರಿಸುವಂತೆ ಆಹ್ವಾನ ನೀಡಿದ್ದಾರೆ.

'ಪ್ರಮಾಣ ವಚನ ಸ್ವೀಕರಿಸುವುದಕ್ಕೆ ಅವರಿಗೆ (ಚಂಪೈ ಸೊರೇನ್) ಆಹ್ವಾನ ನೀಡಿದ್ದೇವೆ. ಯಾವಾಗ ಪ್ರಮಾಣ ಸ್ವೀಕರಿಸಬೇಕು ಎಂಬ ಬಗ್ಗೆ ಅವರು ನಿರ್ಧಾರ ಕೈಗೊಳ್ಳುವರು' ಎಂದು ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ ನಿತಿನ್ ಮದನ್ ಕುಲಕರ್ಣಿ ತಿಳಿಸಿದ್ದಾರೆ. ಚಂಪೈ ಅವರು ಶುಕ್ರವಾರವೇ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇದಕ್ಕೂ ಮುನ್ನ, ರಾಜ್ಯಪಾಲರನ್ನು ಮತ್ತೊಮ್ಮೆ ಭೇಟಿ ಮಾಡಿದ್ದ ಚಂಪೈ ಸೊರೇನ್ ಅವರು ಹೊಸ ಸರ್ಕಾರ ರಚನೆಗೆ ಆದಷ್ಟು ಬೇಗ ಅವಕಾಶ ನೀಡಬೇಕೆಂದು ಒತ್ತಾಯಿಸಿದ್ದರು. ಈಗ, ಸರ್ಕಾರ ರಚನೆ ಸಂಬಂಧ ಅವರಿಗೆ ಆಹ್ವಾನ ನೀಡಿರುವುದರಿಂದ ಕಳೆದ ಎರಡು ದಿನಗಳಿಂದ ರಾಜ್ಯದಲ್ಲಿ ಉದ್ಭವಿಸಿದ್ದ ರಾಜಕೀಯ ಬಿಕ್ಕಟ್ಟು ಕೊನೆಗೊಂಡಂತಾಗಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಹೇಮಂತ್ ಸೊರೇನ್ ಅವರನ್ನು ಜಾರಿ ನಿರ್ದೇಶನಾಲಯ ಅಧಿಕಾರಿಗಳು, ಬುಧವಾರ ರಾತ್ರಿ ತೀವ್ರ ವಿಚಾರಣೆಗೆ ಒಳಪಡಿಸಿದ್ದರು. ನಂತರ, ಹೇಮಂತ್ ಸೊರೇನ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅದರ ಬೆನ್ನಲ್ಲೇ ಅವರನ್ನು ಇ.ಡಿ ಅಧಿಕಾರಿಗಳು ಬಂಧಿಸಿದ್ದರು. ಇದಾದ ಬಳಿಕ ನಡೆದ ಹಲವು ನಾಟಕೀಯ ಬೆಳವಣಿಗೆಗಳ ನಂತರ, ಚಂಪೈ ಸೊರೇನ್ ಅವರನ್ನು ಜೆಎಂಎಂ ಶಾಸಕಾಂಗ ಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡಲಾಗಿತ್ತು. ಆದರೆ, ಸರ್ಕಾರ ರಚಿಸಲು ಅವರಿಗೆ ರಾಜ್ಯಪಾಲರು ಆಹ್ವಾನ ನೀಡುವಲ್ಲಿ ವಿಳಂಬ ಮಾಡಿದ್ದು ರಾಜಕೀಯ ಬಿಕ್ಕಟ್ಟಿಗೆ ಕಾರಣವಾಗಿತ್ತು.

ಇನ್ನಷ್ಟು ಸುದ್ದಿಗಳು 15

ಜ್ಞಾನವಾಪಿ ಮಸೀದಿಯ ನೆಲಮಹಡಿಯಲ್ಲಿ ಪೂಜೆ

ವಾರಾಣಸಿ (ಪಿಟಿಐ): ಜ್ಞಾನವಾಪಿ ಮಸೀದಿಯ ನೆಲಮಹಡಿಯಲ್ಲಿ ಮೂರು ದಶಕಗಳ ಬಳಿಕ ಪೂಜೆ ಸಲ್ಲಿಸಲಾಗಿದೆ ಎಂದು ಕಾಶಿ ವಿಶ್ವನಾಥ ದೇವಾಲಯ ಟ್ರಸ್ಟ್‌ನ ಅಧ್ಯಕ್ಷ ನಾಗೇಂದ್ರ ಪಾಂಡೆ ತಿಳಿಸಿದರು.

ಕಾನೂನು ಹೋರಾಟದ ಮಹತ್ವದ ಬೆಳವಣಿಗೆಯಲ್ಲಿ ವಿವಾದಿತ ಮಸೀದಿಯ ನೆಲಮಹಡಿಯಲ್ಲಿರುವ ವಿಗ್ರಹಗಳಿಗೆ ಪೂಜೆ ಸಲ್ಲಿಸಲು ಜಿಲ್ಲಾ ನ್ಯಾಯಾಲಯವು ಅರ್ಚಕರಿಗೆ ಅವಕಾಶ ಕಲ್ಪಿಸಿ ಬುಧವಾರ ಆದೇಶ ಹೊರಡಿಸಿತ್ತು.

'ವ್ಯಾಸ್‌ಜಿ ಕಾ ತಹಖಾನಾ'ವನ್ನು (ನೆಲಮಾಳಿಗೆ) ಬುಧವಾರ ರಾತ್ರಿ 10.30ಕ್ಕೆ ತೆರೆದು, ಪೂಜೆ ಸಲ್ಲಿಸಲಾಯಿತು. ಜಿಲ್ಲಾಡಳಿತವು ಎಲ್ಲಾ ಏರ್ಪಾಡುಗಳನ್ನು ಮಾಡಿಕೊಟ್ಟಿತ್ತು' ಎಂದು ಪಾಂಡೆ ಹೇಳಿದರು.

'ನಾನು ನ್ಯಾಯಾಲಯದ ಆದೇಶವನ್ನು ಪಾಲಿಸಿದ್ದೇನೆ' ಎಂದು ಜಿಲ್ಲಾಧಿಕಾರಿ ಎಸ್. ರಾಜಲಿಂಗಂ ತಿಳಿಸಿದರು. ನೆಲಮಾಳಿಗೆಯನ್ನು ಸ್ವಚ್ಛಗೊಳಿಸಿದ ಬಳಿಕ ಲಕ್ಷ್ಮಿದೇವಿ ಮತ್ತು ಗಣೇಶ ವಿಗ್ರಹಗಳಿಗೆ ಆರತಿ ಬೆಳಗಲಾಯಿತು ಎಂದು ಸ್ಥಳೀಯರು ಮಾಹಿತಿ ನೀಡಿದರು.

'ರಾತ್ರಿ 9.30ಕ್ಕೆ ಕಾಶಿ ವಿಶ್ವನಾಥ ದೇವಾಲಯ ಟ್ರಸ್ಟ್‌ನ ಸದಸ್ಯರನ್ನು ಕರೆಸಲಾಯಿತು ಮತ್ತು ಮಸೀದಿಯ ಎದುರಿಗಿರುವ ನಂದಿ ಪ್ರತಿಮೆಯ ಮುಂದಿದ್ದ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಲಾಯಿತು' ಎಂದು ಅಧಿಕಾರಿಗಳು ಹೇಳಿದರು.

'ನೆಲ ಮಾಳಿಗೆಯಲ್ಲಿ ಪೂಜೆ ಸಲ್ಲಿಸಲು ಏಳು ದಿನಗಳೊಳಗೆ ಏರ್ಪಾಡು ಮಾಡಿಕೊಡಬೇಕೆಂದು ನ್ಯಾಯಾಲಯವು ನಿರ್ದೇಶನ ನೀಡಿದೆ ಮತ್ತು ಮಸೀದಿ ಸಂಕೀರ್ಣದಲ್ಲಿ ಲೋಹದ ಬ್ಯಾರಿಕೇಡ್‌ಗಳನ್ನು ಸ್ಥಾಪಿಸಲು ಸೂಚಿಸಿದೆ' ಎಂದು ತಿಳಿಸಿದರು.

15ನೇ ಪುಟ ನೋಡಿ

ಪ್ರತ್ಯೇಕ ರಾಷ್ಟ್ರಕ್ಕಾಗಿ ಬೇಡಿಕೆ ಸಂಸದ ಸುರೇಶ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ದಕ್ಷಿಣ ಭಾರತದ ರಾಜ್ಯಗಳಿಗೆ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡುತ್ತಿಲ್ಲ' ಎಂದು ಆರೋಪಿಸಿರುವ ಬೆಂಗಳೂರು ಗ್ರಾಮಾಂತರದ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್, 'ಇದೇ ಧೋರಣೆ ಮುಂದುವರಿಸಿದರೆ ಪ್ರತ್ಯೇಕ ರಾಷ್ಟ್ರದ ಬೇಡಿಕೆ ಮುಂದಿಡಬೇಕಾಗುತ್ತದೆ' ಎಂದು ಎಚ್ಚರಿಸಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ದಕ್ಷಿಣದ ರಾಜ್ಯಗಳಿಗೆ ಕೇಂದ್ರ ಸರ್ಕಾರವು ಜಿಎಸ್‌ಟಿ ಹಾಗೂ ತೆರಿಗೆಯ ಸೂಕ್ತ ಪಾಲನ್ನು ನೀಡುತ್ತಿಲ್ಲ. ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತಿದೆ' ಎಂದರು.

11ನೇ ಪುಟ ನೋಡಿ

ಅಖಂಡ ಭಾರತ, ಅಖಂಡ ಕರ್ನಾಟಕ ಉಳಿಯಬೇಕು. ದೇಶದ ಸಾರ್ವಭೌಮತೆ ಇರಬೇಕು. ನಮ್ಮದು ಒಕ್ಕೂಟ ವ್ಯವಸ್ಥೆ. ರಾಜ್ಯಗಳ ಪಾಲನ್ನು ಕೇಂದ್ರ ಸರ್ಕಾರ ಚಾಚೂ ತಪ್ಪದೆ ಕೊಡಬೇಕು. ಆದರೆ, ಕೊಡುತ್ತಿಲ್ಲ . ನಮ್ಮಿಂದ ₹ 4 ಲಕ್ಷ ಕೋಟಿ ತೆರಿಗೆ ವಸೂಲಿ ಮಾಡುವ ಕೇಂದ್ರ ಸರ್ಕಾರ ನಮಗೆ ಅನ್ಯಾಯ ಮಾಡುತ್ತಿದೆ
ಸಿದ್ದರಾಮಯ್ಯ , ಮುಖ್ಯಮಂತ್ರಿ

ನಾನು ಅಖಂಡ ಭಾರತದ ಪ್ರಜೆ. ಸುರೇಶ್ ಅವರು ಜನರ ಬೇಸರ ಹಾಗೂ ಅಭಿಪ್ರಾಯವನ್ನು ಹೇಳಿದ್ದಾರೆ ಅಷ್ಟೇ. ನಮಗಾಗುತ್ತಿರುವ ಅನ್ಯಾಯದ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ
ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಸ್ವಾತಂತ್ರ್ಯ ಬಂದಾಗಿನಿಂದಲೂ ಕಾಂಗ್ರೆಸ್ ನಾಯಕರು ದೇಶದ ಏಕತೆಯ ಬದಲು ಪ್ರತ್ಯೇಕತೆಯ ಬಗ್ಗೆ ಮಾತನಾಡುತ್ತಿದ್ದಾರೆ. ಎನ್‌ಡಿಎ ಸರ್ಕಾರ ಅಭಿವೃದ್ಧಿ ವಿಷಯದಲ್ಲಿ ಯಾವ ರಾಜ್ಯವನ್ನೂ ಕಡೆಗಣಿಸಿಲ್ಲ. ಸುರೇಶ್ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಬೇಕು
ಶೋಭಾ ಕರಂದ್ಲಾಜೆ, ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಹಿಯರ್‌ಜ್ಯಾಪ್™
47 YEARS OF TRUST
90+ EXPERIENCE STORES PAN INDIA
ನಿಮ್ಮ ಶ್ರವಣ ಆರೈಕೆಗಾಗಿ, HEARZAP ಅನ್ನು ಆಯ್ಕೆಮಾಡಿ
ಭಾರತದ ಅತ್ಯುತ್ತಮ ಶ್ರವಣ ಆರೈಕೆ ಸೌಲಭ್ಯ, ನಮ್ಮ ಬೆಂಗಳೂರಿನಲ್ಲಿ
PHILIPS
*condition apply
PHILIPS Authorized dealer
ಅತ್ಯಾಧುನಿಕ ಶ್ರವಣ ಸಾಧನಗಳು ಲಭ್ಯವಿದೆ
PHILIPS
REXTON
ಚಿಂತೆ ಮುಕ್ತ ಶ್ರವಣ ಸಾಧನ ಪ್ರಯೋಗ
ಖಾತರಿಪಡಿಸಿದ ರಿಯಾಯಿತಿ
ಹೆಚ್ಚಿನ ವಾರಂಟಿ
ತಕ್ಷಣ ನಿಮ್ಮ ಮನೆಯಲ್ಲಿ ಶ್ರವಣ ಪರೀಕ್ಷೆಗಾಗಿ ಬುಕ್ ಮಾಡಿ
Google Play
App Store
ನೇಮಕಾತಿಗಾಗಿ ಕರೆ ಮಾಡಿ
9659 455 455
ಬೆಂಗಳೂರಿನಲ್ಲಿ ನಮ್ಮ ಶಾಖೆಗಳು
ಎಚ್‌ಎಸ್‌ಆರ್ ಲೇಔಟ್ • ಇಂದಿರಾ ನಗರ • ಜಯ ನಗರ • ಕಲ್ಯಾಣ ನಗರ
ನಾಗರಬಾವಿ • ಆರ್‌ಆರ್ ನಗರ • ಸದಾಶಿವ ನಗರ
ಕರ್ನಾಟಕ | ಮಹಾರಾಷ್ಟ್ರ | ಕೇರಳ | ತಮಿಳುನಾಡು | ಆಂಧ್ರ ಪ್ರದೇಶ | ತೆಲಂಗಾಣ | ಪಶ್ಚಿಮ ಬಂಗಾಳ | ಬಿಹಾರ | ಜಾರ್ಖಂಡ್

ಸಂಕ್ಷಿಪ್ತ ಸುದ್ದಿ

ವೆಂಕಟೇಶ ಮೂರ್ತಿ ಸತ್ಯನಾಥ್‌ಗೆ ಶಿವರುದ್ರಪ್ಪ ಪ್ರಶಸ್ತಿ

ವೆಂಕಟೇಶ ಮೂರ್ತಿ

ಟಿ.ಎಸ್. ಸತ್ಯನಾಥ್

ಬೆಂಗಳೂರು: ಡಾ.ಜಿ.ಎಸ್. ಎಸ್ ವಿಶ್ವಸ್ತ ಮಂಡಳಿ ನೀಡುವ 2024ನೇ ಸಾಲಿನ 'ಡಾ.ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿ'ಗೆ ಕವಿಗಳಾದ ಎಚ್.ಎಸ್. ವೆಂಕಟೇಶಮೂರ್ತಿ ಹಾಗೂ ಪ್ರೊ. ಟಿ.ಎಸ್. ಸತ್ಯನಾಥ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹ 15 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಜಿ.ಎಸ್. ಶಿವರುದ್ರಪ್ಪ ಅವರ ಜನ್ಮದಿನವಾದ ಫೆ.7ರಂದು ಸಂಜೆ 5 ಗಂಟೆಗೆ ಬೆಂಗಳೂರಿನ ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಮಂಡಳಿ ಅಧ್ಯಕ್ಷ ಎಸ್. ನಟರಾಜ ಬೂದಾಳು ತಿಳಿಸಿದ್ದಾರೆ.

ಬಾಗಲೂರು ಗ್ರಾ.ಪಂ ಉಪಾಧ್ಯಕ್ಷರಾಗಿ ಪದ್ಮಾವತಿ ಆಯ್ಕೆ

ಯಲಹಂಕ: ಬಾಗಲೂರು ಗ್ರಾಮ ಪಂಚಾಯಿತಿ ಯ ನೂತನ ಉಪಾಧ್ಯಕ್ಷರಾಗಿ ಪದ್ಮಾವತಿ ಎ.ವೆಂಕಟರಾಜು ಆಯ್ಕೆಯಾಗಿದ್ದಾರೆ.

ಪದ್ಮಾವತಿ ಎ. ವೆಂಕಟರಾಜು

ಉಪಾಧ್ಯಕ್ಷರಾಗಿದ್ದ ಬಿ.ಸಿ. ಲೋಕೇಶ್ ರಾಜೀನಾಮೆಯಿಂದ ತೆರವಾಗಿದ್ದ (ಪರಿಶಿಷ್ಟ ಜಾತಿ) ಸ್ಥಾನಕ್ಕಾಗಿ ಗುರುವಾರ ಚುನಾವಣೆ ನಡೆಯಿತು. 26 ಸದಸ್ಯಬಲ ಹೊಂದಿದ್ದು, ಪದ್ಮಾವತಿ ಎ. ವೆಂಕಟರಾಜು ಮತ್ತು ಸಂತೋಷ್ ಕುಮಾರ್ ಬಿ. ನಾಮಪತ್ರ ಸಲ್ಲಿಸಿದ್ದರು.

ಸಂತೋಷ್‌ಕುಮಾರ್ ಸೇರಿ 6 ಸದಸ್ಯರು ಚುನಾವಣಾ ಪ್ರಕ್ರಿಯೆಗೆ ಗೈರುಹಾಜರಾದರು. ಪದ್ಮಾವತಿ 20 ಮತಗಳನ್ನು ಪಡೆದು ಗೆಲುವು ಸಾಧಿಸಿದರು. ಮುಖಂಡರಾದ ಡಿ.ಜಗನ್ನಾಥ್, ಎಂ. ಅಮರನಾರಾಯಣ, ಅನಿಲ್‌ಕುಮಾರ್, ಕೆಂಪೇಗೌಡ, ಪಿಳ್ಳೇಗೌಡ ಉಪಸ್ಥಿತರಿದ್ದರು.

ಸುಧಾ–ಮಯೂರ ಓದಿರಿ...

ವಿಶ್ವ ಕ್ಯಾನ್ಸರ್ ದಿನ: 4ಕ್ಕೆ ಜಾಗೃತಿ ನಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಸರ್ಜಿಕಲ್ ಸೊಸೈಟಿ ಆಫ್ ಇಂಡಿಯಾ ಇದೇ 4ರ ಭಾನುವಾರ ಬೆಳಿಗ್ಗೆ 6 ಗಂಟೆಗೆ ಕಂಠೀರವ ಕ್ರೀಡಾಂಗಣದಿಂದ 'ಕ್ಯಾನ್ ವಾಕ್' ಜಾಗೃತಿ ನಡಿಗೆ ಕಾರ್ಯಕ್ರಮ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸರ್ಜಿಕಲ್ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷ ಡಾ.ರಾಜಶೇಖರ್ ಸಿ. ಜಾಕ, 'ಈ ಜಾಗೃತಿ ನಡಿಗೆಗೆ ನವೋದಯ ಇನ್ ಬೆಂಗಳೂರು, ಸಂಕಲ್ಪ ಚೇಸ್ ಕ್ಯಾನ್ಸರ್ ಫೌಂಡೇಷನ್ ರೀಸರ್ಚ್ ಟ್ರಸ್ಟ್ ಕೂಡ ಸಹಯೋಗ ನೀಡಿವೆ. 5 ಕಿ.ಮೀ. ನಡೆಯುವ ವಾಕಥಾನ್‌ಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಲಿದ್ದಾರೆ. ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ವಾಕಥಾನ್ ಹಮ್ಮಿಕೊಂಡಿದ್ದೇವೆ' ಎಂದರು.

'ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆ ಮಾಡಿದಲ್ಲಿ ಸುಲಭವಾಗಿ ಕಾಯಿಲೆಯನ್ನು ವಾಸಿ ಮಾಡಬಹುದು. ಉತ್ತಮ ಆಹಾರ ಪದ್ಧತಿ ಮತ್ತು ಜೀವನಶೈಲಿ ಸಹಕಾರಿ. ಪ್ರತಿದಿನ ಯೋಗ, ವ್ಯಾಯಾಮದಂತಹ ಚಟುವಟಿಕೆಗಳನ್ನು ರೂಢಿಸಿಕೊಳ್ಳಬೇಕು. ಪ್ರತಿ ಆರು ತಿಂಗಳಿಗೆ ಒಮ್ಮೆ ಸಂಪೂರ್ಣ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳಬೇಕು. ಈ ವಾಕಥಾನ್‌ಗೆ ಸಾರ್ವಜನಿಕರಿಗೆ ಪ್ರವೇಶ ಉಚಿತ ಇರುತ್ತದೆ' ಎಂದು ತಿಳಿಸಿದರು.

ಕೃಷ್ಣಪ್ಪ ರಂಗಮ್ಮ ಶಿಕ್ಷಣ ಟ್ರಸ್ಟ್ (ರಿ)

148, "ನಾಡಪ್ರಭು ಕೆಂಪೇಗೌಡ ಭವನ", ಕೆ.ಆರ್. ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು–560004

ದಿನಾಂಕ : 03–02–2024
ಶನಿವಾರದಂದು
ಸಮಯ :
ಬೆಳಿಗ್ಗೆ 11:00 ಗಂಟೆ
ಸ್ಥಳ: ಕುವೆಂಪು ಕಲಾಕ್ಷೇತ್ರ
ಒಕ್ಕಲಿಗರ ಸಂಘದ
ಆಡಳಿತ ಕಚೇರಿ ಆವರಣ.

ಸಜ್ಜೆಪಾಳ್ಯದ ಜಮೀನು ಉಳಿಸಿ
"ಹೋರಾಟ ಸಭೆ"

ಕೃಷ್ಣಪ್ಪ ರಂಗಮ್ಮ ಶಿಕ್ಷಣ ಟ್ರಸ್ಟ್ (ರಿ) ಗೆ ಸೇರಿದ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿಯ ಸಜ್ಜೆಪಾಳ್ಯ ಗ್ರಾಮದ ಸರ್ವೆ ನಂ. 15ರ 44 ಎಕರೆ 33 ಗುಂಟೆ, ಸರ್ವೆ ನಂ. 8ರ 17 ಎಕರೆ 1 ಗುಂಟೆ, ಸರ್ವೆ ನಂ. 9ರ 5 ಎಕರೆ 39 ಗುಂಟೆ, ಸರ್ವೆ ನಂ. 10ರ 7 ಎಕರೆ 1 ಗುಂಟೆ, ಸರ್ವೆ ನಂ. 13ರ 13 ಎಕರೆ 16 ಗುಂಟೆ ಜಮೀನು ಹಾಗೂ ಮಾಳಗಾಳ ಗ್ರಾಮದ ಸರ್ವೆ ನಂ. 43ರ 2 ಎಕರೆ 20 ಗುಂಟೆ, ಸರ್ವೆ ನಂ. 44ರ 7 ಎಕರೆ 1 ಗುಂಟೆ ಜಮೀನು ಸೇರಿದಂತೆ ಒಟ್ಟು 96 ಎಕರೆ 35 ಗುಂಟೆ ಜಮೀನನ್ನು ಪಟ್ಟಭದ್ರ ಹಿತಾಸಕ್ತಿಗಳಿಂದ ಉಳಿಸಲು "ಸಜ್ಜೆಪಾಳ್ಯದ ಜಮೀನು ಉಳಿಸಿ ಹೋರಾಟ ಸಮಿತಿ" ವತಿಯಿಂದ ಹೋರಾಟದ ರೂಪುರೇಷೆ ಕುರಿತು ಚರ್ಚಿಸಲು ಒಕ್ಕಲಿಗ ಸಮುದಾಯದ ವಿವಿಧ ಸಂಘಟನೆಗಳು ಹಾಗೂ ಸಮುದಾಯದ ಪ್ರಮುಖರ ಸಭೆಯನ್ನು ಏರ್ಪಡಿಸಲಾಗಿದೆ.

ಜಮೀನು ಉಳಿಸುವ ಹೋರಾಟದಲ್ಲಿ ಕುಲಬಾಂಧವರು ಸ್ವಪ್ರೇರಣೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ಸಹಿ/–
ಅಧ್ಯಕ್ಷರು

idp INTERNATIONAL EDUCATION SPECIALISTS

"30 ತುಂಬುವುದರೊಳಗೆ ನಾನು ನನ್ನದೇ ಆದ ಫಾರ್ಚೂನ್ 500 ಯಶಸ್ವಿನ ಕಥೆಯನ್ನು ರೂಪಿಸಿಕೊಳ್ಳುತ್ತೇನೆ!"

ಭಾರತದ ಅತ್ಯಂತ ದೊಡ್ಡ ಅಂತರಾಷ್ಟ್ರೀಯ ಶಿಕ್ಷಣ ಮೇಳ
ಆಸ್ಟ್ರೇಲಿಯಾ
ಕೆನಡಾ
ನ್ಯೂಜಿಲ್ಯಾಂಡ್

IDP ಮೂಲಕ
Sun, 4th Feb 11:00 am - 5:00 pm
Conrad Hotel Bangalore
ಟಾಪ್ 150+ ಜಾಗತಿಕ ಸಂಸ್ಥೆಗಳನ್ನು ಭೇಟಿ ಮಾಡಿ!

ನೋಂದಣಿಗಾಗಿ ಮತ್ತು ಭಾಗವಹಿಸುವ ಸಂಸ್ಥೆಗಳ ಬಗ್ಗೆ ತಿಳಿದುಕೊಳ್ಳಲು ಸ್ಕ್ಯಾನ್ ಮಾಡಿ.

Must-attend seminars

10:00 am - 10:45 am
Australia - A Gateway to Successful Education and Career.
Speaker: Mr. Sharath Nambiar,
Director, Australian Trade and Investment Commission.

11:00 am - 12:00 pm
Scope of STEM courses in New Zealand.
Speaker: Prof. Geoff Holmes,
Pro Vice Chancellor, The University of Waikato

ಈ ಮೇಳಕ್ಕೆ ಏಕೆ ಹಾಜರಾಗಬೇಕು?
- ಸಂಸ್ಥೆಯ ಪ್ರತಿನಿಧಿಗಳಿಂದ ವೃತ್ತಿಪರ ಒಳನೋಟಗಳನ್ನು ಪಡೆದುಕೊಳ್ಳಿ.
- ನಿಮ್ಮ ಅರ್ಜಿಯನ್ನು ಸ್ಥಳದಲ್ಲೇ ಸಲ್ಲಿಸಲು ಅಗತ್ಯ ದಾಖಲೆಗಳನ್ನು* ಒಯ್ಯಿರಿ.
- ವಿಶೇಷ ವಿದ್ಯಾರ್ಥಿವೇತನದ ಅವಕಾಶಗಳನ್ನು ಪಡೆದುಕೊಳ್ಳಿ.
- ಅಧ್ಯಯನದ ನಂತರದ ಕೆಲಸದ ಹಕ್ಕುಗಳು ಮತ್ತು ಅರೆಕಾಲಿಕ ಉದ್ಯೋಗಾವಕಾಶಗಳ ಬಗ್ಗೆ ತಿಳಿದುಕೊಳ್ಳಿ.
- ನಿಮ್ಮ IELTS ಪರೀಕ್ಷೆಯನ್ನು ಸ್ಥಳದಲ್ಲೇ ಬುಕ್ ಮಾಡಿ ಮತ್ತು ಉಚಿತ ಪೂರ್ವಸಿದ್ಧತಾ ಸಾಮಗ್ರಿಗಳಿಗೆ ಪ್ರವೇಶವನ್ನು ಪಡೆದುಕೊಳ್ಳಿ.
- SBI, ICICI ಬ್ಯಾಂಕ್ ಮತ್ತು HDFC ಕ್ರೆಡಿಲಾದಿಂದ ಶಿಕ್ಷಣ ಸಾಲಕ್ಕೆ ಸಂಬಂಧಿಸಿದಂತೆ ಬಡ್ಡಿ ದರದ ರಿಯಾಯಿತಿ ಮತ್ತು ಸಂಸ್ಕರಣಾ ಶುಲ್ಕವನ್ನು ಪಡೆದುಕೊಳ್ಳಿ.
- ನಿಮ್ಮ ಅಂತರಾಷ್ಟ್ರೀಯ ಬ್ಯಾಂಕ್ ಖಾತೆಯನ್ನು ಸ್ಥಳದಲ್ಲೇ ತೆರೆಯಿರಿ.
- ನಿಮ್ಮ ಅಂತರಾಷ್ಟ್ರೀಯ ಸಿಮ್ ಕಾರ್ಡ್ ಅನ್ನು ಸ್ಥಳದಲ್ಲೇ ಪಡೆದುಕೊಳ್ಳಿ.
- ಉತ್ತಮ ದರದಲ್ಲಿ ಅತ್ಯಂತ ಸಮಗ್ರ ಆರೋಗ್ಯ ರಕ್ಷಣೆ ಮತ್ತು ಪರಿಶೀಲಿಸಿದ ವಸತಿ ಆಯ್ಕೆಗಳನ್ನು ಪಡೆದುಕೊಳ್ಳಿ.

IDPಯೊಂದಿಗೆ ವಿದೇಶದಲ್ಲಿ ಯಾಕೆ ಅಧ್ಯಯನ ಮಾಡಬೇಕು?
ಅಂತರಾಷ್ಟ್ರೀಯ ಶಿಕ್ಷಣ ಸೇವೆಗಳಲ್ಲಿ ಜಾಗತಿಕ ನಾಯಕ
800 ಹೆಚ್ಚಿನ ವಿಶ್ವ–ದರ್ಜೆಯ ಸಂಸ್ಥೆಗಳೊಂದಿಗೆ ಪಾಲುದಾರ
50 ವರ್ಷಗಳಿಗೂ ಹೆಚ್ಚಿನ ಅನುಭವ
ಭಾರತದ 63 ನಗರಗಳಲ್ಲಿ 77+ ಆಫೀಸುಗಳು
IELTS ಹೆಮ್ಮೆಯ ಸಹಮಾಲೀಕರು

ವಿದ್ಯಾರ್ಥಿಗಳಿಗೆ ಅಗತ್ಯವಾದ ಸೇವೆಗಳು
ಆರೋಗ್ಯ ಕವರ್ | ವಸತಿ | ಬ್ಯಾಂಕಿಂಗ್ | ಶಿಕ್ಷಣ ಸಾಲ | ಹಣ ವರ್ಗಾವಣೆ | ಸಿಮ್ ಕಾರ್ಡ್

IDP JP Nagar 080-46404888
IDP St. Mark's Road 080-44118888
IDP Whitefield 080-68457888

Powered by ICICI Bank
IDP ಫಾಸ್ಟ್‌ಲೇನ್! ಅನ್ವಯಿಸಿ ಮತ್ತು ಸ್ಥಳದಲ್ಲೇ ನಿಮ್ಮ ಕನಸಿನ ಸಂಸ್ಥೆಯಿಂದ ಪ್ರಮುಖ ಕೊಡುಗೆಯನ್ನು ಪಡೆಯಿರಿ.
ಡೌನ್‌ಲೋಡ್ ಮಾಡಿ IDP ಲೈವ್ ಆ್ಯಪ್ ಈಗ!
ಡೌನ್‌ಲೋಡ್ ಮಾಡಲು ಸ್ಕ್ಯಾನ್ ಮಾಡಿ

*ನಿಮ್ಮ ಮೂಲ ಶೈಕ್ಷಣಿಕ ಮಾರ್ಕ್‌ಶೀಟ್‌ಗಳು, ಪಾಸ್‌ಪೋರ್ಟ್ ಮತ್ತು ಯಾವುದೇ ಇತರ ವಿಶ್ವವಿದ್ಯಾಲಯ ನಿರ್ದಿಷ್ಟ ದಾಖಲೆಗಳನ್ನು ಒಯ್ಯಿರಿ (ವಿವರಗಳಿಗಾಗಿ ನಿಮ್ಮ ಸಲಹೆಗಾರರೊಂದಿಗೆ ಚರ್ಚಿಸಿ)
idp.com

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ಪ್ರವಾಸೋದ್ಯಮ ಇಲಾಖೆ, ಬೆಂಗಳೂರು
ಹಾಗೂ ಜಿಲ್ಲಾಡಳಿತ, ವಿಜಯನಗರ

ಹಂಪಿ ಉತ್ಸವ

2, 3 ಹಾಗೂ 4ನೇ ಫೆಬ್ರವರಿ 2024
ಸ್ಥಳ: ಗಾಯತ್ರಿ, ಪೀಠ ವೇದಿಕೆ, ಹಂಪಿ



02–02–2024
ಶುಕ್ರವಾರ
ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಗೌರವ ಉಪಸ್ಥಿತಿ
ಡಾ.ಜಿ. ಪರಮೇಶ್ವರ
ಮಾನ್ಯ ಗೃಹ ಇಲಾಖೆ ಸಚಿವರು ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು

ಅಧ್ಯಕ್ಷತೆ
ಶ್ರೀ ಹೆಚ್.ಆರ್. ಗವಿಯಪ್ಪ
ಮಾನ್ಯ ಶಾಸಕರು ವಿಜಯನಗರ ಕ್ಷೇತ್ರ

ಶ್ರೀ ಬಿ.ಜೆಡ್. ಜಮೀರ್ ಅಹ್ಮದ್ ಖಾನ್
ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಹಾಗು ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ರಾಮಲಿಂಗಾ ರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಇಲಾಖೆ ಸಚಿವರು ಹಾಗೂ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ
ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು

ವಿಜಯನಗರ ಜಿಲ್ಲೆಯ ಐತಿಹಾಸಿಕ ಹಂಪಿ ಉತ್ಸವ–2024ರ ಸಿದ್ಧತೆಯನ್ನು ಪರಿಶೀಲಿಸಿದ ಮಾನ್ಯ ಸಚಿವರು, ಸಂಸದರು, ಶಾಸಕರು ಹಾಗೂ ಜಿಲ್ಲಾಧಿಕಾರಿಗಳು.

ಶ್ರೀ ಹೆಚ್.ಕೆ. ಪಾಟೀಲ್
ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಎನ್.ಎಸ್. ಬೋಸರಾಜು
ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಬಿ. ನಾಗೇಂದ್ರ
ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು

ಸರ್ವರಿಗೂ ಆದರದ ಸ್ವಾಗತ
ಜಿಲ್ಲೆಯ ಮಾನ್ಯ ಸಂಸದರು, ಮಾನ್ಯ ಶಾಸಕರು ವಿಧಾನ ಸಭೆ ಹಾಗೂ ವಿಧಾನ ಪರಿಷತ್, ಎಲ್ಲ ಜನಪ್ರತಿನಿಧಿಗಳು.

ಕಾರ್ಯಕ್ರಮಗಳ ಪಟ್ಟಿಯನ್ನು ಸ್ಕ್ಯಾನ್ ಮಾಡಿ

ಬೆಸ್ಕಾಂ ಕಿರಿಯ ಎಂಜಿನಿಯರ್ 'ಲೋಕಾ' ಬಲೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವಿದ್ಯುತ್ ಸಂಪರ್ಕ ಕಲ್ಪಿಸಲು ₹4.50 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿ ಮುಂಗಡವಾಗಿ ₹ 50,000 ಪಡೆಯುತ್ತಿದ್ದ ಆರೋಪದಡಿ ಬೆಸ್ಕಾಂ ಕಿರಿಯ ಎಂಜಿನಿಯರ್ ನಾಗರಾಜ್ ನರಸಿಂಹ ಅವರನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಬಾಣಸವಾಡಿ ಇ–8 ಉಪ ಘಟಕದ ಕಿರಿಯ ಎಂಜಿನಿಯರ್ ನಾಗರಾಜ್ ನರಸಿಂಹ ಅವರನ್ನು ಉದ್ಯಾನವೊಂದರ ಬಳಿ ಲಂಚ ಪಡೆಯುತ್ತಿದ್ದ ಸಂದರ್ಭದಲ್ಲಿ ವಶಕ್ಕೆ ಪಡೆಯಲಾಗಿದೆ' ಎಂದು ಲೋಕಾಯುಕ್ತ ಪೊಲೀಸರು ಹೇಳಿದರು.

'ನಾಗರಾಜ್ ಲಂಚಕ್ಕೆ ಬೇಡಿಕೆ ಇರಿಸಿದ್ದ ಬಗ್ಗೆ ಗುತ್ತಿಗೆದಾರರೊಬ್ಬರು ದೂರು ನೀಡಿದ್ದರು. ಅದರನ್ವಯ ದಾಳಿ ಮಾಡಿ ಪುರಾವೆ ಸಮೇತ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಬಿಟ್ ಕಾಯಿನ್ ಅಕ್ರಮ • ಗೌರಿ ಲಂಕೇಶ್, ರುದ್ರೇಶ್ ಹತ್ಯೆ ತನಿಖೆಗೂ ಸಹಕಾರ • ಎನ್‌ಐಎ, ಹೊರ ರಾಜ್ಯಗಳ ಪೊಲೀಸರಿಗೆ ನೆರವು

450 ಪ್ರಕರಣಗಳಿಗೆ 'ಸೈಬರ್ ತಜ್ಞ'ನೇ ಸಾಕ್ಷಿ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಬಿಟ್ ಕಾಯಿನ್ ಅಕ್ರಮ ಪ್ರಕರಣದ ಆರೋಪಿ ಸೈಬರ್ ತಜ್ಞ ಕೆ.ಎಸ್. ಸಂತೋಷ್‌ಕುಮಾರ್, ಕರ್ನಾಟಕ ಹಾಗೂ ಹೊರ ರಾಜ್ಯಗಳ 450ಕ್ಕೂ ಹೆಚ್ಚು ಅಪರಾಧ ಪ್ರಕರಣಗಳಲ್ಲಿ ಸಾಕ್ಷಿದಾರರಾಗಿರುವ ಅಂಶ ಪತ್ತೆಯಾಗಿದೆ. ಸಂತೋಷ್ ಬಂಧನ ಇತರೆ ಪ್ರಕರಣಗಳ ನ್ಯಾಯಾಲಯ ವಿಚಾರಣೆ ಮೇಲೆ ಪರಿಣಾಮ ಬೀರಬಹುದೆಂದು ತನಿಖಾಧಿಕಾರಿಗಳಿಗೆ ಚಿಂತೆ ಶುರುವಾಗಿದೆ.

ತಂತ್ರಜ್ಞಾನ ಹಾಗೂ ಸೈಬರ್ ಕ್ಷೇತ್ರದ ಪರಿಣತ ಸಂತೋಷ್ ಕುಮಾರ್, ಗ್ರೂಪ್ ಸೈಬರ್ ಐಡಿ (ಜಿಸಿಐಡಿ) ಟೆಕ್ನಾಲಜಿ ಹೆಸರಿನಲ್ಲಿ ಕಂಪನಿ ಸ್ಥಾಪಿಸಿ ಸಿಇಒ ಆಗಿದ್ದಾರೆ. ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಪ್ರಧಾನ ಕಚೇರಿ ಹೊಂದಿರುವ ಕಂಪನಿ, ಹಲವು ದೇಶಗಳಲ್ಲಿ ತಂತ್ರಜ್ಞಾನ–ಸೈಬರ್ ಸುರಕ್ಷತೆ ಸಂಬಂಧಿತ ಸೇವೆ ಒದಗಿಸುತ್ತಿದೆ.

ಮುಖ್ಯಾಂಶಗಳು

- ಜಿಸಿಐಡಿ ಟೆಕ್ನಾಲಜಿ ಕಂಪನಿ ಸ್ಥಾಪಕ
- ನ್ಯಾಯಾಲಯದಲ್ಲಿ ದಾಖಲಾಗದ ಶ್ರೀಕಿ ಹೇಳಿಕೆ
- ಮಹತ್ವದ ಪ್ರಕರಣಗಳ ತನಿಖಾಧಿಕಾರಿಗಳಿಗೆ ಚಿಂತೆ

'ಸೈಬರ್ ಅಪರಾಧ ಹೆಚ್ಚಾಗುತ್ತಿದ್ದಂತೆ, ಅವುಗಳನ್ನು ಭೇದಿಸಲು ಪೊಲೀಸರಿಗೆ ತಜ್ಞರ ಅವಶ್ಯಕತೆ ಇತ್ತು. ಸಂತೋಷ್ ಕುಮಾರ್‌ನನ್ನು ಸಂಪರ್ಕಿಸಿದ್ದ ಕೆಲ ಪೊಲೀಸ್ ಅಧಿಕಾರಿಗಳು, ತನಿಖೆಗೆ ಸಹ ಕಾರ ಪಡೆದಿದ್ದರು. ಇದಾದ ನಂತರ, ಕರ್ನಾಟಕ ಹಾಗೂ ಹೊರ ರಾಜ್ಯಗಳ ಪೊಲೀಸರೆಲ್ಲರಿಗೂ ಸಂತೋಷ್ ಆಪ್ತನಾದ' ಎಂದು ಮೂಲಗಳು ಹೇಳಿವೆ.

'ಪ್ರಕರಣಗಳ ಡಿಜಿಟಲ್ ಪುರಾವೆಗಳನ್ನು ಪರಿಶೀಲಿಸಿ, ವೈಜ್ಞಾನಿಕ ವರದಿ ನೀಡುವ ಮೂಲಕ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವ ಜವಾಬ್ದಾರಿಯನ್ನು ಸಂತೋಷ್ ಕುಮಾರ್ ವಹಿಸಿ ಕೊಂಡಿದ್ದ. ಇದೇ ಕಾರಣಕ್ಕೆ ತನಿಖಾಧಿಕಾರಿಗಳು, ಸಂತೋಷ್ ಜೊತೆ ಉತ್ತಮ ಒಡನಾಟ ಹೊಂದಿದ್ದರು. ಕರ್ನಾಟಕದ ಸಿಐಡಿ, ಸಿಸಿಬಿ ಹಾಗೂ ಇತರೆ ಪೊಲೀಸರೂ ಸಂತೋಷ್ ಸಹಾಯ ಪಡೆಯುತ್ತಿದ್ದರು' ಎಂದು ತಿಳಿಸಿವೆ.

ಪ್ರಜಾವಾಣಿ ವಿಶೇಷ

ಗೌರಿ ಲಂಕೇಶ್ ಹತ್ಯೆ ಪ್ರಕರಣಕ್ಕೂ ಸಾಕ್ಷಿ: 'ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ, ಉಗ್ರರ ಸೆರೆ, ಬಾಂಗ್ಲಾ ನುಸುಳುಕೋರರು, ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯಕರ್ತ ರುದ್ರೇಶ್ ಹತ್ಯೆ, ಡ್ರಗ್ಸ್ ದಂಧೆ, ಸೈಬರ್ ವಂಚನೆಗಳು ಸೇರಿದಂತೆ ದೇಶದ 450ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಸಂತೋಷ್ ಸಾಕ್ಷಿಯಾಗಿದ್ದಾರೆ. ಹಲವು ಪ್ರಕರಣಗಳ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿದೆ' ಎಂದು ಮೂಲಗಳು ಹೇಳಿವೆ.

'ರಾಷ್ಟ್ರೀಯ ತನಿಖಾ ದಳ (ಎನ್‌ಐಎ), ಜಾರಿ ನಿರ್ದೇಶನಾಲಯ (ಇಡಿ), ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ (ಎನ್‌ಸಿಬಿ), ಆದಾಯ ತೆರಿಗೆ (ಐಟಿ) ಇಲಾಖೆ ಅಧಿಕಾರಿಗಳು ಸಂತೋಷ್ ನೆರವು ಪಡೆದಿದ್ದಾರೆ. ತಮಿಳುನಾಡು, ಕೇರಳ, ಒಡಿಶಾ, ಜಮ್ಮು ಮತ್ತು ಕಾಶ್ಮೀರ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಹಾಗೂ ಇತರೆ ರಾಜ್ಯಗಳ ಪ್ರಕರಣದಲ್ಲೂ ಸಂತೋಷ್ ಸಾಕ್ಷಿಯಾಗಿದ್ದಾರೆ. ಸಂತೋಷ್ ಬಂಧನವಾಗುತ್ತಿದ್ದಂತೆ, ಹಲವು ಪ್ರಕರಣಗಳ ತನಿಖಾಧಿಕಾರಿಗಳಿಗೆ ಚಿಂತೆ ಕಾಡುತ್ತಿದೆ. ಸಂತೋಷ್ ಹೇಳಿಕೆಯನ್ನು ನಮ್ಮ ಪ್ರಕರಣದಲ್ಲಿ ನ್ಯಾಯಾಲಯ ಮಾನ್ಯ ಮಾಡುವುದೇ? ಎಂಬ ಬಗ್ಗೆ ಹಲವು ಅಧಿಕಾರಿಗಳು ಕಾನೂನು ತಜ್ಞರ ಜೊತೆ ಚರ್ಚಿಸುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಎಸ್‌ಐಟಿ ಮೇಲೆ ಅನುಮಾನ: ಸಂತೋಷ್ ಕುಮಾರ್ ಹಾಗೂ ಇನ್‌ಸ್ಪೆಕ್ಟರ್ ಪ್ರಶಾಂತ್‌ಬಾಬು ಅವರನ್ನು ಬುಧವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಎಸ್‌ಐಟಿ ಅಧಿಕಾರಿಗಳ ಲೋಪಗಳನ್ನು ಆರೋಪಿಗಳ ಪರ ವಕೀಲರು ನ್ಯಾಯಾಲಯದ ಗಮನಕ್ಕೆ ತಂದರು.

'2023ರ ಜೂನ್ 30ರಂದು ಎಡಿಜಿಪಿ ನೇತೃತ್ವದಲ್ಲಿ ಎಸ್‌ಐಟಿ ರಚಿಸಿರುವ ಸರ್ಕಾರ, ಬಿಟ್ ಕಾಯಿನ್ ಸಂಬಂಧಿತ ಪ್ರಕರಣದ ತನಿಖೆಗೆ ಸೂಚಿಸಿದೆ. ಇದೇ ತಂಡ, ಕಾಟನ್‌ಪೇಟೆ ಠಾಣೆಯಲ್ಲಿ ಮೊದಲ ಎಫ್‌ಐಆರ್ ದಾಖಲಿಸಿತ್ತು. ಆದರೆ, ಆರೋಪಿಗಳ ಹೆಸರನ್ನು ನಮೂದಿಸಿರಲಿಲ್ಲ. ಆರೋಪಿಗಳ ಹೆಸರು ಹೇಳಲು ಭಯವಿತ್ತಾ ? ಅಥವಾ ಯಾವುದಾದರೂ ಒತ್ತಡವಿತ್ತಾ ? ಯಾರದ್ದೂ ಕೈ ಗೊಂಬೆಯಾಗಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ ? ಎಸ್‌ಐಟಿ ತನಿಖೆ ಮೇಲೆ ಅನುಮಾನ ಮೂಡುತ್ತಿದೆ' ಎಂದು ವಕೀಲ ಸುಧನ್ವ ಡಿ.ಎಸ್ ವಾದಿಸಿದ್ದರು.

'ಶ್ರೀಕಿಯು ನ್ಯಾಯಾಲಯದಲ್ಲಿ ಇದುವರೆಗೂ ಯಾವುದೇ ಹೇಳಿಕೆ ದಾಖಲಿಸಿಲ್ಲ. ಸಮಯ ಹಾಳು ಮಾಡುತ್ತಿರುವ ಎಸ್‌ಐಟಿ ಅಧಿಕಾರಿಗಳು, ಪ್ರಕರಣದ ಸತ್ಯಾಂಶವೇನು ಎಂಬುದನ್ನು ಪತ್ತೆ ಮಾಡುತ್ತಿಲ್ಲ. ಯಾರದ್ದೂ ಒತ್ತಡದಿಂದ ಕೆಲಸ ಮಾಡುತ್ತಿರುವ ಅನುಮಾನವಿದೆ' ಎಂದು ಅವರು ದೂರಿದ್ದರು. ಇದರ ನಡುವೆಯೇ ಎಸ್‌ಐಟಿ ಅಧಿಕಾರಿಗಳು, ಆರೋಪಿಗಳನ್ನು ಮತ್ತಷ್ಟು ದಿನ ಕಸ್ಟಡಿಗೆ ಕೋರಿದ್ದ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿದೆ.

ದೂರುದಾರರಿಗೆ ₹7 ಲಕ್ಷ ವಂಚನೆ

'ಇನ್‌ಸ್ಪೆಕ್ಟರ್ ಪ್ರಶಾಂತ್ ಬಾಬು ಹಾಗೂ ಸಂತೋಷ್, ಪ್ರಕರಣವೊಂದರಲ್ಲಿ ಆರೋಪಿಗಳಿಂದ ಬಿಟ್ ಕಾಯಿನ್‌ಗಳನ್ನು ಜಪ್ತಿ ಮಾಡಿ ವಾಪಸು ಕೊಡಿಸುವುದಾಗಿ ಹೇಳಿ ದೂರುದಾರರೊಬ್ಬರಿಂದ ₹7 ಲಕ್ಷ ಪಡೆದುಕೊಂಡಿದ್ದರು. ಆದರೆ, ವರ್ಗಾವಣೆ ಮಾಡಿರಲಿಲ್ಲ. ಈ ಬಗ್ಗೆ ಇಬ್ಬರನ್ನೂ ಮತ್ತಷ್ಟು ವಿಚಾರಣೆ ನಡೆಸಬೇಕಿದೆ' ಎಂದು ಮೂಲಗಳು ಹೇಳಿವೆ.

ಸಂತೋಷ್

ಪ್ರಜಾವಾಣಿ ಕ್ಲಾಸಿಫೈಡ್ಸ್ — ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

MULTIPLE JOBS
- Business Development Associates
- Marketing Managers
- Graphic Designers
- Delivery Executives
Send CV to parabolahr@gmail.com

Teachers/ Professors

Industrial & Factory

General

WANTED 2-3 ACRES
Industrial Converted or Convertable land
to Anekal to Thally Road or Hosur to Krishna Giri Road before Ashok Leyland Unit II
Interested parties may call
+91 98860 20888

REAL ESTATE BUYING

Sites

Vishweshwariah Layout

URGENTLY REQUIRED BDA 30x40 Site or 60x40 Site in Vishweshwaraiah Layout (any block). Brokers Excuse. Contact: 9448018447.

PROPERTY CORNER

SALE BUILDING
G+5 Consist of 20 single BHK, 4 SINGLE RK, G FLOOR PARKING WITH MODERN ALL FACILITIES
RENT INCOME 3.89L
SHIRDI SAI LAYOUT, KUNDALAHALLI
7353779800, 9886737977

THE NATIONAL EDUCATION SOCIETY OF KARNATAKA (R)
BASAVANAGUDI, BANGALORE - 560 004
Dr H N National College of Engineering
36 B Cross, Jayanagar 7th block, Bengaluru-560 070.
Faculty & Staff Requirement for Proposed Engineering College
The National Education Society of Karnataka, requires the following Faculty and Staff for its Proposed Engineering College at Jayanagar, Bengaluru. Salary is no bar for the suitable candidates. Retired persons can also apply
1. PRINCIPAL- Qualification and experience as per AICTE norms
2. PROFESSORS, ASSOCIATE PROFESSORS & ASSISTANT PROFESSORS in CS&E, E&CE, IS&E and AI & Data Science, MBA and MCA Departments.
3. PROFESSORS, ASSOCIATE PROFESSORS & ASSISTANT PROFESSORS in Physics, Chemistry, Mathematics, Kannada & English
4. Librarian And Physical Education Director
5. Receptionist, System Admin, Office Superintendent, Accountants, Admin Staff
6. Lab Instructors, technical Staff, Lab Attenders, Digital Marketing Experts and Drivers
The National Education Society o f Karnataka, offers excellent work environment and growth opportunities. Interested Candidates may send their applications to the given address by post or e-mail
Apply on or before 21st February 2024
The Secretary
THE NATIONAL EDUCATION SOCIETY OF KARNATAKA (R)
BASAVANAGUDI, BANGALORE - 560 004
E-mail: nesbasavanagudi@gmail.com | Phone: 080 2660 3591

BUSINESS

Business to Business

Business

BEST-INVESTMENT FOR Returns`Invest 5`to`50Lacs For`Petrol Bank`and Restaurant. 1.33%`to`1.5% Per_Month With_TDS 100%_Genuine Along_With PDC Call:9845558882

I, KIRAN, aged 46 years S/o Parthasarathy Adesanhatti Ramaiah R/at No.1, Suryodaya, 3rd Block, 2nd Stage, Nagarabhavi, Bengaluru- 560072 have changed my name to KIRAN PARTHASARATHY vide affidavit dated: 10/1/2024 Before Notary Devaraja E Bangalore.

I, GOWRIPRIYA NATARAJAN KUMAR, have changed my name to GOWRIPRIYA KUMAR Vide Affidavit dated 01.02.2024 sworn before advocate and notary Ambujakshi, Bangalore

CHANGE OF NAME
He, DEV NAGESH Residig at #12, 24th Main, Girinagar, 'T' Block B.S.K 3rd Stage, Bengaluru-560085, have changed our minor son's name from PRATHAM to PRATHAM DEV vide affidavit dated 1.2.2024 before Notary V. Rajashekhara, Bangaluru. Henceforth he shall be known as PRATHAM DEV only.

I, PUSHPA W/O M. C THAMMAIAH (14341875a) born on 04.12.1969 residing at No 656, Katte Hosur Manchegowdanakoppalu, Vijayanagara II Stage Mysore , Karnataka - 570017 have changed my name to M T PUSHPA vide affidavit dated 31.01.2024 at Mysore

SIRAJUDDIN S/O vajeeruddin R/o H.No 14.8.378 Eden colony mangalpet bidar 585401 Karnataka have changed my religion Muslim to Hindu religion also changed my name to shivkumar for all future purposes Date 1.02.2024

PERSONAL

Change of Name

WE, LAKSHMI NARAYANAN CALAMBUR SRINIVASAN & DHIVYA BHARATHAN R/a_#H9 Villa_NVT Mystic Garden, Indlabele, Attibele_Road Bengaluru Rural-562107,have changed our_minor KID_name from MEHA LAKSHMI NARAYANAN TO MEHA NARAYANAN_vide affidavit 29.1.2024 before`Notary Hemalatha, Bangalore

I, ANJUM SALEEM R/a_#67, 3rd_Floor 201, Green Orchids SRK Garden BHEL_Layout, Bengaluru-41, have changed name ANJUM_TAJ vide`affidavit 31.01.2024 before`Notary Hemalatha, Bengaluru

Lost

DOCUMENT LOST
I, B. T. Rajeshekar have lost my original Abbigere Grama Panchayath Site Allotment Document RD112-L.V.P 64-22-5.1967 LRE.57.467 Hukkum L.A.B.R.85-66-67 Site No-7 While travelling Finders Please Contact: Address: No. 1, Venkatashwara Nilaya, Abbigere Dinne, Chikkabanavara Post-560090. 9845477766 Suitable Rewarded

DOCUMENT LOST
I, NARAYANA MURTHY E K Sri Tirumala Silver Springs, # 10, Hebron Enclave Road, Halehalli, Bengaluru-560036, have lost my original Transfer Certificate of PUC Certificate (Reg No. 132945) While inTransit. Finder Please Contact : 9880697855

Drivers

WANTED DRIVER Bellandur (Bangalore) Ph: 9008755585 Email your resume to: starsilks@gmail.com

REAL ESTATE SELLING

Agricultural Land

Out-Station

YEDIYUR HOBLI Kunigal Taluk Thattekere Grama 35 Gunta, Borewell, 45 Coconut Trees, Full Drip Water Total Land Fencing Rate 55,00,000/- Lakhs 3km From Highway Road Contact Owner: 9844603127

House

Hanumanthnagar

EAST FACING, Rental yielding House with 3 floors 4000 SFT built up. Plot 1350 sft at Maruthi Circle, Hanumanthnagar 50 Feet Road. 9964362531

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Sites

Intl Airport Road

SALE 30X40 Converted Sites @ 2,00,000/- (166/-sft) 90 Minutes journey from Yelahanka. Call: 9343510635/ 9010559539

Sanjaynagar

SITE SALE: 20X30, 600 SFT BDA KHATHA E/F AT JALADARSHINI LAYOUT, NEAR BEL ROAD- 9880039866.

Vishweshwariah Layout

AVAILABLE 20X30 BDA Site Vishveshwariah Layout 2nd Block, Builder Location 45 Lacks Contact Buyers: 9844603127

AVAILABLE BDA Site 30X40 West Face 6th Block Vishveshwariah Layout 7500/-Psft Contact Buyers: 9844603127

Yelahanka

DC CONVERSATION SITES AVAILABLE COMMERCIAL AND RESIDENTIAL READY TO CONSTRUCT CONTACT: 6366232222/ 6366242222

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

HEAT REFLECTION Coating. Stay cool this summer! Contact us for the solution. Roof & Walls- 9845987989.

PUBLIC NOTICE

PUBLIC NOTICE
Notice hereby given that K. Nagesh and K. Ashwath have agreed to sell to our client by name Smt. K. Janaki, the residential property bearing BDA No. 303, 10th Main Road, West of Chord Road, Manjunathanagar, 3rd Stage, 1st Block, Bangalore-560010, PID No. 19-7-303, BBMP Ward No. 19, measuring 30 feet x (37+38)/2 feet from all encumbrance. Any person having any right, title interest claim of any nature, what so ever in respect of said property is here by required to contact the under signed Advocate, along with documentary proof thereof within 15 days from the date of Publication thereof, failing which negotiation will be completed, with reference to any such claim and claims if any. shall be deemed to have been given up or waived.
Sd/- Smt. R. Radha, Advocate
R. R. Associates, No. 2286, 9th Main, 'D' Block, II Stage, Rajajinagar, Bangalore-560010. Phone No. 9483991015.
Place: Bangalore Date: 02-02-2024

DH Classifieds — More value, more impact | ಪ್ರಜಾವಾಣಿ
JOB HUNT
Get your HIRING NEEDS answered
Get the right people for your company...Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 | +91 9900428036 | +91 9731810277 | +91 9901641752 | 080-45557163/164

ಮೇಕೆದಾಟು ಯೋಜನೆ: ಮತ್ತೆ ಕಗ್ಗಂಟು

ಕೇಂದ್ರ ಜಲ ಆಯೋಗಕ್ಕೆ ಡಿಪಿಆರ್ ವಾಪಸ್: ಕಾವೇರಿ ಪ್ರಾಧಿಕಾರ ತೀರ್ಮಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೇಕೆದಾಟು ಬಳಿ ಸಮತೋಲನ ಜಲಾಶಯ ನಿರ್ಮಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಸಲ್ಲಿಸಿರುವ ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ಕೇಂದ್ರ ಜಲ ಆಯೋಗಕ್ಕೆ ಹಿಂತಿರುಗಿಸಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನಿರ್ಧರಿಸಿದೆ. ಇದರಿಂದಾಗಿ, ಮೇಕೆದಾಟು ಯೋಜನೆಗೆ ಮತ್ತೆ ಕಗ್ಗಂಟು ಎದುರಾಗಿದೆ.

ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಕರ್ನಾಟಕ ಸರ್ಕಾರ 2019ರ ಜನವರಿಯಲ್ಲಿ ಸಲ್ಲಿಸಿತ್ತು. ಡಿಪಿಆರ್‌ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವೇ ಅನುಮೋದನೆ ನೀಡಬೇಕು ಎಂದು ಜಲ ಆಯೋಗ ಷರತ್ತು ವಿಧಿಸಿತ್ತು. 'ಡಿಪಿಆರ್ ಕುರಿತು ಪ್ರಾಧಿಕಾರ ಚರ್ಚೆ ನಡೆಸಬಹುದು. ಆದರೆ, ಈ ಪ್ರಸ್ತಾವನೆ ಆಧಾರದಲ್ಲಿ ಅಧಿಕೃತವಾಗಿ ಯಾವುದೇ ಅಭಿಪ್ರಾಯಕ್ಕೆ ಬರುವಂತಿಲ್ಲ' ಎಂದು ಸುಪ್ರೀಂಕೋರ್ಟ್ 2022ರ ಜುಲೈನಲ್ಲಿ ನಿರ್ದೇಶನ ನೀಡಿತ್ತು. ಹೀಗಾಗಿ, ಪ್ರಾಧಿಕಾರವು ಇದರ ಬಗ್ಗೆ ಚರ್ಚೆಯನ್ನೇ ನಡೆಸಿರಲಿಲ್ಲ. ಯೋಜನಾ ವರದಿಗೆ ಪ್ರಾಧಿಕಾರ ಒಪ್ಪಿಗೆ ನೀಡಬೇಕು ಎಂದು ಕರ್ನಾಟಕ ಸರ್ಕಾರ ಒತ್ತಡ ಹೇರಿತ್ತು.

ಗುರುವಾರ ಇಲ್ಲಿ ನಡೆದ ಪ್ರಾಧಿಕಾರದ 28ನೇ ಸಭೆಯಲ್ಲಿ ಕರ್ನಾಟಕ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, 'ಈ ಯೋಜನೆ ಕುರಿತು ಇಂದಿನ ಸಭೆಯಲ್ಲಿ ಚರ್ಚಿಸಬೇಕು ಹಾಗೂ ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದರು. ಇದಕ್ಕೆ ತಮಿಳುನಾಡು ಹಾಗೂ ಪುದುಚೇರಿಯ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದರು.

'ಮೇಕೆದಾಟು ಯೋಜನೆಗೆ ಸುಪ್ರೀಂ ಕೋರ್ಟ್ ಯಾವುದೇ ನಿರ್ಬಂಧ ಹೇರಿಲ್ಲ. ಕಾವೇರಿ ನ್ಯಾಯಾಧೀಕರಣ ತೀರ್ಪಿನಲ್ಲೂ ಈ ಬಗ್ಗೆ ಉಲ್ಲೇಖ ಇಲ್ಲ. ಹಾಗಾಗಿ, ಸಂಕಷ್ಟದ ವರ್ಷದಲ್ಲಿ ಈ ವಿವಾದವನ್ನು ಶಾಶ್ವತವಾಗಿ ಬಗೆಹರಿಸಲು ಪ್ರಾಧಿಕಾರ ಕ್ರಮ ಕೈಗೊಳ್ಳಬೇಕು. ಡಿಪಿಆರ್ ಬಗ್ಗೆ ಪ್ರಾಧಿಕಾರ ಸ್ಪಷ್ಟ ನಿಲುವು ತೆಗೆದುಕೊಳ್ಳಬೇಕು. ಈ ಯೋಜನೆಯು ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸುವುದಿಲ್ಲ ಎಂದು ಜಲ ಆಯೋಗಕ್ಕೆ ಅಭಿಪ್ರಾಯ ಸಲ್ಲಿಸಬೇಕು' ಎಂದು ರಾಕೇಶ್ ಸಿಂಗ್ ಮನವಿ ಮಾಡಿದರು.

ಪ್ರಾಧಿಕಾರದ ಅಧ್ಯಕ್ಷ ಎಸ್. ಕೆ.ಹಲ್ದಾರ್ ಹಾಗೂ ಸದಸ್ಯರು ಪ್ರತಿಕ್ರಿಯಿಸಿ, 'ಮೇಕೆದಾಟು ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ. ಆದರೆ, ಯೋಜನೆ ಕುರಿತು ಚರ್ಚಿಸಲು ಯಾವುದೇ ನಿರ್ಬಂಧ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಯೋಜನಾ ವರದಿಯ ತಾಂತ್ರಿಕ ಪರಿಶೀಲನೆಗೆ ಪ್ರಾಧಿಕಾರ ಸಮರ್ಥವಾಗಿಲ್ಲ. ಕೇಂದ್ರ ಜಲ ಆಯೋಗ ಸಕ್ಷಮ ಪ್ರಾಧಿಕಾರ. ಹಾಗಾಗಿ, ಹೆಚ್ಚಿನ ಪರಾಮರ್ಶೆಗಾಗಿ ಮೇಕೆದಾಟು ಯೋಜನೆಯ ಪ್ರಸ್ತಾವನೆಯನ್ನು ಆಯೋಗಕ್ಕೆ ಹಿಂತಿರುಗಿಸಬಹುದು ಎಂದು ಬಹುತೇಕ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಜಲಾಶಯಗಳಲ್ಲಿ ಒಳಹರಿವು ಸಂಪೂರ್ಣವಾಗಿ ನಿಂತಿದೆ. ಹಾಗಾಗಿ, ತಮಿಳುನಾಡಿಗೆ ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂದು ಕರ್ನಾಟಕ ಸ್ಪಷ್ಟಪಡಿಸಿತು. ಎರಡೂ ರಾಜ್ಯಗಳ ಜಲಾಶಯಗಳ ಲೈವ್ ಸ್ಟೋರೇಜ್ ಅನ್ನು ಪ್ರಾಧಿಕಾರ ಪರಿಗಣಿಸಿತು. ನೀರು ಬಿಡುಗಡೆ ಮಾಡುವಂತೆ ಕರ್ನಾಟಕಕ್ಕೆ ಯಾವುದೇ ನಿರ್ದೇಶನವನ್ನು ಪ್ರಾಧಿಕಾರ ನೀಡಲಿಲ್ಲ.

ಬಿಲ್ಡರ್ ಬೆದರಿಸಿ ಸುಲಿಗೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಬಿಲ್ಡರ್‌ಗಳನ್ನು ಬೆದರಿಸಿ ಹಣ ಸುಲಿಗೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ತಾವರೆಕೆರೆಯ ದೀಪಕ್ ಹಾಗೂ ರಕ್ಷಿತ್ ಬಂಧಿತರು. ಜೈ ಹಿಂದ್ ಸಂಘಟನೆಯ ಅಧ್ಯಕ್ಷನೆಂದು ಹೇಳಿಕೊಳ್ಳುವ ದೀಪಕ್, ರೌಡಿ ರಕ್ಷಿತ್ ಜೊತೆ ಸೇರಿ ಕೃತ್ಯ ಎಸಗಿದ್ದ. ಮಾಗಡಿ ರಸ್ತೆ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಇಬ್ಬರನ್ನೂ ಸೆರೆ ಹಿಡಿಯಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಮಾಹಿತಿ ಹಕ್ಕು ಕಾರ್ಯಕರ್ತನೆಂದು ಹೇಳಿಕೊಂಡು ಓಡಾಡುತ್ತಿದ್ದ ದೀಪಕ್ ಅಪರಾಧ ಹಿನ್ನೆಲೆಯುಳ್ಳವರ ತಂಡ ಕಟ್ಟಿಕೊಂಡಿದ್ದ. ರಾಜಾಜಿನಗರ, ವಿಜಯನಗರ, ಮಾಗಡಿ ರಸ್ತೆ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಕಟ್ಟಡ ನಿರ್ಮಿಸುತ್ತಿದ್ದ ಬಿಲ್ಡರ್‌ಗಳ ಪಟ್ಟಿ ಸಿದ್ಧಪಡಿಸುತ್ತಿದ್ದ.'

'ಬಿಲ್ಡರ್‌ಗಳ ಕಚೇರಿಗೆ ಹೋಗುತ್ತಿದ್ದ ಆರೋಪಿಗಳು, 'ನಿಯಮ ಉಲ್ಲಂಘಿಸಿ ಕಟ್ಟಡ ಕಟ್ಟುತ್ತಿದ್ದಿರಾ. ನಿಮ್ಮ ವಿರುದ್ಧ ಪ್ರಾಧಿಕಾರಕ್ಕೆ ದೂರು ನೀಡುತ್ತೇವೆ' ಎಂಬುದಾಗಿ ಬೆದರಿಸುತ್ತಿದ್ದರು. ದೂರು ನೀಡಬಾರದೆಂದರೆ ಹಣ ನೀಡುವಂತೆ ಬೇಡಿಕೆ ಇರಿಸುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಪಶ್ಚಿಮ ಕಾರ್ಡ್ ರಸ್ತೆಯಲ್ಲಿರುವ ಬಿಲ್ಡರ್‌ವೊಬ್ಬರ ಕಚೇರಿಗೆ ಇತ್ತೀಚೆಗೆ ಹೋಗಿದ್ದ ಆರೋಪಿಗಳು, ₹ 80 ಲಕ್ಷಕ್ಕೆ ಬೇಡಿಕೆ ಇರಿಸಿದ್ದರು. ಈ ಬಗ್ಗೆ ಬಿಲ್ಡರ್ ಠಾಣೆಗೆ ದೂರು ನೀಡಿದ್ದರು' ಎಂದರು.

ಅಪರಾಧ ಸುದ್ದಿ

ರಕ್ಷಿತ್

ದೀಪಕ್

ಕೊಲೆ: ನಾಲ್ವರ ಬಂಧನ

ಬೆಂಗಳೂರು: ಕೆ.ಆರ್.ಪುರ ಠಾಣೆ ವ್ಯಾಪ್ತಿಯಲ್ಲಿ ದರ್ಶನ್ ಮೂರ್ತಿ (41) ಅವರನ್ನು ದೊಣ್ಣೆಯಿಂದ ಹೊಡೆದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

'ರಾಮಮೂರ್ತಿ ನಗರದ ಹ್ಯಾಪಿ ಗಾರ್ಡನ್ ನಿವಾಸಿ ದರ್ಶನ್ ಮೂರ್ತಿ ಅವರ ಮೇಲೆ ಜ. 31 ರಂದು ರಾತ್ರಿ ಹಲ್ಲೆ ಮಾಡಲಾಗಿತ್ತು. ತೀವ್ರ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗುರುವಾರ ಬೆಳಿಗ್ಗೆ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳಾದ ರೌಡಿ ರಾಘವೇಂದ್ರ, ಸಹಚರರಾದ ಮಧುಸೂದನ್, ನರೇಶ್, ವಿಜಯ್ ಅವರನ್ನು ಬಂಧಿಸಲಾಗಿದೆ. ಇನ್ನೊಬ್ಬ ಆರೋಪಿ ರಘುನಾಥ್ ತಲೆಮರೆಸಿಕೊಂಡಿದ್ದಾನೆ' ಎಂದು ತಿಳಿಸಿದರು.

'ದರ್ಶನ್ ಮೂರ್ತಿ ಹಾಗೂ ಆರೋಪಿಗಳ ನಡುವೆ ಗಲಾಟೆ ಆಗಿತ್ತು. ಇದೇ ವಿಚಾರಕ್ಕೆ ಆರೋಪಿಗಳು, ದರ್ಶನ್ ಮೂರ್ತಿ ಮೇಲೆ ಹಲ್ಲೆ ಮಾಡಿದ್ದರು' ಎಂದು ಮಾಹಿತಿ ನೀಡಿದರು.

ರೈಲಿನಲ್ಲಿ ಕಳ್ಳತನ: ಮಹಿಳೆ ಬಂಧನ

ಬೆಂಗಳೂರು: ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಸಂಬಂಧಿಕರ ಚಿನ್ನಾಭರಣ ಕಳ್ಳತನ ಮಾಡಿದ್ದ ಆರೋಪದಡಿ ಚಂದ್ರಾ ಶರ್ಮಾ (58) ಅವರನ್ನು ಕಂಟೋನ್ಮೆಂಟ್ ರೈಲ್ವೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆರ್.ಟಿ.ನಗರ ಮಠದಹಳ್ಳಿ ಮುಖ್ಯರಸ್ತೆ ನಿವಾಸಿ ಚಂದ್ರಾ ಶರ್ಮಾ ಇತ್ತೀಚೆಗೆ ಕೃತ್ಯ ಎಸಗಿದ್ದರು. ಇವರನ್ನು ಬಂಧಿಸಿ ₹8.51 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರರಾದ ಲಲಿತಾ, ಸಂಬಂಧಿಯಾದ ಚಂದ್ರಾ ಶರ್ಮಾ ಸೇರಿದಂತೆ ಎಂಟು ಮಂದಿ ಜೊತೆಗೆ ಕೇರಳಕ್ಕೆ ಜ.25ರಂದು ಹೋಗಿದ್ದರು. ಸಂಬಂಧಿಕರ ಗೃಹ ಪ್ರವೇಶದಲ್ಲಿ ಪಾಲ್ಗೊಂಡಿದ್ದರು. ಅಲ್ಲಿಂದ ಜ.27ಕ್ಕೆ ರೈಲಿನಲ್ಲಿ ಬೆಂಗಳೂರಿಗೆ ವಾಪಸು ಬಂದಿದ್ದರು. ಲಲಿತಾ ಕೆ.ಆರ್.ಪುರ ರೈಲು ನಿಲ್ದಾಣದಲ್ಲಿ ಇಳಿದುಕೊಂಡಿದ್ದರು. ಆರೋಪಿ ಚಂದ್ರಾ ಶರ್ಮಾ, ಕಂಟೋನ್ಮೆಂಟ್ ನಿಲ್ದಾಣದಲ್ಲಿ ಇಳಿದಿದ್ದರು. ಲಲಿತಾ ಅವರು ನಿಲ್ದಾಣ ಬಳಿ ಬ್ಯಾಗ್ ಪರಿಶೀಲನೆ ನಡೆಸಿದಾಗ, ಚಿನ್ನಾಭರಣ ಇರಲಿಲ್ಲ. ಕಳ್ಳತನದ ಬಗ್ಗೆ ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡಾಗ, ಜೊತೆಯಲ್ಲಿ ಪ್ರಯಾಣಿಸಿದ್ದ ಸಂಬಂಧಿ ಚಂದ್ರಾ ಶರ್ಮಾ ಅವರೇ ಆರೋಪಿ ಎಂಬುದು ಗೊತ್ತಾಯಿತು' ಎಂದು ಪೊಲೀಸರು ತಿಳಿಸಿದರು.

ದೇಶ ವಿಭಜನೆ ಕಾಂಗ್ರೆಸ್‌ನ ಗುಪ್ತ ಕಾರ್ಯಸೂಚಿ: ಅಶೋಕ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೋಡೊ ಭಾರತ್' ಎನ್ನುತ್ತಾ ಭಾರತವನ್ನು ವಿಭಜಿಸುವ ಗುಪ್ತ ಕಾರ್ಯಸೂಚಿಯನ್ನು ಕಾಂಗ್ರೆಸ್ ಹೊಂದಿದೆ. ಈ ಹುನ್ನಾರ ಸಫಲವಾಗಲು ಭಾರತೀಯರು ಎಂದಿಗೂ ಬಿಡುವುದಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಆರ್‌.ಅಶೋಕ

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದೇ ನಾವು ಎಂದು ಬೊಗಳೆ ಬಿಡುವ ಕಾಂಗ್ರೆಸ್, ಈಗ ದೇಶ ಒಡೆಯುವ ಮಾತನಾಡುತ್ತಿದೆ. ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನಗಳಿಂದ ಬಂದ ಸ್ವಾತಂತ್ರ್ಯ, ಸಾರ್ವಭೌಮತೆ, ಅಖಂಡತೆಯನ್ನು ಛಿದ್ರ ಮಾಡುವ ಮನಸ್ಥಿತಿ ಇರುವವರು ದೇಶದಲ್ಲಿರಲು ಯೋಗ್ಯರಲ್ಲ' ಎಂದರು.

ಸಂಸದ ಡಿ.ಕೆ.ಸುರೇಶ್ ಅವರ ದೇಶದ್ರೋಹಿ ಹೇಳಿಕೆ ಅಂಬೇಡ್ಕರ್ ರಚಿಸಿದ ಸಂವಿಧಾನಕ್ಕೆ ಮಾಡಿದ ಅಪಮಾನ. ನಾಡಗೀತೆ ಮೂಲಕ ಕನ್ನಡಾಂಬೆ ಭಾರತ ಮಾತೆಯ ನೆಚ್ಚಿನ ಮಗಳು ಎಂದು ಸಾರಿದ ಕುವೆಂಪು ಚಿಂತನೆಗೆ ಮಾಡಿದ ಅವಮಾನ. ದೇಶದ್ರೋಹಿ ಕಾಂಗ್ರೆಸ್ ಪಕ್ಷವನ್ನು ದೇಶದ ಜನರು ಎಂದಿಗೂ ಕ್ಷಮಿಸಲ್ಲ ಎಂದು ಹೇಳಿದರು.

'ಜವಾಬ್ದಾರಿ ಅರಿತು ಮಾತನಾಡಲಿ'

ಡಿ.ಕೆ.ಸುರೇಶ್ ಅವರಂತಹ ಜವಾಬ್ದಾರಿಯುತ ಸಂಸದರು ತಮ್ಮ ಸ್ಥಾನದ ಜವಾಬ್ದಾರಿ ಅರಿತು ಮಾತನಾಡಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ದಕ್ಷಿಣ ಭಾರತದ ರಾಜ್ಯಗಳಿಗೆ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡುತ್ತಿಲ್ಲ. ಹೀಗೆ ಅನ್ಯಾಯವಾದರೆ ಪ್ರತ್ಯೇಕ ರಾಷ್ಟ್ರ ಕೇಳಬೇಕಾಗುತ್ತದೆ' ಎಂಬ ಅವರ ಹೇಳಿಕೆ ಖಂಡನೀಯ. ಭಾರತದ ಅಖಂಡತೆ ಮತ್ತು ಸಾರ್ವಭೌಮತ್ವ ಕಾಪಾಡುವುದಾಗಿ ಪ್ರತಿಜ್ಞೆ ಮಾಡಿದ ಜನಪ್ರತಿನಿಧಿಗಳು ಮಾತನಾಡುವ ಮೊದಲು ಆಲೋಚಿಸಬೇಕು ಎಂದರು.

ಹಿಂದೆ ಯುಪಿಎ ಸರ್ಕಾರ ಇದ್ದಾಗ ಕರ್ನಾಟಕ ರಾಜ್ಯಕ್ಕೆ ₹60 ಸಾವಿರ ಕೋಟಿ ಕೊಟ್ಟಿದ್ದರು. 2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ₹2.36 ಲಕ್ಷ ಕೋಟಿ ಅನುದಾನ ರಾಜ್ಯಕ್ಕೆ ಕೊಟ್ಟಿದೆ. ತೆರಿಗೆ ಹಂಚಿಕೆ ಮೂಲಕ ಯುಪಿಎ ಅವಧಿಯಲ್ಲಿ ₹81 ಸಾವಿರ ಕೋಟಿ ಹಂಚಿಕೆಯಾಗಿತ್ತು. ಬಿಜೆಪಿ ಅವಧಿಯಲ್ಲಿ ₹2.82 ಲಕ್ಷ ಕೋಟಿ ಸಿಕ್ಕಿದೆ. ಅಂಕಿ–ಅಂಶ ಅರ್ಥ ಮಾಡಿಕೊಳ್ಳದೇ ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆ ಎಂದು ಟೀಕಿಸಿದರು.

ಚಿತ್ರಾವಳಿ

ನಗರದ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಲಿ. ನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಡಾ. ಎಂ. ಆರ್. ವೆಂಕಟೇಶ್ ನೇತೃತ್ವದ ತಂಡದ ಎಲ್ಲಾ 13 ಅಭ್ಯರ್ಥಿಗಳು ಜಯಗಳಿಸಿದ್ದಾರೆ. ಆಯ್ಕೆಯಾದ ಅಭ್ಯರ್ಥಿಗಳು (ಕುಳಿತವರು): ಎನ್. ಬಸವರಾಜ್, ಎನ್. ನರಸಿಂಹಮೂರ್ತಿ, ಎಂ. ಎನ್. ಕಂಬೇಗೌಡ, ಡಾ. ಎಂ. ಆರ್. ವೆಂಕಟೇಶ್, ಕೆ. ಜಿ. ರಾಮೇಗೌಡ, ಆರ್. ವೀರಣ್ಣ (ನಿಂತವರು) ನಾಗಮಾದಯ್ಯ, ಸಿ. ಜಾನಕಿರಾಮ್, ಎಂ. ಎಸ್. ನಾಗರತ್ನ, ಟಿ. ಕೆ. ಅಶ್ವಥ್ ನಾರಾಯಣ ಗೌಡ, ಎನ್. ಎಲ್. ಚಿದಾನಂದ, ಲಕ್ಷ್ಮೀ ಎಸ್. ಕುಮಾರ್, ಆರ್. ಪುಟ್ಟರಾಜ ನಾಯಕ್

ಕನ್ನಡ ಸಂಘರ್ಷ ಸಮಿತಿ ಆಯೋಜಿಸಿದ್ದ ಕುವೆಂಪು ಮತ್ತು ದ ರಾ ಬೇಂದ್ರೆ ಅವರ ಜನ್ಮದಿನ ಕಾರ್ಯಕ್ರಮದಲ್ಲಿ ಸಾಹಿತಿ ಹಂ.ಪ. ನಾಗರಾಜಯ್ಯ ಅವರು, ಲೇಖಕ ಸೂರ್ಯಕೀರ್ತಿ ಅವರಿಗೆ 'ಕುವೆಂಪು ಯುವ ಪ್ರಶಸ್ತಿ', ಸಾಹಿತಿಗಳಾದ ಕರೀಗೌಡ ಬೀಚನಹಳ್ಳಿ ಅವರಿಗೆ 'ಕುವೆಂಪು ಚಿರಂತನ ಪ್ರಶಸ್ತಿ' ಹಾಗೂ ಬೈರಮಂಗಲ ರಾಮೇಗೌಡ ಅವರಿಗೆ ಕುವೆಂಪು ಅನಿಕೇತನ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು

225 ವಾರ್ಡ್ ಅಧಿಸೂಚನೆಯಾಗಿದ್ದರೂ 243 ವಾರ್ಡ್‌ಗಳಿಗೆ ಟೆಂಡರ್

ವಿವಾದದಲ್ಲಿ ‘89 ತ್ಯಾಜ್ಯ ಪ್ಯಾಕೇಜ್’

• ಆರ್. ಮಂಜುನಾಥ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ತ್ಯಾಜ್ಯ ನಿರ್ವಹಣೆಗೆ 89 ಪ್ಯಾಕೇಜ್‌ಗಳಾಗಿ ಆಹ್ವಾನಿಸಲಾಗಿರುವ ಟೆಂಡರ್ ಮತ್ತೊಮ್ಮೆ ವಿವಾದಕ್ಕೆ ಒಳಗಾಗಿದೆ.

ಟೆಂಡರ್‌ನಲ್ಲಿ 243 ವಾರ್ಡ್‌ಗಳನ್ನು 89 ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಪ್ಯಾಕೇಜ್‌ನಲ್ಲಿ ಎರಡು–ಮೂರು ವಾರ್ಡ್‌ಗಳಿವೆ. ಆದರೆ, ಸರ್ಕಾರ 2023ರ ಸೆಪ್ಟೆಂಬರ್ 25ರಂದು ಹೊರಡಿಸಿದ ಅಂತಿಮ ಅಧಿಸೂಚನೆಯಲ್ಲಿ 243 ವಾರ್ಡ್‌ಗಳನ್ನು ರದ್ದುಪಡಿಸಿ, 225 ವಾರ್ಡ್‌ಗಳನ್ನು ರಚಿಸಿದೆ.

ಹೀಗಾಗಿ, 243 ವಾರ್ಡ್‌ಗಳ ಪ್ಯಾಕೇಜ್‌ನಿಂದ ಪಾಲಿಕೆಗೆ ಆರ್ಥಿಕ ಹೊರ ಹೊರೆ ಹೆಚ್ಚಾಗಲಿದೆ ಎಂಬ ಆರೋಪ ವ್ಯಕ್ತವಾಗಿದೆ.

ಲೋಕಸಭೆ ಚುನಾವಣೆ ಹತ್ತಿರವಾಗುತ್ತಿರುವ ಸಂದರ್ಭದಲ್ಲಿ ತರಾತುರಿಯಲ್ಲಿ ₹541 ಕೋಟಿ ಮೊತ್ತದ ಟೆಂಡರ್ ಅಂತಿಮಗೊಳಿಸಲು ಬಿಎಸ್‌ಡಬ್ಲ್ಯುಎಂಎಲ್ ಯತ್ನಿಸುತ್ತಿದೆ ಎಂದು ದೂರಲಾಗಿದೆ.

ಪ್ರಾಥಮಿಕವಾಗಿ ತ್ಯಾಜ್ಯ ಸಂಗ್ರಹ, ಸಾಗಣೆ, ನಿರ್ದಿಷ್ಟ ಸ್ಥಳದಲ್ಲಿ ಎರಡನೇ ಹಂತದ ತ್ಯಾಜ್ಯ ವಿಂಗಡಣೆ ಸೇರಿದಂತೆ ಎಲ್ಲ ರೀತಿಯ ತ್ಯಾಜ್ಯ ನಿರ್ವಹಣೆಗಾಗಿ

₹541 ಕೋಟಿ ವೆಚ್ಚದ ಈ ಟೆಂಡರ್ ಪ್ಯಾಕೇಜ್ ಅವೈಜ್ಞಾನಿಕವಾಗಿದ್ದು, ಇದನ್ನು ರದ್ದುಗೊಳಿಸಬೇಕು

ಪಿ.ಆರ್. ರಮೇಶ್, ವಿಧಾನಪರಿಷತ್ ಮಾಜಿ ಸದಸ್ಯ

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಕಂಪನಿ (ಬಿಎಸ್‌ಡಬ್ಲ್ಯುಎಂಎಲ್) 2022ರ ಸೆಪ್ಟೆಂಬರ್‌ನಲ್ಲಿ 89 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆದಿತ್ತು. ಆಗ ತಾಂತ್ರಿಕ ಬಿಡ್ ತೆರೆದ ಸಂದರ್ಭದಲ್ಲಿ ಹಲವು ಬಿಡ್‌ದಾರರು ಅಹರ್ತ ಹೊಂದಿರಲಿಲ್ಲ ಎಂದು ಟೆಂಡರ್ ರದ್ದುಪಡಿಸಲಾಗಿತ್ತು.

2023ರ ಜನವರಿಯಲ್ಲಿ ಎರಡನೇ ಬಾರಿಗೆ ಟೆಂಡರ್ ಆಹ್ವಾನಿಸಿತ್ತು. ಅರ್ಹತಾ ಸುತ್ತಿನಲ್ಲಿ ಕೆಲವರನ್ನು ಕ್ಷುಲ್ಲಕ ಕಾರಣಕ್ಕಾಗಿ ಅನರ್ಹಗೊಳಿಸಿದ್ದರಿಂದ ವಿಷಯ ಕೋರ್ಟ್ ಹಂತಕ್ಕೆ ತಲುಪಿತು. ವಿಧಾನಸಭೆ ಚುನಾವಣೆ ನೀತಿ ಸಂಹಿತೆ, ವಾರ್ಡ್ ಮರುವಿಂಗಡಣೆ ಎಲ್ಲ ಮುಗಿದ ಮೇಲೆ ಆ ಟೆಂಡರ್‌ನ ಆರ್ಥಿಕ ಬಿಡ್ ತೆರೆಯಲು ಬಿಎಸ್‌ಡಬ್ಲ್ಯುಎಂಎಲ್ ಇದೀಗ ಮುಂದಾಗಿದೆ.

‘89 ಪ್ಯಾಕೇಜ್‌ಗಳಲ್ಲಿ 243 ವಾರ್ಡ್‌ಗಳಿಗೆ ₹541 ಕೋಟಿ ವೆಚ್ಚದಲ್ಲಿ ಟೆಂಡರ್ ಕರೆಯಲಾಗಿದೆ. ಇದೀಗ ಅದಕ್ಕೂ ಮಿಗಿಲಾಗಿ, ಶೇ 50ಕ್ಕೂ ಹೆಚ್ಚಿನ ಮೊತ್ತಕ್ಕೆ ಬಿಡ್ ಮಾಡಿದ್ದಾರೆ. ಅಷ್ಟು ಮೊತ್ತಕ್ಕೇ ಗುತ್ತಿಗೆ ನೀಡಲು ಬಿಎಸ್‌ಡಬ್ಲ್ಯುಎಂಎಲ್ ಮುಂದಾಗಿದೆ. ವಾರ್ಡ್‌ಗಳು ಕಡಿಮೆಯಾದರೆ ಹಣ ಕಡಿಮೆ ಆಗಬೇಕು. ಆದರೆ ಹೆಚ್ಚು ಹಣ ವ್ಯಯ ಮಾಡಲು ಮುಂದಾಗುತ್ತಿದ್ದ’ ಎಂದು ಗುತ್ತಿಗೆದಾರರು ದೂರಿದರು.

‘ಹಿಂದಿನ ಬಿಜೆಪಿ ಸರ್ಕಾರದಲ್ಲಿದ್ದ ಅಧಿಕಾರಿಗಳು ರೂಪಿಸಿದ್ದ 89 ಪ್ಯಾಕೇಜ್‌ಗಳ ಟೆಂಡರನ್ನೇ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ಅನುಮೋದಿಸಲು ಹೊರಟಿದ್ದಾರೆ. ಆಗಿನ ರಾಜಕಾರಣಿಗಳು ಅವರಿಗೆ ಅನುಕೂಲವಾಗುವ ಗುತ್ತಿಗೆದಾರರಿಗೆ ಟೆಂಡರ್ ನೀಡಲು ಪ್ಯಾಕೇಜ್‌ಗಳನ್ನು ರಚಿಸಿದ್ದರು. ಅದನ್ನು ಕಾಂಗ್ರೆಸ್ ಎಲ್ಲರೂ ವಿರೋಧಿಸಿದ್ದೆವು. ಇದೀಗ ಕಾಂಗ್ರೆಸ್ ಸರ್ಕಾರ ಕೂಡ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಮೋಡಿಗೆ ಬಿದ್ದು, ಹಿಂದಿನ ಟೆಂಡರ್‌ಗೇ ಅನುಮೋದನೆ ನೀಡಲು ಮುಂದಾಗಿದೆ’ ಎಂದು ವಿಧಾನ ಪರಿಷತ್ತಿನ ಮಾಜಿ ಸದಸ್ಯ ಪಿ.ಆರ್. ರಮೇಶ್ ದೂರಿದರು.

‘ಸರ್ಕಾರ 243 ವಾರ್ಡ್‌ಗಳ ರಚನೆಯನ್ನು ವಾಪಸ್ ಪಡೆದು ಅಧಿಸೂಚನೆ ಹೊರಡಿಸಿದ ಮೇಲೆ, 243 ವಾರ್ಡ್‌ಗಳಿಗಾಗಿಯೇ ಪ್ಯಾಕೇಜ್ ಟೆಂಡರ್ ಕರೆದಿರುವುದು ಅಕ್ರಮ. ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರು ಇದನ್ನು ಪರಿಶೀಲಿಸಿ, ಪಾಲಿಕೆಗಾಗುವ ನೂರಾರು ಕೋಟಿ ಹೆಚ್ಚಿನ ಹೊರೆಯನ್ನು ತಪ್ಪಿಸಬೇಕು’ ಎಂದು ರಮೇಶ್ ಅವರು ಆಗ್ರಹಿಸಿದರು.

ಹಿಂದಿದ್ದ ಅಧಿಕಾರಿಗಳಿಂದ ಟೆಂಡರ್!

‘ಬಿಬಿಎಂಪಿ ವ್ಯಾಪ್ತಿಯಲ್ಲಿ ತ್ಯಾಜ್ಯ ನಿರ್ವಹಣೆ ಟೆಂಡರ್ ಪ್ಯಾಕೇಜ್‌ಗಳನ್ನು ಹಿಂದಿದ್ದ ಅಧಿಕಾರಿಗಳು ನಿರ್ಧರಿಸಿ, ಪ್ರಕಟಿಸಿದ್ದಾರೆ. 243 ವಾರ್ಡ್‌ಗಳನ್ನು 89 ಪ್ಯಾಕೇಜ್‌ಗಳಲ್ಲಿ ವಿಂಗಡಿಸಲಾಗಿದೆ. ಇದನ್ನು 225 ವಾರ್ಡ್‌ಗಳಿಗೆ ಟೆಂಡರ್ ನಂತರ ಮರುಹೊಂದಾಣಿಕೆ ಮಾಡಬೇಕು. ವಾಹನಗಳ ಆಧಾರದಲ್ಲಿ ಟೆಂಡರ್ ಕರೆದಿರುವುದರಿಂದ ಅದನ್ನು ಗುತ್ತಿಗೆ ನೀಡಿದ ಮೇಲೆ ಪರಿಷ್ಕರಣೆ ಮಾಡಬೇಕು’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಕಂಪನಿಯ (ಬಿಎಸ್‌ಡಬ್ಲ್ಯುಎಂಎಲ್) ಎಂಜಿನಿಯರ್ ತಿಳಿಸಿದರು.

‘ಕನಿಷ್ಠ ವೇತನ ₹31,500 ಕೊಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಸಂಘಟಿತ ವಲಯದ ಕಾರ್ಮಿಕರಿಗೆ ಮಾಸಿಕ ಕನಿಷ್ಠ ₹31,500 ವೇತನ ನೀಡಬೇಕು’ ಎಂದು ಆಗ್ರಹಿಸಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ಪದಾಧಿಕಾರಿಗಳು ನಗರದಲ್ಲಿ ಗುರುವಾರ ಬೃಹತ್ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ರಾಜ್ಯದ ವಿವಿಧ ಜಿಲ್ಲೆಗಳ ಅಸಂಘಟಿತ ಕಾರ್ಮಿಕರ ಪ್ರತಿನಿಧಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಎಐಟಿಯುಸಿ ರಾಜ್ಯ ಸಮಿತಿ ಅಧ್ಯಕ್ಷ ಅನಂತ ಸುಬ್ಬರಾವ್, ‘ರಾಜ್ಯದ ಅಸಂಘಟಿತ ವಲಯದ 1.7 ಕೋಟಿ ದುಡಿಯುವ ಜನರಿಗೆ ಕನಿಷ್ಠ ₹31,500 ಮಾಸಿಕ ವೇತನ ನಿಗದಿಗೊಳಿಸುವಂತೆ ಸುಪ್ರೀಂ ಕೋರ್ಟ್ ಪ್ರಕರಣವೊಂದರಲ್ಲಿ ಹೇಳಿದೆ. ಹೈಕೋರ್ಟ್ ಸಹ ಈ ಬಗ್ಗೆ ತೀರ್ಪು ನೀಡಿದೆ. ಇದನ್ನು ಸರ್ಕಾರ ಅನುಷ್ಠಾನಗೊಳಿಸಬೇಕು’ ಎಂದು ಆಗ್ರಹಿಸಿದರು.

‘ಮಾಲೀಕರ ಒತ್ತಡಕ್ಕೆ ಮಣಿಯುತ್ತಿರುವ ಸರ್ಕಾರ, 1.7 ಕೋಟಿ ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿದೆ. ಇದರ ವಿರುದ್ಧ ನಿರಂತರವಾಗಿ ಹೋರಾಟ ನಡೆಸಲಾಗುವುದು’ ಎಂದು ಎಚ್ಚರಿಸಿದರು.

ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಡಿ.ಎ. ವಿಜಯಭಾಸ್ಕರ್, ‘ಕೇಂದ್ರ ಸರ್ಕಾರವು ಕಾರ್ಮಿಕ ಕಾನೂನು ಸುಧಾರಣೆ ಹೆಸರಿನಲ್ಲಿ ವಿರೋಧಿ ನೀತಿ ಅನುಸರಿಸುತ್ತಿದೆ. ಕಾರ್ಮಿಕರನ್ನು ಆಳುವ ವರ್ಗದ ಗುಲಾಮರನ್ನಾಗಿ ಮಾಡುವ ಹುನ್ನಾರ ನಡೆದಿದೆ. ಕಾರ್ಮಿಕರ ಮುಷ್ಕರದ ಹಕ್ಕು, ಕಾರ್ಖಾನೆಗಳ ತಪಾಸಣೆ, ಕನಿಷ್ಠ ವೇತನ, ಸಾಮಾಜಿಕ ಭದ್ರತೆ, ಕಟ್ಟಡ ಕಾರ್ಮಿಕರ ಸಾಮಾಜಿಕ ಸೌಲಭ್ಯಗಳು ನಾಶವಾಗುವ ಹಂತದಲ್ಲಿವೆ’ ಎಂದು ಆರೋಪಿಸಿದರು.

ಕಟ್ಟಡ ನಿರ್ಮಾಣ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು/ ಸಹಾಯಕಿಯರು, ಬಿಸಿಯೂಟ ತಯಾರಿಸುವ ಮಹಿಳೆಯರು, ಇತರ ಹಲವು ಕ್ಷೇತ್ರಗಳ ಕಾರ್ಮಿಕರು ಪ್ರತಿಭಟನೆಯಲ್ಲಿ ಇದ್ದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಅಸಂಘಟಿತ ವಲಯದ ಕಾರ್ಮಿಕರು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಘೋಷಣೆಗಳನ್ನು ಕೂಗಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು ರೇಸ್

ಲಾ ರೀನ ಗೆಲ್ಲುವ ನಿರೀಕ್ಷೆ

ಸ್ಟೇಯರ್ಸ್ ಟ್ರಯಲ್ ಸ್ಟೇಕ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಲಾ ರೀನ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗ್ರೀಲ್ 1, ಐಸಿರಾನ್ ಆರೋ 4, ಪಿಚ್ಪೆರ್ಟ್ ಲವ್ 11

2ನೇ ರೇಸ್: ಸಾಲಿಡ್ ಪವರ್ 1, ಸಿಂಗ್ನಾಚರ್ 2, ರಾಫ಼ಲ್ 7

3ನೇ ರೇಸ್: ಇಮ್ಮೋರ್ಟಲ್ ಬ್ಲೂಟ 1, ಅಡ್ವನ್ಸ್‌ಮೆಂಟ್ 2, ಸನ್‌ಫ್ಲೇರ್ 9

4ನೇ ರೇಸ್: ಬ್ರೂಸ್ ಅಲ್‌ಮೈಟಿ 1, ಸ್ಟೆಲ್ಲಾರ್ ಗೋಲ್ಡ್ 2

5ನೇ ರೇಸ್: ಲಾ ರೀನ 3, ಕರಣ್‌ವೀರ್ 1

6ನೇ ರೇಸ್: ಮ್ಯಾಜಿಕಲ್ ಬೇ 1, ವಾಸಿಟಾನೊ 4, ಸಿಲಿಕಾನ್ ಸ್ಟಾರ್ 12

7ನೇ ರೇಸ್: ಕ್ಲಿಂಪ್ಸ್ 3, ದಿ ರಿಪಬ್ಲಿಕ್ ಪವರ್ 6, ಸದರ್ನ್ ಅರಿಸ್ಟೊಕ್ರಾಟ್ 4,

ಉತ್ತಮ ಬೆಟ್: ಗ್ರೀಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3, 4, 5, 6, 7	2, 3, 4	5,6,7

ವೇತನ ಆಯೋಗ: ಶೀಘ್ರ ವರದಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಜೆಟ್ ಮಂಡನೆ ಮತ್ತು ಲೋಕಸಭೆ ಚುನಾವಣೆಯ ನೀತಿಸಂಹಿತೆ ಜಾರಿಗೂ ಮೊದಲು 7ನೇ ವೇತನ ಆಯೋಗದ ವರದಿ ಅನುಷ್ಠಾನಕ್ಕೆ ಅನುಕೂಲ ಆಗುವಂತೆ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಆಯೋಗದ ಅಧ್ಯಕ್ಷರನ್ನು ಭೇಟಿ ಮಾಡಿ ರಾಜ್ಯ ಸರ್ಕಾರಿ ನೌಕರರ ಸಂಘದ ನಿಯೋಗ ಮನವಿ ಮಾಡಿದೆ.

ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರ ನೇತೃತ್ವದಲ್ಲಿ ಆಯೋಗದ ಅಧ್ಯಕ್ಷ ಸುಧಾಕರ್ ರಾವ್ ಅವರನ್ನು ಭೇಟಿ ಮಾಡಿದ ನಿಯೋಗವು, ‘7ನೇ ವೇತನ ಆಯೋಗದ ರಚನೆಯಾಗಿ 14 ತಿಂಗಳು ಕಳೆದಿದೆ. ಆದರೆ, ಇನ್ನೂ ವರದಿ ಸಲ್ಲಿಕೆ ಆಗದಿರುವುದರಿಂದ ನೌಕರರಲ್ಲಿ ಆತಂಕ ಮೂಡಿದೆ’ ಎಂದು ವಿವರಿಸಿತು.

6ನೇ ವೇತನ ಆಯೋಗದ ಅಧ್ಯಕ್ಷರಾಗಿದ್ದ ಶ್ರೀನಿವಾಸ ಮೂರ್ತಿಯವರು ಎಂಟು ತಿಂಗಳಲ್ಲಿ ವರದಿ ಸಲ್ಲಿಸಿದ್ದರು. ವರದಿ ಸ್ವೀಕರಿಸಿದ ಒಂದು ತಿಂಗಳಲ್ಲಿ ಸರ್ಕಾರವು ಅದನ್ನು ಅನುಷ್ಠಾನಕ್ಕೆ ತಂದಿತ್ತು. ಲೋಕಸಭೆ ಚುನಾವಣೆ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಎದುರಾಗಿದ್ದರಿಂದ 7ನೇ ವೇತನ ಆಯೋಗದ ವರದಿ ಜಾರಿಗೊಳಿಸಲು ತೊಡಕು ಎದುರಾಗಲಿದೆ. ಹೀಗಾಗಿ, ಆದಷ್ಟು ಬೇಗ ವರದಿ ಸಲ್ಲಿಸಬೇಕು ಎಂದು ಮನವಿ ಮಾಡಿತು.

‘ಸಂಘದ ಮನವಿಗೆ ಆಯೋಗದ ಅಧ್ಯಕ್ಷರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ವರದಿ ಸಲ್ಲಿಸಲು ಕ್ರಮ ವಹಿಸುವುದಾಗಿ ಭರವಸೆ ನೀಡಿದ್ದಾರೆ’ ಎಂದು ಷಡಾಕ್ಷರಿ ಅವರು ತಿಳಿಸಿದ್ದಾರೆ.

ಮನಸೆಳೆದ ಜಾಗೃತಿ ಗೀತೆಗಳ ನೃತ್ಯ

ಪ್ರಜಾವಾಣಿ ವಾರ್ತೆ

ಯಲಹಂಕ: ಸಂದೀಪ್ ಉನ್ನಿಕೃಷ್ಣನ್ ವೃತ್ತದ ಬಳಿಯ ಡಾ.ಬಿ.ಆರ್. ಅಂಬೇಡ್ಕರ್ ಉದ್ಯಾನದ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಶ್ವ ವಿದ್ಯಾಪೀಠ ಶಾಲೆಯ ಮಕ್ಕಳು, ಜಾಗೃತಿ ಮೂಡಿಸುವ ಹಲವು ಗೀತೆಗಳಿಗೆ ನೃತ್ಯ ಪ್ರಸ್ತುತಪಡಿಸಿದರು.

ವಿವಿಧ ವೇಷಭೂಷಣ ಧರಿಸಿದ್ದ ಮಕ್ಕಳು, ಭಾರತದ ಸಂಸ್ಕೃತಿ, ದೇಶಭಕ್ತಿ ಹಾಗೂ ಪರಿಸರ ಕುರಿತ ಗೀತೆಗಳಿಗೆ ನೃತ್ಯಮಾಡುವ ಮೂಲಕ ಜನರ ಗಮನ ಸೆಳೆದರು. ಭಾಷಣ ಮತ್ತು ಬೀದಿನಾಟಕದ ಜೊತೆಗೆ ರೈತರು ಹಾಗೂ ಸೈನಿಕರ ಸಮಸ್ಯೆಗಳನ್ನು ಹರಿಕಥೆಯ ಮೂಲಕ ಪ್ರಸ್ತುತಪಡಿಸಿದರು.

ಕನ್ನಡ ಶಿಕ್ಷಕಿ ಶಶಿಕಲಾ ಎಂ.ಬಿ. ಮಾತನಾಡಿ, ‘ಮಕ್ಕಳಲ್ಲಿ ಪ್ರಾಥಮಿಕ ಹಂತದಿಂದಲೇ ದೇಶಭಕ್ತಿ, ರೈತರ ಮತ್ತು ಸೈನಿಕರ ಸಮಸ್ಯೆಗಳು, ಭಾರತದ ಕಲೆ, ಸಂಸ್ಕೃತಿ ಹಾಗೂ ಪರಿಸರದ ಕುರಿತು ಜಾಗೃತಿ ಮೂಡಿಸಲು ಇಂತಹ ಗೀತೆಗಳನ್ನು ಆಯ್ಕೆಮಾಡಿಕೊಂಡು ನೃತ್ಯದ ಮೂಲಕ ಪ್ರಸ್ತುತಪಡಿಸಲಾಗಿದೆ’ ಎಂದು ತಿಳಿಸಿದರು.

ಶಾಲೆಯ ನಿರ್ದೇಶಕಿ ಸುಶೀಲ ಸಂತೋಷ್, ಪ್ರಾಂಶುಪಾಲರಾದ ರೂಪಾ, ಮುಖ್ಯಶಿಕ್ಷಕಿ ರಿಟಾ ಕಾರಬನ್ ಉಪಸ್ಥಿತರಿದ್ದರು.

ವಿಶ್ವ ವಿದ್ಯಾಪೀಠ ಶಾಲೆಯ ಮಕ್ಕಳು ಗೀತೆಗಳಿಗೆ ನೃತ್ಯ ಪ್ರಸ್ತುತಪಡಿಸಿದರು.

‘ಸಂಶೋಧನೆ: ಬೆಂಗಳೂರಿಗೆ ಲಾಭ’

ನವದೆಹಲಿ: ‘ಮಧ್ಯಂತರ ಬಜೆಟ್‌ನಲ್ಲಿ ತಂತ್ರಜ್ಞಾನ ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರಕ್ಕೆ ₹1 ಲಕ್ಷ ಕೋಟಿ ಬಂಡವಾಳ ನಿಧಿ ಮೀಸಲು ಇಟ್ಟಿರುವುದರಿಂದ ತಂತ್ರಜ್ಞಾನ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಬೆಂಗಳೂರಿನ ಅನೇಕ ಸಂಸ್ಥೆಗಳಿಗೆ ಅನುಕೂಲವಾಗಲಿದೆ’ ಎಂದು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

‘ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳಿಗೆ ಮುಂದಿನ 50 ವರ್ಷಗಳ ವರೆಗೆ ಬಡ್ಡಿರಹಿತ ಸಾಲ ನೀಡಲಾಗುತ್ತಿದೆ. ಭಾರತೀಯ ವಿಜ್ಞಾನ ಸಂಸ್ಥೆ, ನಿಮ್ಹಾನ್ಸ್, ಎಚ್‌ಎಎಲ್, ಎನ್‌ಎಎಲ್, ಐಐಐಟಿ ಹಾಗೂ ಇತರ ಅನೇಕ ಸಂಸ್ಥೆಗಳು ಈ ನಿಧಿ ಸ್ಥಾಪನೆಯಿಂದ ಹೆಚ್ಚಿನ ಪ್ರಯೋಜನ ಪಡೆಯಲಿವೆ’ ಎಂದು ಅವರು ಹೇಳಿದರು.

ನಗರದಲ್ಲಿ ಇಂದು

72ನೇ ಭಾರತೀಯ ಫೌಂಡ್ರಿ ಕಾಂಗ್ರೆಸ್ ಉದ್ಘಾಟನೆ: ಮುಖ್ಯ ಅತಿಥಿ: ಮುತ್ತುಕುಮಾರ್, ಗಿರೀಶ್ ಡಿ.ಎಂ., ಆಯೋಜನೆ: ಇಂಡಿಯನ್ ಫೌಂಡ್ರಿ ಕಾಂಗ್ರೆಸ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ, ಬೆಳಿಗ್ಗೆ 9.30

‘ಸ್ಪೆಷ್ ಸ್ಪಾರ್ಕ್’ ಅವಿಷ್ಕಾರ ಉತ್ಸವ: ಆಯೋಜನೆ: ಲರ್ನಿಂಗ್ ಲಿಂಕ್ಸ್ ಫೌಂಡೇಶನ್, ಸ್ಥಳ: ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 10.30

‘ನಗೆ ಗ್ಯಾರಂಟಿ’ ವ್ಯಂಗ್ಯಚಿತ್ರ ಪ್ರದರ್ಶನ: ಕಲಾವಿದರು: ಗುಜ್ಜಾರ್, ನಂಬಂಡನಸ್ವಾಮಿ, ನಾಗನಾಥ್, ರಘುಪತಿ, ದತ್ತಾತ್ರಿ, ಚಂದ್ರ ಗಂಗೊಳ್ಳಿ, ಉತ್ತಪ್ಪ, ರಘುನಾಥ ಟಿ.ಪಿ., ಎಚ್. ಎಸ್. ವಿಶ್ವನಾಥ್, ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಟೂನಿಸ್ಟ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 4.30

ಪುರಂದರೋತ್ಸವ: ಉದ್ಘಾಟನೆ ಮತ್ತು ಆಶೀರ್ವಚನ: ಸುವಿದ್ಯೇಂದ್ರತೀರ್ಥ ಸ್ವಾಮೀಜಿ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 6.30

ಸಂಕ್ರಾಂತಿ ನಾಟಕೋತ್ಸವ: ಧಾತ್ರಿ ರಂಗ ಸಂಸ್ಥೆಯಿಂದ ‘ಶ್ರೀಕೃಷ್ಣ ಸಂಧಾನ’ ಹಾಸ್ಯ ನಾಟಕ, ‘ಸೋರುತಿಹುದು ಸಂಬಂಧ’ ಸಾಂಸಾರಿಕ ನಾಟಕ ಪ್ರದರ್ಶನ, ಆಯೋಜನೆ: ಕಲಾ ರಂಗಲೋಕ, ಸ್ಥಳ: ವೈಮಾರುತಿ ನಗರ, ನಂದಿನಿ ಬಡಾವಣೆ 4ನೇ ಬ್ಲಾಕ್, ಸಂಜೆ 6.30

ಪ್ರವಚನ ವಾಹಿನಿ: ಭರತನಾಟ್ಯ: ಶಾರ್ಲೋಟ್ ಜೆ. ಆತ್ರೇಯ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ

‘ನಾನು ಪಾತ್ರಗಳನ್ನು ಗ್ರಹಿಸುವ ಬಗೆ’ ವಿಶೇಷ ಉಪನ್ಯಾಸ: ರಂಗಾಯಣ ರಘು, ನಾಲ್ಕು ಕುಡುತ ಬಿಡುಗಡೆ, ಆಯೋಜನೆ ಹಾಗೂ ಸ್ಥಳ: ಚಿಂತನ್ ಸಿನಿಮಾ, ಬನಶಂಕರಿ ಎರಡನೇ ಹಂತ, ಸಂಜೆ 5

‘ಸ್ವಾಗತಮ್ ಕೃಷ್ಣ’ ನೃತ್ಯ ಪ್ರದರ್ಶನ: ರಜನಿ ಪ್ರಮೋದ್, ಆಯೋಜನೆ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 6

ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಹರಿದಾಸ ಮಂಜರಿ: ಗಾಯನ: ಸುಷ್ಮಾ ಶ್ರೇಯಸ್, ಕೀ-ಬೋರ್ಡ್: ಅಮಿತ್ ಶರ್ಮ, ತಬಲಾ: ಸರ್ವೋತ್ತಮ, ಸ್ಥಳ: ಅಭಯಗಿರಿ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ವಜ್ರಹಳ್ಳಿ, #152/2, 7ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, 3ನೇ ಬ್ಲಾಕ್, ತ್ಯಾಗರಾಜನಗರ, ಸಂಜೆ 6.30

ಈ ಹಿಂದೆ ಬಿಟ್ಟು ಹೋದ, ಹೊಸದಾಗಿ ಸೇರ್ಪಡೆಗೊಂಡ ಪ್ರದೇಶಗಳಿಗೆ ಅನ್ವಯ

110 ಹಳ್ಳಿಗಳಿಗೆ ಕುಡಿಯುವ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಗೆ ಸೇರ್ಪಡೆಯಾಗಿರುವ ಬೆಂಗಳೂರು ಸುತ್ತಲಿನ 110 ಹಳ್ಳಿಗಳಲ್ಲಿ ಬಿಟ್ಟು ಹೋಗಿರುವ ಪ್ರದೇಶಗಳಿಗೆ ಬೆಂಗಳೂರು ಜಲಮಂಡಳಿಯಿಂದ ₹248 ಕೋಟಿ ವೆಚ್ಚದಲ್ಲಿ ಕುಡಿಯುವ ನೀರು ಪೂರೈಕೆ ಮಾಡುವ ಯೋಜನೆಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 110 ಹಳ್ಳಿಗಳಲ್ಲಿ ಬಿಟ್ಟು ಹೋಗಿರುವ ಮತ್ತು ಹೊಸದಾಗಿ ಸೇರ್ಪಡೆಗೊಂಡಿರುವ ಪ್ರದೇಶಗಳಿಗೆ ಪೂರ್ಣ ಪ್ರಮಾಣದಲ್ಲಿ ನೀರಿನ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು.

ಈ ಯೋಜನೆ ಅನುಷ್ಠಾನಗೊಳಿಸಲು ಶೇ 50ರಷ್ಟು ಸಾಲವನ್ನು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದಿಂದ ಪಡೆಯಲಾಗುವುದು. ಉಳಿದ ಶೇ 50ರಷ್ಟು ಬಾಕಿ ಮೊತ್ತವನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಆಂತರಿಕ ಆರ್ಥಿಕ ಸಂಪನ್ಮೂಲದಿಂದ ಭರಿಸಲಾಗುವುದು ಎಂದರು.

ಕೆ.ಸಿ.ಜನರಲ್ ಆಸ್ಪತ್ರೆ ಉನ್ನತೀಕರಣ: ನಗರದ ಕೆ.ಸಿ.ಜನರಲ್ ಆಸ್ಪತ್ರೆ ಆವರಣದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಶವಾಗಾರ, ಅಡುಗೆ ಮನೆ, ಲಾಂಡ್ರಿ ಕಟ್ಟಡಗಳನ್ನು ನಿರ್ಮಿಸುವ ಮತ್ತು ಎಸ್‌ಟಿಪಿ ಉನ್ನತೀಕರಿಸುವ ಕಾಮಗಾರಿಗಳಿಗೆ ₹150 ಕೋಟಿ ಅಂದಾಜು ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ.

ಮಳೆ ನೀರು ಕಾಲುವೆ ಪುನರ್ ನಿರ್ಮಾಣ: ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬೃಹತ್ ಮಳೆ ನೀರು ಕಾಲುವೆಗಳ ಪುನರ್ ನಿರ್ಮಾಣ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಬಿಬಿಎಂಪಿ ವತಿಯಿಂದ ಕೈಗೆತ್ತಿಕೊಳ್ಳಲು ಅನುಮೋದನೆ. ಮುಂಗಾರಿನಲ್ಲಿ ಮಳೆಯಿಂದ ಆಗಬಹುದಾದ ಹಾನಿಯನ್ನು ತಡೆಗಟ್ಟಲು ಶಾಶ್ವತವಾದ ಆರ್‌ಸಿಸಿ ತಡೆಗೋಡೆ ನಿರ್ಮಾಣಕ್ಕಾಗಿ ₹30 ಕೋಟಿ ವೆಚ್ಚದಲ್ಲಿ ಈ ಕಾಮಗಾರಿ ಕೈಗೊಳ್ಳಲು ಸಂಪುಟ ಒಪ್ಪಿಗೆ ನೀಡಿದೆ.

ಮುಂದೂಡಿಕೆಯಾದ ವಿಷಯಗಳು:

- ಚಿಕ್ಕಬಳ್ಳಾಪುರ ನಂದಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ವೈದ್ಯಕೀಯ ಕಾಲೇಜು ಕಟ್ಟಡ, ವಿದ್ಯಾರ್ಥಿಗಳ ಹಾಸ್ಟೆಲ್, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಸತಿ ನಿಲಯಗಳ ಕಟ್ಟಡ ಕಾಮಗಾರಿಗಳ ₹810 ಕೋಟಿ ಪರಿಷ್ಕೃತ ಅಂದಾಜಿನ ಪ್ರಸ್ತಾಪವನ್ನು ಮುಂದೂಡಲಾಗಿದೆ.
- ಕೆಜಿಎಫ್‌ನ ಭಾರತ್ ಚಿನ್ನದ ಗಣಿ ಸಂಸ್ಥೆಯ ಗಣಿ ಗುತ್ತಿಗೆ ಅವಧಿ ಮುಕ್ತಾಯಗೊಂಡಿದ್ದು, ಕೋಲಾರ ಜಿಲ್ಲೆಯಲ್ಲಿ ಲಭ್ಯವಿರುವ ಟೈಲಿಂಗ್ ಡಂಪಿಂಗ್‌ಗಳಿಗೆ ಕೇಂದ್ರ ಸರ್ಕಾರದಿಂದ ಗಣಿ ಚಟುವಟಿಕೆ ನಡೆಸುವ ಪ್ರಸ್ತಾವನೆಯ ವಿಷಯವನ್ನೂ ಮುಂದೂಡಲಾಗಿದೆ.

ವೈಟ್ ಟಾಪಿಂಗ್‌ಗೆ ₹1,200 ಕೋಟಿ ಕ್ರಿಯಾ ಯೋಜನೆಗೆ ಸಂಪುಟ ಒಪ್ಪಿಗೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆಗಳನ್ನು ವೈಟ್ ಟಾಪಿಂಗ್ ರಸ್ತೆಗಳನ್ನಾಗಿ ಪರಿವರ್ತಿಸಲು ರಾಜ್ಯ ಸರ್ಕಾರ ನೀಡಿರುವ ₹800 ಕೋಟಿಗಳ ಜತೆಗೆ ಬಿಬಿಎಂಪಿ ವತಿಯಿಂದ ₹400 ಕೋಟಿ ಸೇರಿಸಿ ಒಟ್ಟು ₹1,200 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲು ಸಂಪುಟದಲ್ಲಿ ತೀರ್ಮಾನಿಸಲಾಗಿದೆ.

ಬಿಬಿಎಂಪಿ ಆಸ್ತಿ ತೆರಿಗೆಯ ಮೂಲಕ ಸ್ವಂತ ಸಂಪನ್ಮೂಲವನ್ನು ಹೆಚ್ಚಿಸಿಕೊಂಡು, ಹೆಚ್ಚುವರಿ ಆಸ್ತಿ ತೆರಿಗೆ ಸಂಗ್ರಹಣೆಯ ಮೊತ್ತವನ್ನು ಮೂಲಸೌಕರ್ಯ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗುವುದು ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಮೇಲ್ಸೇತುವೆಗೆ ₹263 ಕೋಟಿ: ಬೈಯ್ಯಪ್ಪನ ಹಳ್ಳಿ ಪ್ರದೇಶದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಸರ್ ಎಂ.ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ಅನ್ನು ಸಂಪರ್ಕಿಸಲು ₹263 ಕೋಟಿ ವೆಚ್ಚದಲ್ಲಿ ಮೇಲ್ಸೇತುವೆ ನಿರ್ಮಿಸಲು ಅನುಮೋದನೆ ನೀಡಲಾಗಿದೆ. ಸರ್ ಎಂ.ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ತಲುಪಲು ಸರಿಯಾದ ಮೆಟ್ರೊ ಮತ್ತು ರಸ್ತೆಗಳ ಸಂಪರ್ಕವಿಲ್ಲದೇ ಇರುವುದರಿಂದ ಲಕ್ಷಾಂತರ ಪ್ರಯಾಣಿಕರಿಗೆ ಅನಾನುಕೂಲ ಹಾಗೂ ಸಂಚಾರ ದಟ್ಟಣೆಗೆ ಕಾರಣವಾಗಿದೆ. ಮೇಲ್ಸೇತುವೆಯಿಂದ ಈ ಸಮಸ್ಯೆ ನಿವಾರಣೆ ಆಗಲಿದೆ ಎಂದು ಪಾಟೀಲ ತಿಳಿಸಿದರು.

ಪಿಪಿಪಿ ಮಾದರಿಯಲ್ಲಿ ಪಿಆರ್‌ಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ- ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಪೆರಿಫೆರಲ್ ವರ್ತುಲ ರಸ್ತೆಯನ್ನು (ಪಿಆರ್‌ಆರ್) ₹27 ಸಾವಿರ ಕೋಟಿ ವೆಚ್ಚದಲ್ಲಿ ನಿರ್ಮಿಸಲು ಬಿಡಿಎ ನಿರ್ಧರಿಸಿದ್ದು, 50 ವರ್ಷಗಳ ಅವಧಿಗೆ ನಿರ್ವಹಣಾ ಶುಲ್ಕ ಸಂಗ್ರಹಿಸಲು ಅವಕಾಶ ಕಲ್ಪಿಸಿದೆ.

ತುಮಕೂರು ರಸ್ತೆಯಿಂದ ಹೊಸೂರು ರಸ್ತೆವರೆಗೆ ನಿರ್ಮಾಣವಾಗುವ ಎಂಟು ಪಥದ 73.04 ಕಿ.ಮೀ ಉದ್ದ ಪಿಆರ್‌ಆರ್ ಅನ್ನು 'ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ, ವರ್ಗಾವಣೆ' ಆಧಾರದಲ್ಲಿ ನಿರ್ಮಿಸಲಾಗುತ್ತದೆ. ಈ ಬಗ್ಗೆ ಫೆ.1ರಂದು ಟೆಂಡರ್ ಆಹ್ವಾನಿಸಲಾಗಿದ್ದು, ಮಾರ್ಚ್ 1ರವರೆಗೆ ಟೆಂಡರ್ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ತುಮಕೂರು ರಸ್ತೆಯ ಮಾದನಾಯಕಹಳ್ಳಿ ಬಳಿಯ ನೈಸ್ ಜಂಕ್ಷನ್ ಸಮೀಪದಿಂದ ಪಿಆರ್‌ಆರ್ ಆರಂಭವಾಗಲಿದ್ದು, ಹೆಸರುಘಟ್ಟ ರಸ್ತೆ, ದೊಡ್ಡಬಳ್ಳಾಪುರ ರಸ್ತೆ, ಬಳ್ಳಾರಿ ರಸ್ತೆ, ಹೆಣ್ಣೂರು, ಹಳೇ ಮದ್ರಾಸ್ ರಸ್ತೆ, ವೈಟ್‌ಫೀಲ್ಡ್, ಚನ್ನಸಂದ್ರ, ಸರ್ಜಾಪುರ ರಸ್ತೆ, ಹೊಸೂರು ರಸ್ತೆ ತಲುಪಲಿದೆ.

ಹೆಸರಘಟ್ಟ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ವೈಟ್‌ಫೀಲ್ಡ್, ಹೊಸೂರು ರಸ್ತೆಗಳಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್ ಹಾಗೂ 395 ಸಣ್ಣ ಜಂಕ್ಷನ್‌ಗಳ ಮೇಲೆ ಪಿಆರ್‌ಆರ್ ಹಾದುಹೋಗಲಿದೆ. ಜಾರಕಬಂಡೆ ಕೆರೆ, ತಿರುಮೇನಹಳ್ಳಿ ಕೆರೆ, ಚಿನ್ನಗಾನಹಳ್ಳಿ ಕೆರೆ, ಗುಂಜೂರು ಕೆರೆ, ಚಿಕ್ಕತೋಗೂರು ಕೆರೆಗಳ ಮೇಲೆ ಸೇರಿದಂತೆ ಒಟ್ಟು 16 ಮೇಲ್ಸೇತುವೆಗಳನ್ನು ನಿರ್ಮಿಸಲಾಗುತ್ತದೆ.

2,560 ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲು ಯೋಜಿಸಲಾಗಿದ್ದು, ಬಿಡಿಎ ಯೋಜನೆಯ ಅಲೈನ್‌ಮೆಂಟ್ ಅನ್ನೂ ನಮೂದಿಸಿ ಎರಡು ವರ್ಷದಲ್ಲಿ ಯೋಜನೆ ಪೂರ್ಣಗೊಳಿಸಬೇಕು ಎಂದು ಟೆಂಡರ್‌ನಲ್ಲಿ ತಿಳಿಸಲಾಗಿದೆ.

ಪಿಆರ್‌ಆರ್ ರಸ್ತೆಗೆ 'ಬೆಂಗಳೂರು ಬ್ಯುಸಿನೆಸ್ ಕಾರಿಡಾರ್' ಎಂದು ಮರುನಾಮಕರಣ ಮಾಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದರು. ಆದರೆ, ಟೆಂಡರ್‌ನಲ್ಲಿ 'ಎಂಟು ಪಥದ ಪಿಆರ್‌ಆರ್' ಎಂದೇ ನಮೂದಾಗಿದೆ.

ನ್ಯಾಯಾಧೀಶೆಗೆ ಬೆದರಿಕೆ: ಬಂಧನ

ಅಲಪ್ಪುಳ (ಕೇರಳ) (ಪಿಟಿಐ): ಬಿಜೆಪಿಯ ಒಬಿಸಿ ವಿಭಾಗದ ನಾಯಕ ರಂಜಿತ್ ಶ್ರೀನಿವಾಸನ್ ಕೊಲೆ ಪ್ರಕರಣದಲ್ಲಿ ತೀರ್ಪು ಪ್ರಕಟಿಸಿದ ನಂತರ, ಮಾವೆಲಿಕ್ಕರ ನ್ಯಾಯಾಲಯದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶೆಗೆ ವಿವಿಧ ಸಾಮಾಜಿಕ ವೇದಿಕೆಗಳಲ್ಲಿ ಬೆದರಿಕೆ ಒಡ್ಡಿದ ಆರೋಪದಡಿ ನಾಲ್ವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಇದರ ಬೆನ್ನಲ್ಲೇ, ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶೆ ವಿ.ಜಿ.ಶ್ರೀದೇವಿ ಅವರಿಗೆ ಭದ್ರತೆಯನ್ನು ಹೆಚ್ಚಿಸಲಾಗಿದೆ. ನಸೀರ್‌ಮಾನ್(47), ರಫಿ(38), ನವಾಸ್ ನೈನಾ(42) ಹಾಗೂ ಶಾಜಹಾನ್(36) ಬಂಧಿತರು.

'ಗುತ್ತಿಗೆದಾರರಿಗೆ ಪೂರ್ಣ ಹಣ ಪಾವತಿ: ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಬಾಕಿ ಇರುವ ಪೂರ್ಣ ಹಣವನ್ನು ಶೀಘ್ರ ಬಿಡುಗಡೆ ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಬಿಎಂಪಿ ಗುತ್ತಿಗೆದಾರರ ಸಂಘ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಗುರುವಾರ ಮಾತನಾಡಿದ ಅವರು, 'ಪೂರ್ಣಗೊಂಡ ಕಾಮಗಾರಿಗಳಿಗೆ ಶೇ 75ರಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. ಉಳಿದಿರುವ ಶೇ 25ರಷ್ಟು ಹಣವನ್ನೂ ಬಿಡುಗಡೆ ಮಾಡಲು ಬಿಬಿಎಂಪಿ ಆಯುಕ್ತರಿಗೆ ಸೂಚಿಸಲಾಗುವುದು' ಎಂದರು.

'ಬಿಬಿಎಂಪಿ ಅನುದಾನದಲ್ಲಿ ಪೂರೈಸಲಾಗಿರುವ ಕಾಮಗಾರಿಗಳಿಗೆ 24 ತಿಂಗಳಿಂದ ಬಿಲ್ ಪಾವತಿಸಿಲ್ಲ. ಸರ್ಕಾರದ ಅನುದಾನದ ಕಾಮಗಾರಿಗಳಿಗೆ 12 ತಿಂಗಳಿಂದ ಹಣ ಪಾವತಿ ಮಾಡಿಲ್ಲ. ಅಲ್ಲದೆ, ಈಗ ಬಿಡುಗಡೆ ಮಾಡಲಾಗಿರುವ ಬಿಲ್‌ನಲ್ಲಿ ಶೇ 25ರಷ್ಟು ಬಾಕಿ ಇದೆ. ಅದನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು' ಬಿಬಿಎಂಪಿ ಗುತ್ತಿಗೆದಾರರ ಸಂಘದ ಸದಸ್ಯರು ಡಿಸಿಎಂಗೆ ಮನವಿ ಸಲ್ಲಿಸಿದರು. ಪ್ಯಾಕೇಜ್ ಕಾಮಗಾರಿಗಳು ಬೇಡ, ಕೇಂದ್ರ ಕಚೇರಿಯಿಂದ ಬಿಲ್ ಪಾವತಿ, ಒಂದು ಸಂಸ್ಥೆಯಿಂದ ಗುಣಮಟ್ಟ ಪರಿಶೀಲನೆ, 2022ರ ಹಿಂದೆ ಅನುಮೋದನೆಗೊಂಡಿರುವ ಕಾಮಗಾರಿಗಳ ಜಿಎಸ್‌ಟಿಯಿಂದ ಗುತ್ತಿಗೆದಾರರಿಗೆ ವಿನಾಯಿತಿ, ಕೆಆರ್‌ಐಡಿಎಲ್ ವತಿಯಿಂದ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬಿಲ್ ಪಾವತಿಗೆ ಮನವಿ ಮಾಡಿಕೊಂಡರು.

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ, ಬಿಬಿಎಂಪಿ ಗುತ್ತಿಗೆದಾರರ ಸಂಘದ ಗೌರವಾಧ್ಯಕ್ಷ ರವೀಂದ್ರ, ಅಧ್ಯಕ್ಷ ನಂದಕುಮಾರ್ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

ಬಿಬಿಎಂಪಿ ಗುತ್ತಿಗೆದಾರರ ಸಂಘದ ವತಿಯಿಂದ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು

ಮುಂಬರುವ ಲೋಕಸಭೆ ಚುನಾವಣೆಯ ಸಿದ್ಧತೆ ಬಗ್ಗೆ ಚರ್ಚೆ?

ಸಚಿವರ ಜೊತೆ ಸಿ.ಎಂ 'ಡಿನ್ನರ್' ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ನಿವಾಸದಲ್ಲಿ ಗುರುವಾರ ರಾತ್ರಿ ಆಯೋಜಿಸಿದ್ದ ಔತಣಕೂಟದಲ್ಲಿ ಬಹುತೇಕ ಎಲ್ಲ ಸಚಿವರು ಭಾಗವಹಿಸಿದರು. ಮುಂಬರುವ ಲೋಕಸಭೆ ಚುನಾವಣೆ ವಿಚಾರವಾಗಿ ಈ ವೇಳೆ ಅನೌಪಚಾರಿಕವಾಗಿ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಗುರುವಾರ ಬೆಳಿಗ್ಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಎಲ್ಲ ಸಚಿವರನ್ನು ರಾತ್ರಿಯ ಊಟಕ್ಕೆ ಮುಖ್ಯಮಂತ್ರಿ ಆಹ್ವಾನಿಸಿದ್ದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಸತೀಶ ಜಾರಕಿಹೊಳಿ, ಎಚ್.ಕೆ. ಪಾಟೀಲ, ಶಿವರಾಜ ಎಸ್. ತಂಗಡಗಿ ಸೇರಿದಂತೆ ಅನೇಕರು ಭಾಗವಹಿಸಿದರು.

ಲೋಕಸಭೆ ಚುನಾವಣೆಗೆ ಸಮರ್ಥವಾಗಿ ಕೆಲಸ ಮಾಡಬೇಕು. ಹಂಚಿಕೆ ಮಾಡಿರುವ ಉಸ್ತುವಾರಿ ಕ್ಷೇತ್ರಗಳ ಗೆಲುವಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದು ಸಂಪುಟ ಸಹೋದ್ಯೋಗಿಗಳಿಗೆ ಮುಖ್ಯಮಂತ್ರಿ ಸಲಹೆ ನೀಡಿದ್ದಾರೆ ಎಂದು ಗೊತ್ತಾಗಿದೆ.

ಬಿಜೆಪಿ ಭಾವನಾತ್ಮಕ ವಿಷಯಗಳನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡುತ್ತಿದೆ. ಈ ವಿಚಾರದಲ್ಲಿ ನಾವು ತುಂಬ ಎಚ್ಚರಿಕೆಯಿಂದ ಇರಬೇಕಾಗಿದೆ. ಹೇಳಿಕೆಗಳನ್ನು ಕೊಡುವಾಗಲೂ ಸಂದರ್ಭ ನೋಡಿಕೊಂಡು ಮಾತನಾಡಬೇಕು. ಪಕ್ಷ ಮತ್ತು ಸರ್ಕಾರದ ವರ್ಚಸ್ಸಿಗೆ ಧಕ್ಕೆ ಆಗದಂತೆ ನಿಗಾ ವಹಿಸಬೇಕು ಎಂದೂ ಹೇಳಿದ್ದಾರೆ ಎನ್ನಲಾಗಿದೆ.

ಬಿಜೆಪಿಗೆ ಪೈಪೋಟಿ ನೀಡಲು ಎಲ್ಲ ರೀತಿಯಲ್ಲೂ ಪಕ್ಷ ಸಮರ್ಥವಾಗಿದೆ. ಆದರೆ, ಬಿಜೆಪಿಯವರು ಅಯೋಧ್ಯೆಯ ವಿಷಯವನ್ನೇ ಮುಂದಿಟ್ಟುಕೊಂಡು ಚುನಾವಣೆ ಎದುರಿಸಲು ಸಜ್ಜಾಗಿದ್ದಾರೆ. ಗೊಂದಲಕ್ಕೆ ಅವಕಾಶ ಆಗದಂತೆ ನಾವು ಎಚ್ಚರಿಕೆ ವಹಿಸಬೇಕಾಗಿದೆ. ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು ಎಂದೂ ಸಚಿವರಿಗೆ ಮುಖ್ಯಮಂತ್ರಿ ಕಿವಿಮಾತು ಹೇಳಿದ್ದಾರೆ ಎಂದು ಹೇಳಲಾಗಿದೆ.

ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮದಲ್ಲಿ ಸಿ.ಎಂ

ಹೆಗ್ಡೆ ಅವಧಿ ಒಂದು ತಿಂಗಳು ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರ ಅಧಿಕಾರ ಅವಧಿಯನ್ನು ಒಂದು ತಿಂಗಳು ವಿಸ್ತರಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಗುರುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಮ್ಮಿಕೊಂಡಿದ್ದ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎಚ್.ಕಾಂತರಾಜ ಅವರ ಅವಧಿ ಪೂರ್ಣಗೊಂಡ ಬಳಿಕ ಜಯಪ್ರಕಾಶ್ ಹೆಗ್ಡೆ ಆಯೋಗದ ಅಧ್ಯಕ್ಷರಾಗಿದ್ದಾರೆ. ಆರ್ಥಿಕ, ಸಾಮಾಜಿಕ ವರದಿಯನ್ನು ಸಲ್ಲಿಸುವುದಕ್ಕಾಗಿ ಅವರ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

'ಜನರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಗೊತ್ತಾಗದೇ ಇದ್ದರೆ ಸರಿಯಾಗಿ ಬಜೆಟ್ ರೂಪಿಸಲು ಸಾಧ್ಯವಿಲ್ಲ. ಅದಕ್ಕಾಗಿ ಜನರ ಸ್ಥಿತಿಗತಿ ಅರಿಯಲು ನಾನು ಮುಖ್ಯಮಂತ್ರಿಯಾಗಿದ್ದಾಗ ದೇಶದಲ್ಲಿಯೇ ಪ್ರಥಮ ಬಾರಿಗೆ ಸಮೀಕ್ಷೆಗೆ ಚಾಲನೆ ನೀಡಿದೆ. ಕಾಂತರಾಜ ಆಯೋಗದ ವರದಿಯನ್ನು ಸ್ವೀಕರಿಸುತ್ತೇವೆ. ಅದರಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ ಸರಿಪಡಿಸುತ್ತೇವೆ. ಸ್ವೀಕರಿಸುವ ಮೊದಲೇ ಅವೈಜ್ಞಾನಿಕ ಎಂದು ಹೇಳುವುದು ಸರಿಯಲ್ಲ' ಎಂದು ತಿಳಿಸಿದರು.

'ನಾನು ಮುಖ್ಯಮಂತ್ರಿಯಾಗಿದ್ದಾಗ ವರದಿ ಪೂರ್ಣಗೊಂಡಿರಲಿಲ್ಲ. ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ವರದಿ ಪೂರ್ಣಗೊಂಡರೂ ಅವರು ಸ್ವೀಕರಿಸಲಿಲ್ಲ. ಬಳಿಕ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರೂ ಸ್ವೀಕರಿಸಲಿಲ್ಲ' ಎಂದು ಟೀಕಿಸಿದರು.

ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ವರ್ಗ, ಮೌಢ್ಯ, ಕರ್ಮ ಸಿದ್ಧಾಂತ ತಿರಸ್ಕರಿಸಿದವರು ಬಸವಾದಿ ಶರಣರು. ಅವರಲ್ಲಿ 354 ವಚನಗಳನ್ನು ರಚಿಸಿರುವ ಮಡಿವಾಳ ಮಾಚಿದೇವ ಅವರು ಎಲ್ಲರ ವಚನಗಳನ್ನು ಸಂರಕ್ಷಿಸಿದವರು. ಅದಕ್ಕಾಗಿ ಬಸವಣ್ಣರಿಗೆ ಮಾಚಿದೇವರು ನೆಚ್ಚಿನ ಶರಣರಾಗಿದ್ದರು ಎಂದರು.

'ಸಮಸಮಾಜ ಇದ್ದರೆ ಶೋಷಣೆಗೆ ಅವಕಾಶ ಇರುವುದಿಲ್ಲ. ಅಸಮಾನತೆಯ ಸಮಾಜ ಇದ್ದಾಗ ಮಾತ್ರ ಶೋಷಣೆ ಮಾಡಲು ಸಾಧ್ಯ. ಸಂವಿಧಾನವು ಸಮಸಮಾಜ ನಿರ್ಮಾಣದ ಆಶಯವನ್ನು ಹೊಂದಿದೆ. ಶೋಷಣೆ ಬಯಸುವವರು ಸಂವಿಧಾನವನ್ನು ಬದಲಾಯಿಸಲು ಹೊರಟಿದ್ದಾರೆ. ಸಂವಿಧಾನ ವಿರೋಧಿಸುವವರು ನಮ್ಮ ವೈರಿಗಳು' ಎಂದು ಟೀಕಿಸಿದರು.

'ನಮಗೆ ಸಿಗಬೇಕಾದ ಹಕ್ಕುಗಳು, ಸೌಲಭ್ಯಗಳು ಇನ್ನೂ ದೊರೆಯದೇ ಇದ್ದಿರಬಹುದು. ಎಲ್ಲರಿಗೂ ಸಮಾನ ಅವಕಾಶವನ್ನು ಸಂವಿಧಾನ ನೀಡಿದೆ. ಎಲ್ಲರೂ ಶಿಕ್ಷಣ ಪಡೆಯಬೇಕು. ಸಂಘಟಿತರಾಗಬೇಕು. ಹಕ್ಕುಗಳಿಗೆ ಹೋರಾಟ ಮಾಡಬೇಕು' ಎಂದು ಸಲಹೆ ನೀಡಿದರು.

ಕೆಂಗೇರಿ ಮಠದ ಶಿವಯೋಗಾನಂದ ಮಹಾಪುರಿ ಸ್ವಾಮೀಜಿ, ಮೂಡಬಿದರೆ ಕರಿಂಜೆ ಮಠದ ಮುಕ್ತಾನಂದ ಸ್ವಾಮೀಜಿ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ಎಸ್. ತಂಗಡಗಿ, ರಾಜ್ಯ ಮಡಿವಾಳ ಸಂಘದ ಅಧ್ಯಕ್ಷ ಸಿ. ನಂಜಪ್ಪ, ಎಚ್. ರವಿಕುಮಾರ್, ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗ ಪ್ರಧಾನ ಕಾರ್ಯದರ್ಶಿ ಎಂ.ಕೆ. ಶಿವಕುಮಾರ್ ಉಪಸ್ಥಿತರಿದ್ದರು. ಯಡಿಯೂರು ಮೂಡಲಗಿರಿಯಪ್ಪ ಉಪನ್ಯಾಸ ನೀಡಿದರು.

ನಗರದಲ್ಲಿ ಗುರುವಾರ ನಡೆದ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಂಗೇರಿ ಗುರುಪೀಠದ ಶಿವಯೋಗಾನಂದ ಮಹಾಪುರಿ ಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ, ಮೂಡಬಿದರೆ ಕರಂಜೆ ಮಠದ ಮುಕ್ತನಂದ ಸ್ವಾಮೀಜಿ, ಮುಖ್ಯಮಂತ್ರಿಗಳ ಗೌರವ ವೈದ್ಯಕೀಯ ಸಲಹೆಗಾರ ಎಚ್. ರವಿಕುಮಾರ್ ಅವರು ಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು

–ಪ್ರಜಾವಾಣಿ ಚಿತ್ರ

ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿ

ನಮ್ಮ ಸಂಕಲ್ಪ
ವಿಕಸಿತ ಭಾರತ

ಮೋದಿ ಸರ್ಕಾರದ
ಗ್ಯಾರಂಟಿ

ಬಡವರು ಮತ್ತು
ವಂಚಿತರ ಸೇವೆ

9 ವರ್ಷಗಳಲ್ಲಿ 25 ಕೋಟಿ ಜನರನ್ನು
ಬಡತನದಿಂದ ಹೊರತರಲಾಗಿದೆ

ಮರು ಟೆಂಡರ್ ಕರೆಯಲು ಬಿಎಂಟಿಸಿ ನಿರ್ಧಾರ

ಡಬಲ್ ಡೆಕರ್‌ಗೆ ಒಂದೇ ಬಿಡ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬಿಎಂಟಿಸಿ ಡಬಲ್ ಡೆಕರ್ ಬಸ್‌ಗಳ ಖರೀದಿಗಾಗಿ ಕರೆದಿದ್ದ ಟೆಂಡರ್‌ನಲ್ಲಿ ಭಾಗವಹಿಸಲು ಕಂಪನಿಗಳು ನಿರಾಸಕ್ತಿ ವಹಿಸಿವೆ. ಸಿಂಗಲ್ ಬಿಡ್ಡರ್ ಭಾಗವಹಿಸಿದ್ದರಿಂದ ಟೆಂಡರ್ ರದ್ದುಪಡಿಸಿರುವ ಬಿಎಂಟಿಸಿ ಹೊಸ ಟೆಂಡರ್ ಕರೆಯಲು ಮುಂದಾಗಿದೆ.

60 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಡಬಲ್ ಡೆಕರ್ ಬಸ್‌ಗಳ ಸಂಚಾರ ಆರಂಭವಾಗಿತ್ತು. 90ರ ದಶಕದ ನಂತರ ಹಂತಹಂತವಾಗಿ ಈ ಬಸ್‌ಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು. ಈಗಿನ ಪೀಳಿಗೆಗೆ ಮತ್ತೆ ಡಬಲ್ ಡೆಕರ್ ಬಸ್‌ಗಳನ್ನು ಪರಿಚಯಿಸುವ ಗುರಿ ಇಟ್ಟುಕೊಂಡು ಬಿಎಂಟಿಸಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. 10 ಡಬಲ್ ಡೆಕರ್ ಬಸ್ ಖರೀದಿಸಲು ರಾಜ್ಯ ಸರ್ಕಾರವು ಆರು ತಿಂಗಳ ಹಿಂದೆ ಒಪ್ಪಿಗೆ ನೀಡಿತ್ತು. ಆ ನಂತರ ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ ಬಿಡ್‌ದಾರರಿಂದ ಉತ್ತಮ ಸ್ಪಂದನೆ ದೊರಕಿರಲಿಲ್ಲ. ಒಂದು ಕಂಪನಿ ಮಾತ್ರ ಬಿಡ್ ಮಾಡಿತ್ತು. ನಿಯಮ ಪ್ರಕಾರ ಒಂದಕ್ಕಿಂತ ಅಧಿಕ ಬಿಡ್‌ದಾರರು ಇರಬೇಕು.

ಎರಡು ವಾರದಲ್ಲಿ ಮರು ಟೆಂಡರ್: 'ಮರು ಟೆಂಡರ್‌ಗೆ ಅನುಮೋದನೆ ನೀಡುವಂತೆ ಬಿಎಂಟಿಸಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ. ಎರಡು ವಾರಗಳಲ್ಲಿ ಟೆಂಡರ್ ಪ್ರಕ್ರಿಯೆ ಆರಂಭಗೊಳ್ಳಲಿದೆ. ಮರು ಟೆಂಡರ್‌ನಲ್ಲಿ ಟಾಟಾ, ಅಶೋಕ್ ಲೇಲ್ಯಾಂಡ್ ಸಹಿತ ವಿವಿಧ ಕಂಪನಿಗಳು ಭಾಗವಹಿಸುವ ನಿರೀಕ್ಷೆ ಇದೆ' ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

'ರಾಷ್ಟ್ರೀಯ ಸ್ವಚ್ಛ ಗಾಳಿ ಕಾರ್ಯಕ್ರಮ' ದ(ಎನ್‌ಸಿಎಪಿ) ಅಡಿಯಲ್ಲಿ 5 ಬಸ್‌ಗಳು, ನಗರ ಭೂ ಸಾರಿಗೆ ನಿರ್ದೇಶನಾಲಯದ (ಡಲ್ಟ್) ಸಹಕಾರದಲ್ಲಿ 5 ಬಸ್‌ಗಳು ಸಂಚರಿಸಲಿವೆ.

> **ನಗರದಲ್ಲಿ ಮತ್ತೆ ಡಬಲ್ ಡೆಕರ್ ಬಸ್‌ಗಳು ಆಕರ್ಷಣೆಯ ಕೇಂದ್ರಗಳಾಗಬೇಕು. ಅದಕ್ಕಾಗಿ ಟೆಂಡರ್ ಕರೆಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ**
> **ಆರ್. ರಾಮಚಂದ್ರನ್,**
> ವ್ಯವಸ್ಥಾಪಕ ನಿರ್ದೇಶಕ, ಬಿಎಂಟಿಸಿ

ಪ್ರವಾಸಿ ತಾಣಗಳೆಡೆಗೆ ಬಸ್: ಪ್ರವಾಸಿಗರನ್ನು ಸೆಳೆಯುವುದೇ ಡಬಲ್ ಡೆಕರ್ ಬಸ್‌ನ ಉದ್ದೇಶವಾಗಿರುವುದರಿಂದ ನಗರದ ಪ್ರವಾಸಿ ತಾಣಗಳು ಇರುವ ಮಾರ್ಗಗಳಲ್ಲಿ ಸಂಚರಿಸಲಿವೆ. ಮುಂದೆ ಮಾರ್ಗಗಳ ನಿಗದಿಯಾಗುತ್ತದೆ.

ದಶಕಗಳ ಹಿಂದೆ ಡೀಸೆಲ್ ಆಧಾರಿತ ಡಬಲ್ ಡೆಕರ್ ಬಸ್‌ಗಳು ಇದ್ದವು. ಹೊಸ ಬಸ್‌ಗಳು ವಿದ್ಯುತ್ ಚಾಲಿತವಾಗಿರುತ್ತವೆ. ನಗರದಲ್ಲಿ ಮಾಲಿನ್ಯ ಕಡಿಮೆ ಮಾಡುವ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ವಿವರಿಸಿದರು.

ಸಿಎಸ್‌ಆರ್ ನಿಧಿಯಿಂದ ಕಂಪ್ಯೂಟರ್ ಪ್ರಯೋಗಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಮೂರ್ತಿನಗರದಲ್ಲಿರುವ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಿಂದ 'ಕಂಪ್ಯೂಟರ್ ಪ್ರಯೋಗಾಲಯ' ಸ್ಥಾಪಿಸಲಾಗಿದೆ.

ನಮ್ಮ ಬೆಂಗಳೂರು ಫೌಂಡೇಷನ್ ಸಹಯೋಗದಲ್ಲಿ ಗ್ರಾಹಕ ಎಲೆಕ್ಟ್ರಾನಿಕ್ ಬ್ರ್ಯಾಂಡ್ 'ಬೋಟ್', 'ಕಂಪ್ಯೂಟರ್ ಪ್ರಯೋಗಾಲಯ'ವನ್ನು ಸ್ಥಾಪಿಸಿ, ಅಗತ್ಯವಾದ ಕಂಪ್ಯೂಟರ್ ಹಾಗೂ ಸಾಫ್ಟ್‌ವೇರ್‌ಗಳನ್ನು ಒದಗಿಸಿದೆ.

'ಸರ್ಕಾರಿ ಕಾಲೇಜಿನಲ್ಲಿ ಬಾಲಕಿಯರಿಗೆ ಕಂಪ್ಯೂಟರ್ ಜ್ಞಾನವನ್ನು ನೀಡುವ ನಿಟ್ಟಿನಲ್ಲಿ ಈ ಸಹಯೋಗದಲ್ಲಿ ಪಾಲ್ಗೊಂಡಿದ್ದೇವೆ. ಇನ್ನಷ್ಟು ಸರ್ಕಾರಿ ಶಾಲೆ ಹಾಗೂ ಕಾಲೇಜುಗಳಲ್ಲಿ ಕಂಪ್ಯೂಟರ್ ಪ್ರಯೋಗಾಲಯ ಸ್ಥಾಪಿಸಲಾಗುವುದು' ಎಂದು ಬೋಟ್ ಸಿಇಒ ಸಮೀರ್ ಮೆಹ್ತಾ ತಿಳಿಸಿದರು.

ರಾಮಮೂರ್ತಿನಗರ ಬಾಲಕಿಯರ ಸರ್ಕಾರಿ ಪಿಯು ಕಾಲೇಜಿನಲ್ಲಿ ಸಿಎಸ್‌ಆರ್ ನಿಧಿಯಿಂದ ಸ್ಥಾಪಿಸಲಾಗಿರುವ 'ಕಂಪ್ಯೂಟರ್ ಪ್ರಯೋಗಾಲಯ'

'ರಾಮಮೂರ್ತಿ ನಗರದ ಕಾಲೇಜಿನಲ್ಲಿ ಮೊದಲ ಪ್ರಯೋಗಾಲಯ ಆರಂಭವಾಗಿದ್ದು 20 ಕಂಪ್ಯೂಟರ್, ಸಾಫ್ಟ್‌ವೇರ್ ಹಾಗೂ ಪೀಠೋಪಕರಣಗಳನ್ನು ಒದಗಿಸಲಾಗಿದೆ' ಎಂದು ನಮ್ಮ ಬೆಂಗಳೂರು ಫೌಂಡೇಷನ್ ಟ್ರಸ್ಟಿ ಸಂಜಯ್ ಕೆ. ಪ್ರಭು ಹೇಳಿದರು.

ಆರ್ಯ ಈಡಿಗ ವಿವಾಹಾಕಾಂಕ್ಷಿಗಳ ಸಮಾವೇಶ 4ರಂದು

ಬೆಂಗಳೂರು: 2024ನೇ ಸಾಲಿನ ರಾಜ್ಯ ಮಟ್ಟದ ಆರ್ಯ ಈಡಿಗ ಸಮಾಜದ ವಿವಾಹ ಆಕಾಂಕ್ಷಿಗಳ ಸಮಾವೇಶವನ್ನು ಫೆ.4ರ ಭಾನುವಾರ ಆಯೋಜಿಸಲಾಗಿದೆ.

ನಗರದ ಶೇಷಾದ್ರಿಪುರದ ರಾಜೀವ್‌ಗಾಂಧಿ ವೃತ್ತದಲ್ಲಿರುವ ಸಂಘದ ಆವರಣದಲ್ಲಿ 11.30ಕ್ಕೆ ಸಮಾವೇಶ ಆಯೋಜನೆಗೊಂಡಿದೆ. ಇದಕ್ಕೂ ಮೊದಲು ಬೆಳಿಗ್ಗೆ 10ಕ್ಕೆ ಸರ್ವ ಸದಸ್ಯರ ವಿಶೇಷ ಸಭೆ, 10.30ಕ್ಕೆ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆಗಳು ಸಂಘದ ಅಧ್ಯಕ್ಷ ಎಂ.ತಿಮ್ಮೇಗೌಡ ಅವರ ಅಧ್ಯಕ್ಷತೆಯಲ್ಲಿ ಆಯೋಜನೆಗೊಂಡಿವೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ಟಿ.ಮೋಹನದಾಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಮಾಗಡಿ ತಾಲ್ಲೂಕಿನ ಸೋಲೂರಿನ ಆರ್.ಎಲ್.ಜಾಲಪ್ಪ ಅಕಾಡೆಮಿಯು ಬಡವರ್ಗದ ಪದವೀಧರ ಯುವಕ – ಯುವತಿಯರಿಗಾಗಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಾಲ್ಕು ತಿಂಗಳ ಉಚಿತ ತರಬೇತಿ ಶಿಬಿರವನ್ನು ಹಮ್ಮಿಕೊಂಡಿದೆ. ಫೆ.28ರಿಂದ ತರಬೇತಿ ಆರಂಭವಾಗಲಿದೆ. ಆಸಕ್ತ ಅಭ್ಯರ್ಥಿಗಳು ಫೆ.25ರ ಒಳಗಾಗಿ www.rljacademy.in ಜಾಲತಾಣದಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ 9900606042, 9590045721

'ಬಜೆಟ್‌ನಲ್ಲಿ ಆಡಂಬರದ ಶಬ್ದಗಳಷ್ಟೇ ಇವೆ'

ಬೆಂಗಳೂರು: ಕೇಂದ್ರದ ಹಣಕಾಸು ಸಚಿವರು ಗುರುವಾರ ಮಂಡಿಸಿರುವ ಮಧ್ಯಂತರ ಬಜೆಟ್‌ನಲ್ಲಿ ಆಡಂಬರದ ಶಬ್ದಗಳು ಮತ್ತು ಘೋಷಣೆಗಳನ್ನು ಬಿಟ್ಟು ಬೇರೆ ಕೊಡುಗೆಗಳಿಲ್ಲ ಎಂದು ಎಐಡಿಎಸ್‌ಒ ಟೀಕಿಸಿದೆ.

ಶಿಕ್ಷಣ ಕ್ಷೇತ್ರಕ್ಕೆ ₹1,20,627 ಕೋಟಿ ಮೀಸಲಿಡಲಾಗಿದೆ. ಈ ಮೊತ್ತ ಹೆಚ್ಚು ಇರುವಂತೆ ತೋರಿದರೂ, ದೇಶದಲ್ಲಿ ಅಸ್ತಿತ್ವದಲ್ಲಿರುವ ಸರ್ಕಾರಿ ಶಾಲೆಗಳನ್ನು ಮೇಲ್ದರ್ಜೆಗೇರಿಸುವ ಪಿಎಂ-ಶ್ರೀ ಯೋಜನೆಗೆ ಹೆಚ್ಚಿನ ಪಾಲು ನೀಡಲಾಗಿದೆ. ಸರ್ಕಾರಿ ಶಾಲೆಗಳು ಅಸ್ತಿತ್ವದ ಬಿಕ್ಕಟ್ಟನ್ನು ಎದುರಿಸುತ್ತಿವೆ. ಇಂಥ ಸಮಯದಲ್ಲಿ, ಉನ್ನತೀಕರಣಕ್ಕಾಗಿ ಕೆಲವೇ ಶಾಲೆಗಳನ್ನು ಆಯ್ಕೆಮಾಡುವುದು ಮತ್ತು ಸರ್ಕಾರಿ ಶಾಲೆಗಳನ್ನು ಹೆಚ್ಚಿಸಲು ಹಣ ಮಂಜೂರು ಮಾಡದಿರುವುದು ದೇಶದಲ್ಲಿರುವ ಎಲ್ಲ ಸರ್ಕಾರಗಳು ಸಾರ್ವಜನಿಕ ಶಿಕ್ಷಣವನ್ನು ಹೇಗೆ ನೋಡುತ್ತವೆ ಎಂಬುದರ ಪ್ರತಿಬಿಂಬವಾಗಿದೆ. ಕಳೆದ ವರ್ಷವೂ ಶಾಲೆಗಳನ್ನು ಮೇಲ್ದರ್ಜೆಗೇರಿಸಲು ದೊಡ್ಡ ಮೊತ್ತವನ್ನು ಮೀಸಲಿಡಲಾಗಿತ್ತು ಮತ್ತು ಅದು ಹೇಗೆ ಬಳಕೆಯಾಯಿತು ಎಂಬುದು ಬಹಿರಂಗವಾಗಿಲ್ಲ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

ಸಮಗ್ರ ಶಿಕ್ಷಣ ಅಭಿಯಾನಕ್ಕೆ ಕೇವಲ ₹ 47 ಕೋಟಿ ನೀಡಲಾಗಿದೆ. ವಿದ್ಯಾರ್ಥಿಗಳಿಗೆ ಶುಲ್ಕ ಹೊರೆ ಕಡಿಮೆ ಮಾಡುವ ಪ್ರಯತ್ನಗಳಾಗಿಲ್ಲ ಎಂದು ಟೀಕಿಸಿದ್ದಾರೆ.

ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಕರ್ನಾಟಕ ರಾಜ್ಯ ಕಾರ್ಮಿಕ ನಿರೀಕ್ಷಕರ ಸಂಘದ ಅಧ್ಯಕ್ಷರಾಗಿ ಆರ್. ರವಿಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಸೋಮಶೇಖರ್ ಎಚ್.ಎಂ, ಪ್ರಧಾನ ಕಾರ್ಯದರ್ಶಿ ಆಗಿ ರಮೇಶ್ ನಾಯ್ಕ, ಖಜಾಂಚಿಯಾಗಿ ಸಿ.ಎನ್. ರಾಜೇಶ್, ಜಂಟಿ ಕಾರ್ಯದರ್ಶಿಗಳಾಗಿ ಅಶೋಕ್ ಸಂಗಪ್ಪ ಒಡೆಯರ್ ಮತ್ತು ವೆಂಕಟೇಶ್ ಬಾಬು ಡಿ.ಎಂ. ಅವರನ್ನು ಆಯ್ಕೆ ಮಾಡಲಾಗಿದೆ.

ಸುರೇಶ್ ಎಸ್., ಫಹಮೀದಾ ಖಾನಂ, ಮೋಹನ ಕುಮಾರ್ ಎಂ.ಆರ್, ಅರ್ಚನಾ ಪ್ರತಾಪ್‌ಸಿಂಗ್ ಚೌವ್ಹಾಣ್, ಸುರೇಂದ್ರ ಡಿ., ಲೋಕೇಶ್ ಜೆ., ಆರ್. ಭೂಪಾಲ, ಶ್ರೀಕಾಂತ್ ಎಂ.ಎಲ್. ಮತ್ತು ಯತೀಶ್ ಕುಮಾರ್ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದಾರೆ. ಎಲ್ಲರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

'ಮಹಿಳಾ ಸಬಲೀಕರಣಕ್ಕಿಲ್ಲ ಆದ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರದ ಬಜೆಟ್ ಮಹಿಳಾ ಸಬಲೀಕರಣದ ಆಶಯವನ್ನೇ ಕಡೆಗಣಿಸಿದ್ದು, ಚುನಾವಣಾ ಪ್ರಚಾರದ ಘೋಷಣೆಯಂತಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಅಧ್ಯಕ್ಷೆ ಮೀನಾಕ್ಷಿ ಬಾಳಿ, ಪ್ರಧಾನ ಕಾರ್ಯದರ್ಶಿ ದೇವಿ ಟೀಕಿಸಿದ್ದಾರೆ.

ಮಹಿಳೆಯರು ಅನುಭವಿಸುತ್ತಿರುವ ಆರ್ಥಿಕ ಸಂಕಷ್ಟಕ್ಕೆ ಯಾವ ಪರಿಹಾರವನ್ನೂ ಸೂಚಿಸಿಲ್ಲ. ಮಹಿಳೆಯರ ಪ್ರಗತಿಗೆ ಬೇಕಿರುವ ಅನುದಾನವನ್ನು ಬಜೆಟ್‌ನಲ್ಲಿ ಮೀಸಲಿಟ್ಟಿಲ್ಲ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗೆ ಮೀಸಲಿಟ್ಟಿರುವುದು ಶೇ 0.5ರಷ್ಟೂ ಇಲ್ಲ. ಕಳೆದ ವರ್ಷದಷ್ಟೇ ಇದೆ. ಅಗತ್ಯ ಬಂಡವಾಳ ತೊಡಗಿಸಲು ಮಾರ್ಗೋಪಾಯ ಸೂಚಿಸಿಲ್ಲ. ಕುಸಿಯುತ್ತಿರುವ ಉದ್ಯೋಗಾವಕಾಶಗಳು, ಹೆಚ್ಚುತ್ತಿರುವ ಹಸಿವಿನ ನಿವಾರಣೆಗೆ ಕಾಳಜಿ ವಹಿಸಿಲ್ಲ ಎಂದು ದೂರಿದ್ದಾರೆ.

ಉದ್ಯೋಗ ಖಾತ್ರಿ ಯೋಜನೆಯ ಅನುದಾನವನ್ನು ಪ್ರತಿ ವರ್ಷ ಕಡಿತ ಮಾಡಲಾಗುತ್ತಾ ಬರಲಾಗಿದೆ. ಯೋಜನೆಯನ್ನು ಹಂತಹಂತವಾಗಿ ಸ್ಥಗಿತಗೊಳಿಸುವ ಹುನ್ನಾರ ನಡೆಸಿದೆ. ಈಗಾಗಲೇ ಮಾಡಿದ ಕೆಲಸಕ್ಕೆ ಕೊಡಬೇಕಾದ ಬಾಕಿಯನ್ನೇ ಕೊಟ್ಟಿಲ್ಲ. ಯೋಜನೆಗೆ ಹೆಸರು ನೋಂದಾಯಿಸಿದ ಶೇ 1ರಷ್ಟು ಜನರಿಗೂ ಪೂರ್ಣ 100 ದಿನಗಳ ಉದ್ಯೋಗ ನೀಡಿಲ್ಲ ಎಂದು ದೂರಿದ್ದಾರೆ.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ
ಅಂಗವಿಕಲ ವ್ಯಕ್ತಿಗಳ (ದಿವ್ಯಾಂಗಜನ) ಸಬಲೀಕರಣ ಇಲಾಖೆ
ಪಂ. ದೀನದಯಾಳ್ ಅಂತ್ಯೋದಯ ಭವನ, 5ನೇ ಮಹಡಿ,
ಸಿಜಿಒ ಕಾಂಪ್ಲೆಕ್ಸ್, ಲೋಧಿ ರಸ್ತೆ, ನವದಹೆಲಿ–110003
ಆಸಕ್ತಿ ವ್ಯಕ್ತಪಡಿಸುವಿಕೆ (ಇಒಐ) ಇಒಐ ನಂ. 4–18/2020–ಎಐಸಿ
ಬಿಲ್ಟಪ್ ಎನ್ವಿರಾನ್‌ಮೆಂಟ್‌ನಲ್ಲಿ ಅಕ್ಸೆಸಿಬಿಲಿಟಿ ಆಡಿಟರ್‌ಗಳಾಗಿ ಏಜೆನ್ಸಿಗಳ ನೇಮಕಾತಿಗಾಗಿ ಆಸಕ್ತಿ ವ್ಯಕ್ತಪಡಿಸುವಿಕೆಗೆ ಆಹ್ವಾನ.

ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಇಲಾಖೆ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಭಾರತ ಸರ್ಕಾರ ಇವರು, ಬಿಲ್ಟಪ್ ಎನ್ವಿರಾನ್‌ಮೆಂಟ್‌ನಲ್ಲಿ ಅಕ್ಸೆಸಿಬಿಲಿಟಿ ಆಡಿಟರ್‌ಗಳಾಗಿ ನಿಯೋಜಿಸಿಕೊಳ್ಳಲೆಂದು ಏಜೆನ್ಸಿಗಳು / ಎನ್‌ಜಿಒ'ಗಳು / ನೋಂದಾಯಿತ ಸೊಸೈಟಿ ಮುಂತಾದವರಿಗೆ ಆಸಕ್ತಿ ವ್ಯಕ್ತಪಡಿಸಲು ಆಹ್ವಾನಿಸಿದ್ದಾರೆ. ಇವರು ತಮ್ಮ ಅನುಭವ ಮತ್ತು ಪ್ರಾವೀಣ್ಯತೆಯ ವಿವರಗಳನ್ನು ಉಲ್ಲೇಖಿಸಿ ಪೂರಕ ದಾಖಲಾತಿಗಳನ್ನು ಲಗತ್ತಿಸಿರುವ ತಮ್ಮ ಅರ್ಜಿಯನ್ನು ಒಂದು ಪ್ರತ್ಯೇಕ ಲಕೋಟೆಯಲ್ಲಿ ಹಾಕಿ ಕೆಳಕಂಡ ವಿಳಾಸಕ್ಕೆ ಮತ್ತು ಇಮೇಲ್ ಮುಖಾಂತರ ಕೆಳಗಿನ ಇಮೇಲ್ ವಿಳಾಸಕ್ಕೆ 06.02.2024 ರೊಳಗೆ ತಲುಪುವಂತೆ ರವಾನಿಸತಕ್ಕದ್ದು. ವಿವರವಾದ ಇಒಐ ಪ್ರತಿಯನ್ನು https://depwd.gov.in/ ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

"ಶ್ರೀ ರಾಮ ಚರಣ ಮೀನಾ, ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ, ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಇಲಾಖೆ, ಕೊಠಡಿ ಸಂ. 11ಎ, 5ನೇ ಮಹಡಿ, ಪಂಡಿತ ದೀನ ದಯಾಳ್ ಅಂತ್ಯೋದಯ ಭವನ, ಸಿಜಿಒ ಕಾಂಪ್ಲೆಕ್ಸ್, ಲೋಧಿ ರಸ್ತೆ, ನವದೆಹಲಿ–110003"
ಇಮೇಲ್: **aic-depwd@gov.in** **CBC 38117/11/0056/2324**

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ
Central Bank of India
ಪ್ರಾದೇಶಿಕ ಕಚೇರಿ, 2ನೇ ಮಹಡಿ, ಗ್ರಾಂಡ್ ಮೆಜೆಸ್ಟಿಕ್ ಮಾಲ್, ಗಾಂಧಿನಗರ, ಬೆಂಗಳೂರು

ಪ್ರಧಾನ ಪ್ರಾಜೆಕ್ಟ್ ಆರ್ಕಿಟೆಕ್ಟ್ ಮತ್ತು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ ಅನ್ನು ತೊಡಗಿಸಿಕೊಳ್ಳಲು ವಿನ್ಯಾಸದ ಸ್ಪರ್ಧೆಯ ಪ್ರಸ್ತಾಪದ ಆಹ್ವಾನದ ಸೂಚನೆ

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ , (CBoI) ಇವರು ಪ್ರಸ್ತಾವಿತ ಆರ್ಕಿಟೆಕ್ಚರಲ್ ಕನ್ಸಲ್ಟೆನ್ಸಿ ಸೇವೆಗಳಿಗೆ ತರಬೇತಿ ನೀಡಲು ಪ್ರಿನ್ಸಿಪಲ್ ಪ್ರಾಜೆಕ್ಟ್ ಆರ್ಕಿಟೆಕ್ಟ್ ಕಂ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ ಅನ್ನು ಆಯ್ಕೆ ಮತ್ತು ತೊಡಗಿಸಿಕೊಳ್ಳಲು ವಿನ್ಯಾಸ ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರತಿಷ್ಠಿತ ಮತ್ತು ಅನುಭವಿ ಆರ್ಕಿಟೆಕ್ಚರಲ್ ಸಂಸ್ಥೆಗಳು /ವ್ಯಕ್ತಿಗಳಿಂದ ಬೆಂಗಳೂರಿನಲ್ಲಿರುವ ಸಿಬ್ಬಂದಿ ತರಬೇತಿ ಮತ್ತು ವ್ಯಾಪಾರ ಕೇಂದ್ರ, ಐಬಿಡಿಎಲ್ ಫೈನಾನ್ಸಿಯಲ್ ಸಿಟಿ, ಹಾರ್ಡ್‌ವೇರ್ ಪಾರ್ಕ್, ಬೆಂಗಳೂರು ಇವರು ಆಸಕ್ತಿಯ ಅಭಿವ್ಯಕ್ತಿಯನ್ನು (EOI) ಆಹ್ವಾನಿಸುತ್ತಿದ್ದಾರೆ.

ಪೂರ್ವಾರ್ಹತೆ/ಅರ್ಹತೆಯ ಮಾನದಂಡಗಳು, ಸಲ್ಲಿಸಬೇಕಾದ ಸೇವೆಗಳ ವ್ಯಾಪ್ತಿ, ನೇಮಕಾತಿಯ ನಿಯಮಗಳು, ಮತ್ತು ಷರತ್ತುಗಳು ಮತ್ತು ಅರ್ಜಿಗಳನ್ನು ಸಲ್ಲಿಸಲು ನಿಗದಿತ ನಮೂನೆಗಳನ್ನು ಬ್ಯಾಂಕಿನ ವೆಬ್‌ಸೈಟ್ https://www.centralbankofindia.co.in/en/active-tender **2ನೇ ಫೆಬ್ರವರಿ 2024ರಿಂದ 23ನೇ ಫೆಬ್ರವರಿ 2024ರವರೆಗೆ ಮಧ್ಯಾಹ್ನ 1.00 ಗಂಟೆವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದು.

ನಿಗದಿತ ಅರ್ಹತಾ ಮಾನದಂಡಗಳನ್ನು ಅನುಸರಿಸುವ ಆಸಕ್ತ ಆರ್ಕಿಟೆಕ್ಚರಲ್ ಸಂಸ್ಥೆಗಳು ತಮ್ಮ ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ಪೂರಕ ದಾಖಲೆಗಳೊಂದಿಗೆ **ಆನ್‌ಲೈನ್** ಮೂಲಕ (ಇ–ಟೆಂಡರಿಂಗ್ ಪ್ರಕಿಯೆ ಮೂಲಕ) 23ನೇ ಫೆಬ್ರವರಿ 2024ರವರೆಗೆ ಮಧ್ಯಾಹ್ನ 3.00 ಗಂಟೆಯ ಒಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ದಯವಿಟ್ಟು **ಫೋನ್ : 080–22265653** e-mail: gadbangro@centralbank.co.in ಮೂಲಕ ಸಂಪರ್ಕಿಸುವುದು.

ಪ್ರಾದೇಶಿಕ ವಲಯ ಮುಖ್ಯಸ್ಥರು
ಪ್ರಾದೇಶಿಕ ಕಚೇರಿ,
ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ, ಬೆಂಗಳೂರು

BEFORE THE HON'BLE 82nd ACC&SJ COMMERCIAL COURT AT BANGALORE (CCH83)
COM. OS.No. 797/2023

Between:
M/s. Karnataka Co-operative Oil Seeds Growers Federation Ltd., Head office: No.11, 4th Floor, Blue Cross Chambers, Infantry Road Cross, Bangalore – 560001 Represented by its Managing Director, **Mr. G.C. Reddy**
...PLAINTIFF

And:
1. **M/s NOSH FOODS PVT. LTD.** Bld. No.1, Survey No.42/6, Dasanapura Hobli, Near Arashinakunte, Bangalore-562123
2. **M/s NOSH FOODS PVT. LTD.** Bld. No.1, Survey No.42/6, Dasanapura Hobli, Near Arashinakunte, Bangalore-562123

Represented by its Authorized Signatory,
... DEFENDANTS

Summons to defendants through paper publication

Whereas, the above named plaintiff instituted the above top noted suit against defendants, seeking the above court, to direct the defendant to pay a sum of **Rs.27,94,904.66/-** (Rupees Twenty Seven Lakhs Ninety Four Thousand Nine Hundred & Four and Sixty Six Paise) along with 23% till the realization of the entire amount. Since the defendants are avoiding to take the notice of the above suit proceedings, the notice to the defendants is published in this newspaper, accordingly, the defendants are hereby summoned to appear before this court in person or through pleader on the **17th day of February 2024, at 11.00 AM** to answer the same failing which you will be placed ex-parte, given under my hand and seal of the court, this 29th day of January 2024.

By Order of Court
Sheristadar, City Civil Court, Bengaluru
Sd/- CMO, Commercial Court, Bangalore

Advocate for Plaintiff
M. Sampath Kumar, Advocate,
Building No.11, House No.123, Kengeri Satellite Town, Bangalore - 560060
Mobile: 9845147741

2023ರ ದರಗಳಲ್ಲಿ 2024ರ ಪ್ರವಾಸಗಳು
ಈ ಸುವರ್ಣ ಅವಕಾಶ ಈ ವಾರ ಮಾತ್ರ

ADIGAS YATRA
MOST TRUSTED BRAND IN DOMESTIC & INTERNATIONAL TOUR PACKAGES

30 Years of Excellence in Tourism

ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ 'ಅನುಭವಿ ಸೇವಾ ಪೂರೈಕೆದಾರ' ಮಾನ್ಯತೆ & ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ

ಅಡಿಗಾಸ್ ಯಾತ್ರಾ®
ಸ್ಥಳ, ಸಮಯ, ಹಣಕ್ಕೆ ಅಧಿಕ ಮೌಲ್ಯ

ಬಸವನಗುಡಿ: ☎: 080-26616678 | ಮಲ್ಲೇಶ್ವರಂ: ☎: 080-23346678 | ಹುಬ್ಬಳ್ಳಿ: ☎: 0836-2256678
9449478944 | 7022259003 | 9448083008

ಇದೀಗ ರಾಜರಾಜೇಶ್ವರಿ ನಗರದಲ್ಲಿ ☎ 080-26696678 +91 7483366378

email: care@adigasyatra.com website: www.adigasyatra.com

ಕನ್ನಡಿಗರಿಂದ, ಕನ್ನಡಿಗರಿಗಾಗಿ ಸಿದ್ಧಪಡಿಸಿದ ಸಮಾನ ಮನಸ್ಕ ಪ್ರತಿಷ್ಠಿತ ಕನ್ನಡಿಗರೊಂದಿಗೆ ವಿದೇಶ ಪ್ರವಾಸಗಳು

INTERNATIONAL TOURS
• NO COMPROMISE ON QUALITY !!! • VALUE FOR MONEY !!! • NO DISCOUNTS !!!
• NO FALSE PROMISES !!! • BEST QUALITY ASSURANCE !!! • NO SALES GIMMICKS !!!

AUSTRALIA - 13 DAYS

SYDNEY Harbour Bridge, Opera House, Bondi Beach, Sydney Tower Eye, Featherdale Wildlife Park, Blue Mountain. WOLLONGONG Venkteshwara temple, Chinese temple, Sea Cliff bridge. CAIRNS Kuranda , Skyrail, Scenic Railway, Green Island, Great Barrier Reef. BRISBANE, GOLD COAST Sea World, Crystal Castle & Shambhala Gardens MELBOURNE City tour, Phillip Island Tour with Penguin Parade, Great Ocean Road, 12 Apostles.
Dep Dates 2024: Apr 7. Sep 15. Oct 13, 27. Nov 10, 24. Dec 8.

BEST OF EUROPE-9/13 DAYS

France, Belgium, The Netherlands, Luxembourg, Germany, Switzerland, Liechtenstein, Austria, Vatican City, Italy.
DEP DATES: 2024: Apr 5, 19. May 3, 17, 31. June 14, 28. Jul 5, 19. Aug 9, 23. Sep 13, 27. Oct 4, 18. Nov 8, 15

SINGAPORE - MALAYSIA - THAILAND
4/5/7/8/11/15 DAYS

Universal Studios, Sea Aquarium, Sentosa Island, Garden By The Bay, Genting Highland, Batu Caves, Twin Tower, Putrajaya City Tour, Coral Island, Pattaya Beach, Nong Nooch Village, Safari World, Dolphin & Sea Lion Show, Bangkok City Tour, Etc
Dep Dates 2024: Mar 4, 18. Apr 1, 15, 29. May 6, 20, June 3, 10, 24. July 8, 22, Aug 5, 19, 26. Sep 9, 23, 30. Oct 7, 21. Nov 4, 18, 25 . Dec 2, 16.

EAST EUROPE - 11 DAYS

GERMANY: Munich, BMW Welt, Berlin, Dresden, CZECH REPUBLIC: Prague, Charles Bridge, AUSTRIA: Vienna, Schönbrunn Palace, SLOVAKIA: Bratislava, HUNGRY: Budapest, Cruise On River Danube, CROATIA: Zagreb, SLOVENIA: Ijubljana, ZELL AM SEE.
DEP DATES: 2024: Apr 15, 29. May 13, 27. June 10, 24. July 1, 15. Aug 5, 19. Sep 9, 23, 30. Oct 14, 28. Nov 11.

NEPAL-MUKTHINATH - 5/9 DAYS

Lumbini, Kathmandu, Bhakthapur, Doleshwar Mahadev, Pokhara, Jomsom, Phewa Lake, Mukthinath Darshan, Manokamana Cable Car.
Dep Dates 2024: Feb 28. Mar 13, 27. Apr 10, 24. May 8, 22. Jun 5, 19. July 10, 24. Aug 7, 21. Sep 11, 25. Oct 16, 30. Nov 13, 27.

BHUTAN - 8 DAYS

Thimphu City, Phuentsholing, Paro Dzong, Punakha Dzong, Taktsang
Dep Dates 2024: Feb 14, 28. Mar 13, 27. Apr 10, 24. May 8, 22. Jun 5, 19. July 10, 24. Aug 7, 21. Sep 11, 25. Oct 16, 30. Nov 13, 27. Dec 4, 18.

CAMBODIA - VIETNAM 6/7/12 DAYS

CAMBODIA: Phnom Penh, Siem Rep, Thousand Lingas River, Tonle Sap, Angkor Wat World Largest Hindu Temple
VIETNAM: Hanoi, Ninh Binh, Tam coc, Halong Bay, Ho Chi Minh City, Cu Chi Tunnels, Mekong Delta
Dep Date 2024: Feb 19. Mar 4, 18. Apr 1, 15, 29. May 6, 20, 27. Jun 10, 24. July 8, 22. Aug 5, 19, 26. Sep 9, 23, 30. Oct 7, 21. Nov 4, 18, 25. Dec 2, 16.

NATURALLY THAILAND - 9 DAYS

Pattaya, Nong Nooch Botanical Garden, Bangkok Temple & City Tour, Safari World, Chiang Mai Night Safari, Doi Inthanon, Trekking At Phadokseaw Tour, Doi Suthep Temple, Monthathan Water fall, The Blue Temple, White Temple, Black Musuem, Golden Triangle
DEP DATES: 2024: Feb 11, 25. Mar 10, 24. Apr 7, 21. May 5, 12, 26. Jun 9, 16, 30.

ಸಂಯುಕ್ತ

ನಾಲ್ಕು ಚಿತ್ರಗಳು ತೆರೆಗೆ

ಇಂದು(ಫೆ.2) ‘ಸಪ್ಲಯರ್ ಶಂಕರ’ ಸೇರಿದಂತೆ ನಾಲ್ಕು ಸಿನಿಮಾಗಳು ತೆರೆ ಕಾಣುತ್ತಿವೆ.

ಕ್ಲಿಕ್: ಖ್ಯಾತ ಸಂಗೀತ ನಿರ್ದೇಶಕ ರವಿ ಬಸ್ರೂರ್ ಪುತ್ರ ಮಾಸ್ಟರ್ ಪವನ್ ಬಸ್ರೂರು ಮುಖ್ಯ ಪಾತ್ರದಲ್ಲಿ ನಟಿಸಿರುವ ‘ಕ್ಲಿಕ್’ ಸಿನಿಮಾ ಇಂದು(ಫೆ.2) ತೆರೆ ಕಾಣುತ್ತಿದೆ.

ಐಟಿ ಉದ್ಯೋಗಿಯಾಗಿರುವ ಶಶಿಕಿರಣ್ ತಮ್ಮದೇ ಶರಣ್ಯ ಫಿಲ್ಮ್ಸ್ ಅಡಿಯಲ್ಲಿ ಈ ಸಿನಿಮಾ ನಿರ್ಮಾಣ ಮಾಡಿ, ನಿರ್ದೇಶಿಸಿದ್ದಾರೆ. ಕಾರ್ತಿಕ್, ಚಂದ್ರಕಲಾ ಮೋಹನ್, ರಚನಾ ದಶರತ್, ಸಂಜು ಬಸಯ್ಯ ಮೊದಲಾದವರು ತಾರಾಬಳಗದಲ್ಲಿದ್ದಾರೆ. ಆಕಾಶ್ ಪರ್ವ-ವಿಶ್ವಾಸ್ ಕೌಶಿಕ್ ಸಂಗೀತ ನಿರ್ದೇಶನ, ಜೀವನ್ ಗೌಡ ಛಾಯಾಚಿತ್ರಗ್ರಹಣ, ವಿನಯ್ ಕುಮಾರ್ ಸಂಕಲನವಿದೆ.

ಯಥಾಭವ: ಗೌತಮ್ ಬಸವರಾಜು ನಿರ್ದೇಶಿಸಿ, ಹಿರಿಯ ನಟ ರಾಕ್ ಲೈನ್ ಸುಧಾಕರ್ ಅವರ ಪುತ್ರ ಗೌತಮ್ ಸುಧಾಕರ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ‘ಯಥಾಭವ’ ಚಿತ್ರ ಇಂದು ಬಿಡುಗಡೆಗೊಳ್ಳುತ್ತಿದೆ. ಪವನ್ ಶಂಕರ್ ಹಾಗೂ ಸಹನ ಸುಧಾಕರ್ ನಾಯಕ ನಾಯಕಿಯಾಗಿ ನಟಿಸಿದ್ದಾರೆ. ದತ್ತಣ್ಣ, ಬಾಲ ರಾಜವಾಡಿ, ಗೋಪಾಲಕೃಷ್ಣ ದೇಶಪಾಂಡೆ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಸುಜಾತ ಕುಮಾರಿ ಹಾಗೂ ಅನಿಲ್ ಕುಮಾರ್ ಬಿ.ಎನ್ ನಿರ್ಮಾಣ ಮಾಡಿರುವ ಚಿತ್ರಕ್ಕೆ ಹರ್ಷ ಮಿಶ್ರ ಛಾಯಾಗ್ರಹಣ, ಉತ್ಸವ್ ಶ್ರೇಯಸ್ ಸಂಗೀತವಿದೆ.

ಸತ್ಯಂ ಶಿವಂ: ಸುಪಾರಿ ಕಿಲ್ಲರ್ ಕಥಾಹಂದರ ಹೊಂದಿರುವ ‘ಸತ್ಯಂ ಶಿವಂ’ ತೆರೆ ಕಾಣುತ್ತಿದೆ. ಯತಿರಾಜ್ ನಿರ್ದೇಶನವಿದೆ. ಬುಲೆಟ್ ರಾಜು ಈ ಚಿತ್ರದ ನಾಯಕ ಹಾಗೂ ನಿರ್ಮಾಪಕ. ಸಂಗೀತಾ, ವೀಣಾ ಸುಂದರ್ ಮತ್ತು ತೇಜಸ್ವಿನಿ ತಾರಾಗಣದಲ್ಲಿದ್ದಾರೆ. ವಿ ಮನೋಹರ್ ಸಂಗೀತ ನೀಡಿದ್ದು, ವಿದ್ಯಾ ನಾಗೇಶ್ ಅವರ ಛಾಯಾಗ್ರಹಣವಿದೆ.

ನಿಶ್ಚಿತ್ ಕರೋಡಿ

‘ಗಂಟುಮೂಟೆ’ ಚಿತ್ರದೊಂದಿಗೆ ಚಿತ್ರರಂಗಕ್ಕೆ ಕಾಲಿಟ್ಟ ನಿಶ್ಚಿತ್ ಕರೋಡಿ ಅಭಿನಯದ ‘ಸಪ್ಲಯರ್ ಶಂಕರ’ ಚಿತ್ರ ಇಂದು (ಫೆ.2) ತೆರೆ ಕಾಣುತ್ತಿದೆ. ಚಿತ್ರ ಹಾಗೂ ತಮ್ಮ ಸಿನಿಪಯಣದ ಕುರಿತು ನಿಶ್ಚಿತ್ ಮಾತನಾಡಿದ್ದಾರೆ...

ಬಾರ್ ಹುಡುಗನ ಬದುಕಿನ ಪಯಣ...

ವಿನಾಯಕ ಕೆ.ಎಸ್.

- **ಚಿತ್ರದಲ್ಲಿ ನಿಮ್ಮ ಪಾತ್ರವೇನು?**

ಬಾರ್ ಸಪ್ಲಯರ್ ಪಾತ್ರ. ಆತನಿಗೂ ಅವನದ್ದೇ ಆದ ಒಂದು ಬದುಕು ಇರುತ್ತದೆ. ಆತನ ವ್ಯಕ್ತಿತ್ವ ಹೇಗಿರುತ್ತದೆ, ಬದುಕಿನಲ್ಲಿ ಏನೆಲ್ಲ ಆಗುತ್ತದೆ ಎಂಬ ವಿಷಯಗಳನ್ನು ಹೊಂದಿರುವ ಪಾತ್ರ. ಒಂದಷ್ಟು ಸಂಘರ್ಷಗಳಿಂದ ಕೂಡಿದ ಕಥೆ. ಮಾಸ್, ಕಮರ್ಷಿಯಲ್ ಅಂಶಗಳಿವೆ. ಕೊಲೆ, ರಕ್ತದ ಜೊತೆಗೆ ಸಾಗುವ ಕಲ್ಟ್, ಕ್ಲಾಸ್ ಸಿನಿಮಾ.

- **ನಿಮ್ಮ ಸಿನಿಪಯಣ ಪ್ರಾರಂಭವಾಗಿದ್ದು ಹೇಗೆ?**

ವಿದ್ಯಾರ್ಥಿಯಾಗಿದ್ದಾಗಲೇ ಚಿತ್ರರಂಗದ ನಂಟು ದೊರೆಯಿತು. ನಾಗತಿಹಳ್ಳಿ ಚಂದ್ರಶೇಖರ ಅವರ ಟೆಂಟ್ ಸಿನಿಮಾದಲ್ಲಿ ನಟನೆ ಕಲಿಯುತ್ತಿದ್ದೆ. ಆಗ ರೂಪಾರಾವ್ ಅವರ ‘ಗಂಟುಮೂಟೆ’ ಚಿತ್ರದಲ್ಲಿ ಅವಕಾಶ ಲಭಿಸಿತು. ಆ ಚಿತ್ರದಿಂದಾಗಿ ನಂತರ ‘ಟಾಮ್&ಜೆರ್ರಿ’ ಚಿತ್ರದಲ್ಲಿ ಅವಕಾಶ ದೊರೆಯಿತು.

- **ಮುಂದಿನ ಸಿನಿಮಾಗಳು ಯಾವುವು?**

ಒಂದೆರಡು ಸಿನಿಮಾಗಳು ಕಥೆಯ ಹಂತದಲ್ಲಿವೆ. ಈ ಸಿನಿಮಾದ ನಂತರ ಅವನ್ನು ಘೋಷಿಸುತ್ತೇವೆ. ಈಗಲೇ ಅದರ ಬಗ್ಗೆ ಹೆಚ್ಚಿನ ಮಾಹಿತಿ ನೀಡುವುದು ಕಷ್ಟ.

- **ಈ ಸಿನಿಮಾ ಜನರನ್ನು ತಲುಪಲು ಏನೆಲ್ಲ ಯೋಜನೆ ಹಾಕಿಕೊಂಡಿದ್ದೀರಿ?**

ಪ್ರಚಾರ ಕಾರ್ಯಗಳು ನಡೆಯುತ್ತಿವೆ. ಹಳಬರಿಗೆ ಹೆಸರಿನ ಬಲ ಇರುತ್ತದೆ. ಆದರೆ ನಮಗೆ ‘ಹೊಸಬರು’ ಎಂಬ ಒಂದು ಟ್ಯಾಗ್‌ಲೈನ್ ಇರುತ್ತದೆ. ನಾನು ಹಳಬನಾದರೂ, ತಂಡ ಹೊಸತು. ಜೊತೆಗೆ ನಿಯಮಿತ ಬಜೆಟ್ ಇರುತ್ತದೆ. ಹೀಗಾಗಿ ದೊಡ್ಡ ಮಟ್ಟದಲ್ಲಿ ಪ್ರಚಾರ ಸಾಧ್ಯವಿಲ್ಲ. ಹಳಬರು ಒಂದು ಹಂತದಲ್ಲಿ ಹೊಸಬರಾಗಿಯೇ ಬಂದವರು.

- **ಎಲ್ಲೆಲ್ಲಿ ಚಿತ್ರೀಕರಣ ನಡೆದಿದೆ? ಅದರ ಅನುಭವ ಹೇಗಿತ್ತು?**

ಬಹುತೇಕ ಭಾಗ ಬೆಂಗಳೂರಿನ ಒಂದು ಬಾರ್‌ನಲ್ಲಿ ಚಿತ್ರೀಕರಣಗೊಂಡಿದೆ. ಆನೇಕಲ್, ಹೊಸಕೋಟೆ, ಬಂಗಾರಪೇಟೆಯಲ್ಲಿ ಕೆಲವಷ್ಟು ಭಾಗ ಚಿತ್ರೀಕರಣಗೊಂಡಿದೆ.

ಕ್ಯಾಬ್ ಓಡಿಸುತ್ತಿದ್ದೆ

ಈ ಚಿತ್ರವನ್ನು ರಂಜಿತ್ ಸಿಂಗ್ ನಿರ್ದೇಶಿಸಿದ್ದಾರೆ. ‘ಎಲ್ಲರೂ ಕುಳಿತು ನೋಡುವ ಸಿನಿಮಾ. ಆ್ಯಕ್ಷನ್ ಜೊತೆಗೆ ಡ್ರಾಮಾ ಇದೆ. ನಾನು ಸಿನಿಮಾ ಹಿನ್ನೆಲೆ ಹೊಂದಿರುವವನಲ್ಲ. ಬೆಂಗಳೂರಿನಲ್ಲಿ ಕ್ಯಾಬ್ ಓಡಿಸಿಕೊಂಡಿದ್ದೆ. ಜ್ಯೂಸ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆ. ಒಂದು ಕಥೆಯಿತ್ತು. ಸಿನಿಮಾ ಮಾಡಬೇಕು ಅನ್ನಿಸಿತು. ಎಲ್ಲ ಹೊಸಬರೇ ಸೇರಿ ತಂಡ ಕಟ್ಟಿದೆವು. ನೇತ್ರ ಫಿಲ್ಮ್ಸ್ ಲಾಂಛನದಲ್ಲಿ ನನ್ನ ಸಹೋದರರಾದ ಎಂ.ಚಂದ್ರಶೇಖರ್ ಹಾಗೂ ಎಂ.ನಾಗೇಂದ್ರ ಸಿಂಗ್ ಬಂಡವಾಳ ಹೂಡಿದ್ದಾರೆ’ ಎನ್ನುತ್ತಾರೆ ರಂಜಿತ್.

ದೀಪಿಕಾ ಆರಾಧ್ಯ

ಮುಗ್ಧ ಶಿಕ್ಷಕಿ ಪಾತ್ರ

ಚಿತ್ರದ ನಾಯಕಿ ದೀಪಿಕಾ ಆರಾಧ್ಯ ಈ ಚಿತ್ರದಲ್ಲಿ ಸರ್ಕಾರಿ ಶಾಲೆ ಶಿಕ್ಷಕಿಯಾಗಿ ಕಾಣಿಸಿಕೊಂಡಿದ್ದಾರೆ. ‘ಎಂಜಿನಿಯರಿಂಗ್ ಮುಗಿಸಿ ಬೇರೆ ಭಾಷೆ ಧಾರಾವಾಹಿಗಳಲ್ಲಿ ನಟಿಸುತ್ತಿದ್ದೆ. ಕನ್ನಡದಲ್ಲಿ ‘ಬಾಡಿ ಗಾಡ್’, ‘ಆರ’ ಚಿತ್ರಗಳಲ್ಲಿ ಅವಕಾಶ ಲಭಿಸಿತು. ಇದು ನನ್ನ ಮೂರನೇ ಸಿನಿಮಾ. ಪಾತ್ರದ ಹೆಸರು ಪುಣ್ಯ. ಮುಗ್ಧ ಶಿಕ್ಷಕಿ. ಮಧ್ಯಮ ವರ್ಗದ ಕುಟುಂಬದ ಹುಡುಗಿ. ನಾಯಕನ ಜೊತೆಗೆ ಪ್ರೀತಿ ಮೂಡುತ್ತದೆ’ ಎಂದು ಪಾತ್ರದ ವಿವರ ನೀಡುತ್ತಾರೆ ದೀಪಿಕಾ.

ಮತ್ತೆ ಮುನ್ನೆಲೆಗೆ ಸಂಯುಕ್ತ

‘ಕಿರಿಕ್ ಪಾರ್ಟಿ’ ಸಿನಿಮಾ ಮೂಲಕ ಚಂದನವನದಲ್ಲಿ ಗುರುತಿಸಿಕೊಂಡಿರುವ ನಟಿ ಸಂಯುಕ್ತ ಹೆಗಡೆ ‘ಕ್ರೀಂ’ ಎನ್ನುವ ಕನ್ನಡ ಸಿನಿಮಾ ಮೂಲಕ ಮತ್ತೆ ಮುನ್ನೆಲೆಗೆ ಬಂದಿದ್ದಾರೆ. ಸಂಯುಕ್ತ ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಚಿತ್ರದ ವಿಷ್ಯುವಲ್ ಟ್ರೈಲರ್ ಇತ್ತೀಚೆಗೆ ತೆರೆಕಂಡಿತು.

ವರ್ಷದ ಹಿಂದೆ ಕನ್ನಡದ ‘ರಾಣ’ ಸಿನಿಮಾದ ಹಾಡೊಂದರಲ್ಲಿ ಮೈಬಳುಕಿಸಿದ್ದ ಸಂಯುಕ್ತ ಇದೀಗ ಅಭಿಷೇಕ್ ಬಸಂತ್ ನಿರ್ದೇಶಿಸುತ್ತಿರುವ ಈ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಡಿ.ಕೆ.ದೇವೇಂದ್ರ ಅವರು ನಿರ್ಮಿಸಿರುವ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯನ್ನು ಅಗ್ನಿ ಶ್ರೀಧರ್ ಬರೆದಿದ್ದಾರೆ.

‘ಭಾರತದಲ್ಲಿ ಪ್ರತಿವರ್ಷ ಎರಡೂವರೆ ಸಾವಿರ ಮಹಿಳೆಯರು ಒಂದಲ್ಲಾ ಒಂದು ಕಾರಣದಿಂದ ಬಲಿಯಾಗುತ್ತಿದ್ದಾರೆ. ಅದಕ್ಕೆ ಕಾರಣ ಏನು ಎಂಬುದನ್ನು ತಿಳಿಸುವ ಕಥೆ ಈ ಚಿತ್ರದಲ್ಲಿದೆ. ನಿರ್ದೇಶಕ ಅಭಿಷೇಕ್ ಬಸಂತ್ ನನ್ನ ತಮ್ಮನ ಮಗ. ಅಚ್ಚುಕಟ್ಟಾಗಿ ಸಿನಿಮಾ ನಿರ್ದೇಶಿಸಿದ್ದಾನೆ’ ಎಂದರು ಅಗ್ನಿ ಶ್ರೀಧರ್.

ನಟಿ ಸಂಯುಕ್ತ ಮಾತನಾಡಿ, ‘ನಾನು ಈವರೆಗೂ ಮಾಡಿರದ ಪಾತ್ರದಲ್ಲಿ ಈ ಸಿನಿಮಾ ಮೂಲಕ ಕಾಣಿಸಿಕೊಂಡಿದ್ದೇನೆ. ಐದು ವರ್ಷಗಳ ನಂತರ ನಾನು ನಟಿಸಿರುವ ಕನ್ನಡ ಸಿನಿಮಾ ಇದು. ಈ ಚಿತ್ರದಲ್ಲಿ ಆ್ಯಕ್ಷನ್ ಕೂಡ ಮಾಡಿದ್ದೇನೆ. ಚಿತ್ರೀಕರಣದ ಸಂದರ್ಭದಲ್ಲಿ ಕಾಲು ಮುರಿದುಕೊಂಡಿದ್ದೆ’ ಎಂದು ಚಿತ್ರೀಕರಣದ ಅನುಭವ ಹಂಚಿಕೊಂಡರು.

ಈಗಾಗಲೇ ಶೂಟಿಂಗ್ ಪೂರ್ಣಗೊಳಿಸಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಕೆಲಸ ಆರಂಭಿಸಿದೆ. ‘ಸದ್ಯದಲ್ಲೇ ಸಿನಿಮಾ ಬಿಡುಗಡೆಯಾಗಲಿದೆ’ ಎಂದಿದ್ದಾರೆ ಅಭಿಷೇಕ್ ಬಸಂತ್. ರೋಹಿತ್ ಸಂಗೀತ ನಿರ್ದೇಶನ, ಶಿವಕುಮಾರ್ ಕಲಾ ನಿರ್ದೇಶನ ಚಿತ್ರಕ್ಕಿದೆ.



ಪ್ರೇಮಗೀತೆಗಳೊಂದಿಗೆ ಬಂದ ಮನೋಮೂರ್ತಿ



‘ಅಮೆರಿಕ! ಅಮೆರಿಕ!!’, ‘ನನ್ನ ಪ್ರೀತಿಯ ಹುಡುಗಿ’ ‘ಮುಂಗಾರು ಮಳೆ’ ಮೊದಲಾದ ಹಿಟ್ ಚಿತ್ರಗಳ ಸೂಪರ್ ಹಿಟ್ ಗೀತೆಗಳನ್ನು ನೀಡಿರುವ ಸಂಗೀತ ನಿರ್ದೇಶಕ ಮನೋಮೂರ್ತಿ ಮತ್ತೊಮ್ಮೆ ಪ್ರಣಯ ಗೀತೆಗಳೊಂದಿಗೆ ಬಂದಿದ್ದಾರೆ. ಅವರು ಸಂಗೀತ ನೀಡಿರುವ ‘ಪ್ರಣಯಂ’ ಚಿತ್ರದ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ.

‘ರೊಮ್ಯಾಂಟಿಕ್, ಮಿಸ್ಟ್ರಿ, ಥ್ರಿಲ್ಲರ್ ಸಿನಿಮಾವಿದು. ಚಿತ್ರದಲ್ಲಿ 6 ಹಾಡುಗಳಿದ್ದು, ಎಲ್ಲವೂ ಸುಮಧುರವಾಗಿವೆ. ಸಿನಿಮಾದಲ್ಲಿ 5 ಹಾಡುಗಳು ಮಾತ್ರ ಬಳಕೆಯಾಗಿವೆ. 3 ಹಾಡುಗಳಿಗೆ ಜಯಂತ ಕಾಯ್ಕಿಣಿ ಸಾಹಿತ್ಯವಿದೆ. ಸೋನು ನಿಗಂ, ಕೈಲಾಸ್ ಖೇರ್, ಹೇಮಂತ್ ಮೊದಲಾದವರು ಹಾಡಿದ್ದಾರೆ’ ಎಂದು ಸಿನಿಮಾ ಸಂಗೀತದ ಕುರಿತು ವಿವರಿಸಿದರು ಮನೋಮೂರ್ತಿ.

ಅಮೆರಿಕದಲ್ಲಿ ನೆಲೆಸಿರುವ ಅವರು, ಸಂಯೋಜನೆಯ ಕೆಲಸವನ್ನು ಅಲ್ಲಿಯೇ ಮುಗಿಸುತ್ತಾರೆ. ಹಾಡಿನ ರೆಕಾರ್ಡಿಂಗ್ ಮತ್ತಿತರ ಕೆಲಸಗಳಿಗೆ ಬೆಂಗಳೂರಿಗೆ ಬರುತ್ತಾರೆ. ‘ಮೊದಲಿನಿಂದಲೂ 50–50 ಸರ್ಕಾರ ನನ್ನದು. ವರ್ಷದ ಅರ್ಧಭಾಗ ಇಲ್ಲಿಯೇ ಇದ್ದು ಕೆಲಸ ಮಾಡುತ್ತೇನೆ. ಸಿನಿಮಾ ಹಿಟ್ ಆದರೆ ಮಾತ್ರ ಹಾಡುಗಳು ಜನರನ್ನು ತಲುಪುತ್ತವೆ. ಹಾಡುಗಳು ಹಿಟ್ ಆಗಲಿಲ್ಲವೆಂದರೆ ಕೆಲಸ ಕಡಿಮೆಯಾಗುತ್ತದೆ’ ಎಂದು ವಾಸ್ತವ ಸಂಗತಿಯನ್ನು ಬಿಚ್ಚಿಟ್ಟರು.

‘ಮಾದ ಮತ್ತು ಮಾನಸಿ’, ‘ಸವರ್ಣ ದೀರ್ಘ ಸಂಧಿ’ ಅವರು ಸಂಗೀತ ಸಂಯೋಜಿಸಿದ ಇತ್ತೀಚಿನ ಚಿತ್ರಗಳು. “ನಾನು ಸಂಗೀತ ನೀಡಿರುವ ‘ಗಜರಾಮ’ ಚಿತ್ರ ಬಿಡುಗಡೆಗೆ ಸಿದ್ಧವಿದೆ. ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ ಹೆಸರಿಡದ ಚಿತ್ರಕ್ಕೆ ಮ್ಯೂಸಿಕ್ ಮಾಡಿರುವೆ. ಆ ಚಿತ್ರಕ್ಕೆ ‘ಅಮೆರಿಕ, ಅಮೆರಿಕ -2’ ಎಂದು ಶೀರ್ಷಿಕೆಯಿಡುವ ಕುರಿತು ಚರ್ಚೆ ನಡೆಯುತ್ತಿದೆ. ಅರ್ಧದಷ್ಟು ಚಿತ್ರ ಅಮೆರಿಕದಲ್ಲಿಯೇ ಚಿತ್ರೀಕರಣಗೊಂಡಿದೆ. ಆದರೆ ಕಥೆ ‘ಅಮೆರಿಕ, ಅಮೆರಿಕ’ದ ಮುಂದುವರಿದ ಭಾಗವಲ್ಲ’ ಎಂದು ತಮ್ಮ ಮುಂದಿನ ಕೆಲಸಗಳ ಕುರಿತು ಅವರು ಮಾಹಿತಿ ಹಂಚಿಕೊಂಡರು.

ಪ್ರಣತಿ

ಫೆ.9ಕ್ಕೆ ‘ಜಸ್ಟ್ ಪಾಸ್’

‘ದೊಡ್ಡಹಟ್ಟಿ ಬೋರೇಗೌಡ’ ಚಿತ್ರದ ನಿರ್ದೇಶಕ ಕೆ.ಎಂ.ರಘು ಅವರ ‘ಜಸ್ಟ್ ಪಾಸ್’ ಚಿತ್ರ ಫೆಬ್ರುವರಿ 9ರಂದು ತೆರೆ ಕಾಣುತ್ತಿದೆ. ಶ್ರೀ ಹಾಗೂ ಪ್ರಣತಿ ಜೋಡಿಯಾಗಿ ನಟಿಸಿರುವ ಈ ಚಿತ್ರದ ಟ್ರೈಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

‘ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರು ಈ ಟ್ರೈಲರ್ ಬಿಡುಗಡೆ ಮಾಡಬೇಕಿತ್ತು. ಕಾರಣಾಂತರಗಳಿಂದ ಸಾಧ್ಯವಾಗಿಲ್ಲ. ಅವರ ಬೆಂಬಲ ನಮಗಿದೆ. ಕಾಲೇಜು ಹುಡುಗರ ಕಥೆ ಹೊಂದಿರುವ ಹಾಸ್ಯಮಯ ಚಿತ್ರ. ಚಿತ್ರ ಇಷ್ಟು ಅದ್ದೂರಿಯಾಗಿ ಮೂಡಿ ಬರಲು ನಮ್ಮ ನಿರ್ಮಾಪಕ ಕೆ.ವಿ.ಶಶಿಧರ್ ಅವರು ಕಾರಣ’ ಎಂದರು ನಿರ್ದೇಶಕರು.

‘ಚಿತ್ರದಲ್ಲಿ ನಾನು ಜಸ್ಟ್‌ಪಾಸ್ ವಿದ್ಯಾರ್ಥಿನಿ. ಈ ಕಾಲೇಜು ಇರುವುದೇ ನಮ್ಮಂತಹ ವಿದ್ಯಾರ್ಥಿಗಳಿಗೆ’ ಎಂದು ತಮ್ಮ ಪಾತ್ರವನ್ನು ವಿವರಿಸಿದರು ಪ್ರಣತಿ. ಹರ್ಷವರ್ಧನ್ ರಾಜ್ ಸಂಗೀತ, ಸುಜಯ್ ಕುಮಾರ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಪ್ರಜಾವಾಣಿ ನೋಡಿಯೊ

ಸಿನಿಮಾತು

ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಶ್ರುತಿ ಹರಿಹರನ್‌ಗೆ ‘ಸಾರಾಂಶ’ದ ನಶೆ!

ಶ್ರುತಿ ಹರಿಹರನ್ ಮುಖ್ಯಭೂಮಿಕೆಯಲ್ಲಿರುವ ‘ಸಾರಾಂಶ’ ಚಿತ್ರದ ‘ನಶೆಯೋ ನಕಾಶೆಯೋ’ ಹಾಡು ಬಿಡುಗಡೆಗೊಂಡಿದೆ. ಸೂರ್ಯ ವಸಿಷ್ಠ ಈ ಚಿತ್ರದ ನಿರ್ದೇಶಕರು.

ಉದಿತ್ ಹರಿತಾಸ್ ಸಂಗೀತ, ಮಾಧುರಿ ಶೇಷಾದ್ರಿ ಧ್ವನಿ ಈ ಗೀತೆಗಿದೆ. ಪ್ರಮೋದ್ ಮರವಂತೆ ಸಾಹಿತ್ಯದ ಈ ಗೀತೆಗೆ ಶ್ರುತಿ ಹರಿಹರನ್ ವಿಭಿನ್ನವಾಗಿ ಹೆಜ್ಜೆ ಹಾಕಿದ್ದಾರೆ. ಸುಮೇಶ್ ವಿ.ಎಂ ಮತ್ತು ಐಶ್ವರ್ಯಾ ಪ್ರತಾಪ್ ಕೂಡ ಶೃತಿಗೆ ಜೊತೆಯಾಗಿದ್ದಾರೆ.

ರವಿ ಕಶ್ಯಪ್ ಮತ್ತು ಆರ್.ಕೆ. ನಲ್ಲಮ್ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ದೀಪಕ್ ಸುಬ್ರಮಣ್ಯ, ಸೂರ್ಯ ವಸಿಷ್ಠ, ಶ್ರುತಿ ಹರಿಹರನ್, ಶ್ವೇತಾ ಗುಪ್ತ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಅಪರಾಜಿತ್ ಹಿನ್ನೆಲೆ ಸಂಗೀತ ಮತ್ತು ಪ್ರದೀಪ್ ನಾಯಕ್ ಸಂಕಲನ ಈ ಚಿತ್ರಕ್ಕಿದೆ.

ತಂಡದೊಂದಿಗೆ ಶ್ರುತಿ ಹರಿಹರನ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ,
ವಿಜಯನಗರ ವಿಭಾಗ, 1ನೇ ಮಹಡಿ, ಶಾಸಕರ ಭವನ, 3ನೇ ಮುಖ್ಯರಸ್ತೆ,
ವಿಜಯನಗರ, ಬೆಂಗಳೂರು – 560040.

ಸಂಖ್ಯೆ: ಕಾಅ(ವಿನ)/ಸಅ/ಟೆಂಡರ್/1121/2023–24 ದಿನಾಂಕ: 01–02–2024

ಟೆಂಡರ್ ರದ್ದುಪಡಿಸುವಿಕೆ (ಐಎಫ್‌ಟಿ)

(ದ್ವಿ–ಲಕೋಟೆ ಪದ್ಧತಿ)

ಉಲ್ಲೇಖ: ಸಂಖ್ಯೆ ಕಾಅ(ವಿನ)/ಸಅ/ಟೆಂಡರ್/06/2023–24, ದಿನಾಂಕ: 25–10–2023

ವಿಜಯನಗರ ವಿಭಾಗ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಉಲ್ಲೇಖದನ್ವಯ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ 04 ಪ್ಯಾಕೇಜ್ ಕಾಮಗಾರಿಗಳ ಟೆಂಡರ್‌ನ್ನು ತಾಂತ್ರಿಕ ಕಾರಣಗಳಿಂದ ರದ್ದುಗೊಳಿಸಲಾಗಿದೆ.

ಕ್ರ ಸಂ.	ಕಾಮಗಾರಿಯ ಹೆಸರು	ಮೊತ್ತ (ರೂ. ಲಕ್ಷಗಳಲ್ಲಿ)
1	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 122, ಕೆ.ಪಿ. ಅಗ್ರಹಾರ ಮತ್ತು ವಾರ್ಡ್ ಸಂಖ್ಯೆ. 123, ವಿಜಯನಗರ ಇಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು. ಪ್ಯಾಕೇಜ್ – 01 (6 ಕಾಮಗಾರಿಗಳು)	1000.00
2	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 124, ಹೊಸಹಳ್ಳಿ ಮತ್ತು ವಾರ್ಡ್ ಸಂಖ್ಯೆ. 134, ಬಾಪೂಜಿನಗರ ಇಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು. ಪ್ಯಾಕೇಜ್ – 02 (7 ಕಾಮಗಾರಿಗಳು)	800.00
3	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 132, ಅತ್ತಿಗುಪ್ಪೆ ಮತ್ತು ವಾರ್ಡ್ ಸಂಖ್ಯೆ. 133, ಹಂಪಿನಗರ ಇಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು ಮತ್ತು ವಾರ್ಡ್ ಸಂಖ್ಯೆ 133 ಇಲ್ಲಿ ಬಿಬಿಎಂಪಿ ಕಟ್ಟಡದ ನವೀಕರಣ. ಪ್ಯಾಕೇಜ್ – 03 (6 ಕಾಮಗಾರಿಗಳು)	800.00
4	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 157, ಗಾಳಿ ಆಂಜನೇಯ ಟೆಂಪಲ್ ಮತ್ತು ವಾರ್ಡ್ ಸಂಖ್ಯೆ. 158, ದೀಪಾಂಜಲಿನಗರ ಇಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು. ಪ್ಯಾಕೇಜ್ – 04 (6 ಕಾಮಗಾರಿಗಳು)	900.00

ಸಹಿ/– ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬಿಬಿಎಂಪಿ.

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ

ಮರೀನ್ ಇಂಜಿನೀಯರ್‌ರವರ ಕಛೇರಿ, ಬೈತ್‌ಕೋಲ್, ಕಾರವಾರ–581302

ಕ್ರ.ಸಂ: ಎಂಇ/ಜಿಎಸ್‌ಎಲ್/ಸಿಆರ್–03/2023 ದಿನಾಂಕ: 31.01.2024

ಆಸಕ್ತ ವ್ಯಕ್ತಪಡಿಸುವಿಕೆ (EXPRESSION OF INTEREST)

ಕಾರವಾರ ಬಂದರಿನಲ್ಲಿ ಹಡಗುಗಳ ಬರ್ಥಿಂಗ್/ಅನ್‌ಬರ್ಥಿಂಗ್ ಸೇವೆಗಾಗಿ ಆದಾಯ ಹಂಚಿಕೆ ಆಧಾರದ ಮೇಲೆ 3 ವರ್ಷಗಳ ಅವಧಿಗೆ 2 ಸಂಖ್ಯೆ ಕನಿಷ್ಠ 30 ಟನ್ ಬೋಲಾರ್ಡ್ ಪುಲ್ ಸಾಮರ್ಥ್ಯದ ಟಗ್ ಸೇವೆಯನ್ನು ಪಡೆಯಲು ಈ ಕೆಳಕಂಡಂತೆ ಹೆಸರಾಂತ, ವಿಶ್ವಾಸಾರ್ಹ, ವೃತ್ತಿಪರವಾಗಿ ಅನುಭವ ಹೊಂದಿರುವ ಆಸಕ್ತ ಗುತ್ತಿಗೆದಾರರು/ಸಂಸ್ಥೆಗಳು/ಶಿಪ್ಪಿಂಗ್ ಏಜೆನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ (KPPP) ನಲ್ಲಿ ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: Providing 2 Nos. of minimum 30 Ton Bollard pull capacity each Tug service on **revenue sharing basis** for berthing and unberthing of ships and search and rescue operations for a period of 3 years at Karwar Port, Uttara Kannada round the clock (24 hrs a day) including Handling, Operation and Maintenance (HOM) charges of Tug, Fuel, Lubricants, Water, Manning Crew, Maintenance, etc., and inclusive of all applicable taxes.

Bidding Parameter is Payment of Royalty per GRT of the vessels berthed and unberthed each way subject to minimum of Rs.5000/- payable to the Karnataka Maritime Board subject to conditions mentioned in the Appendix-X

ಪ್ರಮಾಣ: 2 Tugs, ಘಟಕ: Lumpsum (Royalty per GRT)

ದರ: ಅಂಕಗಳಲ್ಲಿ.......... ಅಕ್ಷರದಲ್ಲಿ..........

ಮೇಲಿನ ಸೇವೆಗಾಗಿ ದರಗಳನ್ನು ದಿನಾಂಕ: 15.02.2024 ರಂದು ಅಥವಾ ಮುಂಚಿತವಾಗಿ ಕೆಳಸಹಿದಾರರಿಗೆ ಸಲ್ಲಿಸುವುದು. ಕೊಟೇಶನ್ ದರಗಳು ಅಂದಾಜು ಪಟ್ಟಿ ತಯಾರಿಸಲು / ಇಲಾಖೆಯ ಅನುಮತಿ ಪಡೆಯುವ ಸಲುವಾಗಿ ಮಾತ್ರ ಸ್ವೀಕರಿಸಲಾಗುತ್ತದೆ.

ಯಾವುದೇ ಇತರ ಮಾಹಿತಿಗಾಗಿ ಮತ್ತು ಹೆಚ್ಚಿನ ವಿವರಗಳಿಗಾಗಿ ಕೆಳಸಹಿದಾರರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

(1) E-mail : marineengineerkwr@gmail.com
(2) Phone: 08382-221402 (3) https://kppp.karnataka.gov.in

ಸಹಿ/– ಮರೀನ್ ಇಂಜಿನೀಯರ್, ಕಾರವಾರ

DIPR/ADK/KSMCA/606/23-24 ದಿ. 31.01.2024

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)

KSIIDC

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

"ಖನಿಜ ಭವನ", 4ನೇ ಮಹಡಿ, ಪೂರ್ವ ಭಾಗ, ನಂ. 49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001, ದೂರವಾಣಿ: 080–22258131–33, ಇ–ಮೇಲ್: murthy.ksiidc.com // info@ksiidc.com ವೆಬ್‌ಸೈಟ್: https://ksiidc.karnataka.gov.in

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಬಾಡಿಗೆ ಆಧಾರದ ಮೇಲೆ ಆಂಬ್ಯುಲೆನ್ಸ್ ಮತ್ತು ಕಾರ್ಯಾಚರಣೆಯ ವಾಹನಗಳನ್ನು ಒದಗಿಸಲು ಏಜೆನ್ಸಿಯ ಆಯ್ಕೆಗಾಗಿ

ಇ–ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ)

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ), ಕರ್ನಾಟಕ ಸರ್ಕಾರ, ಇವರು ಶಿವಮೊಗ್ಗ ವಿಮಾನ ನಿಲ್ದಾಣವನ್ನು ನಿರ್ವಹಿಸುತ್ತಿದ್ದಾರೆ. ಕೆಎಸ್‌ಐಐಡಿಸಿಯು ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಆಂಬ್ಯುಲೆನ್ಸ್ ಮತ್ತು ಕಾರ್ಯಾಚರಣೆಯ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಒದಗಿಸುವ ಸಲುವಾಗಿ ಏಜೆನ್ಸಿಯ ಆಯ್ಕೆಗಾಗಿ ಟೆಂಡರ್ (ದ್ವಿ ಲಕೋಟೆ ಪದ್ಧತಿಯಲ್ಲಿ) ಆಹ್ವಾನಿಸಿದೆ. ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ಪಡೆಯಬಹುದು.

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಆಂಬ್ಯುಲೆನ್ಸ್ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಒದಗಿಸಲು ಇ.ಎಂ.ಡಿ. **ರೂ.75,000/-** (ರೂಪಾಯಿ ಎಪ್ಪತ್ತೈದು ಸಾವಿರ ಮಾತ್ರ)

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಕಾರ್ಯಾಚರಣೆಯ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಒದಗಿಸಲು ಇ.ಎಂ.ಡಿ. **ರೂ.1,00,000/-** (ರೂಪಾಯಿ ಒಂದು ಲಕ್ಷ ಮಾತ್ರ)

ಪ್ರಮುಖ ದಿನಾಂಕಗಳು: ಟೆಂಡರ್ ದಸ್ತಾವೇಜುಗಳನ್ನು ದಿನಾಂಕ **02.02.2024**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವ ಸಭೆ ದಿನಾಂಕ **08.02.2024 ರಂದು 11.00 ಗಂಟೆಗೆ**. ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ಕಡೆಯ ದಿನಾಂಕ: **17.02.2024 ರಂದು 17.30 ಗಂಟೆಯವರೆಗೆ**. ಹೆಚ್ಚಿನ ವಿವರಗಳನ್ನು ಮೇಲಿನ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು ಅಥವಾ ವೆಬ್‌ಸೈಟ್ **https://ksiidc.karnataka.gov.in** ಇಲ್ಲಿಂದ ಪಡೆದುಕೊಳ್ಳಬಹುದು. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಮುಂದಿನ ಯಾವುದೇ ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಪ್ರಭಾರ) ಕೆಎಸ್‌ಐಐಡಿಸಿ & ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,ನಂ.7, ಹೇಮಾವತಿ ಎಡದಂಡೆ ನಾಲಾ ವಿಭಾಗ,ಕಾವೇರಿ ನೀರಾವರಿ ನಿಗಮ, (ನಿ), ನಾಗಮಂಗಲ. ದೂರವಾಣಿ ಸಂಖ್ಯೆ: 08234–200058
ಫ್ಯಾಕ್ಸ್ ಸಂಖ್ಯೆ: 08234–286019
ಇ–ಮೇಲ್: eeno7nagamangala@gmail.com

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/2023–24
ದಿನಾಂಕ:20.01.2024
(ರಸ್ತೆ, ಪಿಕಪ್ ಮತ್ತು ಸೇತುವೆ ಅಭಿವೃದ್ಧಿ ಕಾಮಗಾರಿಗಳಿಗೆ)

ರಸ್ತೆ, ಪಿಕಪ್ ಮತ್ತು ಸೇತುವೆ ಅಭಿವೃದ್ಧಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿಯಾಗಿರುವ 3ನೇ ಹಾಗೂ 2ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಅಲ್ಪಾವಧಿ ಟೆಂಡರ್‌ಗಳನ್ನು (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಆಹ್ವಾನಿಸಲಾಗಿದೆ. ಒಟ್ಟು 03 ಕಾಮಗಾರಿಗಳಿದ್ದು, ಟೆಂಡರ್‌ನ್ನು ಹಾಗೂ ಇ.ಎಂ.ಡಿ ಹಣವನ್ನು ಆನ್‌ಲೈನ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸ್ವೀಕರಿಸುವ **ದಿನಾಂಕ:02.02.2024** ರಿಂದ **12.02.2024** ರ ಸಂಜೆ **4.00** ಗಂಟೆಯವರೆಗೆ. ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **14.02.2024** ರ ಸಂಜೆ **4.00** ಘಂಟೆಗೆ. ನಂತರ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯುವ ದಿನಾಂಕ:**17.02.2024** ರ ಬೆಳಿಗ್ಗೆ **11.00** ಘಂಟೆಗೆ. ಟೆಂಡರ್ ಆಹ್ವಾನಿಸಿರುವ ಕಾಮಗಾರಿಗಳ ಗರಿಷ್ಠ ಮೊತ್ತ **ರೂ.423.02** ಲಕ್ಷಗಳು ಹಾಗೂ ಕಾಮಗಾರಿಯ ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ **ರೂ. 80.44** ಲಕ್ಷಗಳು. ಕಾಮಗಾರಿಯ ಗರಿಷ್ಠ ಇ.ಎಂ.ಡಿ ಮೊತ್ತ **ರೂ. 6,35,000.00** ಗಳು ಮತ್ತು ಕಾಮಗಾರಿಯ ಕನಿಷ್ಠ ಇ.ಎಂ.ಡಿ ಮೊತ್ತ **ರೂ. 1,61,000.00** ಗಳಾಗಿದ್ದು, ಸದರಿ ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ ಮೊತ್ತ, ಟೆಂಡರ್ ಫಾರಂ ಬೆಲೆ ಹಾಗೂ ಕಾಲಮಿತಿ ಮುಂತಾದ ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳನ್ನು **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ನಂ.7, ಹೇಮಾವತಿ ಎಡದಂಡೆ ನಾಲಾ ವಿಭಾಗ, ನಾಗಮಂಗಲ

ವಾಸಾಸಂಇ/ಸಿ–ಮಂ/ಕೆಎಸ್‌ಎಂಸಿಎ/485/2023–24

ಕರ್ನಾಟಕ ಸರ್ಕಾರ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ

ಟೆಂಡರ್ ಪ್ರಕಟಣೆ ಸಂ: ಕಾಇಂ: ಗ್ರಾಕುನೀ & ನೈ ವಿಉ: ಟೆಂಡರ್ ನಂ. 21/2023–24/ಜೆಇಂ–1/1392 ದಿನಾಂಕ: 01.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ "ಸ್ವಚ್ಛ ಭಾರತ್ ಮಿಷನ್" ಯೋಜನೆಯಡಿಯಲ್ಲಿ ಅನುಮೋದನೆಯಾದ ಕಾಮಗಾರಿ ಅಂದಾಜು ಮೊತ್ತ ರೂ. 81.33 ಲಕ್ಷದ ಕಾಮಗಾರಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರನ್ನು (Standard Tender Documents for Procurment of Works)ನ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹದರ್ಜೆಯ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದ್ದು, ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ನಮೂದಿಸಿದ ದಿನಾಂಕದಂದು Government of Karnataka KPP portal WEB site https://www.kppp.karnataka.gov.in ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು.

1. ಟೆಂಡರ್‌ನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ: 01–02–2024 ರಿಂದ 15–02–2024 4.00 (PM)
2. ಟೆಕ್ನಿಕಲ್ ಬಿಡ್ಡನ್ನು ತೆರೆಯುವ ದಿನಾಂಕ: 16–02–2024ರ 4.30 (PM)
3. ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: 17–02–2024ರ 11.00 (AM)

ಇನ್ನಿತರ ನಿಬಂಧನೆಗಳು, ಇಎಂಡಿ ವಿವರ, ಗುತ್ತಿಗೆದಾರರ ದರ್ಜೆ ಮತ್ತು ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ವೆಬ್‌ಸೈಟ್ https://www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಛೇರಿಯವರಿಂದ ಪಡೆಯಬಹುದಾಗಿದೆ.

E-Proc helpdesk: 080-22371090/ 22373788
Hphelpdesk.blr@intarvo.com

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ

ಕರ್ನಾಟಕ ಸರ್ಕಾರ

ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (ಇಡಿಸಿಎಸ್) ಸಿಆಸುಇ (ಇ–ಆಡಳಿತ ಇಲಾಖೆ)

ನಂ.3, 4ನೇ ಮಹಡಿ, ಎಂಬೆಸಿ ಐಕಾನ್ ಕಟ್ಟಡ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು–560001
ದೂರವಾಣಿ : 080–2223 0281, 080–2223 0282.

ಸಂಖ್ಯೆ: **DPAREGOV/2023-24/SE0020/21/22** ದಿನಾಂಕ : **30.01.2024**

ಇ– ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಇಡಿಸಿಎಸ್ ನಿರ್ದೇಶನಾಲಯಕ್ಕೆ IT ಮಾನವ ಸಂಪನ್ಮೂಲ ಒದಗಿಸಲು Manpower ಏಜೆನ್ಸಿಯ ಆಯ್ಕೆಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ದಿನಾಂಕ: 09.02.2024 ಸಂಜೆ 5.30 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಟೆಂಡರ್ ಷರತ್ತು ಮತ್ತು ವಿವರಗಳನ್ನು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ .

ಪ್ರಕಟಣಾ ದಿನಾಂಕ: 30–01–2024. 1) ಟೆಂಡರ್ ಸಂ.: DPAREGOV/2023-24/SE0020, ಟೆಂಡರ್ ವಿಷಯ: Selection of Manpower Agency for providing IT resources to Mobile One, Janasevaka and Karnataka One Projects, ದಿನಾಂಕ/ಸಮಯ : 09.02.2024 ಸಂಜೆ 5.30 ಗಂಟೆಗೆ. 2) ಟೆಂಡರ್ ಸಂ.: DPAREGOV/2023-24/SE0021, ಟೆಂಡರ್ ವಿಷಯ: Selection of Manpower Agency for providing IT resources to Sevasindhu, Suvidha and Grama One Projects, ದಿನಾಂಕ/ಸಮಯ : 09.02.2024 ಸಂಜೆ 5.30 ಗಂಟೆಗೆ. 3) ಟೆಂಡರ್ ಸಂ.:DPAREGOV/2023-24/SE0022, ಟೆಂಡರ್ ವಿಷಯ: Selection of Manpower Agency for providing IT resources to EDCS Business Analyst and Operation Team, ದಿನಾಂಕ/ಸಮಯ : 09.02.2024 ಸಂಜೆ 5.30 ಗಂಟೆಗೆ.

ಇತರೆ ವಿವರಗಳನ್ನು ಇಡಿಸಿಎಸ್ ನಿರ್ದೇಶನಾಲಯದ ವೆಬ್‌ಸೈಟ್ https://edcs.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಸಹಾಯಕ ನಿರ್ದೇಶಕರು,(ಇಡಿಸಿಎಸ್)

DIPR/CP/3355/Zen/2023-24

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕ

ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ,
ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023.
ದೂ: 080–29557023, ಇ–ಮೇಲ್: **cekhsdrp@gmail.com**

ಸಂಖ್ಯೆ:ಆಕುಕ/ಇಂಘ/ಮುಇಂ/ತಾಸ–3/ಸಇಂ–8/ಟಿಎನ್‌ಡಿ/2ನೇ ಕರೆ/2023–24/2298 ದಿನಾಂಕ: 01.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರಿಂದ ಈ ಕೆಳಕಂಡ ಕಾಮಗಾರಿಗೆ ಯೋಜನಾ ನಿರ್ವಹಣೆ ಸಮಾಲೋಚಕರನ್ನು ನೇಮಿಸಲು ದ್ವಿ ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (Through Karnataka Public Procurement Portal) ಮೂಲಕ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ವಿವರ: ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ 250 ಹಾಸಿಗೆಗಳ ಹೊಸ ಜಿಲ್ಲಾಸ್ಪತ್ರೆ ನಿರ್ಮಾಣ ಮಾಡುವ ಕಾಮಗಾರಿಗೆ ಯೋಜನಾ ನಿರ್ವಹಣೆ ಸಮಾಲೋಚಕರ ನೇಮಕ. (2ನೇ ಕರೆ). ಅಂದಾಜು ಮೊತ್ತ: **ರೂ. 40.00 ಲಕ್ಷಗಳು.** ಇಎಂಡಿ: **ರೂ. 0.80 ಲಕ್ಷಗಳು.**

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: (1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **12.02.2024 ರಂದು 16.00 ಗಂಟೆಯವರೆಗೆ. (2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): **13.02.2024 ರಂದು 16.00 ಗಂಟೆಗೆ.**

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through Karnataka Public Procurement Portal Platform) **www.kppp.karnataka.gov.in** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಎಂಡಿ ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **www.kppp.karnataka.gov.in** ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (Through Karnataka Public Procurement Portal) ನೋಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **(2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ,
ವಿಜಯನಗರ ವಿಭಾಗ, 1ನೇ ಮಹಡಿ, ಶಾಸಕರ ಭವನ, 3ನೇ ಮುಖ್ಯರಸ್ತೆ,
ವಿಜಯನಗರ, ಬೆಂಗಳೂರು – 560040.

ಸಂಖ್ಯೆ: ಕಾಅ(ವಿನ)/ಸಅ/ಟೆಂಡರ್/07/2023–24 ದಿನಾಂಕ: 01–02–2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)

(ದ್ವಿ–ಲಕೋಟೆ ಪದ್ಧತಿ) (ಜಿಟಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರವು ಈ ಕೆಳಗೆ ಪಟ್ಟಿ ಮಾಡಿರುವ ಕಾಮಗಾರಿಗಳನ್ನು ಕೈಗೊಳ್ಳಲು ಜಿ.ಓ. ಸಂಖ್ಯೆ. ಯುಡಿಡಿ/299/ಎಂಎನ್‌ವೈ/2022 (ಇ) ಬೆಂಗಳೂರು, ದಿನಾಂಕ: 07–10–2023 ರ ಅನುಸಾರ ತಾತ್ವಿಕ ಅನುಮೋದನೆ ನೀಡಿದೆ ಮತ್ತು ಬಜೆಟ್ ಮಂಜೂರು ಮಾಡಿದೆ.

ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (**ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ4**)

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಲಕ್ಷಗಳಲ್ಲಿ)
1	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 122, ಕೆ.ಪಿ. ಅಗ್ರಹಾರ, ವಾರ್ಡ್ ಸಂಖ್ಯೆ. 123, ವಿಜಯನಗರ, ವಾರ್ಡ್ ಸಂಖ್ಯೆ. 124, ಹೊಸಹಳ್ಳಿ ಮತ್ತು ವಾರ್ಡ್ ಸಂಖ್ಯೆ. 134, ಬಾಪೂಜಿನಗರ ಇಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು. **(13 ಕಾಮಗಾರಿಗಳು) ಪ್ಯಾಕೇಜ್ – 01**	1800.00	ರೂ. 18,00,000/- (ರೂ. 1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮತ್ತು ಬಾಕಿ ರೂ. 17,00,000/- ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ)
2	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 132, ಅತ್ತಿಗುಪ್ಪೆ, ವಾರ್ಡ್ ಸಂಖ್ಯೆ. 133, ಹಂಪಿನಗರ, ವಾರ್ಡ್ ಸಂಖ್ಯೆ. 157 ಗಾಳಿ ಆಂಜನೇಯ ಟೆಂಪಲ್ ಮತ್ತು ವಾರ್ಡ್ ಸಂಖ್ಯೆ. 158, ದೀಪಾಂಜಲಿನಗರ ಇಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು ಮತ್ತು ವಾರ್ಡ್ ಸಂಖ್ಯೆ. 133 ಇಲ್ಲಿ ಬಿಬಿಎಂಪಿ ಕಟ್ಟಡದ ನವೀಕರಣ. **(13 ಕಾಮಗಾರಿಗಳು) ಪ್ಯಾಕೇಜ್ – 02**	1700.00	ರೂ. 17,00,000/- (ರೂ. 1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮತ್ತು ಬಾಕಿ ರೂ. 16,00,000/- ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ)

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಟಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: 02–02–2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **06–02–2024 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), ಬಿಬಿಎಂಪಿ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 560011 ಇಲ್ಲಿ ನಡೆಯುತ್ತದೆ.** 3) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **06–02–2024 ರಂದು 16.00 ಗಂಟೆವರೆಗೆ.** 4) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: **12–02–2024 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 5) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **13–02–2024 ರಂದು 16.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಜಯನಗರ ವಿಭಾಗ ಇಲ್ಲಿ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬಿಬಿಎಂಪಿ.

TAMILNADU NEWSPRINT AND PAPERS LIMITED

TNPL
Kagithapuram - 639 136. Karur Dist. Tamil Nadu.
Ph.: 04324-277001 (10 Lines). E-Mail: purchase.recycle@tnpl.co.in

NOTICE INVITING TENDER

Tender No.	Material Description	Due date
232413 006853	Procurement of 1000 MT ± 5% Office Waste Paper (White Records) in Bale form from Karnataka for TNPL Unit - I at Kagithapuram.	08.02.2024

Corrigendum if any will be issued in TNPL Website & NIC Portal only. Detailed Terms & conditions, tender fee, EMD etc., are available in tender document at our websites: **www.tnpl.com / https://tntenders.gov.in/nicgep/app**

DIPR/559/Tender/2024 *TNPL - Maker of bagasse based eco-friendly Paper*

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ–577501

ನಂ. ಬರ ನಿರ್ವಹಣೆ:ಕು.ನೀ./ಸಿಆರ್:2/2023–24 ದಿನಾಂಕ: 31.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

2023–24ನೇ ಸಾಲಿಗೆ ಚಿತ್ರದುರ್ಗ ಜಿಲ್ಲೆಯ ಬರಪೀಡಿತ ಎಂದು ಘೋಷಿಸಿರುವ ಆರು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ್ನು ಟ್ಯಾಂಕರ್ ಮೂಲಕ ಶುದ್ಧ ಕುಡಿಯುವ ನೀರನ್ನು ಅವಶ್ಯಕತೆ ಮತ್ತು ಬೇಡಿಕೆಗೆ ಅನುಗುಣವಾಗಿ ಪೂರೈಕೆ ಮಾಡಲು ತಾಲ್ಲೂಕುವಾರು ಅಲ್ಪಾವಧಿ ಇ–ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡಂತೆ ಹೊರಡಿಸಲಾಗಿರುತ್ತದೆ.

ತಾಲ್ಲೂಕು	ಇಂಡೆಂಟ್ ಸಂಖ್ಯೆ	ಟೆಂಡರ್ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
ಚಿತ್ರದುರ್ಗ	RD/2023-24/SE0152	71.28	1,42,600
ಚಳ್ಳಕೆರೆ	RD/2023-24/SE0156	51.84	1,03,700
ಹಿರಿಯೂರು	RD/2023-24/SE0153	92.34	1,84,700
ಹೊಸದುರ್ಗ	RD/2023-24/SE0154	58.32	1,16,600
ಹೊಳಲ್ಕೆರೆ	RD/2023-24/SE0155	85.86	1,71,700
ಮೊಳಕಾಲ್ಮೂರು	RD/2023-24/SE0157	108.54	2,17,100

1) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 07.02.2024 ರ ಸಂಜೆ 4.00 ಗಂಟೆ
2) ಪ್ರೀಬಿಡ್ಡಿಂಗ್ ನಡೆಯುವ ದಿನಾಂಕ:–04.02.2024 ಮತ್ತು ಸ್ಥಳ: ಜಿಲ್ಲಾಧಿಕಾರಿಗಳ ಕಚೇರಿ, ಚಿತ್ರದುರ್ಗ ಜಿಲ್ಲೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್‌ನ ಜಾಲತಾಣ https://kppp.karnataka.gov.in/ ರಲ್ಲಿ ನೋಡಬಹುದಾಗಿದೆ.

ಸಹಿ/– ಅಪರ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ.

DIPR/CTA/KSMCA/524/2023-24

ಜಿಲ್ಲಾ ಪಂಚಾಯತ್ ತುಮಕೂರು.

ಉಪ ನಿರ್ದೇಶಕರು ಕಛೇರಿ(ಆಡಳಿತ) ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ.

ಕುಣಿಗಲ್ ರಸ್ತೆ, ತುಮಕೂರು–572101, ದೂರವಾಣಿ ಸಂ: 0816–2278616 e-mail: tmkddahvs@gmail.com

No:DDT/AH&VS/KOR/DRA/D.F/e-Tender/2023-24 ದಿನಾಂಕ 31.01.2024

ಟೆಂಡರ್ ನೋಟಿಫಿಕೇಷನ್ ("KPPP PORTAL" ಮೂಲಕ ಮಾತ್ರ)

2023–24 ಮತ್ತು 2024–25ನೇ ಸಾಲಿಗೆ ತುಮಕೂರು ಜಿಲ್ಲೆಯ ಬರಪೀಡಿತ ಕೊರಟಗೆರೆ ತಾಲ್ಲೂಕಿಗೆ ಒಣಮೇವಿನ ಖರೀದಿಗೆ ಸಂಬಂಧಿಸಿದಂತೆ ಅರ್ಹ ಟೆಂಡರದಾರರಿಂದ KPPP PORTAL https://kppp.karnataka.gov.in ಮೂಲಕ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ಇಟ್ಟ ಮೊತ್ತ ರೂ.145.80ಲಕ್ಷಗಳು. ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ 31–1–2024 ರಿಂದ ವೀಕ್ಷಿಸ ಬಹುದಾಗಿದ್ದು, ಟೆಂಡರುದಾರರು KPPP PORTAL Platform ನಲ್ಲಿ ದಿನಾಂಕ: 31–1–2024 ರಿಂದ 14–02–2024 ರವರೆಗೆ ಸಾಯಂಕಾಲ 5.00 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ KPPP PORTAL ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಉಪ ನಿರ್ದೇಶಕರು(ಆಡಳಿತ), ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ತುಮಕೂರು.

DIPR/TUM/490/KSMCA/2023-24

Government of Karnataka
(Department of Panchayat Raj Engineering)

Office of the Executive Engineer Panchayat Raj Engineering Division, Vijayapura.

Tel.No. 08352-277816, Fax No. 08352-277817,
E-Mail:zpebjp9@yahoo.co.in

NO:PRED/VJP/SCP TSP/RD/TND/2023-24/2286 Dated: 30.01.2024

TIME EXTENSION

Ref: Notification No. 2174 Date: 18.01.2024

The tender notice called vide Notification under reference is modified as under . For above notification other terms and Conditions of tender remain un altered.

Request of Blank Tender Documents through e payment from 30.01.2024 to 07.02.2024, 5.00PM

Receipt o completed Tender Documents from 30.01.2024 to 07.02.2024, 5.00 PM

Opening of Financial Bid: 08.02.2024, 5.30 PM ON WARDS

Name of Work:ಬಬಲೇಶ್ವರ ತಾಲೂಕಿನ ಸುತಗುಂಡಿ ರಸ್ತೆಯಿಂದ ಬಸಪ್ಪ ಕೊಣ್ಣೂರ ವಸ್ತಿ ವರೆಗೆ ರಸ್ತೆ ಸುಧಾರಣೆ (Indent o 3470) Rs. 24.57 Lakhs (For SC Bidders)

Any change in the tender will be intimated through website only, www.kppp.karnataka.gov.in

Sd/-Executive Engineer, PRE Division, Vijayapura

ವಾಸಾಸಂಇ/ವಿಜಯಪುರ/425/ಕೆಎಸ್‌ಎಂಸಿಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕೆಂಗೇರಿ ವಿಭಾಗ,
ರಾಜರಾಜೇಶ್ವರಿನಗರ ವಲಯ, ಬೃ.ಬೆಂ.ಮ.ಪಾಲಿಕೆ ಕಟ್ಟಡ, ಸಿಎ ಸಂ–3,
1ನೇ ಮುಖ್ಯರಸ್ತೆ, ಹೊರವರ್ತುಲ ರಸ್ತೆ, ಕೊಮ್ಮಘಟ್ಟ ರಸ್ತೆ,
ಕೆಂಗೇರಿ ಉಪನಗರ, ಬೆಂಗಳೂರು –560 060

ಸಂಖ್ಯೆ: ಕಾಪಾಅ/ಕೆಂಗೇರಿ/ಟೆಂಡರ್/16/2023–24 ದಿನಾಂಕ: 01.02.2024

ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ ಕೆಳಗೆ ತಿಳಿಸಿರುವ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು	ಟೆಂಡರಿಗಿಟ್ಟ ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹.ಲಕ್ಷಗಳಲ್ಲಿ)
	ದ್ವಿಲಕೋಟೆ ಪದ್ಧತಿ – 1ನೇ ಕರೆ		
1	ಯಶವಂತಪುರ ಕ್ಷೇತ್ರದಲ್ಲಿ ಕೊಳವೆಬಾವಿ ಕೊರೆಸುವುದು ಮತ್ತು ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು.	396.08	5.95 [1.00 ಲಕ್ಷ ಆನ್‌ಲೈನ್ ಮತ್ತು ಉಳಿಕೆ ಬ್ಯಾಂಕ್ ಖಾತರಿ/ ಎಫ್.ಡಿ.ಆರ್. ಮೂಲಕ]
2	ಯಶವಂತಪುರ ಕ್ಷೇತ್ರ, ದೊಡ್ಡಬಿದರಕಲ್ಲು ಉಪ ವಿಭಾಗದ ಡಿ ಗ್ರೂಪ್ ಬಡಾವಣೆ, ಹೊಸಹಳ್ಳಿ, ವಿದ್ಯಮಾನ್ಯನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳು ಹಾಗೂ ಇತರೆ ಮೂಲಭೂತಸೌಕರ್ಯ ಕಾಮಗಾರಿಗಳನ್ನು ಮಾಡುವುದು.	786.82	11.81 [1.00 ಲಕ್ಷ ಆನ್‌ಲೈನ್ ಮತ್ತು ಉಳಿಕೆ ಬ್ಯಾಂಕ್ ಖಾತರಿ/ ಎಫ್.ಡಿ.ಆರ್. ಮೂಲಕ]

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **05.02.2024**ರ ಸಂಜೆ **4:00** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಕೆಪಿಪಿ ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ **13.02.2024**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **09.02.2024**ರ ಮಧ್ಯಾಹ್ನ **3:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿನಗರ ವಲಯ, ಬೆಂಗಳೂರು – 98ರಲ್ಲಿ ನಡೆಸಲಾಗುವುದು. (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **13.02.2024**ರ ಸಂಜೆ **4:00** ಗಂಟೆಯವರೆಗೆ. (5) ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಕೆಂಗೇರಿ ವಿಭಾಗ ಇಲ್ಲಿ ದಿನಾಂಕ **15.02.2024**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು. (6) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ www.bbmp.gov.in. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ

ಕೇಂದ್ರಿಯ ಹಿಂದಿ ಸಂಸ್ಥೆ

(ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ)
ಆಗ್ರಾ – 282005

ಪ್ರವೇಶ ಪ್ರಕಟಣೆ : 2024–26

ಹಿಂದಿಯೇತರ ರಾಜ್ಯಗಳಿಗೆ ಮಾತ್ರ

ಎನ್‌ಸಿಟಿಇ ಇವರಿಂದ ಮಾನ್ಯತೆ ಪಡೆದಿರುವ ಹಿಂದಿ ಶಿಕ್ಷಣ ನಿಶಾಂತ್ (ಎಂ.ಇಡಿ. ತತ್ಸಮಾನ), ಹಿಂದಿ ಶಿಕ್ಷಣ ಪಾರಂಗತ (ಬಿ.ಇಡಿ. ತತ್ಸಮಾನ) ಮತ್ತು ಹಿಂದಿ ಶಿಕ್ಷಣ ಪ್ರವೀಣ್ (ಡಿ.ಇಎಲ್.ಇಡಿ ತತ್ಸಮಾನ) ಎರಡು ವರ್ಷದ ಕೋರ್ಸ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿವರಗಳು (ಪ್ರವೇಶ ಪರೀಕ್ಷೆ, ವಿದ್ಯಾರ್ಹತೆ, ಶುಲ್ಕ ಇತ್ಯಾದಿ) ಸಂಸ್ಥೆಯ https://www.hindisansthan.in/ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಅನ್‌ಲೈನ್ ಅರ್ಜಿ ಸಲ್ಲಿಸಲು ಆರಂಭಿಕ ದಿನಾಂಕ 15.02.2024 ಮತ್ತು ಕೊನೆಯ ದಿನಾಂಕ 15.03.2024. ಕರಡು ಅರ್ಜಿ ನಮೂನೆಯನ್ನು ರಿಜಿಸ್ಟ್ರಾರ್, ಕೇಂದ್ರಿಯ ಹಿಂದಿ ಸಂಸ್ಥೆ, ಆಗ್ರಾ – 282005 ಇವರಿಗೆ ಸಲ್ಲಿಸಲು ಕೊನೆಯ ದಿನಾಂಕ 31.03.2024

–ಡಾ. ಚಂದ್ರಕಾಂತ ತ್ರಿಪಾಠಿ
ರಿಜಿಸ್ಟ್ರಾರ್

ರಾಷ್ಟ್ರೀಯ ಆರೋಗ್ಯ ಅಭಿಯಾನ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–23
ದೂ: 080–23113584 ಇ–ಮೇಲ್:pdrch-hfws@karnataka.gov.in

ಸಂ: HFWS-FWOOTHR(OTHR)/7/2022-FW, E- 765723 ದಿನಾಂಕ: 01.02.2024

ಇ–ಟೆಂಡರ್ ಅಧಿಸೂಚನೆ

"Tender Notification for Supply and Installation of Double Puncture Laparoscope & accessories with carbon dioxide insufflator, camera and monitor equipment under Family Welfare Program of NHM" (NHM/2023-24/IND0018)

ರಾಷ್ಟ್ರೀಯ ಆರೋಗ್ಯ ಅಭಿಯಾನವು ಕುಟುಂಬ ಕಲ್ಯಾಣ ಕಾರ್ಯಕ್ರಮಕ್ಕೆ ಅವಶ್ಯವಿರುವ **Double Puncture Laparoscope & accessories with carbon dioxide insufflator, camera and monitor equipment** ಗಳ ತಯಾರಕರು/ಅಧಿಕೃತ ವಿತರಕರುಗಳು ಅಗತ್ಯದಾಖಲೆಯೊಂದಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಪ್ರಸ್ತಾವನೆಯನ್ನು ಆಹ್ವಾನಿಸಲಾಗಿದೆ.

ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಪ್ರಸ್ತಾವನೆಯ ಡಾಕ್ಯುಮೆಂಟ್‌ಗಳನ್ನು ದಿನಾಂಕ **01.02.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಪ್ರಸ್ತಾವನೆಯ ಡಾಕ್ಯುಮೆಂಟ್‌ಗಳನ್ನು ದಿನಾಂಕ: **17.02.2024 ಅಪರಾಹ್ನ 5.30ರ** ಒಳಗಾಗಿ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) ರವರ ಕಛೇರಿ ಸಮಯ ಪೂರ್ವಾಹ್ನ 11.00 ರಿಂದ ಅಪರಾಹ್ನ 5.30 ರ ಒಳಗಾಗಿ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

DIPR/CP/BCPL/3551/2023-24

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ವಿಜಯಪುರ

ಇ–ಮೇಲ್:deo.bijapur@gmail.com, vijayapurdc@gmail.com
ಕ್ರ:ಕಂವಿ/ಅಭಿಲೇ/ಸಿ.ಆರ್,E-OFF.NO-67640/2023–24
ದಿನಾಂಕ:01.02.2024

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್

ವಿಜಯಪುರ ಜಿಲ್ಲೆಯ ಅಭಿಲೇಖಾಲಯದ ಎಲ್ಲಾ ದಾಖಲೆಗಳನ್ನು 100 ದಿನಗಳ ಕಾಲಮಿತಿಯೊಳಗೆ ಸಂಪೂರ್ಣವಾಗಿ ಗಣಕೀಕರಣಗೊಳಿಸಲು ಜಿಲ್ಲೆಯ ವಿಜಯಪುರ ತಾಲೂಕನ್ನು ಆಯ್ಕೆ ಮಾಡಿಕೊಂಡು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಸೂಚಿಸಿ ಗಣಕೀಕರಣ ಮಾಡಲು ಅವಶ್ಯಕವಿರುವ ಒಟ್ಟು 8–ಗಣಕಯಂತ್ರ ಹಾಗೂ 3–ಸ್ಕ್ಯಾನರ್ (1-Overhead Scanner, and 2-Duplex Scanner) ಗಳನ್ನು ಖರೀದಿಸಲು ಜಿಲ್ಲಾಧಿಕಾರಿಗಳು, ವಿಜಯಪುರ ರವರಿಂದ ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.

ಹೆಚ್ಚಿನ ವಿವರಗಳಿಗಾಗಿ https://eproc.karnataka.gov.in ನಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಟೆಂಡರ್ ಇಂಡೆಂಟ್ ನಂ: RD/2023-24/IND0120

ಟೆಂಡರ್ ದಾಖಲಿಸಲು ಕೊನೆಯ ದಿನಾಂಕ: 08.02.2024, ಸಾಯಂಕಾಲ 5.00 ಗಂಟೆಯೊಳಗಾಗಿ

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಛೇರಿಗೆ ಹಾಗೂ ಸಂಬಂಧಪಟ್ಟ ಸಂಕಲನದ ವಿಷಯ ನಿರ್ವಾಹಕರ ಮೊ ನಂ. 6360439939 ಅಥವಾ ಕಾರ್ಯಾಲಯದ ದೂರವಾಣಿ ಸಂಖ್ಯೆ: 08352–250021 ಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಜಿಲ್ಲಾಧಿಕಾರಿಗಳು, ವಿಜಯಪುರ.

ವಾಸಾಸಂಇ/ವಿಜಯಪುರ/434/ಕೆಎಸ್‌ಎಂಸಿಎ/2023–24

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್,
ಬೆಂಗಳೂರು–560 001. ಕರ್ನಾಟಕ ರಾಜ್ಯ, ಭಾರತ.
ಫೋನ್: 25581383, 25589112, 25589113, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್: https://kspcb.karnataka.gov.in

ಸಂಖ್ಯೆ: ಮಾನಿಮಂ/40/17ನೇ ಪ್ರವರ್ಗ/ಹೆಚ್‌ಪಿಇ/ಇ.ಪಿ.ಎಚ್/2023/5540 ದಿನಾಂಕ: 30.01.2024

ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ

ಮೆ॥ ಕೋರಮಂಡಲ್ ಶುಗರ್ಸ್ ಲಿಮಿಟೆಡ್, ಇವರು ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕು, ಮಾಕವಳ್ಳಿ ಗ್ರಾಮದ ಸರ್ವೇ ನಂ.151, 158 ರಲ್ಲಿ ಹಾಲಿ ಇರುವ ಕಬ್ಬು ಅರೆಯುವ ಘಟಕದ ಸಾಮರ್ಥ್ಯವನ್ನು ಡಿಸ್ಟಿಲರಿಗೆ ಕಚ್ಚಾ ವಸ್ತು ಪೂರೈಸಲು 4800 ಟಿಸಿಡಿ ಇಂದ 6000 ಟಿಸಿಡಿಗೆ ಹೆಚ್ಚಿಸುವುದು, ಹೊಸದಾಗಿ ಮಲ್ಟಿಫೀಡ್ ಸ್ಟಾಕ್ ಆಧಾರಿತ (ಕಬ್ಬಿನ ರಸ/ಸಿ–ಮೊಲ್ಯಾಸಸ್/ಬಿ–ಮೊಲ್ಯಾಸಸ್/ಧಾನ್ಯ) 150 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಿಲರಿ ಘಟಕ ಸ್ಥಾಪಿಸಿ ಎಥನಾಲ್ ಉತ್ಪಾದಿಸುವುದು ಹಾಗೂ 5 ಮೆಗಾವ್ಯಾಟ್ ಸಾಮರ್ಥ್ಯದ ಸಹ–ವಿದ್ಯುತ್ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಈ ಬಗ್ಗೆ ಸಾರ್ವಜನಿಕ ಪರಿಸರ ಸಭೆ ನಡೆಸಲು ಉದ್ದೇಶಿಸಲಾಗಿದೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14.9.2006ರ (ತಿದ್ದುಪಡಿ ದಿನಾಂಕ: 09.05.2022) ಪ್ರಕಾರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಭಾರತ ಸರ್ಕಾರ, ಇವರಿಂದ ಪೂರ್ವ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ Terms of Reference ಪತ್ರ ಸಂಖ್ಯೆ: J-11011/565/2010-IA-II(I) ದಿನಾಂಕ: 15.03.2023 ರಂತೆ ಹಾಗೂ ಉದ್ದಿಮೆ ನಿವೇದನೆ ಪತ್ರ ಮಂಡಳಿಯಲ್ಲಿ ಸ್ವೀಕೃತಿ ದಿನಾಂಕ: 22.06.2023 ರ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿದೆ:

1. **ಸಂಸ್ಥೆಯ ಹೆಸರು ಮತ್ತು ವಿಳಾಸ:** ಮೆ॥ ಕೋರಮಂಡಲ್ ಶುಗರ್ಸ್ ಲಿಮಿಟೆಡ್, ಮಾಕವಳ್ಳಿ ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
2. **ಉದ್ದೇಶಿತ ಯೋಜನೆಯ ಸ್ಥಳ :** ಸರ್ವೇ ನಂ.151 & 158 ಮಾಕವಳ್ಳಿ ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
3. **ಉದ್ದೇಶಿತ ಕಾರ್ಖಾನೆಯ ಯೋಜನೆ:** ಹಾಲಿ ಇರುವ ಕಬ್ಬು ಅರೆಯುವ ಘಟಕದ ಸಾಮರ್ಥ್ಯವನ್ನು ಡಿಸ್ಟಿಲರಿಗೆ ಕಚ್ಚಾ ವಸ್ತು ಪೂರೈಸಲು 4800 ಟಿಸಿಡಿ ಇಂದ 6000 ಟಿಸಿಡಿಗೆ ಹೆಚ್ಚಿಸುವುದು, ಹೊಸದಾಗಿ ಮಲ್ಟಿಫೀಡ್ ಸ್ಟಾಕ್ ಆಧಾರಿತ (ಕಬ್ಬಿನ ರಸ/ಸಿ–ಮೊಲ್ಯಾಸಸ್/ಬಿ–ಮೊಲ್ಯಾಸಸ್/ಧಾನ್ಯ) 150 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಿಲರಿ ಘಟಕ ಸ್ಥಾಪಿಸಿ ಎಥನಾಲ್ ಉತ್ಪಾದಿಸುವುದು ಹಾಗೂ 5 ಮೆಗಾವ್ಯಾಟ್ ಸಾಮರ್ಥ್ಯದ ಸಹ–ವಿದ್ಯುತ್ ಘಟಕವನ್ನು ಸ್ಥಾಪಿಸುವುದು.
4. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ: 06.03.2024 (ಬುಧವಾರ) ಸಮಯ: ಬೆಳಿಗ್ಗೆ 11.00 ಗಂಟೆ. ಸ್ಥಳ: ಯೋಜನಾ ಸ್ಥಳ, ಮೆ॥ ಕೋರಮಂಡಲ್ ಶುಗರ್ಸ್ ಲಿಮಿಟೆಡ್, ಸರ್ವೇ ನಂ.151 & 158, ಮಾಕವಳ್ಳಿ ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.**
5. **ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ:** ಅ) ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ. ಆ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಮಂಡ್ಯ ಜಿಲ್ಲೆ, ಮಂಡ್ಯ. ಇ) ಜಿಲಾ ಕೈಗಾರಿಕಾ ಕೇಂದ್ರ, ಮಂಡ್ಯ ಜಿಲ್ಲೆ, ಮಂಡ್ಯ. ಈ) ಮಾಕವಳ್ಳಿ ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ. ಉ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಅಸೆಸ್‌ಮೆಂಟ್ ನಂ.ಡಿ3/3364 ಕೆ.ಎಲ್.934, ಪಿ.ಇ.ಎಸ್, ಇಂಜಿನಿಯರಿಂಗ್ ಕಾಲೇಜು ರಸ್ತೆ, (ಸರ್ಕಾರಿ ಮಹಾವಿದ್ಯಾಲಯ ಹಿಂಭಾಗ), ಮಂಡ್ಯ–571401. ಊ) ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034. ಋ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ.

ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: kspcb.karnataka.gov.in ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ: ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಏಕೈಕ ಆದಾಯದ ಮೇಲೆ ಅವಲಂಬಿತರಾಗಬೇಡಿ. ಎರಡನೇ ಆದಾಯ ಮೂಲವನ್ನು ಸೃಷ್ಟಿಸಲು ಹೂಡಿಕೆ ಮಾಡಿ.

-ವಾರನ್ ಬಫೆಟ್

ಭರವಸೆಯ ಮಾತು, ಸಾಧನೆಗಳ ಬಣ್ಣನೆ ಹೊರೆಯೂ ಇಲ್ಲ, ಕೊಡುಗೆಯೂ ಇಲ್ಲ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಗುರುವಾರ ಮಂಡಿಸಿರುವ ಮಧ್ಯಂತರ ಬಜೆಟ್‌ನಲ್ಲಿ ಅಚ್ಚರಿಯ ಯಾವ ಘೋಷಣೆಗಳೂ ಇಲ್ಲ. ಹಾಗೆಯೇ ಪರೋಕ್ಷ ಅಥವಾ ನೇರ ತೆರಿಗೆ ಹೆಚ್ಚಳದ ಕ್ರಮಗಳೂ ಇಲ್ಲ. ಇನ್ನು ಕೆಲವೇ ವಾರಗಳಲ್ಲಿ ಲೋಕಸಭಾ ಚುನಾವಣೆ ಎದುರಾಗಲಿದೆ. ಈ ಹೊತ್ತಿನಲ್ಲಿ ಮಂಡಿಸಿರುವ ಈ ಮಧ್ಯಂತರ ಬಜೆಟ್‌ನಲ್ಲಿ ಭಾರಿ ಘೋಷಣೆಗಳು ಯಾವುವೂ ಇರುವುದಿಲ್ಲ ಎಂದು ಈ ಮೊದಲೇ ಹೇಳಿದ್ದ ನಿರ್ಮಲಾ ಅವರು, ಆ ಮಾತಿಗೆ ತಕ್ಕಂತೆ ನಡೆದುಕೊಂಡಿದ್ದಾರೆ. ಇವೇನೇ ಇದ್ದರೂ, ಚುನಾವಣೆ ಕಾಲದ ಈ ಬಜೆಟ್‌ನಲ್ಲಿ ಗಮನಿಸಬೇಕಾದ ಹಾಗೂ ಚಿಕಿತ್ಸಕ ದೃಷ್ಟಿಯಿಂದ ನೋಡಬೇಕಾದ ಹಲವು ಅಂಶಗಳು ಅಡಕವಾಗಿವೆ. ದೇಶದ ಜನರ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವ ಉದ್ದೇಶದಿಂದ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಬಂಡವಾಳ ವೆಚ್ಚವನ್ನು ವರ್ಷದಿಂದ ವರ್ಷಕ್ಕೆ ಜಾಸ್ತಿ ಮಾಡುತ್ತ ಬಂದಿದೆ. ಈ ಕ್ರಮದ ಮೂಲಕ ಆರ್ಥಿಕ ವ್ಯವಸ್ಥೆಯಲ್ಲಿ ಹೆಚ್ಚು ಚಲನಶೀಲತೆಯನ್ನು ತರುವ ಉದ್ದೇಶವನ್ನು ಅದು ಹೊಂದಿದೆ. ಸರ್ಕಾರದ ಕಡೆಯಿಂದ ಆಗುವ ಬಂಡವಾಳ ವೆಚ್ಚ ಹೆಚ್ಚಾದಂತೆಲ್ಲ, ಮಾರುಕಟ್ಟೆಯ ಶಕ್ತಿ ಹೆಚ್ಚುತ್ತದೆ. ಅದು ಜನರ ಹಣಕಾಸಿನ ಶಕ್ತಿಯನ್ನು ಕೂಡ ಕ್ರಮೇಣ ಜಾಸ್ತಿ ಮಾಡುತ್ತದೆ ಎಂಬ ತಾತ್ವಿಕತೆಯಲ್ಲಿ ಈ ಸರ್ಕಾರ ನಂಬಿಕೆ ಇರಿಸಿರುವಂತಿದೆ. ಈ ಬಾರಿ (2024–25ನೇ ಸಾಲಿಗೆ) ಬಂಡವಾಳ ವೆಚ್ಚಗಳಿಗಾಗಿ ಕೇಂದ್ರವು ದೇಶದ ಜಿಡಿಪಿಯ ಶೇಕಡ 3.4ರಷ್ಟು ಮೊತ್ತ ತೆಗೆದಿರಿಸಿದೆ. ಅಂದರೆ, ₹ 11.11 ಲಕ್ಷ ಕೋಟಿ. ದೇಶಕ್ಕಾಗಿ ಆಸ್ತಿ ಸೃಷ್ಟಿಸುವ ಇಂತಹ ವೆಚ್ಚಗಳಿಗೆ ಹೆಚ್ಚಿನ ಹಣ ವಿನಿಯೋಗಿಸುವುದು ಸ್ವಾಗತಾರ್ಹ.

ಜೀವನವೆಚ್ಚವು ಹೆಚ್ಚುತ್ತಲೇ ಇರುವ ಹೊತ್ತಿನಲ್ಲಿ, ಆದಾಯ ತೆರಿಗೆ ದರಗಳಲ್ಲಿ ತುಸು ಸಡಿಲಿಕೆ ಮಾಡಿ, ಜನರ ಕೈಯಲ್ಲಿ ಹೆಚ್ಚು ಹಣ ಉಳಿಯುವಂತೆ ಮಾಡಬಹುದಿತ್ತು

ಮಧ್ಯಂತರ ಬಜೆಟ್ ಮಂಡನೆಯ ಸಂದರ್ಭದಲ್ಲಿ ನಿರ್ಮಲಾ ಅವರು ಆಡಿದ ಕೆಲವು ಮಾತುಗಳು ತುಸು ಗಲಿಬಿಲಿ ಸೃಷ್ಟಿಸುವಂತೆಯೂ ಇದ್ದವು. ದೇಶದ ಹಣದುಬ್ಬರ ಪ್ರಮಾಣವನ್ನು ನಿಯಂತ್ರಣದಲ್ಲಿ ಇರಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಆದರೆ, ವಾಸ್ತವ ಈ ಮಾತಿಗೆ ತಕ್ಕಂತೆ ಇದೆಯೇ? 2023ರ ಏಪ್ರಿಲ್, ಮೇ, ಜೂನ್ ಮತ್ತು ಅಕ್ಟೋಬರ್ ತಿಂಗಳನ್ನು ಹೊರತುಪಡಿಸಿದರೆ ದೇಶದಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇಕಡ 5ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದೆ. ಚಿಲ್ಲರೆ ಹಣದುಬ್ಬರ ದರವು ಶೇ 4ರ ಆಸುಪಾಸಿನಲ್ಲಿ ಇರಬೇಕಿತ್ತು. 2023ರ ಹೆಚ್ಚಿನ ತಿಂಗಳುಗಳಲ್ಲಿ ಅದು ಶೇ 5ಕ್ಕಿಂತ ಹೆಚ್ಚಿತ್ತು. ಹಣದುಬ್ಬರವು ಹೆಚ್ಚಿನ ಮಟ್ಟದಲ್ಲಿ ಇದೆ ಎಂಬ ಕಾರಣಕ್ಕಾಗಿಯೇ ರೆಪೊ ದರ ಕಡಿಮೆ ಆಗುತ್ತಿಲ್ಲ. ಹೀಗಾಗಿ, ನಿರ್ಮಲಾ ಅವರ ಈ ಮಾತುಗಳು ವಾಸ್ತವಕ್ಕೆ ಹತ್ತಿರವಾಗಿರು ವಂತೆ ಕಾಣುತ್ತಿಲ್ಲ. ನಿರ್ಮಲಾ ಅವರು ದೇಶದ ಅರ್ಥ ವ್ಯವಸ್ಥೆಯು ಸ್ಥಿರವಾಗಿದೆ ಎಂದು, ಸರ್ವಾಂಗೀಣ ಅಭಿವೃದ್ಧಿಯು ಅನುಭವಕ್ಕೆ ಬರುತ್ತಿದೆ ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಆದರೆ, ಭಾರತದಲ್ಲಿ ವರಮಾನ ಹಂಚಿಕೆಯಲ್ಲಿ ಭಾರಿ ಪ್ರಮಾಣದ ಅಸಮಾನತೆ ಕೂಡ ಇದೆ ಎಂಬುದನ್ನು ಹಲವು ವರದಿಗಳು ಹೇಳಿವೆ. ರಾಷ್ಟ್ರೀಯ ವರಮಾನದ ಶೇಕಡ 57ರಷ್ಟು ಪಾಲು, ದೇಶದ ಶೇ 10ರಷ್ಟು ಜನರಲ್ಲಿ ಹಂಚಿಕೆ ಆಗುತ್ತಿದೆ ಎಂದು ಕೂಡ ವರದಿಗಳು ಹೇಳುತ್ತಿವೆ. ಅಲ್ಲದೆ, ದೇಶದಲ್ಲಿ ಈಗಲೂ 80 ಕೋಟಿ ಬಡವರಿಗೆ ಉಚಿತವಾಗಿ ಆಹಾರಧಾನ್ಯವನ್ನು ಕೊಡುತ್ತಿರುವುದಾಗಿ ಈ ಸರ್ಕಾರವೇ ಹೇಳಿದೆ. ಹೇಳಿಕೊಂಡಿರುವಷ್ಟು ಅಭಿವೃದ್ಧಿ ಸಾಧ್ಯವಾಗಿದ್ದರೆ, 80 ಕೋಟಿ ಮಂದಿಗೆ ಉಚಿತ ಆಹಾರಧಾನ್ಯ ಕೊಡಬೇಕಾದ ಸಂದರ್ಭ ಏಕೆ ಸೃಷ್ಟಿಯಾಯಿತು ಎಂಬುದು ಅರ್ಥವಾಗದ ಸಂಗತಿ. ಮುಂದಿನ ಐದು ವರ್ಷಗಳಲ್ಲಿ ಹಿಂದೆಂದೂ ಕಾಣದಂತಹ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು ಹಣಕಾಸು ಸಚಿವರು ಹೇಳಿದ್ದಾರೆ. ಪ್ರತಿ ಭಾರತೀಯನ ಆಕಾಂಕ್ಷೆಗಳೂ ಈಡೇರುವ ಸಾಧ್ಯತೆ ಇದೆ ಎಂದು ಅವರು ಬಹಳ ರಮ್ಯವಾದ ಚಿತ್ರಣವೊಂದನ್ನು ನೀಡಿದ್ದಾರೆ. ಕೋವಿಡ್ ನಂತರದಲ್ಲಿ ದೇಶದ ಶ್ರೀಮಂತ–ಬಡವರ ಪಟ್ಟಿಯಲ್ಲಿನ ಕೆಳಗಿನ ಶೇಕಡ 50ರಷ್ಟು ಮಂದಿಯ ಸಂಪತ್ತಿನ ಪ್ರಮಾಣವು ಕಡಿಮೆ ಆಗಿದೆ ಎಂಬುದನ್ನು ಅಂತರರಾಷ್ಟ್ರೀಯ ಸಂಸ್ಥೆಗಳ ವರದಿಗಳು ಹೇಳಿವೆ. ಮುಂದಿನ ಐದು ವರ್ಷಗಳಲ್ಲಿ ದೇಶವು ಅಭೂತಪೂರ್ವವಾದ ಅಭಿವೃದ್ಧಿಯನ್ನು ಕಾಣಲಿದೆ ಎಂದಾದರೆ, ಆ ಅಭಿವೃದ್ಧಿಯ ಪ್ರಯೋಜನವು ಕುಬೇರನಿಗೂ ಕುಚೇಲನಿಗೂ ಸಮನಾಗಿ ಸಿಗುವಂತಹ ಸನ್ನಿವೇಶ ಸೃಷ್ಟಿಸುವ ಹೊಣೆ ಆಡಳಿತಾರೂಢರ ಮೇಲೆಯೇ ಇರುತ್ತದೆ.

ಕೇಂದ್ರ ಸರ್ಕಾರವು ಹಣಕಾಸಿನ ನಿರ್ವಹಣೆಯಲ್ಲಿ ತನಗೆ ತಾನೇ ವಿಧಿಸಿಕೊಂಡ ಶಿಸ್ತಿನ ಚೌಕಟ್ಟೊಂದನ್ನು ಪಾಲಿಸಿಕೊಂಡು ಬರುತ್ತಿದೆ. ಅದು ಮಧ್ಯಂತರ ಬಜೆಟ್‌ನಲ್ಲಿಯೂ ಕಾಣುತ್ತಿದೆ. ಮುಂಬರುವ ಹಣಕಾಸು ವರ್ಷದಲ್ಲಿ ದೇಶದ ವಿತ್ತೀಯ ಕೊರತೆಯ ಪ್ರಮಾಣವನ್ನು ಶೇ 5.1ಕ್ಕೆ ಮಿತಿಗೊಳಿಸಲಾಗುವುದು ಎಂದು ಹೇಳಿರುವುದು ಮೆಚ್ಚುವಂಥದ್ದು. 2021–22ರ ಬಜೆಟ್ ಭಾಷಣದಲ್ಲಿ ನಿರ್ಮಲಾ ಅವರು, 2025–26ರೊಳಗೆ ವಿತ್ತೀಯ ಕೊರತೆಯನ್ನು ದೇಶದ ಜಿಡಿಪಿಯ ಶೇ 4.5ಕ್ಕೆ ಮಿತಿಗೊಳಿಸಲಾಗುವುದು ಎಂಬ ಭರವಸೆ ನೀಡಿದ್ದರು. ಆ ಮಾತಿಗೆ ಅನುಗುಣವಾಗಿ ಇದೆ ಈ ಬಾರಿಯ ಮಿತಿ. ಆರ್ಥಿಕ ಶಿಸ್ತಿಗೆ ಬದ್ಧವಾಗಿ ನಡೆದುಕೊಳ್ಳುವುದಾಗಿ ಹೇಳಿರುವ ಈ ಮಾತು ವಿದೇಶಿ ಹೂಡಿಕೆದಾರರಲ್ಲಿ ಭಾರತದ ಬಗ್ಗೆ ಹೆಚ್ಚು ವಿಶ್ವಾಸ ಮೂಡುವಂತೆ ಮಾಡಬಹುದು. ಆದಾಯ ತೆರಿಗೆ ದರಗಳಲ್ಲಿ ಯಾವ ಬದಲಾವಣೆಯನ್ನೂ ಮಾಡಿಲ್ಲ. ಇದು ಹೊರೆ ಹೆಚ್ಚಿಸದೆ ಇರುವ ಕೆಲಸ ಅನಿಸಿದರೂ, ಇರುವ ಹೊರೆಯನ್ನು ತಗ್ಗಿಸುವ ಕೆಲಸ ಅಲ್ಲ ಎಂಬುದೂ ನಿಜ. ಜೀವನವೆಚ್ಚವು ಹೆಚ್ಚುತ್ತಲೇ ಇರುವ ಹೊತ್ತಿನಲ್ಲಿ, ಆದಾಯ ತೆರಿಗೆ ದರಗಳಲ್ಲಿ ತುಸು ಸಡಿಲಿಕೆ ನೀಡಿ, ಜನರ ಕೈಯಲ್ಲಿ ಹೆಚ್ಚು ಹಣ ಉಳಿಯುವಂತೆ ಮಾಡುವ ಕೆಲಸವನ್ನು ಮಾಡಬಹುದಿತ್ತು. ಮಧ್ಯಂತರ ಬಜೆಟ್‌ನಲ್ಲಿ ವಾಸ್ತವಕ್ಕೆ ಹತ್ತಿರವಾದ ಮಾತುಗಳಿವೆ; ಹಾಗೆಯೇ, ವಾಸ್ತವಕ್ಕೆ ತಾಳೆಯಾಗದ ಮಾತುಗಳೂ ಇವೆ; ತೀರಾ ರಮ್ಯವಾದ ಚಿತ್ರಣಗಳೂ ಇದರಲ್ಲಿ ಇವೆ. ಈ ಮಧ್ಯಂತರ ಬಜೆಟ್ ಇವೆಲ್ಲವುಗಳ ಪಾಕದಂತೆ ಕಾಣುತ್ತಿದೆ.

ದಿನದ ಟ್ವೀಟ್

ವೈರುಧ್ಯದ ಹೇಳಿಕೆ

ಮೋದಿ ಆಡಳಿತದ ಅವಧಿಯಲ್ಲಿ ಸರಾಸರಿ ನೈಜ ಆದಾಯವು ಶೇಕಡ 50ರಷ್ಟು ಹೆಚ್ಚಳವಾಗಿದೆ ಎಂದು ಹಣಕಾಸು ಸಚಿವರು ಹೇಳುತ್ತಾರೆ. ಆದರೆ, ಸರ್ಕಾರದ ಅಂಕಿಅಂಶಗಳು (ಪಿಎಲ್‌ಎಫ್‌ಎಸ್ ಸಮೀಕ್ಷೆ), 2017-18ರಿಂದ 2022-23ರ ಅವಧಿಯಲ್ಲಿ ನೈಜ ಮಾಸಿಕ ನಿಯಮಿತ ವೇತನದ ಪ್ರಮಾಣ ಸುಮಾರು ಶೇ 25ರಷ್ಟು ಕಡಿಮೆಯಾಗಿರುವುದನ್ನು ತೋರಿಸುತ್ತಿವೆ. ಹೀಗಿರುವಾಗ, ಹಣಕಾಸು ಸಚಿವರ ಹೇಳಿಕೆಯನ್ನು ಸರ್ಕಾರಿ ಅಂಕಿಅಂಶದೊಂದಿಗೆ ಸರಿದೂಗಿಸುವುದು ಹೇಗೆ?

ಎಂ.ಕೆ.ವೇಣು, ಪತ್ರಕರ್ತ

ಕಿಡಿನುಡಿ

ಚಂಡೀಗಡ ಮೇಯರ್ ಚುನಾವಣೆಯಲ್ಲಿ ನಡೆದಿರುವ ವಂಚನೆಯು ಕ್ಯಾಮೆರಾದಲ್ಲಿ ಸಂಪೂರ್ಣವಾಗಿ ಸೆರೆಯಾಗಿದೆ. ಇದಕ್ಕೆ ಪ್ರತಿಕ್ರಿಯಿಸಲು ಕೋರ್ಟ್ ಒಂದು ಅಥವಾ ಎರಡು ದಿನಗಳ ಕಾಲಾವಕಾಶ ನೀಡಬೇಕಾಗಿತ್ತು. ಆದರೆ ಅದು 21 ದಿನಗಳನ್ನು ನೀಡಿದೆ! ಈ ಪ್ರಕ್ರಿಯೆಯೇ ಒಂದು ಶಿಕ್ಷೆಯಾಗಿದೆ. ವಿಳಂಬ ನ್ಯಾಯದಾನವೆಂದರೆ ನ್ಯಾಯವನ್ನು ನಿರಾಕರಿಸಿದಂತೆ. ರಾಜಕೀಯ ವಂಚನೆಯನ್ನು ಸಂವಿಧಾನಬದ್ಧ ನ್ಯಾಯಾಂಗದ ಮೂಲಕ ಕಠಿಣವಾಗಿ ಎದುರಿಸಬೇಕು.

ಸಂದೀಪ್ ಮನುಧಾನೆ, ಉದ್ಯಮಿ

25 ವರ್ಷಗಳ ಹಿಂದೆ

ಮಂಗಳವಾರ, 2-2-1999

• **ಬೆಲೆ ಏರಿಕೆಗೆ ಪ್ರತಿಭಟನೆ: ಬೆಂಬಲ ಮರುಪರಿಶೀಲನೆ– ಟಿಡಿಪಿ ಬೆದರಿಕೆ**

ನವದೆಹಲಿ, ಫೆ. 1 (ಪಿಟಿಐ)– ಪಡಿತರ ಅಕ್ಕಿ, ಸಕ್ಕರೆ, ಗೋಧಿ ಮತ್ತು ಯೂರಿಯ ಹಾಗೂ ಅಡುಗೆ ಅನಿಲದ ಬೆಲೆ ಏರಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಮಿತ್ರಪಕ್ಷಗಳಾದ ಅಣ್ಣಾಡಿಎಂಕೆ ಹಾಗೂ ತೃಣಮೂಲ ಕಾಂಗ್ರೆಸ್ ಕಟುವಾಗಿ ಟೀಕಿಸಿದ್ದರೆ, ಇನ್ನೊಂದು ಮಿತ್ರಪಕ್ಷ ತೆಲುಗುದೇಶಂ, ಸರ್ಕಾರದ ತಪ್ಪು ನೀತಿಯಿಂದಾಗಿ ಕಾಂಗ್ರೆಸ್‌ಗೆ ಬಲ ಹೆಚ್ಚುತ್ತಿದೆ ಎಂದು ಆರೋಪಿಸಿದೆ. ತಾನು ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಮರು ಪರಿಶೀಲಿಸುವುದಾಗಿ ಇಂದು ಪ್ರಕಟಿಸಿದೆ.

ವಾಜಪೇಯಿ ನೇತೃತ್ವದ ಸರ್ಕಾರದ ಉಳಿವಿಗೆ ಅಗತ್ಯವಾದ ಬಹುಮತವನ್ನು ಒದಗಿಸಿರುವ ತೆಲುಗುದೇಶಂ ಬೆಂಬಲ ವಾಪಸು ಪಡೆಯುವ ಸಾಧ್ಯತೆಯಿದೆ ಎನ್ನಲಾಗಿದ್ದು, ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ದಾವೋಸ್‌ನಿಂದ ನಾಳೆ ವಾಪಸಾದ ನಂತರ ಈ ನಿರ್ಧಾರ ಆಗುವುದು ಎನ್ನಲಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 2-2-1974

• **ನಗರಕ್ಕೆ ಕಾವೇರಿ ಪ್ರವೇಶ: ಇನ್ನು ಮುಂದೆ ಬಳಸುವ ನೀರಿಗೆ ಹೆಚ್ಚು ತೆರಿಗೆ**

ಬೆಂಗಳೂರು, ಫೆ. 1– ನಗರಕ್ಕೆ ಕಾವೇರಿ ನೀರನ್ನು ಸಂತಸದಿಂದ ಸ್ವಾಗತಿಸಿದ ಪೌರರಿಗೆ, ಇನ್ನು ಮುಂದೆ ಬಳಸುವ ನೀರಿಗೆ ಹೆಚ್ಚು ತೆರಿಗೆ ಕೊಡಬೇಕಾಗುವುದೆಂಬ ಎಚ್ಚರಿಕೆಯನ್ನು ನೀಡಲಾಯಿತು.

ಬಹಳ ದಿನಗಳಿಂದ ನಿರೀಕ್ಷಿಸಿದ್ದ ಕಾವೇರಿ ನೀರಿನ ನಗರ ಪ್ರವೇಶವನ್ನು ಸೌತ್‌ಎಂಡ್ ಸರ್ಕಲ್ ಬಳಿ ಏರ್ಪಡಿಸಿದ್ದ ಸಮಾರಂಭದಲ್ಲಿ ಇಂದು ಬೆಳಿಗ್ಗೆ ಹರ್ಷದಿಂದ ಪೌರರು ವೀಕ್ಷಿಸಿದರು.

ಸಮಾರಂಭದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಡಿ. ದೇವರಾಜ ಅರಸು, ನೀರಿನ ತೆರಿಗೆ ಹೆಚ್ಚಿಸುವುದು ಅಗತ್ಯವಿದ್ದಷ್ಟೇ ಅನಿವಾರ್ಯವೂ ಆಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳ ಬದಲಾದ ವರ್ತನೆಯ ಬಗ್ಗೆ ಗುರುಗಳಿಂದ ನಡೆಯಬೇಕಿದೆ ಸ್ವವಿಮರ್ಶೆ

ಗುರು, ಗೌರವ, ಗುರುತರ ಹೊಣೆ

ವಿಶ್ಲೇಷಣೆ

ಜ್ಯೋತಿ

ಶಾಲೆ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಗುರುಗಳಿಗೆ ಸೂಕ್ತ ಗೌರವವನ್ನು ಕೊಡುತ್ತಿಲ್ಲ ಎಂಬ ಆರೋಪದಲ್ಲಿ ಸತ್ಯಾಂಶ ಇರುವುದೇನೋ ನಿಜ. ಆದರೆ, ಈ ವಿದ್ಯಮಾನಕ್ಕೆ ವಿದ್ಯಾರ್ಥಿಗಳು ಮಾತ್ರ ಹೊಣೆಯೇ? ಗುರುವಿಗೆ ತನ್ನ ವಿದ್ಯಾರ್ಥಿಗಳ ವರ್ತನೆ ಬದಲಾಗಿದೆ ಅನ್ನಿಸಿರುವಂತೆ, ವಿದ್ಯಾರ್ಥಿಗಳಿಗೂ ತಮ್ಮ ಗುರು ಬದಲಾದಂತೆ ಕಾಣುತ್ತಿರಬಹುದಲ್ಲವೇ?

ಇಂದಿನ ಗುರು 'ನನ್ನ ವಿದ್ಯಾರ್ಥಿ ದಿನಗಳಲ್ಲಿ ಗುರುವಿಗೆ ಎಷ್ಟೊಂದು ಭಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದೆ. ಆದರೆ ನನ್ನ ವಿದ್ಯಾರ್ಥಿಗಳಿಂದು ಆ ಮಟ್ಟದ ಗೌರವವನ್ನು ನನಗೆ ಕೊಡುತ್ತಿಲ್ಲ' ಎಂದು ವಿಷಾದ ವ್ಯಕ್ತಪಡಿಸಿದಂತೆ, ವಿದ್ಯಾರ್ಥಿಗೂ 'ನನ್ನ ಹೆತ್ತವರು ಹೇಳುತ್ತಿದ್ದ ಗುರುವಿನ ಚಿತ್ರಣದಲ್ಲಿ ಕಲಿಕೆಯ ಕುರಿತ ಅಪಾರ ಕಾಳಜಿ ಮತ್ತು ಪ್ರೀತಿ ಹೊಂದಿದ ನಿಸ್ವಾರ್ಥ ವ್ಯಕ್ತಿತ್ವವಿತ್ತು. ಆದರೆ, ನನಗೆ ಪಾಠ ಮಾಡುತ್ತಿರುವ ಗುರುಗಳು ಹಾಗಿಲ್ಲವಲ್ಲ' ಎಂದೆನಿಸಬಹುದು ಅಲ್ಲವೇ? ಹಾಗಾಗಿ, ಕಾಲ ಬದಲಾದಂತೆ, ವಿದ್ಯಾರ್ಥಿ ಮಾತ್ರ ಬದಲಾಗಿಲ್ಲ, ಗುರುವೂ ಬದಲಾಗಿದ್ದಾನೆ, ಜೊತೆಗೆ ಪೋಷಕರ ಪಾತ್ರವೂ ಬದಲಾಗಿದೆ ಎನ್ನಬಹುದು.

ಹಿಂದಿನ ಕಾಲದ ಗುರುಗಳಿಗೆ ಹೋಲಿಸಿದರೆ, ವರ್ತಮಾನದ ಶಿಕ್ಷಕರಲ್ಲಿ ತಮ್ಮ ವಿದ್ಯಾರ್ಥಿಗಳ ಕುರಿತ ಕಾಳಜಿ, ತರಗತಿಗೆ ಸಿದ್ಧತೆ, ಸದಾ ಕಲಿಯುವ ಪ್ರವೃತ್ತಿ ಮತ್ತು ಮುಂದಿನ ಪೀಳಿಗೆಯನ್ನು ರೂಪಿಸುವ ಜವಾಬ್ದಾರಿ ಇರುವುದನ್ನು ನಾವು ನೋಡುತ್ತಿದ್ದೇವೆಯೇ ಎನ್ನುವ ಪ್ರಶ್ನೆಗಳ ಮೂಲಕ, ಈ ಬದಲಾವಣೆಯ ಇನ್ನೊಂದು ಆಯಾಮವನ್ನು ಗುರುತಿಸಬಹುದು. ಈ ಬದಲಾವಣೆ ಏಕಮುಖವಾಗಿರಲು ಸಾಧ್ಯವಿಲ್ಲ. ಹಾಗಾಗಿ, ಈ ವಿಷಯದ ಕುರಿತು ವಿಶ್ಲೇಷಿಸುವಾಗ, ಕಾಲಾನುಕ್ರಮವಾಗಿ ಗುರು, ವಿದ್ಯಾರ್ಥಿ, ಪೋಷಕರು ಮತ್ತು ಪ್ರಾಪಂಚಿಕ ಜೀವನದೃಷ್ಟಿಯಲ್ಲಿ ಆದಂತಹ ಬದಲಾವಣೆಗಳನ್ನು ಗುರುತಿಸುವುದು ಸೂಕ್ತ.

ಮೊದಲನೆಯದಾಗಿ, ಇಂದು ಅವರ ಮುಂದಿರುವ ಆದರ್ಶ ಮಾದರಿಗಳು ಯಾವುವು? ಮನೆಯಲ್ಲಿ ಕಾಣುವ ಹೆತ್ತವರ ಜೀವನಶೈಲಿ, ವಿದ್ಯಾರ್ಜನೆಯನ್ನು ವ್ಯವಹಾರವಾಗಿ ಕುದುರಿಸುವ ಗುರುಗಳು, ಸುತ್ತಲಿನ ಸಮಾಜದಲ್ಲಿ ಹೀರೊಗಳಾಗಿರುವ ಆತ್ಮವಂಚಕರು ಎಳೆಯ ವಯಸ್ಸಿನ ಮಕ್ಕಳ ಮೇಲೆ ಎಂತಹ ಪ್ರಭಾವ ಬೀರುತ್ತಿದ್ದಾರೆ ಎನ್ನುವ ವಿಚಾರವನ್ನು ಪರಿಶೀಲಿಸಬೇಕಾಗಿದೆ. ಹೆತ್ತವರಿಂದು ಮಕ್ಕಳನ್ನು ಸ್ವಪ್ರತಿಷ್ಠೆಗಾಗಿ ಅಂತರರಾಷ್ಟ್ರೀಯ ಮಟ್ಟದ ಶಾಲೆ– ಕಾಲೇಜುಗಳಿಗೆ ಸೇರಿಸಿ, ವಿಶ್ವಮಟ್ಟದ ಶಿಕ್ಷಣ ಕೊಡಿಸುತ್ತಿದ್ದೇವೆ ಎಂಬ ಭ್ರಮೆಯಲ್ಲಿದ್ದಾರೆ. ಇದು ಹೇಗಿದೆಯೆಂದರೆ, ಬೇರು ಭದ್ರವಾಗಿ ಊರದ ಗಿಡದಲ್ಲಿ ಸುಂದರ ಪುಷ್ಪವೊಂದು ಅರಳಲಿ ಎನ್ನುವ ಹೆಬ್ಬಯಕೆಯಂತೆ. ಹೀಗೆ, ಪೋಷಕರು ಮಕ್ಕಳಿಗೆ ತಮ್ಮ ಶಕ್ತಿ ಮೀರಿದ ಸೌಲಭ್ಯ ಒದಗಿಸಲೆಂದು ಶ್ರಮವಹಿಸುತ್ತಾರೆಯೇ ವಿನಾ ಅವರು ನಿರಂಕುಶಮತಿಗಳಾಗಿ ವಿಶ್ವಮಾನವ ಪ್ರಜ್ಞೆ ಬೆಳೆಸಿಕೊಂಡು ಉತ್ತಮ ಮನುಷ್ಯರಾಗಿ ಬಾಳಲಿ ಎಂದಲ್ಲ.

ಇಂದು, ಉತ್ತಮ ಜೀವನ ನಡೆಸಲು ಆರ್ಥಿಕ ಶ್ರೀಮಂತಿಕೆಯೊಂದೇ ರಾಜಮಾರ್ಗವೆಂದು ನಂಬಿರುವ ಪೋಷಕರು, ಅದನ್ನೇ ಮಕ್ಕಳಿಗೆ ದಾಟಿಸುತ್ತಿದ್ದಾರೆ. ಈ ಮೂಲಕ, 'ಜೀವನ ಒಂದು ಸೆಣಸಾಟದ ಸ್ಪರ್ಧೆಯಂತೆ', 'ಲಕ್ಷ್ಯವೆಲ್ಲಾ ಗುರಿಯತ್ತ ನೆಟ್ಟಿರಬೇಕು' ಎನ್ನುವಂತಹ ಹೇಳಿಕೆಗಳನ್ನು ದಿನನಿತ್ಯ ಮಕ್ಕಳಿಗೆ ಕಂಠಪಾಠ ಮಾಡಿಸಿ, ಅವರನ್ನು ಜೀವನದ ಸಣ್ಣ ಸಣ್ಣ ಖುಷಿಗಳಿಂದ ವಂಚಿತರನ್ನಾಗಿಸುತ್ತಿದ್ದಾರೆ. ಇದರೊಂದಿಗೆ, ಕೈಯಲ್ಲಿ ಅಂಟಿಸಿಕೊಂಡಿರುವ ಸ್ಮಾರ್ಟ್ ಫೋನ್, ಅವರನ್ನು ಡಿಜಿಟಲ್ ಲೋಕದಲ್ಲಿ ಸಂಪೂರ್ಣವಾಗಿ ಬ್ಯುಸಿಯಾಗಿಟ್ಟು, ವಾಸ್ತವ ಲೋಕದಲ್ಲಿ ಪರಕೀಯತೆ ಅನುಭವಿಸುವಂತೆ ಮಾಡುತ್ತಿದೆ. ಇದರ ಪರಿಣಾಮವಾಗಿ, ಮಕ್ಕಳಲ್ಲಿ ಸಹಜ ನಗು ಕಡಿಮೆಯಾಗಿ, ನಡೆಯಲ್ಲಿ ಯಾಂತ್ರಿಕತೆ ದಟ್ಟವಾಗಿ ಗೋಚರಿಸುತ್ತಿದೆ.

ತಮ್ಮ ಅಪ್ಪ–ಅಮ್ಮ ಅವರ ಹೆತ್ತವರು ಮತ್ತು ಗುರು-ಹಿರಿಯರನ್ನು ಹೇಗೆ ನಡೆಸಿಕೊಳ್ಳುತ್ತಿದ್ದಾರೆ ಎನ್ನುವುದೇ ಮಕ್ಕಳೆದುರು ಇರುವ ಆದರ್ಶ ಪರಂಪರೆ. ಮಕ್ಕಳು ತಮ್ಮ ಮುಂದಿರುವ ಮಾದರಿಗಳಿಂದ ತಮ್ಮ ಜೀವನದೃಷ್ಟಿಯನ್ನು ಕಟ್ಟಿಕೊಳ್ಳುತ್ತಾರೆ. ಆದ್ದರಿಂದ, ಅವರೆದುರು ತಮ್ಮ ನುಡಿ ಮತ್ತು ನಡೆಯ ನಡುವೆ ವ್ಯತ್ಯಾಸ ಇರದಂತೆ ಹೆತ್ತವರು ಹಾಗೂ ಗುರುಗಳು ಜಾಗ್ರತೆ ವಹಿಸುವುದು ಮುಖ್ಯವಾಗುತ್ತದೆ. ಹಿಂದೆ, ಹೆಚ್ಚಿನ ಮನೆಗಳಲ್ಲಿ ಅಮ್ಮ ಮನೆಯಲ್ಲಿದ್ದು ಮಕ್ಕಳ ಜೊತೆಗೆ ಬಹಳಷ್ಟು ಕಾಲ ಕಳೆಯುತ್ತಿದ್ದಳು. ಆದರೆ ಇಂದಿನ ಅಮ್ಮ ಮನೆಯೊಳಗೆ ಮತ್ತು ಹೊರಗೆ ದುಡಿಯುತ್ತಾ ದೈಹಿಕವಾಗಿ, ಮಾನಸಿಕವಾಗಿ ದಣಿದು, ಮಕ್ಕಳೊಂದಿಗೆ ಸಮಯ ಕಳೆಯಲು ಸಾಧ್ಯವಾಗುತ್ತಿಲ್ಲ. ಹಾಗೆಯೇ, ಹಿಂದೆ ಇದ್ದಂತೆ ಅಜ್ಜ, ಅಜ್ಜಿ ಮತ್ತು ಒಡಹುಟ್ಟಿದವರ ಆಸರೆಯೂ ಹೆಚ್ಚಿನ ಮಕ್ಕಳಿಗೆ ಸಿಗುತ್ತಿಲ್ಲ. ಹೀಗೆ, ಮನೆಯಲ್ಲಿ ಸಿಗದ ಸಂಸ್ಕಾರವು ಶಾಲೆಯಲ್ಲಾದರೂ ಸಿಗಬಹುದು ಎಂದುಕೊಂಡರೆ, ಅದು ಕೂಡ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಲಭ್ಯವಿಲ್ಲ. ಇಂದಿನ ಗುರುಗಳು ಪಠ್ಯ ಮುಗಿಸಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಅಣಿಗೊಳಿಸಿ, ಅವರು ಅತಿ ಹೆಚ್ಚಿನ ಅಂಕ ಗಳಿಸುತ್ತಾರೆ ಎಂಬುದನ್ನು ಖಾತರಿಗೊಳಿಸಿದರೆ, ಅಲ್ಲಿಗೆ ಅವರ ಜವಾಬ್ದಾರಿ ಮುಗಿಯುತ್ತದೆ. ಹಾಗಾಗಿ, ಸಂಸ್ಕಾರ ಎನ್ನುವುದು ಇಂದು 'ಔಟ್ ಆಫ್ ಸಿಲಬಸ್'.

ವಿದ್ಯಾರ್ಜನೆಯನ್ನು ಒಂದು ವ್ಯವಹಾರ ಎಂದು ಪರಿಗಣಿಸಿರುವ ಕೆಲವು ಗುರುಗಳು, ವಿದ್ಯಾರ್ಥಿಗಳನ್ನು ಕೂಡ ಅದರ ಒಂದು ಭಾಗವಾಗಿ ನೋಡುತ್ತಾರೆ.

ಅಧಿಕಾರ ಸ್ಥಾನದಲ್ಲಿರುವ, ಅಂಕಗಳನ್ನು ನಿರ್ಧರಿಸುವ ಪ್ರಭಾವ ಹೊಂದಿರುವ ಗುರುಗಳನ್ನು ಎದುರು ಹಾಕಿಕೊಳ್ಳುವುದಕ್ಕಿಂತ, ಅವರ ದೌರ್ಬಲ್ಯಗಳನ್ನು ಮೌನವಾಗಿ ಸಹಿಸಿಕೊಳ್ಳುವ, ಅವರೊಂದಿಗೆ ರಾಜಿ ಮಾಡಿಕೊಳ್ಳುವ ವಿದ್ಯಾರ್ಥಿಗಳನ್ನು ಕೂಡ ನಾವು ನೋಡುತ್ತಿರುತ್ತೇವೆ. ಆದರೆ, ಒಂದಂತೂ ನಿಜ. ಇಂತಹ ವಿದ್ಯಾರ್ಥಿಗಳು ತಮ್ಮ ಗುರುವಿನ ಮೇಲೆ ಯಾವುದೇ ಗೌರವ ಉಳಿಸಿಕೊಳ್ಳಲಾರರು. ಹಾಗಾಗಿ, ಗೌರವ ಕೊಡಲಿಲ್ಲ ಅನ್ನುವಷ್ಟೇ, ಗೌರವಕ್ಕೆ ಅರ್ಹತೆ ಪಡೆಯಬೇಕಾದುದು ಮುಖ್ಯವಾಗುತ್ತದೆ.

ಶಿಕ್ಷಕ ವೃತ್ತಿಯನ್ನು ಶ್ರೇಷ್ಠ ವೃತ್ತಿ ಎನ್ನುತ್ತೇವೆ. ಆದರೆ, ಅದರ ಘನತೆಗೆ ತಕ್ಕಂತೆ ನಡೆದುಕೊಳ್ಳುತ್ತಿದ್ದೇನೆಯೇ ಎನ್ನುವ ಸ್ವವಿಮರ್ಶೆಯನ್ನು ಗುರುವೂ ಮಾಡಿಕೊಳ್ಳಬೇಕಾಗಿದೆ. ಮಾಡಿದ ಕೆಲಸಕ್ಕೆ ಸಂಬಳ ಸಿಗುವುದರಿಂದ, ಹೆಸರಿಗೆ ಇದನ್ನು ವೃತ್ತಿ ಎನ್ನಬಹುದು. ಆದರೆ, ಹೆತ್ತವರ ನಂತರದ ಸ್ಥಾನದಲ್ಲಿ ನಿಂತು 'ಮಾತೃವಾತ್ಸಲ್ಯ'ದಿಂದ, ಜ್ಞಾನಾರ್ಜನೆಯೊಂದಿಗೆ ಪರಿಪೂರ್ಣವಾಗಿ ಬದುಕುವ ಕಲೆಯನ್ನು ಕೂಡ ಮಕ್ಕಳಿಗೆ ಹೇಳಿಕೊಡುತ್ತಾ, ಕೈಹಿಡಿದು ಮುನ್ನಡೆಸುವ ಕಾಯಕವಿದು. ಮೂಲತಃ, ಇದೊಂದು ಸಮಾಜಸೇವೆ.

ವಿಶೇಷವಾಗಿ, ಇಂದಿನ ಸಂದರ್ಭದಲ್ಲಿ ಹೆತ್ತವರು ಮಕ್ಕಳೊಂದಿಗೆ ಸಮಯ ಕಳೆಯುವುದು ದುರ್ಲಭವಾಗುತ್ತಿರುವಾಗ, ಉಳಿದ ಆಪ್ತ ಬಂಧುಬಳಗದವರೊಂದಿಗೆ ಒಡನಾಟ ಮತ್ತು ಸಹಬಾಳ್ವೆ ಕಡಿಮೆಯಾಗಿರುವಾಗ, ಬಹುತೇಕ ಎಲ್ಲಾ ಮಕ್ಕಳು ಹೆಚ್ಚಿನ ಸಮಯ ಕಳೆಯುವುದು ತಮ್ಮ ಶಾಲೆ ಕಾಲೇಜುಗಳಲ್ಲಿ. ಆದ್ದರಿಂದ, ಇಂದು ಗುರುವು ಹಿಂದಿಗಿಂತ ಹೆಚ್ಚಿನ ಗುರುತರ ಜವಾಬ್ದಾರಿಯ ಸ್ಥಾನದಲ್ಲಿದ್ದಾನೆ. ಹಾಗಾಗಿ, ವಿದ್ಯಾರ್ಥಿಗಳಲ್ಲಿ ನಾವಿಂದು ಸಂಸ್ಕಾರವನ್ನು ಕಾಣದಿದ್ದಲ್ಲಿ ಅದರ ಹೊಣೆಗಾರಿಕೆ ಗುರುವಿನ ಮೇಲೂ ಇದೆ.

ಸೂಕ್ಷ್ಮವಾಗಿ ಗಮನಿಸಿದರೆ, ಇಂದಿನ ವಿದ್ಯಾರ್ಥಿಗಳು ಗುರುಗಳನ್ನು ಮಾತ್ರ ಅಸಡ್ಡೆಯಿಂದ ನೋಡುತ್ತಿಲ್ಲ, ಎಲ್ಲಾ ಹಿರಿಯರನ್ನು ಕಡೆಗಣಿಸುತ್ತಿದ್ದಾರೆ, ಹೆಚ್ಚು ಸ್ವಹಿತಸಾಧಕರಾಗುತ್ತಿದ್ದಾರೆ. ಇದು, ವಿಶೇಷವಾಗಿ ವರ್ತಮಾನದ ತಲೆಮಾರಿನಲ್ಲಿ ಕಾಣಿಸುತ್ತಿರುವ ಅನಾರೋಗ್ಯಕರ ಬೆಳವಣಿಗೆ. ಇದು, ನಾನಾ ಬಾಹ್ಯ ಕಾರಣಗಳಿಂದ ಮಾರ್ಪಾಡಾದ ಸಮಾಜದ ಜೀವನದೃಷ್ಟಿ. ಈ ಪರಿಸ್ಥಿತಿ ಇನ್ನಷ್ಟು ಹದಗೆಡದಂತೆ ಎಳೆಯ ಮನಸ್ಸುಗಳಿಗೆ ತಿಳಿಹೇಳಬೇಕಾದ ಜವಾಬ್ದಾರಿ ಹೆತ್ತವರಿಗಿರುವಷ್ಟೇ ಗುರುಗಳಿಗೂ ಇದೆ.

ಇದೇನೂ ತೀವ್ರ ಹತಾಶೆ ಪಡಬೇಕಾದ ವಿದ್ಯಮಾನವೇನಲ್ಲ. ಗುರುಗಳನ್ನು ಅಭಿಮಾನದಿಂದ ನೋಡುವ, ಅವರು ನಿಸ್ವಾರ್ಥದಿಂದ ಹಾಕಿಕೊಟ್ಟ ಮಾರ್ಗದಲ್ಲಿ ವಿಶ್ವಾಸದಿಂದ ನಡೆಯುವ ವಿದ್ಯಾರ್ಥಿಗಳನ್ನು ಇಂದಿಗೂ ನಾವು ನೋಡಬಹುದು. ತಮ್ಮ ವೃತ್ತಿಯನ್ನು ಶ್ರದ್ಧೆಯಿಂದ ಮಾಡುವ ಗುರುಗಳೂ ಕಾಣಸಿಗುತ್ತಾರೆ. ಮಕ್ಕಳನ್ನು ಸಂಸ್ಕಾರದಿಂದ ಬೆಳೆಸುತ್ತಿರುವ ಹೆತ್ತವರೂ ಇದ್ದಾರೆ. ಹಾಗಾಗಿ, ವಿದ್ಯಾರ್ಥಿಗಳು, ಗುರುಗಳು ಮತ್ತು ಪೋಷಕರು ಎಲ್ಲರೂ ವ್ಯಾವಹಾರಿಕ ಜೀವನದೃಷ್ಟಿ ಬೆಳೆಸಿಕೊಂಡಿದ್ದಾರೆ ಎಂದು ಸಾರಾಸಗಟಾಗಿ ಹೇಳಲಾಗದು. ಈ ಸಂಬಂಧಗಳಲ್ಲಿ ಪರಸ್ಪರ ಕಾಳಜಿ, ಪ್ರೀತಿ ಮತ್ತು ಗೌರವ ಇನ್ನೂ ಉಳಿದುಕೊಂಡಿದೆ. ಆದರೆ, ಈ ಉದಾತ್ತ ಆಯಾಮದ ಮಹತ್ವದ ಅರಿವನ್ನು ಜಾಗೃತಗೊಳಿಸಿ ಪಸರಿಸುವ ಕಾರ್ಯ ಆಗಬೇಕಷ್ಟೆ.

ಲೇಖಕಿ: ಸಹಾಯಕ ಪ್ರಾಧ್ಯಾಪಕಿ, ತುಮಕೂರು ವಿಶ್ವವಿದ್ಯಾಲಯ, ತುಮಕೂರು

ಚುರುಮುರಿ

ಚಿಪ್ಪಿಂಗ್ ನ್ಯೂಸ್!

• ಬಿ.ಎನ್.ಮಲ್ಲೇಶ್

'ಕೊನಿಗೂ ಎಲಾನ್ ಮಸ್ಕು ಮನುಷ್ಯನ ಮಿದುಳಿಗೆ ಚಿಪ್ ಅಳವಡಿಸೇಬಿಟ್ನಂತೆ ನೋಡ್ರಲೆ...' ದುಬ್ಬೀರ ಹರಟೆಕಟ್ಟೇಲಿ ಪೇಪರ್‌ನಾಗಿನ ಸುದ್ದಿ ಓದಿ ಹೇಳಿದ.

'ಓ... ಅಂದ್ರೆ ಇದು ಚಿಪ್ಪಿಂಗ್ ನ್ಯೂಸು!' ಗುಡ್ಡೆ ನಕ್ಕ.

'ಮಿದುಳಿಗೆ ಚಿಪ್ಪಾ? ಅದ್ರಿಂದ ಏನ್ ಪ್ರಯೋಜನ?' ಮಂಜಮ್ಮನಿಗೆ ಕುತೂಹಲ.

'ಪ್ರಯೋಜನ ಬಾಳದಾವು. ಇನ್ಮೇಲೆ ಮೊಬೈಲು, ಕಂಪ್ಯೂಟ್ರು ಬ್ಯಾಡೇ ಬ್ಯಾಡ. ಸುಮ್ನೆ ಮನಸ್ನಾಗೆ 'ಚಿಪ್, ದುಬ್ಬೀರಂಗೆ ಕಾಲ್ ಮಾಡು' ಅಂದ್ರೆ ಸಾಕು, ಟಕ್ ಅಂತ ಚಿಪ್ ಆನ್ ಆಗಿ ದುಬ್ಬೀರನ ಮೊಬೈಲ್‌ಗೆ ಕಾಲ್ ಮಾಡ್ತತಿ. 'ಮಂಡ್ಯ ಟಿಕೆಟ್ಟು ಕುಮಾರಣ್ಣಂಗೋ ಸುಮಕ್ಕಂಗೋ ಹೇಳು' ಅಂದ್ರೆ ಗೆಸ್ ಮಾಡಿ ಪಟ್ ಅಂತ ಹೇಳ್ತತಿ. ಇನ್ನೂ ಏನೇನೋ... ನಮ್ ಮಿದುಳು ಏನ್ ಹೇಳುತ್ತೋ ಅದ್ನ ಚಿಪ್ ಕೇಳ್ತತಿ' ತೆಪರೇಸಿ ವಿವರಿಸಿದ.

'ಅಲೆ ಇವ್ನ, ಹೌದಾ? ಚಿಪ್ ಅಂದ್ರೆ ಆನ್, ಚುಪ್ ಅಂದ್ರೆ ಆಫ್ ಆಗುತ್ತಾ?'

'ಅಷ್ಟೇ ಅಲ್ಲ, ಈ ಜಗತ್ತಿನಾಗಿರೋ ಯಾವುದೇ ಅಂಕಿ ಅಂಶ ಕೇಳು, ಎರಡು ಸೆಕೆಂಡ್‌ನಾಗೆ ಉತ್ತರ ಹೇಳ್ತತಿ. ಈ ಚಿಪ್‌ಗೆ ಟೆಲಿಪತಿ ಅಂತ ಹೆಸರಿಟ್ಟಾರೆ'.

'ಈ ಟೆಲಿಪತಿಗೆ ಇವತ್ತು ತಿರುಪತಿ ತಿಮ್ಮಪ್ಪಂಗೆ ಎಷ್ಟು ಕಾಣಿಕೆ ಬಿದ್ದು ಅನ್ನೋದೂ ಗೊತ್ತಾಗ್ತತಾ?' ಕೊಟ್ರೇಶಿ ಕೊಕ್ಕೆ.

'ಈಗ 'ಕೈ'ನಾಗಿರೋ ಲಕ್ಷ್ಮಣ ಮುಂದೆ ಕಮಲ ಸೇರ್ತಾರೋ ಇಲ್ಲೋ ಚಿಪ್ ಹೇಳ್ತತಾ?' ಗುಡ್ಡೆ ಪ್ರಶ್ನೆ.

'ಲೇಯ್, ರಾಮ ಇದ್ದ ಕಡಿ ಲಕ್ಷ್ಮಣ ಹೋಗ್ತಾನಪ, ಅದ್ನ ಚಿಪ್ ಕೇಳೇ ಹೇಳ್ಬೇಕಾ?' ದುಬ್ಬೀರ ನಕ್ಕ.

'ಈಗ ಎದುರುಗಡಿ ಇರೋನ ತೆಲಿ ಒಳಗೆ ಏನೈತಿ, ಅವನ ಜೇಬಿನಾಗೆ ಏನೈತಿ ಎಲ್ಲ ಚಿಪ್ ಹೇಳ್ತತಾ?' ಕೊಟ್ರೇಶಿ ಪ್ರಶ್ನೆ.

'ಜೇಬಿನಾಗ? ಯಾಕೆ?'

'ಅಲ್ಲ, ಈ ಗುಡ್ಡೆ ಜೇಬಿನಾಗೆ ಎಷ್ಟು ರೊಕ್ಕದಾವು ಅಂತ ಗೊತ್ತಾದ್ರೆ ಎಲ್ರಿಗೂ ಚಾ ಹೇಳಬೋದಲ್ಲ ಅಂತ'. ಕೊಟ್ರೇಶಿ ಲೆಕ್ಕಾಚಾರಕ್ಕೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ನೇಮಕಾತಿ ಪ್ರಕ್ರಿಯೆ: ಅಭ್ಯರ್ಥಿಸ್ನೇಹಿ ಆಗಲಿ

ನೇಮಕಾತಿಯಲ್ಲಿನ ಭ್ರಷ್ಟಾಚಾರವಲ್ಲದೆ ಅದನ್ನು ತಡೆಯುವ ಸಲುವಾಗಿ ಅನುಸರಿಸುವ ಕ್ರಮಗಳಿಂದಲೂ ಬಲಿಪಶುಗಳಾಗುವವರು ಅಭ್ಯರ್ಥಿಗಳೇ ಎಂಬುದು ವಿಪರ್ಯಾಸ

• ಎಚ್.ಕೆ.ಶರತ್

ಸರ್ಕಾರಿ ಹುದ್ದೆಗಳ ಭರ್ತಿಗಾಗಿ ನಡೆಯುವ ನೇಮಕಾತಿ ಪ್ರಕ್ರಿಯೆಯಲ್ಲಿನ ಭ್ರಷ್ಟಾಚಾರ ಮತ್ತು ಅಕ್ರಮಗಳಿಗೆ ಕಡಿವಾಣ ಹಾಕಲು ಸಂಬಂಧಪಟ್ಟ ಪರೀಕ್ಷಾ ಪ್ರಾಧಿಕಾರ, ನೇಮಕಾತಿ ಆಯೋಗ ಹಾಗೂ ಇಲಾಖೆಗಳು ಮುತುವರ್ಜಿ ತೋರುವುದು ಸ್ವಾಗತಾರ್ಹ ಬೆಳವಣಿಗೆ. ಆದರೆ, ಅಕ್ರಮಗಳಿಗೆ ಕಡಿವಾಣ ಹಾಕುವ ನೆಪದಲ್ಲಿ ಕೈಗೊಳ್ಳುವ ಮುಂಜಾಗ್ರತಾ ಕ್ರಮಗಳು, ಅಕ್ರಮಗಳ ಮೂಲಕ್ಕೆ ಕೈ ಹಾಕದೆ ಬರೀ ಕಣ್ಣೊರೆಸುವ ತಂತ್ರಗಳಾಗಿ ಬಳಕೆಯಾಗುವುದೂ ಇದೆ. ಹೀಗೆ, ನೇಮಕಾತಿ ಪ್ರಕ್ರಿಯೆಯಲ್ಲಿನ ಭ್ರಷ್ಟಾಚಾರ ಮತ್ತು ಅದನ್ನು ತಡೆಗಟ್ಟುವ ಸಲುವಾಗಿ ರೂಪಿಸುವ ನಿಯಮಾವಳಿ ಎರಡರಿಂದಲೂ ಹೆಚ್ಚು ತೊಂದರೆಗೆ ಒಳಗಾಗುತ್ತಿರುವವರು ಅಭ್ಯರ್ಥಿಗಳೇ.

ನೇಮಕಾತಿ ಪ್ರಕ್ರಿಯೆ ನಡೆಸುವವರಲ್ಲಿ ಅಭ್ಯರ್ಥಿಗಳ ಕುರಿತು ಯಾವ ಪರಿ ತಾತ್ಸಾರ ಮನೋಭಾವ ಬೇರೂರಿದೆ ಎಂಬುದನ್ನು ಅರಿಯಲು, ಒಟ್ಟಾರೆ ನೇಮಕಾತಿ ಪ್ರಕ್ರಿಯೆಯನ್ನು ಗಮನಿಸಿದರೂ ಸಾಕು. 3,000ಕ್ಕೂ ಹೆಚ್ಚು 'ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್'ಗಳ ನೇಮಕಾತಿಗಾಗಿ ಜನವರಿ 28ರಂದು ನಡೆದ ಲಿಖಿತ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳು ಬಹಳಷ್ಟು ತೊಂದರೆ ಅನುಭವಿಸಿದರು. ಪೊಲೀಸ್ ಇಲಾಖೆಯ ಉಸ್ತುವಾರಿಯಲ್ಲಿ ನಡೆದ ಈ ಪರೀಕ್ಷೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ತಮಗೆ ಅನುಕೂಲಕರವಾದ ಪರೀಕ್ಷಾ ಕೇಂದ್ರ ಆರಿಸಿಕೊಳ್ಳುವ ಆಯ್ಕೆಯನ್ನೇ ನೀಡಲಾಗಿರ ಲಿಲ್ಲ. ಅಕ್ರಮಗಳಿಗೆ ಕಡಿವಾಣ ಹಾಕುವ ನೆಪದಲ್ಲಿ ಅಭ್ಯರ್ಥಿಗಳು ದೂರದ ಊರುಗಳಿಗೆ ಪ್ರಯಾಣಿಸಿ ಪರೀಕ್ಷೆ ಬರೆಯುವ ಸನ್ನಿವೇಶ ಸೃಷ್ಟಿಸಲಾಯಿತು.

ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳ ಪೈಕಿ ಹಲವರು ಬಡತನದ ಹಿನ್ನೆಲೆಯವರು. ಪ್ರಯಾಣ ವೆಚ್ಚ ಭರಿಸಲೇ ಏದುಸಿರು ಬಿಡುವವರು. ಇನ್ನು ವಿಶ್ರಾಂತಿಗಾಗಿ ಲಾಡ್ಜ್‌ಗಳಲ್ಲಿ ತಂಗುವುದು ಕೆಲವರ ಪಾಲಿಗಂತೂ ಅಸಾಧ್ಯವೇ ಆಗಿತ್ತು. ಹೀಗಾಗಿ, ರೈಲು, ಬಸ್ ನಿಲ್ದಾಣ ಸೇರಿದಂತೆ ಸಿಕ್ಕ ಸಿಕ್ಕಲ್ಲಿ ಮಲಗಿ ವಿಶ್ರಾಂತಿ ಪಡೆದದ್ದೂ ಇದೆ. ಇನ್ನು ಪರೀಕ್ಷಾ ಕೊಠಡಿಯೊಳಗಿನ ಅಕ್ರಮ ತಡೆಯುವ ಸಲುವಾಗಿ ತುಂಬು ತೋಳಿನ ಶರ್ಟ್ ಧರಿಸುವುದಕ್ಕೂ ನಿರ್ಬಂಧ ಹೇರಲಾಗಿತ್ತು. ನೇಮಕಾತಿ ಪ್ರಕ್ರಿಯೆಯಲ್ಲಿನ ಅಕ್ರಮಗಳನ್ನು ತಡೆಯುವ ಸಲುವಾಗಿ ಕೈಗೊಳ್ಳುವ ಇಂತಹ ಕ್ರಮಗಳು, ಅಭ್ಯರ್ಥಿಗಳನ್ನು ಹೆಚ್ಚು ಹೈರಾಣಾಗಿಸುವಲ್ಲಿ ಕಾಣುವಷ್ಟು ಯಶಸ್ಸನ್ನು ಅಕ್ರಮಗಳಿಗೆ ತಡೆಯೊಡ್ಡುವಲ್ಲಿ ಕಾಣಲಾರವು.

ಪ್ರಶ್ನೆಪತ್ರಿಕೆ ಸೋರಿಕೆ, ಪರೀಕ್ಷಾ ಕೇಂದ್ರದಲ್ಲಿ ನಕಲು ಮಾಡಲು ಅವಕಾಶ ನೀಡುವುದು ಸೇರಿದಂತೆ ನೇಮಕಾತಿ ಪ್ರಕ್ರಿಯೆಯಲ್ಲಿ ನಡೆಯುವ ತರಹೇವಾರಿ ಅಕ್ರಮಗಳಿಗೆ ಮೂಲ ಕಾರಣ ಆಯಾ ಪರೀಕ್ಷೆಗಳನ್ನು ನಡೆಸುವ ಪ್ರಕ್ರಿಯೆಯಲ್ಲಿ ಭಾಗಿಯಾಗುವ ವ್ಯಕ್ತಿಗಳೇ ವಿನಾ ಅಭ್ಯರ್ಥಿಗಳಲ್ಲ. ಲಿಖಿತ ಪರೀಕ್ಷೆಯ ಉತ್ತರ ಪತ್ರಿಕೆ (ಓಎಂಆರ್) ತಿದ್ದುವುದು ಸದ್ಯ ಚಾಲ್ತಿಯಲ್ಲಿರುವ ಅಡ್ಡದಾರಿಗಳ ಪೈಕಿ ಬಹುಮುಖ್ಯವಾದುದು. ಇದನ್ನು ಮಾಡಲು ಒಂದು ವ್ಯವಸ್ಥಿತ ಜಾಲವೇ ಇರಬೇಕಲ್ಲವೇ?

'ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್' ನೇಮಕಾತಿ ಪರೀಕ್ಷೆ ಬರೆದ ಅಭ್ಯರ್ಥಿಗಳ ಪೈಕಿ ಯಾರೆಲ್ಲಾ ಹತ್ತಕ್ಕಿಂತ ಕಡಿಮೆ ಪ್ರಶ್ನೆಗಳಿಗೆ ಉತ್ತರಿಸಿದರೋ ಅಂತಹ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯನ್ನು ಪ್ರತ್ಯೇಕವಾಗಿ ದಾಖಲಿಸಿ ಇಟ್ಟುಕೊಳ್ಳಲಾಯಿತು. ಮೇಲ್ನೋಟಕ್ಕೆ ಇದು ಕೂಡ ಅಕ್ರಮ ತಡೆಗಟ್ಟಲು ನೆರವಾಗಲಿದೆ ಎನ್ನುವ ಆಶಾಭಾವ ಮೂಡಿಸಿದರೂ, ಆ ದಿಸೆಯಲ್ಲಿ ಇದರ ಕೊಡುಗೆ ನಗಣ್ಯವೇ.

ನೂರು ಬಹು ಆಯ್ಕೆಯ ಪ್ರಶ್ನೆಗಳ ಪೈಕಿ ಬರೀ 11 ಪ್ರಶ್ನೆಗಳಿಗೆ ಉತ್ತರಿಸಿದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯೂ ಇಲ್ಲಿ ಗಣನೆಗೆ ಬರುವುದಿಲ್ಲ. ಅಭ್ಯರ್ಥಿಗಳಿಂದ ಹಣ ಪಡೆದು ಉತ್ತರಪತ್ರಿಕೆ ತಿದ್ದಿಸುವುದಾಗಿ ಆಶ್ವಾಸನೆ ನೀಡುವ ಜಾಲಕ್ಕೂ ಇಂತಹ ನಿಯಮಗಳ ಅರಿವಿರುತ್ತದೆ. ಅವರು, ಹನ್ನೊಂದೋ ಹನ್ನೆರಡೋ ಹದಿಮೂರೋ ಪ್ರಶ್ನೆಗಳಿಗಷ್ಟೇ ಉತ್ತರಿಸಿ ಉಳಿದವನ್ನು ಖಾಲಿ ಬಿಡಿ ಎನ್ನುವ ಸೂಚನೆ ನೀಡದಿರಲಾರರು ಎಂದು ಭಾವಿಸಬಹುದೇ? ಪರೀಕ್ಷೆ ನಡೆಸುವವರ ಬಳಿ ಕಡಿಮೆ ಪ್ರಶ್ನೆಗಳಿಗೆ ಉತ್ತರಿಸಿದವರ ನೋಂದಣಿ ಸಂಖ್ಯೆ ಸಂಗ್ರಹ ಆಗಿರುತ್ತದೆ. ಇದನ್ನು ಸಂಬಂಧಪಟ್ಟ ಜಾಲತಾಣದಲ್ಲಿ ಲಭ್ಯವಾಗಿಸದೇ ಹೋದಲ್ಲಿ ಈ ನಡೆಯು ವಿಶ್ವಾಸಾರ್ಹತೆ ಕಾಯ್ದುಕೊಳ್ಳುವಲ್ಲಿ ನೆರವಾಗಲಾರದು.



ಅಕ್ರಮಗಳಿಗೆ ಕಡಿವಾಣ ಹಾಕುವ ಇಚ್ಛಾಶಕ್ತಿ ಅಸಲಿಗೂ ಇದ್ದರೆ, ಅಭ್ಯರ್ಥಿಗಳಿಗೆ ಹೆಚ್ಚು ತೊಂದರೆ ಆಗದ ರೀತಿಯಲ್ಲಿ ನಿಯಮಾವಳಿಗಳನ್ನು ರೂಪಿಸಿ, ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಸಾಧ್ಯವಿದೆ. ಆದರೆ ಬಹುತೇಕ ಸಂದರ್ಭಗಳಲ್ಲಿ ಅಕ್ರಮಗಳ ಬೇರಿಗೆ ಕೈ ಹಾಕಲು ನೇಮಕಾತಿ ಪ್ರಕ್ರಿಯೆ ನಡೆಸುವವರಿಗೇ ಮನಸ್ಸಿರುವುದಿಲ್ಲ. ಅಷ್ಟಕ್ಕೂ ಅಕ್ರಮಗಳಲ್ಲಿ ಭಾಗಿಯಾಗುವ ಕೈಗಳು ಅವರವೇ ಅಲ್ಲವೇ?

ಅಕ್ರಮಗಳಿಗೆ ಕಡಿವಾಣ ಹಾಕುವುದಕ್ಕಿಂತ ಅಕ್ರಮಗಳನ್ನು ತಡೆಯಲು ಸೂಕ್ತ ಕ್ರಮ ಕೈಗೊಂಡಿದ್ದೇವೆ ಎಂದು ಬಿಂಬಿಸುವುದರಲ್ಲೇ ಪಟ್ಟಭದ್ರರಿಗೆ ಹೆಚ್ಚು ಲಾಭ. ನೇಮಕಾತಿಯಲ್ಲಿನ ಭ್ರಷ್ಟಾಚಾರವಲ್ಲದೆ ಅದನ್ನು ತಡೆಯುವ ಸಲುವಾಗಿ ಅನುಸರಿಸುವ ಕ್ರಮಗಳಿಂದಲೂ ಬಲಿಪಶುಗಳಾಗುವವರು ಅಭ್ಯರ್ಥಿಗಳೇ ಎಂಬುದು ವಿಪರ್ಯಾಸವಾದರೂ ವಾಸ್ತವ.

ಆಮೆಗತಿಯಲ್ಲಿ ಸಾಗುವ ನೇಮಕಾತಿ ಪ್ರಕ್ರಿಯೆ ಹಾಗೂ ಪ್ರಶ್ನೆಪತ್ರಿಕೆ ಸೋರಿಕೆಯ ಕಾರಣಕ್ಕೆ ನಡೆಯುವ ಮರುಪರೀಕ್ಷೆ ಇವೆಲ್ಲವೂ ಅಭ್ಯರ್ಥಿಗಳನ್ನು ಮತ್ತಷ್ಟು ಹತಾಶೆಗೆ ದೂಡುತ್ತವೆ. ಅದುಬಿಟ್ಟರೆ, ಸರ್ಕಾರಿ ನೇಮಕಾತಿ ವ್ಯವಸ್ಥೆ ಮೇಲಿನ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲಾರವು.

ವಾಚಕರ ವಾಣಿ

ಬಿಬಿಎಂಪಿಗೇಕೆ ವೈದ್ಯಕೀಯ ಕಾಲೇಜಿನ ಉಸಾಬರಿ?

ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು (ಬಿಬಿಎಂಪಿ) ವೈದ್ಯಕೀಯ ಕಾಲೇಜು ತೆರೆಯಲು ಯೋಜಿಸುತ್ತಿರುವ ಸುದ್ದಿಯನ್ನು ತಿಳಿದು, 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು' ಎಂಬ ಗಾದೆ ನೆನಪಾಯಿತು. ಬಿಬಿಎಂಪಿಗೆ ಮಾಡಲು ಬೇಕಾದಷ್ಟು ಕೆಲಸಗಳಿವೆ. ಅವುಗಳನ್ನು ಮರೆತು, ಕಾಲೇಜು ನಡೆಸಲು ಹೊರಟಿರುವುದನ್ನು ನೋಡಿ ನಗಬೇಕೊ, ಅಳಬೇಕೊ ತಿಳಿಯುತ್ತಿಲ್ಲ. ಬೆಂಗಳೂರಿನಲ್ಲಿ ರಸ್ತೆ, ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆಯಂತಹ ಮೂಲ ಸೌಕರ್ಯಗಳು ಹಾಳಾಗಿವೆ. ಮಳೆನೀರು ಸರಾಗವಾಗಿ ಹರಿದುಹೋಗಲು ಸಾಧ್ಯವಾಗದಂತಹ ಸ್ಥಿತಿ ಇದೆ. ನಗರ ವಿಪರೀತ ಬೆಳೆದಿದೆ. ಐ.ಟಿ. ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ನೆಲೆಯೂರಿವೆ. ನಗರದ ಬೆಳವಣಿಗೆಗೆ ತಕ್ಕಂತೆ ಮೂಲ ಸೌಕರ್ಯ ವೃದ್ಧಿ ಆಗಿಲ್ಲ. ಬಿಬಿಎಂಪಿ ಇಂತಹ ಸಮಸ್ಯೆಗಳ ನಿವಾರಣೆಗೆ ಗಮನ ಹರಿಸುವುದು ಸೂಕ್ತ.

ಕಡೂರು ಫಣಿಶಂಕರ್, ಬೆಂಗಳೂರು

ಶಾಂತಿಯುತ ಧರಣಿಗೆ ಪ್ರತಿರೋಧವೇಕೆ?!

ಅಯೋಧ್ಯೆಯಲ್ಲಿನ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ವಿರೋಧಿಸಿ ಕಾಂಗ್ರೆಸ್ ಮುಖಂಡ ಮಣಿಶಂಕರ್ ಅಯ್ಯರ್ ಅವರ ಪುತ್ರಿ ಸುರಣ್ಯಾ ಅವರು ತಮ್ಮ ಮನೆಯಲ್ಲಿ ಇತ್ತೀಚೆಗೆ ಧರಣಿ ನಡೆಸಿದ್ದರಿಂದ, 'ಈ ಕಾರ್ಯಕ್ರಮ ತಪ್ಪು ಎಂಬುದೇ ನಿಮ್ಮ ನಿಲುವಾದರೆ ಈ ಕಾಲೊನಿಯಿಂದ ಹೊರನಡೆಯಿರಿ' ಎಂದು ದಕ್ಷಿಣ ದೆಹಲಿಯ ಜಂಗ್‌ಪುರ ಕಾಲೊನಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘವು ಅಯ್ಯರ್ ಹಾಗೂ ಅವರ ಪುತ್ರಿಗೆ ಸೂಚಿಸಿರುವುದನ್ನು (ಪ್ರ.ವಾ., ಫೆ. 1) ತಿಳಿದು ಬೆಚ್ಚಿ ಬೀಳುವಂತಾಯಿತು. ಸುರಣ್ಯಾ ಅವರು ಬೀದಿಯಲ್ಲಿ ಧರಣಿ ಕುಳಿತು ಟ್ರಾಫಿಕ್ ಸಮಸ್ಯೆ ಉಂಟುಮಾಡಿಲ್ಲ. ಸಾಮಾಜಿಕ ಶಾಂತಿಗೆ ಭಂಗ ತಂದಿಲ್ಲ. ಪ್ರಜೆಗಳು ತಮ್ಮ ಪ್ರತಿರೋಧವನ್ನು ಶಾಂತಿಯುತವಾಗಿ ಧರಣಿ ಮೂಲಕ ವ್ಯಕ್ತಪಡಿಸಲೂ ಅಸಾಧ್ಯ ಎಂಬಂತಹ ವಾತಾವರಣ ಸೃಷ್ಟಿಯಾಗಿರುವುದು ದುರದೃಷ್ಟಕರ.

ನಾನು ಆದರ್ಶ ಪುರುಷ ಶ್ರೀರಾಮನಲ್ಲಿ ನಂಬಿಕೆ ಇಟ್ಟವನು. ಆತನ ಆದರ್ಶಗಳನ್ನು ನಾನು ರಾಮಾಯಣ ಗ್ರಂಥದಿಂದ ಕಂಡುಕೊಂಡಿದ್ದೇನೆಯೇ ವಿನಾ ಮೂರ್ತಿ ಪೂಜೆಯಿಂದ ಅಲ್ಲ. ಆದಾಗ್ಯೂ ನಾನು ಕೆಲವು ದಶಕಗಳಿಂದ ಯಾವುದೇ ದೇವಾಲಯಕ್ಕೆ ಆರಾಧನೆ ಕಾರಣಕ್ಕೆ ಹೋಗುವುದಿಲ್ಲ. ಅಲ್ಲಿಯ ವಾಸ್ತುಶಿಲ್ಪ, ಇತಿಹಾಸ, ಪೌರಾಣಿಕ ಹಿನ್ನೆಲೆ ತಿಳಿಯಲು ಹೋಗುತ್ತೇನೆ. ಶ್ರೀರಾಮನವಮಿ, ಗಾಂಧಿ ಜಯಂತಿ, ಹುತಾತ್ಮರ ದಿನದಂದು ಮಾಂಸಾಹಾರ ಸೇವನೆ, ಧೂಮಪಾನ, ಮದ್ಯಪಾನ ಮಾಡುವುದಿಲ್ಲ. ದೇವರ ಕಲ್ಪನೆ ಅವರವರ ಭಾವಕ್ಕೆ ಬಿಟ್ಟದ್ದು. ಇಂಥದೇ ದೇವರನ್ನು ಪೂಜಿಸಿ ಎನ್ನುವುದು ಪ್ರಕೃತಿ ನಿಯಮಕ್ಕೆ ವಿರುದ್ಧ ಅಲ್ಲವೇ? ವ್ಯಕ್ತಿಗತವಾದ ಶಾಂತಿ, ನೆಮ್ಮದಿಗಿಂತ ಮಿಗಿಲಾದುದು ಮತ್ತೇನೂ ಇರಲಾರದು ಎಂಬುದು ಶಾಶ್ವತ ಸತ್ಯ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಪ್ರಜೆಗಳತ್ತ ನಿಷ್ಠೆ ಅಪೇಕ್ಷಣೀಯ

ಮಧ್ಯಂತರ ಬಜೆಟ್ ಮಂಡನೆ, ಲೇಖಾನುದಾನ ಪಡೆಯುವಿಕೆ ಸೀಮಿತ ಮಹತ್ವದ ಪ್ರಕ್ರಿಯೆ. ಅರ್ಥಸಚಿವೆ ಅದನ್ನು 2014ರಿಂದ ಈಚೆಗಿನ ಸಾಧನೆಗಳನ್ನು ಪಟ್ಟಿ ಮಾಡಿ ಬಣ್ಣಿಸಲು, ಅದಕ್ಕಿಂತ ಹಿಂದಿನ 'ಕಳಪೆ' ಆರ್ಥಿಕ ನಿರ್ವಹಣೆಯನ್ನು ಪ್ರಸ್ತಾಪಿಸಲು ಬಳಸಿಕೊಂಡಿದ್ದಾರೆ. ಇಂತಹ ಬಜೆಟ್ ಭಾಷಣ ಒಮ್ಮೆ ಕೇಳಲು ಚೆನ್ನಾಗಿದ್ದರೂ, ನಂತರ ಸ್ವಲ್ಪ ವಿಶ್ಲೇಷಿಸಿದಾಗ ಏಕಪಕ್ಷೀಯ ಎನಿಸುತ್ತದೆ. ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ ರಾಜಕೀಯ ಅರ್ಥಶಾಸ್ತ್ರಜ್ಞ ಪರಕಾಲ ಪ್ರಭಾಕರ್, ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಮೌಲಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆಸಕ್ತಿಕರ ಅಂಶವೆಂದರೆ, ಇವರು ಕೇಂದ್ರ ಅರ್ಥಸಚಿವರ ಪತಿ. ನಿರ್ಮಲಾ ಈ ಹಿಂದೆ ಬಿಜೆಪಿಯ ವಕ್ತಾರರಲ್ಲಿ ಒಬ್ಬರಾಗಿದ್ದರು. ಈಗಿನ ಅವರ ಭಾಷಣದಲ್ಲೂ ಅಲ್ಲಲ್ಲಿ ಪ್ರಧಾನಿಯವರ ಭಾಷಣದ ಉಲ್ಲೇಖವಿದೆ. ಚುನಾವಣಾ ಸಮಯದಲ್ಲಿ ರಾಷ್ಟ್ರೀಯ ಪಕ್ಷವೊಂದರ ವಕ್ತಾರೆ ಆಗುವುದು ಹಾಗೂ ಕೇಂದ್ರ ಸಂಪುಟ ಸಚಿವರಾಗುವುದು ಎರಡೂ ಭಿನ್ನ ಭೂಮಿಕೆಗಳು. ಹಲವು ಸಂದರ್ಭಗಳಲ್ಲಿ ಇವೆರಡೂ ಮಿಶ್ರ ಆದಂತೆ ಕಾಣುತ್ತದೆ. ಪಕ್ಷ ಹಾಗೂ ಅದರ ಪ್ರಮುಖರಿಗಿಂತ ದೇಶ ಮತ್ತು ಅದರ ಪ್ರಜೆಗಳತ್ತ ಹೆಚ್ಚಿನ ನಿಷ್ಠೆ ಅಪೇಕ್ಷಣೀಯ. ಕೇಂದ್ರ ಸರ್ಕಾರದ ನೀತಿ, ಪ್ರಾಶಸ್ತ್ಯಗಳನ್ನು ಪ್ರಭಾಕರ್ ಶಾಂತಚಿತ್ತದಿಂದ ತರ್ಕಬದ್ಧವಾಗಿ ಟೀಕಿಸುತ್ತಾರೆ. ಆದರೆ ಅವರ ಶ್ರೀಮತಿಯವರು ಸರ್ಕಾರವನ್ನು, ಪಕ್ಷವನ್ನು ರಕ್ಷಿಸಿಕೊಳ್ಳುವ ರೀತಿಯೇ ಬೇರೆ. ವಸ್ತುನಿಷ್ಠ ವೀಕ್ಷಕರಲ್ಲಿ ಏಳುವ ಪ್ರಶ್ನೆಯೆಂದರೆ- ಇಬ್ಬರಲ್ಲಿ ಯಾರಾದರೂ ಇನ್ನೊಬ್ಬರಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದ್ದಾರೆಯೇ? ವಿ.ಪಿ.ಸಿಂಗ್ ಬಜೆಟ್ ಮಂಡಿಸಿ ಮನೆಗೆ ಹೋದಾಗ ಅವರ ಪತ್ನಿಯೇ ಕೆಲವು ಪ್ರಸ್ತಾವಗಳಿಗೆ ವಿರೋಧ ವ್ಯಕ್ತಪಡಿಸುತ್ತಿದ್ದರಂತೆ. ಈಗಿನದು ರೋಲ್ ರಿವರ್ಸಲ್!

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಬಂದ್‌ನಿಂದ ಬಗೆಹರಿಯದು ಸಮಸ್ಯೆ

ಮಂಡ್ಯ ತಾಲ್ಲೂಕಿನ ಕೆರಗೋಡು ಗ್ರಾಮದಲ್ಲಿ ನಡೆದ ಧ್ವಜ ವಿವಾದ ಉಗುರಿನಲ್ಲಿ ಪರಿಹಾರ ಕಾಣುವಂತಹ ಸಮಸ್ಯೆಯಾಗಿತ್ತು. ಆದರೆ ಅದಕ್ಕೆ ಕೊಡಲಿ ತೆಗೆದುಕೊಂಡು ಹೋಗಿ ದೊಡ್ಡದಾಗಿ ಬೆಳೆಸಿದ್ದು ವಿಷಾದನೀಯ. ಇದಕ್ಕೇ ಕಾಯುತ್ತಿದ್ದಂತೆ, ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಮುಂದಾಗಿವೆ. ಇಷ್ಟು ಸಾಲದೆಂಬಂತೆ, ಪ್ರಗತಿಪರ ಸಂಘಟನೆಗಳು ಇದೇ 7ರಂದು, ಬಿಜೆಪಿ, ಜೆಡಿಎಸ್ ಹಾಗೂ ಹಿಂದೂಪರ ಸಂಘಟನೆಗಳು ಇದೇ 9ರಂದು 'ಮಂಡ್ಯ ಬಂದ್'ಗೆ ಕರೆ ಕೊಟ್ಟಿವೆ. ಇದು ಸಾಧುವಲ್ಲ. ಎರಡೂ ಬಣಗಳು ಪ್ರತಿಷ್ಠೆ ಬಿಟ್ಟು ಬಂದ್ ಕರೆಯನ್ನು ಹಿಂಪಡೆಯಲಿ. ಬಂದ್‌ನಿಂದ ಸಮಸ್ಯೆಗೆ ಯಾವುದೇ ಪರಿಹಾರ ಸಿಗಲು ಸಾಧ್ಯವಿಲ್ಲ. ಜಿಲ್ಲಾಡಳಿತವು ಶಾಂತಿ ಸಭೆಯ ಮೂಲಕ ಪರಿಹಾರ ಕಂಡುಕೊಳ್ಳಲು ಮುಂದಾಗಲಿ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

ಉದ್ದೇಶ ಜನಮುಖಿಯಾಗಿರಲಿ

ವಿವಿಧ ಇಲಾಖೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಅಧಿಕಾರಿಗಳು, ನೌಕರರನ್ನು ಸೇವೆಯಿಂದ ಬಿಡುಗಡೆಗೊಳಿಸಿ, ಆ ಹುದ್ದೆಗಳನ್ನು ಸೇವಾನಿರತ ಅಧಿಕಾರಿಗಳು, ನೌಕರರಿಗೆ ವಹಿಸುವಂತೆ ಮುಖ್ಯ ಕಾರ್ಯದರ್ಶಿ ಹೊರಡಿಸಿರುವ ಆದೇಶ ನ್ಯಾಯೋಚಿತವಾಗಿದೆ. ಆದರೆ, ಇದು ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ಉದ್ದೇಶವನ್ನು ಹೊಂದಿಲ್ಲ. ಮರುನೇಮಕಗೊಂಡವರಿಂದ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಹೊರೆ ಎಂಬ ಕಾರಣಕ್ಕೆ ಈ ಕ್ರಮ ಕೈಗೊಳ್ಳಲಾಗಿದೆ. ಸರ್ಕಾರದ ಉದ್ದೇಶ ಜನಮುಖಿಯಾಗಿ ಇರಬೇಕಾಗುತ್ತದೆ. ಈ ದಿಸೆಯಲ್ಲಿ ನಿವೃತ್ತ ಅಧಿಕಾರಿಗಳು ಮತ್ತು ನೌಕರರ ಜಾಗಕ್ಕೆ ಹೊಸದಾಗಿ ಉದ್ಯೋಗಾಕಾಂಕ್ಷಿಗಳನ್ನು ನೇಮಕ ಮಾಡಿಕೊಂಡರೆ, ಸರ್ಕಾರದ ಕೆಲಸವೂ ಸುಸೂತ್ರವಾಗಿ ನಡೆಯುತ್ತದೆ ಮತ್ತು ಸ್ವಲ್ಪಮಟ್ಟಿಗೆ ನಿರುದ್ಯೋಗ ಸಮಸ್ಯೆ ಸಹ ಪರಿಹಾರವಾಗುತ್ತದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಜೆಟ್: ಆರ್ಥಿಕತೆಯ ಮುನ್ನೋಟ

ಬಜೆಟ್ ದೇಶದ ಒಂದಿಡೀ ವರ್ಷದ ಆರ್ಥಿಕತೆಯ ಮುನ್ನೋಟ. ಬಜೆಟ್ ಮಂಡನೆಯಾಗಿ, ಅದು ಅಂಗೀಕಾರವಾಗಿ ಜಾರಿಗೆ ಬಂದ ನಂತರ ಆರ್ಥಿಕತೆಯು ಹೊಸದಾಗಿ ಚಾಲನೆಯಾಗುತ್ತದೆ. 2024–25ನೇ ಆರ್ಥಿಕ ವರ್ಷದ ಮಧ್ಯಂತರ ಬಜೆಟ್ ಅನ್ನು ಕೇಂದ್ರ ಸರ್ಕಾರ ಮಂಡಿಸಿದೆ. ಬಜೆಟ್‌ನ ಮುಖ್ಯಾಂಶಗಳನ್ನು ಒಳಗೊಂಡ ಚಿತ್ರಣ ಇಲ್ಲಿದೆ

(ಬಜೆಟ್ ಗಾತ್ರ ಹೊರತುಪಡಿಸಿ ಉಳಿದೆಲ್ಲಾ ಮೊತ್ತಗಳು ಲಕ್ಷ ಕೋಟಿಗಳಲ್ಲಿ)



‘ವಿಕಸಿತ ಭಾರತ’ಕ್ಕೆ ರಾಜ್ಯಗಳಿಗೆ ಸಾಲ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ವಿಕಸಿತ ಭಾರತ’ ಸಾಕಾರಗೊಳಿಸಲು ಹಾಗೂ ರಾಜ್ಯಗಳ ಅಭಿವೃದ್ಧಿ ಬೆಂಬಲಿಸಲು ರಾಜ್ಯಗಳಿಗೆ ಈ ವರ್ಷ ₹75 ಸಾವಿರ ಕೋಟಿ ನೀಡಲಾಗುತ್ತದೆ ಎಂದು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಇದು 50 ವರ್ಷಗಳ ಬಡ್ಡಿರಹಿತ ಸಾಲ.

ವಿಕಸಿತ ಭಾರತಕ್ಕಾಗಿ ರಾಜ್ಯಗಳಲ್ಲಿ ಅನೇಕ ಬೆಳವಣಿಗೆ ಹಾಗೂ ಅಭಿವೃದ್ಧಿಯನ್ನು ಸಕ್ರಿಯಗೊಳಿಸುವ ಸುಧಾರಣೆಗಳ ಅಗತ್ಯವಿದೆ. ಇದಕ್ಕಾಗಿ ರಾಜ್ಯಗಳಿಗೆ ಬಡ್ಡಿರಹಿತ ಸಾಲ ನೀಡಲಾಗುತ್ತದೆ ಎಂದು ನಿರ್ಮಲಾ ಹೇಳಿದರು. ‘ಈ ಹೊಸ ವ್ಯವಸ್ಥೆಯು ಕೇಂದ್ರ ಹಾಗೂ ರಾಜ್ಯಗಳ ಸಂಬಂಧವನ್ನು ಇನ್ನಷ್ಟು ಬಲಪಡಿಸಲಿದೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿಶ್ವಾಸ ವ್ಯಕ್ತಪಡಿಸಿದರು.

ಬಂಡವಾಳ ಹೂಡಿಕೆಗಾಗಿ ರಾಜ್ಯಗಳಿಗೆ ವಿಶೇಷ ಹಣಕಾಸಿನ ನೆರವು ನೀಡಲು ಯೋಜನೆಯನ್ನು ಹಣಕಾಸು ಸಚಿವಾಲಯವು 2020–21ರಲ್ಲಿ ಆರಂಭಿಸಿತ್ತು. ಕೋವಿಡ್–19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ರಾಜ್ಯಗಳ ಬಂಡವಾಳ ವೆಚ್ಚವನ್ನು ಹೆಚ್ಚಿಸುವ ಉದ್ದೇಶದಿಂದ ಈ ಉಪಕ್ರಮಕ್ಕೆ ಚಾಲನೆ ನೀಡಲಾಯಿತು. ಆರೋಗ್ಯ, ಶಿಕ್ಷಣ, ನೀರಾವರಿ, ನೀರು ಸರಬರಾಜು, ವಿದ್ಯುತ್, ರಸ್ತೆ, ಸೇತುವೆಗಳು, ರೈಲ್ವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಯೋಜನೆಗಳಿಗೆ ಈ ಮೊತ್ತವನ್ನು ನಿಗದಿಪಡಿಸಲಾಗಿದೆ. ರಾಜ್ಯಗಳಿಗೆ 50 ವರ್ಷಗಳ ಬಡ್ಡಿ ರಹಿತ ಸಾಲದ ರೂಪದಲ್ಲಿ ಈ ಮೊತ್ತ ನೀಡಲಾಗುತ್ತದೆ.

ಪ್ರಮುಖ ಯೋಜನೆಗಳಿಗೆ ದೊರೆತ ಅನುದಾನ



ಕನಸು ‘ವಿಕಸಿತ’, ನೀಲನಕ್ಷೆ ಸಂಕುಚಿತ

ಒಂದನೇ ಪುಟದಿಂದ..

ಈ ಮೂಲಕ ಹೆಚ್ಚು ಬಂಡವಾಳ ಆಕರ್ಷಣೆಯ ಪ್ರಯತ್ನವನ್ನೂ ನಿರ್ಮಲಾ ಅವರು ಮಾಡಿದ್ದಾರೆ. ಬಜೆಟ್‌ನ ಉದ್ದಕ್ಕೂ ಕಳೆದ ಹತ್ತು ವರ್ಷಗಳಲ್ಲಿ ಮಾಡಿದ ‘ಸಾಧನೆ’ಗಳನ್ನು ನಿರ್ಮಲಾ ಅವರು ಬಣ್ಣಿಸಿದ್ದಾರೆ. ‘ಮುಂದಿನ ಐದು ವರ್ಷಗಳಲ್ಲಿ ಅಭೂತಪೂರ್ವ ಪ್ರಗತಿಯು ಸಾಧ್ಯವಾಗಲಿದೆ. 2047ರಲ್ಲಿ ಭಾರತವು ಶ್ರೀಮಂತ ದೇಶವಾಗುವ ಕನಸು ನನಸಾಗುವ ಸುವರ್ಣ ಕ್ಷಣಗಳು ಇವು’ ಎಂದಿದ್ದಾರೆ. ಜೊತೆಗೆ, ಲೋಕಸಭೆ ಚುನಾವಣೆಯಲ್ಲಿ ಗೆದ್ದು ಮತ್ತೆ ಅಧಿಕಾರಕ್ಕೆ ಬಿಜೆಪಿ ಬರಲಿದೆ ಎಂಬ ಅತೀವ ಆತ್ಮವಿಶ್ವಾಸವನ್ನೂ ಅವರು ವ್ಯಕ್ತಪಡಿಸಿದ್ದಾರೆ.

ಗ್ರಾಮೀಣ ಅಭಿವೃದ್ಧಿ ಸಚಿವಾಲಯಕ್ಕೆ ಕಳೆದ ಕೆಲವು ವರ್ಷಗಳಲ್ಲಿ ಸತತವಾಗಿ ಅನುದಾನ ಕಡಿತ ಮಾಡಲಾಗಿತ್ತು. ಆದರೆ, ಈ ಬಾರಿ ಈ ಮೊತ್ತವನ್ನು ಹೆಚ್ಚಿಸುವ ಮೂಲಕ ನಾಲ್ಕು ಸ್ತಂಭಗಳಲ್ಲಿ ಎರಡು ಸ್ತಂಭಗಳಾದ ಬಡವರು ಮತ್ತು ರೈತರಿಗೆ ಅನುಕೂಲ ಮಾಡಲಾಗಿದೆ. ಈ ವರ್ಷ ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ₹1.77 ಲಕ್ಷ ಕೋಟಿ ನಿಗದಿ ಮಾಡಲಾಗಿದೆ. ಕಳೆದ ವರ್ಷ ಈ ಮೊತ್ತವು ₹1.57 ಲಕ್ಷ ಕೋಟಿ ಇತ್ತು. ಲಖ್‌ಪತ್ ದೀದಿ ಯೋಜನೆಯು ಗ್ರಾಮೀಣ ಮಹಿಳೆಯರನ್ನು ಆಕರ್ಷಿಸುವ ಯತ್ನ. ಹಾಗೆಯೇ ಗರ್ಭಕಂಠ ಕ್ಯಾನ್ಸರ್‌ಗೆ ಲಸಿಕೆ ನೀಡಿಕೆ ಯೋಜನೆಯನ್ನೂ ಪ್ರಕಟಿಸಲಾಗಿದೆ. ಹೆಚ್ಚು ಹೆಚ್ಚು ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗುವುದು, ಹೆಚ್ಚು ಹೆಚ್ಚು ಉದ್ಯೋಗ ಸೃಷ್ಟಿಸಲಾಗು ವುದು ಎಂಬ ಭರವಸೆಗಳೂ ಬಜೆಟ್‌ನಲ್ಲಿ ಇದ್ದು ಯುವಜನರ ಮನಗೆಲ್ಲುವ ಪ್ರಯತ್ನ ಇದಾಗಿದೆ.

2014ರ ಹಿಂದಿನ ಸ್ಥಿತಿಯ ಶ್ವೇತಪತ್ರ

ಈ ಸರ್ಕಾರವು ಅರ್ಥ ವ್ಯವಸ್ಥೆಯನ್ನು ಅತ್ಯಂತ ಕೆಟ್ಟದಾಗಿ ನಿರ್ವಹಿಸಿದೆ ಎಂದು ವಿರೋಧ ಪಕ್ಷಗಳು ವಾಗ್ದಾಳಿ ನಡೆಸಿವೆ. ಇದಕ್ಕೆ ತಿರುಗೇಟು ನೀಡಿರುವ ನಿರ್ಮಲಾ ಅವರು, ನರೇಂದ್ರ ಮೋದಿ ನೇತೃತ್ವದ ಸರ್ಕಾರ ಹತ್ತು ವರ್ಷಗಳ ಹಿಂದೆ ಅಧಿಕಾರಕ್ಕೆ ಬಂದಾಗ ಸ್ಥಿತಿ ಹೇಗಿತ್ತು ಎಂಬುದರ ಕುರಿತು ಶ್ವೇತಪತ್ರ ಹೊರಡಿಸಲಾಗುವುದು ಎಂದು ಹೇಳಿದ್ದಾರೆ.

ಎನ್‌ಡಿಎ ಸರ್ಕಾರವು ಅಧಿಕಾರಕ್ಕೆ ಬಂದಾಗ ಆಡಳಿತ ವ್ಯವಸ್ಥೆಯನ್ನು ಹಳಿಗೆ ತರುವುದು ಅಗಾಧವಾದ ಕೆಲಸವಾಗಿತ್ತು. 2014ರ ಹಿಂದೆ ಇದ್ದ ಪ್ರತಿ ಸವಾಲನ್ನೂ ನಮ್ಮ ಆರ್ಥಿಕ ನಿರ್ವಹಣೆ ಮತ್ತು ಆಡಳಿತ ಶೈಲಿಯು ಸರಿಪಡಿಸಿದೆ. ದೇಶವನ್ನು ಸುಸ್ಥಿರ ಪ್ರಗತಿಯ ದೃಢ ಹಾದಿಯಲ್ಲಿ ಮುನ್ನಡೆಸಲಾಗಿದೆ ಎಂದಿದ್ದಾರೆ.

‘2014ರಲ್ಲಿ ನಾವು ಎಲ್ಲಿದ್ದೆವು ಮತ್ತು ಈಗ ಎಲ್ಲಿದ್ದೇವೆ ಎಂಬುದನ್ನು ನಾವು ನೋಡಿಕೊಳ್ಳುವುದು ಸೂಕ್ತ. ಆ ದಿನಗಳ ದುರಾಡಳಿತದಿಂದ ಪಾಠ ಕಲಿಯುವುದಷ್ಟೇ ಇದರ ಉದ್ದೇಶ’ ಎಂದು ನಿರ್ಮಲಾ ಹೇಳಿದ್ದಾರೆ.

ಬಡ್ಡಿ ಪಾವತಿಯದ್ದೇ ದೊಡ್ಡ ಹೊರೆ

ಕೇಂದ್ರ ಸರ್ಕಾರ ಪ್ರಮುಖ ವೆಚ್ಚಗಳಲ್ಲಿ ಬಡ್ಡಿಯದ್ದೇ ದೊಡ್ಡ ಮೊತ್ತ. 2024–25ನೇ ಸಾಲಿನ ಬಜೆಟ್‌ನ ಒಟ್ಟು ಗಾತ್ರದಲ್ಲಿ, ಸಾಲದ ಮೇಲಿನ ಬಡ್ಡಿ ಪಾವತಿಯ ಮೊತ್ತ ₹11.90 ಲಕ್ಷ ಕೋಟಿಯಷ್ಟಾಗುತ್ತದೆ. ಇದು ಒಟ್ಟು ಬಜೆಟ್‌ನ ಶೇ 25ರಷ್ಟಾಗುತ್ತದೆ. ಕೇಂದ್ರ ಸರ್ಕಾರವು ಮಾರುಕಟ್ಟೆಯಿಂದ ಪಡೆದ ಸಾಲ, ವಿದೇಶಗಳಿಂದ ಪಡೆದ ಸಾಲ, ಅಲ್ಪಾವಧಿ ಸಾಲಗಳ ಮೇಲಿನ ಬಡ್ಡಿಯು ಇದರಲ್ಲಿ ಸೇರಿದೆ. ಜತೆಗೆ ವಿವಿಧ ಉಳಿತಾಯ ಯೋಜನೆಗಳ ಮೂಲಕ ಪಡೆದಿರುವ ಸಾಲದ ಮೇಲಿನ ಬಡ್ಡಿಯೂ ಇದರಲ್ಲಿ ಸೇರಿದೆ.



₹1.64 ಲಕ್ಷ ಕೋಟಿ ಗೊಬ್ಬರಗಳ ಮೇಲಿನ ಸಹಾಯಧನ | ₹2.05 ಲಕ್ಷ ಕೋಟಿ ಪಡಿತರದ ಮೇಲಿನ ಸಹಾಯಧನ | ₹11,925 ಲಕ್ಷ ಕೋಟಿ ಇಂಧನದ ಮೇಲಿನ ಸಹಾಯಧನ

ರಾಜ್ಯಗಳಿಗೆ ಸಿಗಲಿರುವ ಇಡುಗಂಟು...

ಕೇಂದ್ರ ಸರ್ಕಾರವು ತನ್ನ ತೆರಿಗೆ ಆದಾಯ ಮತ್ತು ಇತರೆ ಆದಾಯಗಳಲ್ಲಿ ಒಂದು ಪಾಲನ್ನು ರಾಜ್ಯಗಳಿಗೆ ಹಂಚಿಕೆ ಮಾಡುತ್ತದೆ. ಅಂದರೆ ರಾಜ್ಯಗಳಿಂದಲೇ ಸಂಗ್ರಹಿಸಿದ ತೆರಿಗೆ ಆದಾಯದಲ್ಲಿ ಸ್ವಲ್ಪ ಪಾಲನ್ನು ಹಿಂತಿರುಗಿಸುತ್ತದೆ. ಅಲ್ಲದೆ, ವಿವಿಧ ನಿಧಿಗಳ ರೂಪದಲ್ಲೂ ಸ್ವಲ್ಪ ಮೊತ್ತವನ್ನು ರಾಜ್ಯಗಳಿಗೆ ವರ್ಗಾವಣೆ ಮಾಡುತ್ತದೆ. ಈ ರೀತಿ 2024–25ನೇ ಆರ್ಥಿಕ ವರ್ಷದಲ್ಲಿ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಒಟ್ಟು ₹22.74 ಲಕ್ಷ ಕೋಟಿಯನ್ನು ವರ್ಗಾವಣೆ ಮಾಡುವುದಾಗಿ ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಘೋಷಿಸಿದೆ.

₹22.74 ಲಕ್ಷ ಕೋಟಿ — ಈ ಬಜೆಟ್‌ನಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ವರ್ಗಾವಣೆಗೆಂದು ತೆಗೆದಿರಿಸಿದ ಒಟ್ಟು ಅನುದಾನ



ವಿತ್ತೀಯ ಕೊರತೆ ತುಂಬಿಸಿಕೊಳ್ಳುವ ಮಾರ್ಗ



ಆಧಾರ: ಕೇಂದ್ರ ಬಜೆಟ್ 2024–25, ಪ್ರಜಾವಾಣಿ ಗ್ರಾಫಿಕ್ಸ್

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಫೆಬ್ರುವರಿ 2, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ಸಪ್ತಮಿ ಗಂ. 16-03 ನಕ್ಷತ್ರ: ಸ್ವಾತಿ ಗಂ. 29-57 ಯೋಗ: ಶೂಲ ಗಂ. 12-54 ಕರಣ: ಬವ ಗಂ. 16-03, ಮಕರ ಮಾಸದ 17 ನೇ ದಿನ, ಮಳೆನಕ್ಷತ್ರ: ಶ್ರವಣ 3.

ರಾಹುಕಾಲ : ಬೆಳಿಗ್ಗೆ 10-30 – 12-00

ಸೂರ್ಯೋದಯ : 07-01 ಸೂರ್ಯಾಸ್ತ : 06-28

ಮುಸ್ಲಿಂ ದಿನಾಂಕ : 21 ರಜಬ್

ಅದೃಷ್ಟ ಸಂಖ್ಯೆ : 8, 5

ಮೇಷ: ನಿಮ್ಮ ಬಳಿ ಇರುವ ಬೃಹತ್ ಯೋಜನೆಗಳಿಗೆ, ಅವಕಾಶಗಳು ಹಾಗೂ ಸನ್ನಿವೇಶಗಳು ದೊರೆತು ಜೀವಬಂದಂತಾಗುವುದು. ಬಾಕಿ ಹಣ ವಸೂಲಿಯಾಗುವುದು. ವೈದ್ಯಕೀಯ ವಿದ್ಯಾಭ್ಯಾಸದಲ್ಲಿ ಪ್ರಗತಿ.

ವೃಷಭ: ವಿದ್ಯಾರ್ಥಿಗಳು ಕೇವಲ ಪಠ್ಯದ ವಿಚಾರವಲ್ಲದೇ ಪಠ್ಯೇತರ ಚಟುವಟಿಕೆಗಳಲ್ಲಿಯೂ ಹೆಚ್ಚಿನ ಉತ್ಸಾಹವನ್ನು ತೋರುವುದರಿಂದ ಮನೋಲ್ಲಾಸ ಹೆಚ್ಚುವುದು. ದೇವತಾಕಾರ್ಯಗಳಿಂದ ಮನಸ್ಸಿಗೆ ನೆಮ್ಮದಿ ಪ್ರಾಪ್ತಿ.

ಮಿಥುನ: ಕೌಟುಂಬಿಕ ಸಮಸ್ಯೆಗಳನ್ನು ಎಲ್ಲರೂ ಮೆಚ್ಚುವಂತೆ ಪರಿಹರಿಸಿಕೊಳ್ಳುವ ಸಾಮರ್ಥ್ಯ ಅಭಿವೃದ್ಧಿಯಾಗಲಿದೆ. ಪ್ರಯತ್ನ ಪಟ್ಟ ಕೆಲಸಗಳು ದಿನದ ಅಂತ್ಯಕ್ಕೆ ಫಲ ನೀಡುವುದು. ಧ್ಯಾನ ಹಾಗೂ ಭಜನೆಯಿಂದ ಮನಸ್ಸಿಗೆ ನೆಮ್ಮದಿ.

ಕರ್ಕಾಟಕ: ಯೋಜನೆಗಳನ್ನು ಇತರರ ಮುಂದೆ ಮಂಡಿಸಿ ಅವರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗುವಿರಿ. ಕಾಫಿ ಮತ್ತು ಕಾಳುಮೆಣಸಿನ ರಫ್ತು ವಹಿವಾಟು ಹೆಚ್ಚಲಿದೆ. ವೈವಾಹಿಕ ಜೀವನದಲ್ಲಿ ನೆಮ್ಮದಿ ಕಂಡುಬರಲಿದೆ.

ಸಿಂಹ: ಮೇಲುಸ್ತುವಾರಿ ನೋಡುವ ಹುದ್ದೆಯವರಿಗೆ ಕೆಲಸಗಾರರ ಹೊಂದಾಣಿಕೆ ತಲೆನೋವು ತರುವಂತಾಗಬಹುದು. ಕಿರುತೆರೆ ಕಲಾವಿದರಿಗೆ ಹಿರಿಯರಿಂದ ಪಡೆದ ಮಾರ್ಗದರ್ಶನ ಉಪಯೋಗಕ್ಕೆ ಬರುವುದು.

ಕನ್ಯಾ: ಸಂಸ್ಕರಿತ ಆಹಾರ ಪದಾರ್ಥಗಳ, ಬೇಳೆ ಕಾಳುಗಳ ಮಾರಾಟದಿಂದ ಲಾಭವಿದೆ. ಸ್ವಾರ್ಥಕ್ಕಾಗಿ ಕಾನೂನಿಗೆ ವಿರುದ್ಧ ಕೆಲಸವನ್ನು ಮಾಡದಿರಿ. ಆರ್ಥಿಕವಾಗಿ ಸ್ವಲ್ಪ ಮಟ್ಟಿನ ಚೇತರಿಕೆ ಕಾಣಬಹುದು.

ತುಲಾ: ಒದಗಿ ಬರಲಿರುವ ಅವಕಾಶವೊಂದನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳುವುದು ಬುದ್ಧಿಮಟ್ಟಕ್ಕೆ ಬಿಟ್ಟ ವಿಚಾರ. ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚಲಿದೆ. ತರಕಾರಿ ಮಾರಾಟಗಾರರಿಗೆ ಶುಭ ದಿನ.

ವೃಶ್ಚಿಕ: ಪೊಲೀಸ್ ಅಧಿಕಾರಿ ವರ್ಗದವರಿಗೆ ರಾಜಕೀಯದವರ ಒತ್ತಡ ಕಡಿಮೆಯಾಗಲಿದೆ. ಸ್ವತ್ತಿನ ವಿವಾದ ಬಗೆಹರಿಸಿಕೊಳ್ಳುರಿ. ಸಾತ್ವಿಕ ಹಾಗೂ ಉತ್ತಮ ನಡತೆಯಿಂದ ಜನಪ್ರಿಯತೆ ಹೊಂದುವಿರಿ.

ಧನು: ಅಧ್ಯಾಪಕ ವೃತ್ತಿಯವರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರವನ್ನು ತಿಳಿದುಕೊಳ್ಳುವ ಅವಕಾಶ ಪ್ರಾಪ್ತಿ. ಲೋಹ ಮತ್ತು ಮರದ ವ್ಯಾಪಾರಿಗಳಿಗೆ ಉತ್ತಮ ಲಾಭ ಸಿಗುತ್ತದೆ. ಇನ್ನೊಬ್ಬರಿಗೆ ಮೋಸ ಮಾಡುವುದು ಸರಿಯಲ್ಲ.

ಮಕರ: ಬೇಡದ ವಿಷಯದಲ್ಲಿ, ಅಪರಿಚಿತ ವ್ಯಕ್ತಿಗಳಲ್ಲಿ, ಸಂಬಂಧವಿಲ್ಲದ ವಿಚಾರದಲ್ಲಿ ವಾದ ಮಾಡುವುದು ಸರಿಯಲ್ಲ. ಆಲಸ್ಯತನ ಅಭಿವೃದ್ಧಿಯನ್ನು ಹಾಳು ಮಾಡುತ್ತದೆ. ಆದ್ದರಿಂದ ಉತ್ಸಾಹಭರಿತರಾಗಿರಿ.

ಕುಂಭ: ಗೃಹ ಮಾರಾಟದ ತೀರ್ಮಾನಗಳಿಗೆ ಒಡಹುಟ್ಟಿದವರಿಂದ ಆಕ್ಷೇಪ ವ್ಯಕ್ತವಾಗಬಹುದು. ವಿದ್ಯುತ್ ವಲಯದ ಕಾರ್ಮಿಕರು ಹೆಚ್ಚಿನ ಜಾಗ್ರತೆ ವಹಿಸಿರಿ. ವಿರೋಧಗಳನ್ನು ಜಾಣ್ಮೆಯಿಂದ ನಿವಾರಿಸಿ.

ಮೀನ: ವೃತ್ತಿ ಹಾಗೂ ವೈಯಕ್ತಿಕ ಜೀವನ ತೃಪ್ತಿ ಎನಿಸಲಿದೆ. ಈ ದಿನ ನೀವು ಕೈಗೊಳ್ಳುವ ನಿರ್ಧಾರಗಳು ಮನಸ್ಸಿಗೆ ನೆಮ್ಮದಿ ತರಲಿದೆ. ಮನೆಯ ವ್ಯವಹಾರಗಳಲ್ಲಿ ಇದ್ದಂತಹ ಹಲವಾರು ತೊಡಕುಗಳು ದೂರಾಗಲಿದೆ.

ನಮ್ ಡೂಟಿ ನಾವ್ ಮಾಡ್ತೀವಿ

ನುಡಿ ಬೆಳಗು

ಪ್ರೊ. ಎಂ. ಕೃಷ್ಣೇಗೌಡ

ಸಂಜೀವಯ್ಯ ಅಂತ ಅವರ ಹೆಸರು. ಸದ್ಗೃಹಸ್ಥರು. ಸರ್ಕಾರಿ ಕೆಲಸ ದೇವರ ಕೆಲಸ ಅನ್ನೋದನ್ನು ನಿಜವಾಗಿಯೂ ನಂಬಿ ಪ್ರಾಮಾಣಿಕವಾಗಿ ದುಡಿದು ರಿಟೈರ್ ಆಗಿದ್ರು. ವಯಸ್ಸು ಎಪ್ಪತ್ತು ದಾಟಿದ್ರೂ ಈಗಲೂ ಆರೋಗ್ಯವಾಗಿದ್ದಾರೆ. ಸೈಕಲ್‌ನಲ್ಲೇ ಓಡಾಡ್ತಾರೆ.

ಒಂದು ದಿನ ಸಂಜೀವಯ್ಯನೋರು ತಮ್ಮ ಸೈಕಲ್ ಮೇಲೆ ಎಲ್ಲಿಗೋ ಹೋಗ್ತಾ ಇದ್ದರು. ದಾರಿಯಲ್ಲಿ ಒಂದಷ್ಟು ಜನ ಕೆಲಸ ಮಾಡ್ತಾ ಇದ್ರು. ಏನು ಕೆಲಸ ಅಂದ್ರೆ, ಒಂದಷ್ಟು ಜನ ರಸ್ತೆ ಪಕ್ಕದಲ್ಲಿ ಗುಂಡಿಗಳನ್ನು ತೆಗೀತಾ ಇದ್ರು. ಇನ್ನೊಂದಷ್ಟು ಜನ ತೆಗೆದ ಗುಂಡಿಗಳನ್ನು ಮುಚ್ಚಿಕೊಂಡು ಬರ್ತಾ ಇದ್ರು. ಸಂಜೀವಯ್ಯನೋರಿಗೆ ಇದು ವಿಚಿತ್ರ ಅನ್ನಿಸ್ತು. ಅವರು ಆ ಕೆಲಸ ಮಾಡ್ತಾ ಇದ್ದವರಲ್ಲೊಬ್ಬನನ್ನು ನಿಲ್ಲಿಸಿ ಕೇಳಿದರು- ‘ಅಲ್ಲಯ್ಯಾ, ಇದೇನ್ ಕೆಲಸ ಮಾಡ್ತಾ ಇದ್ದೀರಿ ನೀವು?’ ಅದಕ್ಕವನು ಹೇಳಿದ- ‘ಇದು ಸರ್ಕಾರದ ಕೆಲಸ ಸ್ವಾಮಿ’.

‘ಅದು ಸರಿಯಪ್ಪ, ಆದ್ರೆ ಹೀಗೆ ಗುಂಡಿ ತೆಗೆಯೂದ್ ಯಾಕೆ, ಮುಚ್ಚೂದ್ ಯಾಕೆ?’

‘ಅದೆಲ್ಲಾ ಕೇಳಬೇಡಿ ಸ್ವಾಮಿ, ಇದು ಸರ್ಕಾರಿ ಕೆಲಸ. ನಮ್ ನಮ್ ಡೂಟಿ ನಾವ್ ಮಾಡ್ತಾ ಇದೀವಿ’

‘ಹಂಗಂದ್ರೇನಯ್ಯ? ನನಗೆ ಅರ್ಥವಾಗ್ಲಿಲ್ಲ’.

‘ನೋಡಿ ಸ್ವಾಮಿ, ಅವುರ್ದು ಗುಂಡಿ ತೆಗಿಯೋ ಡೂಟಿ, ಅವ್ರು ಅದನ್ನ ಮಾಡ್ತಾ ಅವ್ರೆ, ನಮ್ಮದು ಗುಂಡಿ ಮುಚ್ಚೋ ಡೂಟಿ, ನಾವು ಅದನ್ನು ಮಾಡ್ತಾ ಇದೀವಿ. ಒಟ್ನಲ್ಲಿ ನಮ್ ನಮ್ ಡೂಟಿ ನಾವ್ ಮಾಡ್ತಾ ಇದೀವಿ ಅಷ್ಟೆ’.

‘ಅದರಿಂದ ಯಾರಿಗೆ ಏನ್ ಪ್ರಯೋಜನ ಆಗುತ್ತಪ್ಪ? ನಿಮ್ಮ ಶ್ರಮ, ಸರ್ಕಾರದ ದುಡ್ಡು ಎರಡೂ ವ್ಯರ್ಥ ಅಲ್ವ?’

‘ಅದೆಲ್ಲ ನಮಗ್ಗೊತ್ತಿಲ್ಲ ಸ್ವಾಮಿ, ಅವರು ಗುಂಡಿ ತಗಿಯೋ ಡೂಟಿ ಮಾಡ್ತಾರೆ, ನಾವು ಮುಚ್ಚೋ ಡೂಟಿ ಮಾಡ್ತೀವಿ. ಇದರ ಮಧ್ಯದಲ್ಲಿ ಗಿಡ ನೆಡೋರು ಬರಬೇಕಾಗಿತ್ತು. ಅವರು ಬಂದಿಲ್ಲ. ಅದಕ್ಕೆ ನಾವೇನ್ ಮಾಡನ? ನಮ್ ನಮ್ ಡೂಟಿ ನಾವ್ ಮಾಡ್ತಾ ಇದೀವಿ, ಇದು ಸರ್ಕಾರಿ ಕೆಲಸ’.

ಸಂಜೀವಯ್ಯನೋರಿಗೆ ಈಗ ತಾನು ತುಂಬಾ ಹಳೇ ಕಾಲದೋನು ಅನ್ನಿಸ್ತು. ಬಾಯಿ ಮುಚ್ಚಿಕೊಂಡು ಸೈಕಲ್ ಹತ್ತಿದರು. ನಮ್ಮ ಕೆಲಸದ ಗುರಿ, ಉದ್ದೇಶ ಗೊತ್ತಿಲ್ಲದೆ ನಮ್ ನಮ್ ಡೂಟಿ ನಾವು ಮಾಡತೀವಿ ಅನ್ನೋರ ಕೆಲಸವೆಲ್ಲಾ ಇಷ್ಟೇ ಆಗೋದು. ಹಿಂಗೇ ಆಗೋದು.

ಏನಂತೀರಿ?

ಪದಬಂಧ 5579

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮಂಗಳ ಕಾರ್ಯವಾದ ನಂತರದ ಜಳಕ (6)
4. ಒಂದು ಸಂಖ್ಯೆಯನ್ನು ಇನ್ನೊಂದರಿಂದ ಗುಣಿಸುವುದು (4)
5. ಜಗಳಕ್ಕೆ ಸನ್ನದ್ಧನಾದವ ತೋರಿದ ಅಧಿಕಾರ ಪತ್ರ (3)
7. ನೀರ ಮೇಲಣ ಗುಳ್ಳೆ (3)
10. ರೀತಿಯೊಡನೆ ಬರುವ ಸಂಪ್ರದಾಯ (3)
11. ಜಗಳಕ್ಕೊಂದು ಪರ್ಯಾಯ ಪದ (3)
13. ರುಚಿಕಟ್ಟಾದ ಅಡುಗೆಯನ್ನು ಹೀಗೆನ್ನಿ (4)
15. ಚರ್ಚಿಸುವ ಸ್ಥಳವಿದು (6)

ಮೇಲಿಂದ ಕೆಳಕ್ಕೆ

1. ಅಗಸೆ ಬಾಗಿಲ ಬಳಿಯಿರುವ ಮಡಿವಾಳ (3)
2. ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ (2)
3. ಇತರರಿಗೆ ವಹಿಸಿಕೊಡುವುದು (4)
6. ಈತ ಕೆಟ್ಟ ನಡತೆಯವನು (4)
7. ಕೋಟೆಯ ಮೇಲಿನ ಕೊತ್ತಳ (3)
8. ಸೇನಾಧಿಪತಿ ಇಲ್ಲಿದ್ದಾನೆ (4)
9. ತೆಳ್ಳಗಿನ ಸೊಂಟವಿದು (4)
12. ಹರನಿಗೆ ಸಲ್ಲಿಸಿದ ಮುಡಿಪು (3)
14. ಕವಿತೆ ಬರೆಯುವವನು (2)



5578ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಕಟಕವಿ 4.ಪಾಷಾಂಡಿ
5.ಧಾವಂತ 6.ಕಮಲ
8.ವನ 9.ಜಾಗ
10.ಒನಕೆ 14.ಲಫಂಗ
15.ಉಬ್ಬಸ 16.ಮರುಕಳಿಸು

ಮೇಲಿಂದ ಕೆಳಕ್ಕೆ:
1.ವಿಹಾರ 2.ಟಕ್ಕುತನ
3.ವಿಧಾತ 4.ಪಾತಕ
7.ಮಲಮಗ 8.ವರ್ಧಮಾನ
9 ಜಾಗತಿಕ 11.ಕೆಲಸ
12.ನಿಗಮ 13.ಮುನಿಸು

ಸುಡೊಕು 5964

3	9		2		5		6	
			4			8		5
	4				9		3	
4	6		9		7			8
				4		1		6
8		7	5		6		4	
		4			2			7
7	2			5		6		3
	8		7				5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5963 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ • ಅಸಲು ಪಾವತಿಗೆ ಇದೇ 29 ಕೊನೆ ದಿನ

ಕೃಷಿ ಸಾಲ: ಅಸಲು ಪಾವತಿಸಿದರೆ ಬಡ್ಡಿ ಮನ್ನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರ ಸಂಘಗಳ ಮೂಲಕ ಸಾಲ ಪಡೆದು ಸುಸ್ತಿದಾರರಾಗಿರುವ ರೈತರು ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಹಾಗೂ ಕೃಷಿ ಸಂಬಂಧಿತ ಸಾಲಗಳ ಅಸಲು ಪಾವತಿಸಿದರೆ, ಬಡ್ಡಿ ಮನ್ನಾ ಮಾಡುವ ಯೋಜನೆಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ.ಪಾಟೀಲ ಅವರು ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ‘ರೈತರು ಫೆಬ್ರುವರಿ 29ರೊಳಗೆ ಅಸಲು ಪಾವತಿಸಿದರೆ ಮಾತ್ರ ಬಡ್ಡಿ ಮನ್ನಾ ಆಗುತ್ತದೆ’ ಎಂದರು.

2023ರ ಡಿಸೆಂಬರ್ 31ಕ್ಕೆ ಸುಸ್ತಿದಾರರಾದವರಿಗೆ ಈ ಪ್ರಯೋಜನ ಸಿಗಲಿದೆ. ಈ ಸಂಬಂಧ ಜನವರಿ 20ರಂದೇ ಆದೇಶ ಹೊರಡಿಸಲಾಗಿತ್ತು. ಇದೀಗ ಸಂಪುಟ ಸಭೆ ಘಟನೋತ್ತರ ಅನುಮೋದನೆ ನೀಡಲಾಗಿದೆ. ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಭೂ ಅಭಿವೃದ್ಧಿ ಬ್ಯಾಂಕ್‌ಗಳು (ಪಿಕಾರ್ಡ್) ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳಲ್ಲಿ ಸುಸ್ತಿಯಾಗಿರುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಸುಸ್ತಿ ಬಡ್ಡಿ ₹440.20 ಕೋಟಿ ಆಗಲಿದ್ದು, ಅದನ್ನು ಭರಿಸಲು ಒಪ್ಪಿಗೆ ನೀಡಲಾಯಿತು ಎಂದರು.

34 ಸ್ಥಳೀಯ ಸಂಸ್ಥೆಗಳಲ್ಲಿ ಅನಿಲ ಆಧಾರಿತ ಚಿತಾಗಾರ: ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ ಮತ್ತು ಆಯ್ದ 24 ನಗರಸಭೆಗಳಲ್ಲಿ ತಲಾ ಒಂದರಂತೆ 34 ಆಧುನಿಕ ಅನಿಲ /ವಿದ್ಯುತ್ ಚಿತಾಗಾರಗಳನ್ನು ನ್ಯಾಷನಲ್ ಹೌಸಿಂಗ್ ಬ್ಯಾಂಕ್ ನಗರ ಮೂಲಸೌಕರ್ಯ ಅಭಿವೃದ್ಧಿ ನಿಧಿ ಅಡಿ ₹136 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಸಂಪುಟ ಒಪ್ಪಿಗೆ ನೀಡಿದೆ ಎಂದು ಎಚ್‌.ಕೆ.ಪಾಟೀಲ ತಿಳಿಸಿದರು.

ಶವಸಂಸ್ಕಾರ ನಡೆಸಲು ಆಧುನಿಕ ಮತ್ತು ವೈಜ್ಞಾನಿಕ ಪದ್ಧತಿಗಳನ್ನು ಬಳಸಲು 1 ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಹಾಗೂ ಹೆಚ್ಚಿನ ಮರಣದ ಪ್ರಮಾಣ ಇರುವ ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ ಮತ್ತು ಆಯ್ದ 24 ನಗರಸಭೆಗಳಲ್ಲಿ ಚಿತಾಗಾರಗಳನ್ನು ತಲಾ ₹4 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುವುದು ಎಂದು ಹೇಳಿದರು.

ಪೆಟ್ರೋ ಕಾರ್ಡ್ ಮೂಲಕ ಇಂಧನ: ಪೊಲೀಸ್ ಇಲಾಖೆಯ ಪ್ರಧಾನ ಕಚೇರಿ ಸೇರಿ ಇತರ ಘಟಕಗಳಲ್ಲಿನ ವಾಹನಗಳಿಗೆ ಪೆಟ್ರೋ ಕಾರ್ಡ್ ಮೂಲಕ ಇಂಧನ ಮತ್ತು ತೈಲವನ್ನು ಮೂರು ವರ್ಷಗಳ ಅವಧಿಗೆ ₹170 ಕೋಟಿ ಅಂದಾಜು ವೆಚ್ಚದಲ್ಲಿ ಖರೀದಿಸಲು ಸಂಪುಟ ಒಪ್ಪಿಗೆ ನೀಡಿದೆ. ಇಂಧನವನ್ನು ಭಾರತ ಸರ್ಕಾರ ಸ್ವಾಮ್ಯದ ತೈಲ ಮಾರಾಟ ಸಂಸ್ಥೆಯಿಂದ ಖರೀದಿಸಬೇಕು ಎಂದು ಪಾಟೀಲ ತಿಳಿಸಿದರು.

ಪ್ರಮುಖ ತೀರ್ಮಾನಗಳು

- ರಾಯಚೂರು ವಿಶ್ವವಿದ್ಯಾಲಯ ಆವರಣದಲ್ಲಿ ₹42 ಕೋಟಿ ವೆಚ್ಚದಲ್ಲಿ ‘ಕಲ್ಯಾಣ ಕರ್ನಾಟಕ ಮಾನವ ಜಿನೋಮ್ ಅಧ್ಯಯನ ಸಂಸ್ಥೆ’ ನಿರ್ಮಾಣಕ್ಕೆ ಅನುಮೋದನೆ
- ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ 450 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತ ₹142.47 ಕೋಟಿಗೆ ಒಪ್ಪಿಗೆ
- 2023–24ನೇ ಸಾಲಿಗೆ 93 ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಲ್ಲಿನ 104 ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಒಟ್ಟು ₹60 ಕೋಟಿ ವೆಚ್ಚದಲ್ಲಿ ಕಲಿಕಾ ವಾತಾವರಣ ಅಭಿವೃದ್ಧಿಗೆ ಅನುಮೋದನೆ
- ಬೆಳಗಾವಿ ತಾಲ್ಲೂಕಿನ ಉಚ್ಚಗಾಂವ್ ಹಾಗೂ ಸಂತಿಬಸ್ತವಾಡ ಹೋಬಳಿಯ 20 ಕೆರೆಗಳನ್ನು ತುಂಬಿಸುವ ₹287.55 ಕೋಟಿ ಅಂದಾಜು ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ
- ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿಯ 61 ಕೆರೆಗಳನ್ನು ತುಂಬಿಸುವ ಯೋಜನೆಯ ₹519.10 ಕೋಟಿಗಳ ಅಂದಾಜು ಮೊತ್ತದ ಪರಿಷ್ಕೃತ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ
- ರಾಯಚೂರು ತಾಲ್ಲೂಕು ಚಿಕ್ಕಮಂಚಾಲಿ ಗ್ರಾಮದ ಬಳಿ ತುಂಗಭದ್ರಾ ನದಿಗೆ ಅಡ್ಡಲಾಗಿ ₹158 ಕೋಟಿ ವೆಚ್ಚದಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ₹158.10 ಕೋಟಿಗಳ ವಿವರವಾದ ಯೋಜನಾ ವರದಿಗೆ ಒಪ್ಪಿಗೆ. ಆಂಧ್ರಪ್ರದೇಶ ರಾಜ್ಯದ ಒಪ್ಪಿಗೆ ಪಡೆಯುವ ಷರತ್ತಿಗೆ ಒಳಪಟ್ಟು ಅನುಮತಿ ನೀಡಲಾಗಿದೆ
- ನಬಾರ್ಡ್ ಆರ್‌ಐಡಿಎಫ್–29 ನೆರವಿನೊಂದಿಗೆ ರಾಜ್ಯದ 6 ಜಿಲ್ಲೆಗಳಲ್ಲಿ 6 ಬಹುಉತ್ಪನ್ನ ಶೀತಲ ಗೃಹಗಳನ್ನು ₹65.97 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಅನುಮೋದನೆ
- ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವತಿಯಿಂದ ಕಲಬುರಗಿ ಮತ್ತು ಮೈಸೂರಿನಲ್ಲಿ ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜುಗಳನ್ನು ಕ್ರಮವಾಗಿ ₹49.50 ಕೋಟಿ, ₹49.80 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಾಣ. ಮಂಗಳೂರಿನಲ್ಲಿ ಪ್ರಾದೇಶಿಕ ಕೇಂದ್ರ ಕಚೇರಿ ಮತ್ತು ಅದರಲ್ಲಿಯೇ ಅತ್ಯಾಧುನಿಕ ಪ್ರಯೋಗಾಲಯಗಳು, ಸಂಶೋಧನಾ ಕೇಂದ್ರ ಮತ್ತು ಒಳಾಂಗಣ ಕ್ರೀಡಾ ಸೌಲಭ್ಯಗಳನ್ನು ₹49.75 ಕೋಟಿ ವೆಚ್ಚದಲ್ಲಿ ನಿರ್ಮಾಣಕ್ಕೆ ಒಪ್ಪಿಗೆ
- ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ ಸುಟ್ಟಗಾಯಗಳ ಚಿಕಿತ್ಸಾ ಘಟಕಗಳನ್ನು ₹31.54 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಅನುಮತಿ. ಹಾವೇರಿ ವೈದ್ಯಕೀಯ ವಿಜ್ಞಾನಗಳ ಕಟ್ಟಡ ಕಾಮಗಾರಿಗಳ ಪರಿಷ್ಕೃತ ಅಂದಾಜು ಮೊತ್ತ ₹499 ಕೋಟಿಗೆ ಒಪ್ಪಿಗೆ
- ರಾಜ್ಯ 6 ಐಟಿಐಗಳನ್ನು ₹100 ಕೋಟಿ ವೆಚ್ಚದಲ್ಲಿ ಉನ್ನತೀಕರಿಸಲು ಒಪ್ಪಿಗೆ
- ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಹೊಸ ವೈದ್ಯಕೀಯ ಕಾಲೇಜು, ಪುರುಷ ಮತ್ತು ಮಹಿಳಾ ಹಾಸ್ಟೆಲ್, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಸತಿ ನಿಲಯ ಕಾಮಗಾರಿಗಳ ₹455 ಕೋಟಿ ಪರಿಷ್ಕೃತ ಅಂದಾಜು ಮೊತ್ತಕ್ಕೆ ಅನುಮೋದನೆ

ಎಸ್‌ಸಿ ಹಾಸ್ಟೆಲ್

- ವಿವಿಧ ಜಿಲ್ಲೆಗಳಲ್ಲಿ 18 ಪರಿಶಿಷ್ಟ ಜಾತಿಯ ಸರ್ಕಾರಿ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ₹126 ಕೋಟಿ ಅನುದಾನ ನೀಡಲು ಸಂಪುಟ ಸಭೆ ಒಪ್ಪಿಗೆ ನೀಡಿದೆ
- ಸಹಕಾರ ಸಂಘಗಳ ನಿಬಂಧಕರ ಕಚೇರಿ ಆವರಣದಲ್ಲಿ ಸಹಕಾರ ಸಮೃದ್ಧಿ ಸೌಧ ಕಟ್ಟಡವನ್ನು ₹14.85 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಅನುಮೋದನೆ

ಆನ್‌ಲೈನ್ ಮೂಲಕ ಹಿಂದೂಗಳ ವಿವಾಹ ನೋಂದಣಿ

ಹಿಂದೂಗಳಿಗೆ ಆನ್‌ಲೈನ್ ಮೂಲಕ ವಿವಾಹ ನೋಂದಣಿಗೆ ಅವಕಾಶ ನೀಡುವ ‘ಹಿಂದೂ ವಿವಾಹಗಳ ನೋಂದಣಿ (ಕರ್ನಾಟಕ) (ತಿದ್ದುಪಡಿ) ನಿಯಮ’ಗಳಿಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಈವರೆಗೆ ಉಪನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಮಾತ್ರ ವಿವಾಹ ನೋಂದಣಿ ಮಾಡಲಾಗುತ್ತಿತ್ತು. ಈ ಪ್ರಕ್ರಿಯೆಯನ್ನು ಇನ್ನಷ್ಟು ಸುಗಮಗೊಳಿಸಿ ಜನಸ್ನೇಹಿಯಾಗಿಸಲು ಕಾವೇರಿ– 2.0 ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ನೋಂದಣಿ ಮಾಡಲು ಅವಕಾಶ ನೀಡಲಾಗಿದೆ.

ಗ್ರಾಮ ಪಂಚಾಯಿತಿಗಳಲ್ಲಿನ ಬಾಪೂಜಿ ಸೇವಾ ಕೇಂದ್ರ ಮತ್ತು ಗ್ರಾಮ 1 ಕೇಂದ್ರಗಳಲ್ಲಿಯೂ ಸಹ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುವುದು ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಅಂಗನವಾಡಿ ಕಾರ್ಯಕರ್ತೆಯರಿಗೆ ಸೀರೆ:

2023–24ನೇ ಸಾಲಿಗೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ 1,37,469 ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ತಲಾ ಎರಡು ಸೀರೆಗಳಂತೆ 2,74,938 ಸೀರೆಗಳನ್ನು ವಿತರಿಸಲಾಗುವುದು. ಸೀರೆ ಖರೀದಿಗೆ ₹13.75 ಕೋಟಿ ಒದಗಿಸಲು ಅನುಮೋದನೆ ನೀಡಲಾಗಿದೆ.

ಉದ್ಯೋಗದಲ್ಲಿ ಕ್ರೀಡಾಪಟುಗಳಿಗೆ ಮೀಸಲು

ಬೆಂಗಳೂರು: ಏಳು ರಾಜ್ಯ ಸಿವಿಲ್ ಸೇವೆಗಳ ನೇರ ನೇಮಕಾತಿಯಲ್ಲಿ ಕ್ರೀಡಾಪಟುಗಳಿಗೆ ಶೇ 2ರಷ್ಟು ಮೀಸಲಾತಿಗೆ ಅವಕಾಶ ನೀಡುವ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮಗಳಿಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಎಚ್‌.ಕೆ. ಪಾಟೀಲ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದ ಪ್ರತಿಭಾವಂತರಿಗೆ ಶೇ 2ರಷ್ಟು ಸಮತಳ ಮೀಸಲಾತಿಯನ್ನು ಕಲ್ಪಿಸಲಾಗುವುದು. ಇದಕ್ಕಾಗಿ ನಿಯಮ 9ಕ್ಕೆ ತಿದ್ದುಪಡಿ ಮಾಡಲಾಗುವುದು. ಇದನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗುವುದು. ಕರಡು ಪ್ರಕಟಿಸಿದ 15 ದಿನಗಳಲ್ಲಿ ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳು ಆಕ್ಷೇಪಣೆ ಸಲ್ಲಿಸಬಹುದು.

ಪ್ರಕಟಗೊಂಡ 15 ದಿನಗಳಲ್ಲಿ ಒಳಗಾಗಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆ, ಸಲಹೆ ಸ್ವೀಕೃತ ಆಗದೇ ಇದ್ದರೆ ಅಥವಾ ಸ್ವೀಕೃತವಾದ ಆಕ್ಷೇಪಣೆ, ಸಲಹೆಗಳು ಗುರುತರವಾಗಿರದೇ ಇದ್ದರೂ ಪುನಃ ಸಚಿವ ಸಂಪುಟದ ಅನುಮೋದನೆಗೆ ಮಂಡಿಸದೇ ಕರಡು ನಿಯಮಗಳನ್ನು ಅಂತಿಮವಾಗಿ ಹೊರಡಿಸಲು ಸಂಪುಟ ಒಪ್ಪಿಗೆ ನೀಡಿದೆ ಎಂದು ಪಾಟೀಲ ಹೇಳಿದರು.

ಸುದ್ದಿ 2 ನಿಮಿಷ

‘ಹೈಕಮಾಂಡ್ ಹೇಳಿದಂತೆ ಕೇಳಲು ನಾನು ಫುಟ್‌ಬಾಲ್ ಅಲ್ಲ’

ಚಿಕ್ಕೋಡಿ: ‘ನಾನು ಚಿಕ್ಕೋಡಿ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸುವುದಿಲ್ಲ. ವಿಧಾನ ಪರಿಷತ್ ಸದಸ್ಯನಾಗಿ ಇರುತ್ತೇನೆ. ಹೈಕಮಾಂಡ್ ಹೇಳಿದಂತೆ ಕೇಳಲು ನಾನು ಫುಟ್‌ಬಾಲ್ ಅಲ್ಲ’ ಎಂದು ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ–2 ಪ್ರಕಾಶ ಹುಕ್ಕೇರಿ ಪ್ರಶ್ನಿಸಿದರು.

ತಾಲ್ಲೂಕಿನ ಕೇರೂರು ಗ್ರಾಮದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘2014ರಲ್ಲಿ ರಾಜ್ಯದಲ್ಲಿ ಸಚಿವನಾಗಿದ್ದ ವೇಳೆ ಒಮ್ಮೆ ಒದ್ದರು, ದೆಹಲಿಗೆ ಹೋಗಿ ಬಿದ್ದೆ. ಅಲ್ಲಿಂದ ಒದ್ದರು, ವಿಧಾನ ಪರಿಷತ್‌ಗೆ ಬಂದೆ. ಈಗ ಮತ್ತೆ ಒದೆಯಲು ಮುಂದಾಗಿದ್ದಾರೆ. ಮತ್ತೆ ದೆಹಲಿಗೆ ಹೋಗಿ ಬೀಳಬೇಕೆ’ ಎಂದು ಪ್ರಶ್ನಿಸಿದರು.

‘ಹೈಕಮಾಂಡ್ ಹೇಳಿದರೂ ಸ್ಪರ್ಧಿಸಲ್ಲ. ಹೈಕಮಾಂಡ್ ಹೇಳಿದ ತಕ್ಷಣ ಹೋಗಲು ಇದೇನು ಫುಟ್‌ಬಾಲ್ ರಾಜ್ಯವೇ? ವರ್ಷಕ್ಕೊಮ್ಮೆ ಎತ್ತ, ಬೇಕಾದರತ್ತ ಒದಿಸಿಕೊಳ್ಳಲು ನಾನು ಸಿದ್ಧನಿಲ್ಲ. ಸಿದ್ದರಾಮಯ್ಯ ಹೇಳಿದರೂ ನಿಲ್ಲುವುದಿಲ್ಲ. ಅವರು ಹೇಳಿದ ತಕ್ಷಣ ನಿಲ್ಲುವೆ ಎಂದು ನಾನೇನೂ ಬರೆದು ಕೊಟ್ಟಿದ್ದೇನೆಯೇ’ ಎಂದರು.

‘ಲೋಕಸಭೆಗೆ ಹುಕ್ಕೇರಿ ಸ್ಪರ್ಧಿಸುತ್ತಾರೆ ಎಂಬ ಸುದ್ದಿ ಹರಿದಾಡುತ್ತಿದೆ. ಆದರೆ, ಅದು ಸತ್ಯಕ್ಕೆ ದೂರ. ನನ್ನನ್ನು ಶಿಕ್ಷಕರು ಆಯ್ಕೆ ಮಾಡಿದ್ದಾರೆ. ಇನ್ನೂ 5 ವರ್ಷ ಅವರ ಸೇವೆ ಮಾಡುವೆ. ಹೈಕಮಾಂಡ್ ನನ್ನ ಮೇಲೆ ಒತ್ತಡ ಹೇರಬಾರದು’ ಎಂದರು.

ಬಂಡೀಪುರ: ಗಂಡು ಹುಲಿ ಸಾವು

ಗುಂಡ್ಲುಪೇಟೆ (ಚಾಮರಾಜನಗರ): ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ವಲಯ ವ್ಯಾಪ್ತಿಯ ಮದ್ದೂರು ಗಸ್ತು, ಸೀಗನಬೆಟ್ಟ ಸರ್ಕಲ್ ರಸ್ತೆ ಬಳಿ ಗಂಡು ಹುಲಿಯೊಂದು ಮೃತಪಟ್ಟಿದೆ.

‘ಹುಲಿಗೆ ಮೂರರಿಂದ ನಾಲ್ಕು ವರ್ಷ ಪ್ರಾಯವಾಗಿರಬಹುದು ಎಂದು ಅಂದಾಜಿಸಲಾಗಿದೆ. ಇನ್ನೊಂದು ಹುಲಿಯೊಂದಿಗೆ ನಡೆದ ಕಾದಾಟದಲ್ಲಿ ಗಾಯಗೊಂಡಿತ್ತು. ಅಲ್ಲದೇ, ಅದು ಮುಳ್ಳು ಹಂದಿಯೊಂದನ್ನು ತಿಂದಿದ್ದು, ಹೊಟ್ಟೆಯ ಒಳಭಾಗದಲ್ಲಿ ಮುಳ್ಳುಗಳು ಚುಚ್ಚಿ ಗಾಯವಾಗಿದ್ದು, ತೀವ್ರ ರಕ್ತಸ್ರಾವದಿಂದ ಮೃತಪಟ್ಟಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಗುರುವಾರ ಸಿಬ್ಬಂದಿ ಗಸ್ತು ತಿರುಗುತ್ತಿದ್ದಾಗ ಹುಲಿಯ ಕಳೇಬರ ಕಂಡು ಬಂತು. ‘ಹುಲಿ ಮರಿಗಳು ಮೂರು–ನಾಲ್ಕು ವರ್ಷವಾಗುವಾಗ ಸ್ವಂತ ನೆಲೆ ಹುಡುಕಲು ಪ್ರಯತ್ನಿಸುತ್ತವೆ. ಈ ಸಂದರ್ಭದಲ್ಲಿ ಇನ್ನೊಂದು ಹುಲಿಯೊಂದಿಗೆ ಕಾದಾಟ ನಡೆಸುತ್ತವೆ. ಆಗ ಗಾಯಗೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ’ ಎಂದು ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪಿ.ರಮೇಶ್ ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕುವೆಂಪು ಕ್ರಾಂತಿ ಕಹಳೆ - 50’ ನಾಳೆಯಿಂದ ಆರಂಭ

ಪ್ರಜಾವಾಣಿ ವಾರ್ತೆ

ಮೈಸೂರು: ವಿಶ್ವಮಾನವ ತತ್ವ ಸಾರಿದ ಕುವೆಂಪು ಅವರ ‘ವಿಚಾರ ಕ್ರಾಂತಿಗೆ ಆಹ್ವಾನ’ ಹಾಗೂ ‘ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ’ ಭಾಷಣಗಳಿಗೆ 50 ವರ್ಷವಾದ ಹಿನ್ನೆಲೆಯಲ್ಲಿ ‘ಜಾಗೃತಿ ಕರ್ನಾಟಕ’ ಸಂಘಟನೆಯು ‘ಕುವೆಂಪು ಕ್ರಾಂತಿ ಕಹಳೆ–50’ ಕಾರ್ಯಕ್ರಮವನ್ನು ಫೆ.3ರ ಶನಿವಾರದಿಂದ ಆಯೋಜಿಸಿದೆ.

‘5 ದಶಕದ ಹಿಂದೆ ನಗರದ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಫೆ.3ರಂದೇ ಕುವೆಂಪು ‘ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ’ ಭಾಷಣ ಮಾಡಿದ್ದರು. ಮತ್ತೆ ಅದೇ ವೇದಿಕೆಯಲ್ಲಿ ಅದನ್ನು ನೆನಪಿಸಿಕೊಳ್ಳಲಾಗುತ್ತಿದೆ’ ಎಂದು ಸರ್ವೋದಯ ಕರ್ನಾಟಕದ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಎನ್‌. ಗೌಡ, ಇಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಬೆಳಿಗ್ಗೆ 10ಕ್ಕೆ ಕಾರ್ಯಕ್ರಮವನ್ನು ಲೇಖಕಿ ಬಿ.ಟಿ.ಲಲಿತಾ ನಾಯಕ್ ಉದ್ಘಾಟಿಸಿದರೆ, ಚಲನಚಿತ್ರ ನಟ ಡಾಲಿ ಧನಂಜಯ ಹಾಗೂ ಲತಾ ಮೈಸೂರು ಅವರು ಕುವೆಂಪು ಅವರ ಭಾಷಣದ ಆಯ್ದ ಭಾಗ ಓದಲಿದ್ದಾರೆ. ಲೇಖಕ ಎಲ್‌. ಎನ್‌.ಮುಕುಂದರಾಜ್ ಪ್ರಧಾನ ಭಾಷಣ ಮಾಡಲಿದ್ದಾರೆ’ ಎಂದರು.

‘1974ರ ಡಿ.8ರಂದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕುವೆಂಪು ‘ವಿಚಾರ ಕ್ರಾಂತಿಗೆ ಆಹ್ವಾನ’ ಘಟಿಕೋತ್ಸವ ಭಾಷಣ ಮಾಡಿದ್ದರು. ಎರಡೂ ಚಾರಿತ್ರಿಕ ಭಾಷಣಗಳ ಹಿನ್ನೆಲೆಯಲ್ಲಿ ಫೆ.3ರಿಂದ ಡಿ.8ರವರೆಗೆ ರಾಜ್ಯದಾದ್ಯಂತ ವೇದಿಕೆಯು ನಿರಂತರ ಕಾರ್ಯಕ್ರಮಗಳನ್ನು ಆಯೋಜಿಸಲಿದೆ’ ಎಂದು ಲೇಖಕ ಕೃಷ್ಣಮೂರ್ತಿ ಚಮರಂ ಹೇಳಿದರು.

ಹೆಲಿಕಾಪ್ಟರ್ ಯಾನದ ವೇಳೆ ಹಂಪಿಯ ವಿರೂಪಾಕ್ಷ ದೇವಸ್ಥಾನ ಮತ್ತು ಸ್ಮಾರಕಗಳು ಕಾಣಿಸಿದ್ದು ಹೀಗೆ. ಹಂಪಿ ಉತ್ಸವ ಶುಕ್ರವಾರದಿಂದ ಭಾನುವಾರದವರೆಗೆ ನಡೆಯಲಿದೆ –ಪ್ರಜಾವಾಣಿ ಚಿತ್ರ/ ಸತೀಶ್ ಮುರಾಳ

‘ಹಂಪಿ ಬೈ ಸ್ಕೈ’ ಸೇವೆ ಆರಂಭ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಹಂಪಿ ಉತ್ಸವದ ಹಿನ್ನೆಲೆಯಲ್ಲಿ ವಿಶ್ವ ಪಾರಂಪರಿಕ ತಾಣ ಮತ್ತು ಸ್ಮಾರಕಗಳನ್ನು ಆಗಸದಿಂದ ತೋರಿಸಲು ‘ಹಂಪಿ ಬೈ ಸ್ಕೈ’ ಹೆಲಿಕಾಪ್ಟರ್ ಸೇವೆ ಗುರುವಾರ ಕಮಲಾಪುರದಲ್ಲಿ ಆರಂಭವಾಯಿತು. ಸ್ಮಾರಕಗಳನ್ನು ಪಕ್ಷಿನೋಟದಿಂದ ಕಂಡು ಪ್ರವಾಸಿಗರು ಸಂಭ್ರಮಿಸಿದರು.

ಚಿಪ್ಸನ್ ಏವಿಯೇಷನ್ ಸಂಸ್ಥೆ ಮತ್ತು ತುಂಬೆ ಏವಿಯೇಷನ್ ಸಂಸ್ಥೆಗಳು ಈ ಸೇವೆ ಒದಗಿಸಿವೆ. 8 ನಿಮಿಷಗಳಲ್ಲಿ ಅಂಜನಾದ್ರಿ, ಆನೆಗುಂದಿ, ವಿರೂಪಾಕ್ಷ ದೇವಸ್ಥಾನ, ವಿಜಯ ವಿಠ್ಠಲ ದೇವಸ್ಥಾನ ಸೇರಿ ಹಲವು ಸ್ಮಾರಕಗಳನ್ನು ಆಗಸದಿಂದ ನೋಡಬಹುದು. 7 ನಿಮಿಷದ ಹಾರಾಟಕ್ಕೆ ₹3,800 ಮತ್ತು 8 ನಿಮಿಷದ ಹಾರಾಟಕ್ಕೆ ₹4,300 ಶುಲ್ಕ ನಿಗದಿಪಡಿಸಲಾಗಿದೆ. ಇದಕ್ಕಾಗಿ ಕಮಲಾಪುರದಲ್ಲಿ 2 ತಾತ್ಕಾಲಿಕ ಹೆಲಿಪ್ಯಾಡ್ ನಿರ್ಮಿಸಲಾಗಿದೆ.

ತ್ಯಾವರೆಕೊಪ್ಪ; ಸಿಂಹ ಸಾವು

ಪ್ರಜಾವಾಣಿ ವಾರ್ತೆ

ಸರ್ವೇಶ್

ಶಿವಮೊಗ್ಗ: ಇಲ್ಲಿನ ತ್ಯಾವರೆಕೊಪ್ಪ ಹುಲಿ ಮತ್ತು ಸಿಂಹಧಾಮದಲ್ಲಿನ ಸಿಂಹ ‘ಸರ್ವೇಶ್’ ಬುಧವಾರ ರಾತ್ರಿ ಅನಾರೋಗ್ಯದಿಂದ ಮೃತಪಟ್ಟಿದೆ.

13 ವರ್ಷ ವಯಸ್ಸಿನ ಈ ಸಿಂಹವನ್ನು ನಾಲ್ಕು ವರ್ಷಗಳ ಹಿಂದೆ ಬನ್ನೇರುಘಟ್ಟ ಜೈವಿಕ ಉದ್ಯಾನದಿಂದ ಶಿವಮೊಗ್ಗಕ್ಕೆ ತರಲಾಗಿತ್ತು. ಸಿಂಹಕ್ಕೆ ‘ಹಿಮೋ ಪ್ರೋಟೋಜೋನ್’ ಬಾಧಿಸಿದ್ದು, ತಡ ರಾತ್ರಿ ವಾಂತಿ ಮಾಡಿಕೊಂಡಿತ್ತು. ತಕ್ಷಣವೇ ಇಲ್ಲಿನ ಪಶುವೈದ್ಯಕೀಯ ಕಾಲೇಜಿನ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಗಿತ್ತು. ರಾತ್ರಿ ಸಿಂಹ ಮೃತಪಟ್ಟಿದೆ ಎಂದು ತ್ಯಾವರೆಕೊಪ್ಪ ಹುಲಿ ಮತ್ತು ಸಿಂಹಧಾಮದ ಅಧಿಕಾರಿಗಳು ತಿಳಿಸಿದ್ದಾರೆ.

ಗ್ಯಾರಂಟಿ ರದ್ದು ಹೇಳಿಕೆ ಬ್ಲ್ಯಾಕ್‌ಮೇಲ್ ತಂತ್ರ: ಕುಮಾರಸ್ವಾಮಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಗೆಲ್ಲದಿದ್ದರೆ ಐದು ಗ್ಯಾರಂಟಿಗಳು ರದ್ದಾಗಲಿವೆ’ ಎಂಬ ಮಾಗಡಿ ಶಾಸಕ ಎಚ್‌.ಸಿ.ಬಾಲಕೃಷ್ಣ ಹೇಳಿಕೆ ಬ್ಲ್ಯಾಕ್‌ಮೇಲ್ ತಂತ್ರ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಇಂತಹ ಹೇಳಿಕೆಗಳನ್ನು ರಾಜ್ಯದ ಜನರು ಅರ್ಥ ಮಾಡಿಕೊಳ್ಳಬೇಕು. ಲೋಕಸಭಾ ಚುನಾವಣೆವರೆಗೆ ಮಾತ್ರ ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸಲು, ನಂತರ ನಿಲ್ಲಿಸಲು ಕಾಂಗ್ರೆಸ್ ಪಕ್ಷದ ಸಭೆಯಲ್ಲೇ ನಿರ್ಧಾರವಾಗಿದೆ. ಪಕ್ಷದ ರಹಸ್ಯ ಕಾರ್ಯಸೂಚಿಯನ್ನು ಬಾಲಕೃಷ್ಣ ಅವರು ಬಹಿರಂಗಪಡಿಸಿದ್ದಾರೆ. ಬಿಜೆಪಿ-ಜೆಡಿಎಸ್ ಹೊಂದಾಣಿಕೆ ಅವರಿಗೆ ಭಯ ತಂದಿದೆ ಎಂದರು.

ಗ್ಯಾರಂಟಿಗಳನ್ನು ಜನರಿಗೆ ಸಮರ್ಪಕವಾಗಿ ಕೊಡಲು ಅವಕಾಶವಿದೆ. ಸರಿಯಾದ ಮಾರ್ಗದಲ್ಲಿ ಹೋಗಿದ್ದರೆ ಐದು ಗ್ಯಾರಂಟಿಗಳನ್ನೂ ಕೊಟ್ಟು ರಾಜ್ಯದ ಅಭಿವೃದ್ಧಿ ಸಹ ಮಾಡಬಹುದಿತ್ತು. ಇವರ ತಪ್ಪುಗಳಿಂದಲೇ ಯೋಜನೆ ಹಳಿತಪ್ಪಿದೆ. ಬಿಜೆಪಿಯ ಅಕ್ಷತೆಗೆ ಜನರು ಮತ ಹಾಕುವುದಾದರೆ, ಕಾಂಗ್ರೆಸ್ ಸಹ ಅದನ್ನೇ ಮಾಡಲಿ. ಕಾಂಗ್ರೆಸ್ ಅಕ್ಷತೆಗೂ ಮತ ಬೀಳಬಹುದು ಎಂದರು.

‘ರಾಮನಗರದಲ್ಲಿ ರಾಮಮಂದಿರ ನಿರ್ಮಾಣ ಮಾಡುವ ಕಾಂಗ್ರೆಸ್ ನಾಯಕರ ಹೇಳಿಕೆ ಸ್ವಾಗತಾರ್ಹ. ಇಡೀ ಬೆಟ್ಟ ಅಭಿವೃದ್ಧಿ ಮಾಡಿ ಪ್ರವಾಸೋದ್ಯಮಕ್ಕೆ ಉತ್ತೇಜನ ಕೊಡಬೇಕು. ಆದರೆ, ಅದೂ ಲೋಕಸಭಾ ಚುನಾವಣೆಯವರೆಗಿನ ಹೇಳಿಕೆ ಆಗಬಾರದು. ಹಾರೋಬೆಲೆಯಲ್ಲಿ ಯೇಸುವಿನ ಪ್ರತಿಮೆ ಏಕೆ ಸ್ಥಾಪಿಸಿದರು? ಚರ್ಚ್ ಒಳಗೆ ಏನು ಇಟ್ಟಿದ್ದರು ಎಂಬುದೂ ಗೊತ್ತಿದೆ’ ಎಂದರು.

ಧ್ವಜ ವಿವಾದಕ್ಕೆ ಸಚಿವ, ಶಾಸಕರೇ ಕಾರಣ: ಆರೋಪ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ವಿವಾದ ಸೃಷ್ಟಿಯಾಗಲು ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ಹಾಗೂ ಮಂಡ್ಯ ಶಾಸಕ ಗಣಿಗ ರವಿಕುಮಾರ್ ಅವರೇ ಕಾರಣ. ವೈಯಕ್ತಿಕ ಪ್ರತಿಷ್ಠೆಗಾಗಿ ಹನುಮ ಧ್ವಜ ಇಳಿಸಿ ವಿವಾದ ಸೃಷ್ಟಿಸಿದ್ದಾರೆ’ ಎಂದು ಜೆಡಿಎಸ್ ನಾಯಕ ಸಿ.ಎಸ್‌.ಪುಟ್ಟರಾಜು ಗುರುವಾರ ಆರೋಪಿಸಿದರು.

‘ಜ.22ರಂದು ಅಯೋಧ್ಯೆಗೆ ತೆರಳಿದ್ದರಿಂದ, ಮಾರಗೌಡನಹಳ್ಳಿ ದೇವಾಲಯ ಉದ್ಘಾಟನೆಗೆ ನಾಯಕರಾದ ಎಚ್‌.ಡಿ.ಕುಮಾರಸ್ವಾಮಿ ಬರಲಿಲ್ಲ. ನಾವು ದೇವಾಲಯ ಉದ್ಘಾಟನೆಗೆ ತೆರಳುವಾಗ ಕೆರಗೋಡು ಗ್ರಾಮಸ್ಥರು ಧ್ವಜಸ್ತಂಭಕ್ಕೆ ಪೂಜೆ ಸಲ್ಲಿಸಲು ಆಹ್ವಾನಿಸಿದ್ದರು. ಅದನ್ನೇ ತಪ್ಪಾಗಿ ಅರ್ಥೈಸಿಕೊಂಡ ಶಾಸಕ ರವಿಕುಮಾರ್, ತಮ್ಮನ್ನು ಆಹ್ವಾನಿಸಿಲ್ಲವೆಂಬ ಸಣ್ಣತನಕ್ಕೆ ಧ್ವಜವನ್ನೇ ಕೆಳಗಿಳಿಸಿ ಗೊಂದಲ ಸೃಷ್ಟಿಸಿದ್ದಾರೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

‘ಕೆರಗೋಡು ಗ್ರಾಮ ಪಂಚಾಯಿತಿಯ ನಿರ್ಣಯದಂತೆ ಹನುಮ ಧ್ವಜ ಹಾರಿಸಲಾಗಿತ್ತು. ಅಲ್ಲಿ ಮತ್ತೆ ಹನುಮ ಧ್ವಜ ಹಾರಬೇಕು, ಅದಕ್ಕಾಗಿ ಹೋರಾಡುತ್ತೇವೆ. ಸಚಿವ ಚಲುವರಾಯಸ್ವಾಮಿ ಘಟನೆಯನ್ನು ದುರುಪಯೋಗ ಮಾಡಿಕೊಂಡು ದ್ವೇಷ ಸಾಧಿಸುತ್ತಿದ್ದಾರೆ. ಜಿಲ್ಲಾಡಳಿತ ಕೂಡ ಘಟನೆಯನ್ನು ಸರಿಯಾಗಿ ನಿರ್ವಹಿಸದೆ ತಪ್ಪೆಸಗಿದೆ’ ಎಂದರು.

‘ಕುಮಾರಸ್ವಾಮಿ ಬಿಜೆಪಿಗೆ ಬೆಂಬಲ ನೀಡಿದ್ದರಿಂದ ಎಚ್‌.ಡಿ.ದೇವೇಗೌಡರಿಗೆ ಆರೋಗ್ಯ ಕೆಟ್ಟಿದೆ ಎಂದು ಚಲುವರಾಯಸ್ವಾಮಿ ಹೇಳಿರುವುದು ಖಂಡನೀಯ. ನೀವು ಉಂಡಮನೆಗೆ ದ್ರೋಹ ಬಗೆದು, ಅನ್ಯಾಯ ಮಾಡಿ ಅವರಿಗೆ ನೋವು ಕೊಟ್ಟಿದ್ದೀರಿ. ನಾವು ಬಿಜೆಪಿಗೆ ಹೋಗಿ ಕೇಸರಿ ಶಾಲು ಹಾಕಿಕೊಂಡಿಲ್ಲ. ಕೇಸರಿ ಬಿಜೆಪಿಯ ಸಂಕೇತವಷ್ಟೇ ಅಲ್ಲ, ರಾಮ, ಹನುಮಂತನ ಭಕ್ತಿಯ ಪ್ರತೀಕವೂ ಹೌದು’ ಎಂದರು.

ಕೆ.ಆರ್‌.ಪೇಟೆ ಶಾಸಕ ಎಚ್‌.ಟಿ.ಮಂಜು, ಮುಖಂಡರಾದ ಸುರೇಶ್‌ಗೌಡ, ಕೆ.ಅನ್ನದಾನಿ ಅವರೂ ಕಾಂಗ್ರೆಸ್ ಮುಖಂಡರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮನೆ ಮೇಲೆ ಹನುಮ ಧ್ವಜ: ಬಿಜೆಪಿ ಮುಖಂಡರು ಶುಕ್ರವಾರದಿಂದ (ಫೆ.2) ಕೆರಗೋಡು ಗ್ರಾಮದ ಮನೆಗಳ ಮೇಲೆ ಹನುಮ ಧ್ವಜ ಹಾರಿಸುವ ಆಂದೋಲನಕ್ಕೆ ಕರೆ ನೀಡಿದ ಬೆನ್ನಲ್ಲೇ, ಕೆಲ ಗ್ರಾಮಸ್ಥರು ಗುರುವಾರವೇ ಸ್ವಯಂ ಪ್ರೇರಿತವಾಗಿ ಮನೆಗಳ ಮೇಲೆ ಧ್ವಜ ಹಾರಿಸಿ, ಜೈಶ್ರೀರಾಂ ಘೋಷಣೆ ಕೂಗಿದರು. ಗ್ರಾಮದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದ್ದು ಬಿಗುವಿನ ವಾತಾವರಣ ಮುಂದುವರಿದಿದೆ.

‘ಜಿಲ್ಲೆಯಾದ್ಯಂತ ಆಂದೋಲನ ವಿಸ್ತರಿಸಲಾಗುವುದು’ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಇಂದ್ರೇಶ್ ಕುಮಾರ್ ಹೇಳಿದರು. ‘ಪಾಂಡವಪುರದಲ್ಲೂ ಫೆ.3ರಿಂದ ಪ್ರತಿ ಮನೆ ಮೇಲೆ ಹನುಮ ಧ್ವಜ ಹಾರಿಸಲಾಗುವುದು’ ಎಂದು ಹಿಂದೂ ಜಾಗರಣಾ ವೇದಿಕೆಯ ಮಾರ್ಕಂಡೇಯ ತಿಳಿಸಿದ್ದಾರೆ.

‘ಪ್ರಭಾಕರ ಭಟ್, ಮುತಾಲಿಕ್ ಭೇಟಿ ನಿಷೇಧಿಸಿ’

ಬಿಜೆಪಿ ಮುಖಂಡರು ಕೋಮುಗಲಭೆ ಎಬ್ಬಿಸುವ ಹುನ್ನಾರ ನಡೆಸಿದ್ದಾರೆ. ಹೀಗಾಗಿ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್, ಶ್ರೀರಾಮಸೇನೆ ನಾಯಕ ಪ್ರಮೋದ್ ಮುತಾಲಿಕ್ ಅವರು ಜಿಲ್ಲೆ ಪ್ರವೇಶಿಸುವುದನ್ನು ನಿಷೇಧಿಸಲು ಕೋರಿ ಜಿಲ್ಲಾಧಿಕಾರಿಗೆ ಹಾಗೂ ನ್ಯಾಯಾಲಯಕ್ಕೆ ಮನವಿ ಸಲ್ಲಿಸಬೇಕು’ ಎಂದು, ಗುರುವಾರ ನಗರದ ಪ್ರವಾಸಿ ಮಂದಿರದ ಆವಣದಲ್ಲಿ ನಡೆದ ಪ್ರಗತಿಪರ ಸಂಘಟನೆಗಳ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು

‘ಮುಂಬರುವ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಧ್ವಜ ಆಂದೋಲನ ಸೇರಿ ಸೂಕ್ಷ್ಮ ಧಾರ್ಮಿಕ ವಿಚಾರಗಳನ್ನಿಟ್ಟುಕೊಂಡು ವಿವಿಧ ಕಾರ್ಯಕ್ರಮ ನಡೆಸಲು ಬಿಜೆಪಿ ಮುಖಂಡರು ಸಜ್ಜಾಗುತ್ತಿದ್ದಾರೆ. ಪ್ರಭಾಕರ್ ಭಟ್ ಹಾಗೂ ಮುತಾಲಿಕ್ ಅವರನ್ನು ಕರೆಸುವ ಸಾಧ್ಯತೆ ಇದ್ದು, ಅದನ್ನು ವಿಫಲಗೊಳಿಸಬೇಕಾದ ಅನಿವಾರ್ಯ ಇದೆ’ ಎಂದು ಮುಖಂಡರು ಅಭಿಪ್ರಾಯಪಟ್ಟರು.

‘ಬಿಜೆಪಿ– ಜೆಡಿಎಸ್ ಪಾದಯಾತ್ರೆ ವೇಳೆ ದಾಂದಲೆ ನಡೆಸಿದ ಕಿಡಿಗೇಡಿಗಳ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಲಾಗುವುದು. ಜ.7ರಂದು ನಡೆಯುವ ಮಂಡ್ಯ ಬಂದ್‌ಗೆ ಬೆಂಬಲ ನೀಡುವುದಾಗಿ ಹಲವು ಸಂಘಟನೆಗಳ ಸದಸ್ಯರು ತಿಳಿಸಿದ್ದಾರೆ’ ಎಂದು ಮುಖಂಡರು ಹೇಳಿದರು.

ಪ್ರಗತಿಪರ ಸಂಘಟನೆಗಳ ಮುಖಂಡರಾದ ಗುರುಪ್ರಸಾದ್ ಕೆರಗೋಡು, ಹುಲ್ಕೆರೆ ಮಹದೇವು, ಟಿ.ಎಲ್‌.ಕೃಷ್ಣೇಗೌಡ, ಸಿ.ಕುಮಾರಿ, ಕೆ.ಬೋರಯ್ಯ, ಸುನಂದಾ ಜಯರಾಂ, ಯಶವಂತ್, ಎಂ.ಬಿ.ನಾಗಣ್ಣಗೌಡ, ಲೇಖಕರಾದ ಜಗದೀಶ್ ಕೊಪ್ಪ, ಜಿ.ಟಿ.ವೀರಪ್ಪ, ರಾಜೇಂದ್ರ ಪ್ರಸಾದ್, ನಿವೃತ್ತ ಐಪಿಎಸ್ ಅಧಿಕಾರಿ ಅರಕೇಶ್ ಇದ್ದರು.

‘ಲೋಕಸಭಾ ಚುನಾವಣೆ ಬಳಿಕ ಕಾಂಗ್ರೆಸ್ ಸರ್ಕಾರ ಪತನ’

ಪ್ರಜಾವಾಣಿ ವಾರ್ತೆ

ಹಾವೇರಿ: ‘ಗ್ಯಾರಂಟಿ ಸೌಲಭ್ಯ ಸಿಗದ ಜನರು ಕಾಂಗ್ರೆಸ್ ಸರ್ಕಾರಕ್ಕೆ ಶಾಪ ಹಾಕುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳೇ ಕಾಂಗ್ರೆಸ್‌ಗೆ ತಿರುಗುಬಾಣವಾಗಲಿದ್ದು, ಲೋಕಸಭೆ ಚುನಾವಣೆ ಬಳಿಕ ರಾಜ್ಯ ಸರ್ಕಾರ ಪತನವಾಗಲಿದೆ’ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಇಲ್ಲಿ ಗುರುವಾರ ನಡೆದ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಒಂದೆಡೆ ರಾಜ್ಯದಲ್ಲಿ ಕಾಂಗ್ರೆಸ್ ಸಚಿವರಿಗೆ ಧೈರ್ಯವಿಲ್ಲ, ಮತ್ತೊಂದೆಡೆ ‘ಇಂಡಿಯಾ’ ಒಕ್ಕೂಟದಲ್ಲಿ ಒಡಕಿದೆ. ರಾಜ್ಯದಲ್ಲಿ 28 ಸ್ಥಾನಗಳನ್ನೂ ಬಿಜೆಪಿ ಗೆಲ್ಲಲಿದೆ’ ಎಂದರು.

‘ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ತಕ್ಷಣ ಕಿಸಾನ್ ಸಮ್ಮಾನ್ ಯೋಜನೆಯಡಿ ರಾಜ್ಯ ಸರ್ಕಾರ ರೈತರಿಗೆ ನೀಡುತ್ತಿದ್ದ ₹4 ಸಾವಿರ ನಿಲ್ಲಿಸಿದರು. ರೈತರ ವಿದ್ಯಾನಿಧಿ ಮತ್ತು ರೈತಶಕ್ತಿ ಯೋಜನೆಯನ್ನು ಸ್ಥಗಿತಗೊಳಿಸಿದರು. ರೈತರ ಪಾಲಿಗೆ ಕಾಂಗ್ರೆಸ್ ಸರ್ಕಾರ ಮಾರಕವಾಗಿದೆ’ ಎಂದು ಅವರು ಆರೋಪಿಸಿದರು.

ಆತ್ಮಹತ್ಯೆ ಹೆಚ್ಚಳ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ‘ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ 500ಕ್ಕೂ ಹೆಚ್ಚು ರೈತರ ಆತ್ಮಹತ್ಯೆಗಳಾಗಿವೆ. ಬರಗಾಲದಿಂದ ಸಂಕಷ್ಟದಲ್ಲಿರುವ ರೈತರಿಗೆ ಸಮರ್ಪಕವಾಗಿ ಬರ ಪರಿಹಾರ ನೀಡದೆ, ಕೇವಲ ₹2 ಸಾವಿರ ನೀಡುತ್ತಿದೆ’ ಎಂದರು.

‘ಗ್ಯಾರಂಟಿ ಯೋಜನೆಗಳನ್ನು ಪ್ರಚಾರ ಮಾಡಿದ್ದಕ್ಕೆ ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಡದಲ್ಲಿ ಕಾಂಗ್ರೆಸ್ ನೆಲಕಚ್ಚಿತು. ಈಗ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸೋತರೆ ಗ್ಯಾರಂಟಿ ಯೋಜನೆಗಳು ಸ್ಥಗಿತವಾಗುತ್ತವೆ ಎಂದು ಮುಖ್ಯಮಂತ್ರಿಯಾದಿಯಾಗಿ ಕಾಂಗ್ರೆಸ್ ನಾಯಕರು ಮತದಾರರಿಗೆ ಧಮಕಿ ಹಾಕುತ್ತಿದ್ದಾರೆ’ ಎಂದರು.

ಸೊರಗಿದ ‘ನಿಕ್ಷಯ್ ಪೋಷಣ್’; ರಾಜ್ಯದಲ್ಲಿ 81,585 ಕ್ಷಯ ರೋಗಿಗಳು

ವರ್ಷದಿಂದ ಸಿಕ್ಕಿಲ್ಲ ಆರ್ಥಿಕ ನೆರವು

• ಎಂ. ಮಹೇಶ

ಮುಖ್ಯಾಂಶಗಳು

- ಕೇಂದ್ರ ಸರ್ಕಾರದ ಯೋಜನೆ
- ತಾಂತ್ರಿಕ ಕಾರಣದಿಂದ ದೊರಕದ ಹಣ
- ಕಾಯುತ್ತಿರುವ ರೋಗಿಗಳು

ಮೈಸೂರು: ಕ್ಷಯ ರೋಗಿಗಳ ಪೌಷ್ಟಿಕ ಆಹಾರಕ್ಕೆಂದು ಆರ್ಥಿಕ ನೆರವು ಒದಗಿಸಲು ಕೇಂದ್ರ ಸರ್ಕಾರ ಜಾರಿಗೊಳಿಸಿರುವ ‘ನಿಕ್ಷಯ್ ಪೋಷಣ್’ ಯೋಜನೆಯಡಿ ಒಂದು ವರ್ಷದಿಂದ ಹಣ ಬಂದಿಲ್ಲ.

ಸರ್ಕಾರವೇ ಉಚಿತ ಚಿಕಿತ್ಸೆ ನೀಡುತ್ತಿದ್ದು, ಪೂರಕವಾಗಿ ಪೌಷ್ಟಿಕಾಂಶಗಳನ್ನು ಪಡೆಯಲೆಂದು ಪ್ರತಿ ತಿಂಗಳು ₹ 500 ನೀಡುವ ಯೋಜನೆ ಇದು. 6 ತಿಂಗಳು, 8 ತಿಂಗಳು, 2 ವರ್ಷ ಅಥವಾ ರೋಗದ ತೀವ್ರತೆ ಆಧರಿಸಿ ಚಿಕಿತ್ಸೆ ಪೂರ್ಣಗೊಳ್ಳುವವರೆಗೆ ರೋಗಿಗಳ ಬ್ಯಾಂಕ್ ಖಾತೆಗಳಿಗೆ ಹಣವನ್ನು ನೇರವಾಗಿ ಜಮಾ ಮಾಡಲಾಗುತ್ತಿತ್ತು.

ಆದರೆ, ರಾಜ್ಯದಲ್ಲಿ ‘ಖಜಾನೆ–2’ ಅನುಷ್ಠಾನದಲ್ಲಿ ಆಗಿರುವ ತಾಂತ್ರಿಕ ತೊಂದರೆಯಿಂದಾಗಿ ರೋಗಿಗಳಿಗೆ ಹಣ ಸಿಗುತ್ತಿಲ್ಲ. ರಾಜ್ಯದಲ್ಲಿ ಒಟ್ಟು 81,585 ಕ್ಷಯ ರೋಗಿಗಳಿದ್ದಾರೆ.

ಅನುಕೂಲವಾಗುತ್ತಿತ್ತು: ‘ಆರು ತಿಂಗಳಿಂದ ಚಿಕಿತ್ಸೆ ಪಡೆಯುತ್ತಿದ್ದೇನೆ. ಹಣ ಬಂದಿಲ್ಲ. ತಾಂತ್ರಿಕ ತೊಂದರೆಯಾಗಿದೆ, ಹಣ ಬಂದೇ ಬರುತ್ತದೆ ಎಂದು ಕ್ಷಯ ರೋಗ ನಿರ್ಮೂಲನಾ ಕೇಂದ್ರದ ಅಧಿಕಾರಿಗಳು ತಿಳಿಸಿದ್ದಾರೆ. ಸಕಾಲದಲ್ಲಿ ಹಣ ಸಿಕ್ಕಿದ್ದರೆ ಪೌಷ್ಟಿಕ ಆಹಾರ ಖರೀದಿಸಲು ಅನುಕೂಲವಾಗುತ್ತಿತ್ತು’ ಎಂದು ಗಾಂಧಿನಗರದ ರೋಗಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಕೆಲವು ಜಿಲ್ಲೆಗಳಲ್ಲಿ ಸಂಘ–ಸಂಸ್ಥೆಗಳ ಮೂಲಕ ಪೌಷ್ಟಿಕ ಆಹಾರದ ಕಿಟ್, ಪ್ರೋಟೀನ್ ಪುಡಿಯ ಡಬ್ಬಿ ಕೊಡಿಸುವ ಪ್ರಯತ್ನವನ್ನು ಅಧಿಕಾರಿಗಳು ಮಾಡುತ್ತಿದ್ದಾರೆ. ಮೈಸೂರಲ್ಲೂ ಈ ಕೆಲಸ ನಡೆದಿದೆ. ಕೆಲವು ವೈದ್ಯರು ರೋಗಿಗಳನ್ನು ದತ್ತು ಪಡೆದಿದ್ದಾರೆ. ಆದರೆ, ಎಲ್ಲರಿಗೂ ಒದಗಿಸಲು ಸಾಧ್ಯವಾಗಿಲ್ಲ.

> ಕ್ಷಯ ರೋಗಿಗಳಿಗೆ ಹಣ ಬಾರದ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗಿದೆ. ಅರ್ಹರೆಲ್ಲರಿಗೂ ಹಣ ದೊರಕುತ್ತದೆ. ಪ್ರಕ್ರಿಯೆಗಳು ನಡೆಯುತ್ತಿವೆ
>
> **ಡಾ.ಸಿರಾಜ್ ಅಹಮದ್,** ಜಿಲ್ಲಾ ಕ್ಷಯ ರೋಗ ನಿರ್ಮೂಲನಾ ಕೇಂದ್ರದ ವೈದ್ಯಾಧಿಕಾರಿ

ನಡೆದಿದೆ ಅಪ್‌ಡೇಟ್ ಪ್ರಕ್ರಿಯೆ: ‘ಒಂದು ವರ್ಷದಿಂದ ರೋಗಿಗಳಿಗೆ ಹಣ ಬಿಡುಗಡೆಯಾಗಿಲ್ಲ. ನಾವು 2022ರ ಸೆಪ್ಟೆಂಬರ್‌ವರೆಗೆ ನಮ್ಮ ಖಾತೆಯಿಂದ ನೇರವಾಗಿ ಬ್ಯಾಂಕ್ ಮೂಲಕ ಹಣ ಪಾವತಿಸುತ್ತಿದ್ದೆವು (ಪಿಎಫ್‌ಎಂಎಸ್‌ನಿಂದ). ಖಜಾನೆ–2 ತಂತ್ರಾಂಶ ಬಂದ ನಂತರ ತೊಡಕಾಗಿದೆ. ಹೀಗಾಗಿ, ಸೇವಾಸಿಂಧು ಪೋರ್ಟಲ್‌ನಲ್ಲಿ ಅಪ್‌ಡೇಟ್ ಮಾಡುವಂತೆ ಇಲಾಖೆಯಿಂದ ತಿಳಿಸಲಾಗಿದೆ. ಆ ಪ್ರಕ್ರಿಯೆ ನಡೆಸುತ್ತಿದ್ದೇವೆ’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಬಾಕಿ ಬರಬೇಕಾದ ಫಲಾನುಭವಿಗಳ ಆಧಾರ್ ಸಂಖ್ಯೆ, ಬ್ಯಾಂಕ್ ಖಾತೆ ಮಾಹಿತಿ ದಾಖಲಿಸಲಾಗುತ್ತಿದೆ. ಆರೋಗ್ಯ ಇಲಾಖೆಯಿಂದಲೇ ಫೆಬ್ರುವರಿ ಅಂತ್ಯದೊಳಗೆ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಲಾಗುವುದು ಎಂದು ತಿಳಿಸಲಾಗಿದೆ’ ಎಂದರು.

‘ಬಿಪಿಎಲ್ ಹಾಗೂ ಎಪಿಎಲ್ ಪಡಿತರ ಚೀಟಿಯುಳ್ಳ ಎಲ್ಲರಿಗೂ ಆರ್ಥಿಕ ನೆರವು ದೊರೆಯುತ್ತದೆ. ಎಪಿಎಲ್‌ನ ಚೀಟಿ ಹೊಂದಿರುವ ಕೆಲವರು ಬ್ಯಾಂಕ್ ಖಾತೆ ಸಂಖ್ಯೆ ಕೊಡುವುದಿಲ್ಲ, ಕೆಲವರು ಕೀಳರಿಮೆ ಕಾರಣದಿಂದ ಹಣ ಬೇಡ ಎನ್ನುತ್ತಾರೆ’ ಎಂದು ತಿಳಿಸಿದರು.

‘ಅಂತರ್‌ಜಾತಿ ವಿವಾಹಿತರ ರಾಜ್ಯ ಸಮ್ಮೇಳನಕ್ಕೆ ಸಿದ್ಧತೆ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಅಂತರ್‌ಜಾತಿ ಹಾಗೂ ಅಂತರ್‌ಧರ್ಮೀಯ ವಿವಾಹಗಳನ್ನು ಪ್ರೋತ್ಸಾಹಿಸಲು ಜನಸ್ಪಂದನಾ ಟ್ರಸ್ಟ್ ಮೂಲಕ ವಿವಾಹಿತರ ರಾಜ್ಯ ಸಮ್ಮೇಳನ ಆಯೋಜಿಸಲಿದೆ’ ಎಂದು ಕಾಂಗ್ರೆಸ್ ಮುಖಂಡ ಎಂ.ಸೋಮಶೇಖರ ತಿಳಿಸಿದರು.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ಜಾತಿಯ ಅಮಲಿನಿಂದ ಮರ್ಯಾದಾ ಹತ್ಯೆ ಹೆಚ್ಚುತ್ತಿದ್ದು, ಸಮಸಮಾಜದ ನಿರ್ಮಾಣಕ್ಕಾಗಿ ಅಂತರ್‌ಜಾತಿ ವಿವಾಹವನ್ನು ಪ್ರೋತ್ಸಾಹಿಸಬೇಕು. ವಿವಾಹವಾಗಿ ಉತ್ತಮ ಬಾಳ್ವೆ ಮಾಡುತ್ತಿರುವವರನ್ನು ಕರೆಸಿ ಸನ್ಮಾನಿಸಲಾಗುವುದು. ಮದುವೆಯಾದವರು ಎದುರಿಸುವ ಹಲವು ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಪ್ರಯತ್ನವನ್ನೂ ಟ್ರಸ್ಟ್ ಮಾಡಲಿದೆ. 2023ರಲ್ಲಿ ರಾಜ್ಯದಲ್ಲಿ ಒಟ್ಟು 20,365 ಜೋಡಿ ಅಂತರ್‌ಜಾತಿ ವಿವಾಹವಾಗಿದ್ದಾರೆ. ಸಮಾಜಕ್ಕೆ ಅಂಜಿ ಅವರು ಮುಂದೆ ಬರುತ್ತಿಲ್ಲ. ಹೀಗಾಗಿ ಪೊಲೀಸ್ ಠಾಣೆಗಳಲ್ಲಿ ಅವರಿಗೆ ಕಾನೂನು ಭದ್ರತೆ ನೀಡುವ ಬಗ್ಗೆ, ಅವರ ಮಕ್ಕಳಿಗೆ ಮೀಸಲಾತಿ ಕಲ್ಪಿಸುವ ಬಗ್ಗೆಯೂ ಹೋರಾಟ ನಡೆಸಲಾಗುವುದು’ ಎಂದರು.

ಸಹಾಯ: ‘ಅಂತರ್‌ಜಾತಿ, ಅಂತರ್‌ಧರ್ಮೀಯ ಮದುವೆಯಾದವರು ನೋಂದಣಿಗಾಗಿ ಹಾಗೂ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ 9886752274, 9880390463 ಮೊಬೈಲ್ ನಂಬರ್‌ಗಳನ್ನು ಸಂಪರ್ಕಿಸಬಹುದು’ ಎಂದರು.

ಪ್ರೊ.ಕಾಳೇಗೌಡ ನಾಗಾವರ ಮಾತನಾಡಿ, ‘ಬುದ್ಧ, ಬಸವಣ್ಣನವರ ಚಿಂತನೆ ಎಲ್ಲರಲ್ಲೂ ತುಂಬಬೇಕೆಂಬ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ. ಪ್ರತಿ ಎರಡು ತಿಂಗಳಿಗೊಮ್ಮೆ ಹುಣ್ಣಿಮೆಯ ದಿನ ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ನಡೆಸಲಾಗುವುದು’ ಎಂದರು. ಕಾಂಗ್ರೆಸ್ ಮುಖಂಡ ಎಚ್‌.ವಿ.ವೆಂಕಟೇಶ್, ಆರ್‌. ಸ್ವಾಮಿ ಆನಂದ್, ಕೃಷ್ಣ, ಧನಂಜಯ, ಅಮ್ಮಸಂದ್ರ ಸುರೇಶ್ ಇದ್ದರು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಭರವಸೆ • ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್‌ನಿಂದ ಪತ್ರಿಕಾ ವಿತರಕರ ನೋಂದಣಿ

‘ಇ–ಶ್ರಮ್: ವಯೋಮಿತಿ 70ಕ್ಕೆ ಏರಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇ-ಶ್ರಮ್’ ಯೋಜನೆಯಲ್ಲಿ ಹೆಸರು ನೋಂದಾಯಿಸುವ ಅಸಂಘಟಿತ ಕಾರ್ಮಿಕರ ವಯೋಮಿತಿಯನ್ನು ಈಗಿನ 59 ವರ್ಷದಿಂದ 70 ವರ್ಷಕ್ಕೆ ವಿಸ್ತರಿಸಲಾಗುತ್ತದೆ’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿಳಿಸಿದರು.

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ವತಿಯಿಂದ ಎಂ.ಜಿ. ರಸ್ತೆಯಲ್ಲಿ ‘ಪ್ರಜಾವಾಣಿ’ ಕೇಂದ್ರ ಕಚೇರಿಯಲ್ಲಿ ಗುರುವಾರ ಆಯೋಜಿಸಿದ್ದ ‘ಪತ್ರಿಕಾ ವಿತರಕರಿಗೆ ‘ಇ-ಶ್ರಮ್’ ಯೋಜನೆಯಡಿ ನೋಂದಣಿ ಕಾರ್ಯಕ್ರಮ’ದಲ್ಲಿ ಅವರು ಮಾತನಾಡಿದರು.

‘ಸಾರಿಗೆ ವ್ಯಾಪ್ತಿಗೆ ಬರುವ ಆಟೊ ಚಾಲಕರು, ಟೈರ್ ಅಂಗಡಿಯವರು, ಮೆಕ್ಯಾನಿಕ್, ಗ್ಯಾರೇಜ್ ಮಾಲೀಕರು ಸೇರಿದಂತೆ ಸುಮಾರು 40 ಲಕ್ಷ ಮಂದಿ ಅಸಂಘಟಿತ ಕಾರ್ಮಿಕರನ್ನು ‘ಇ-ಶ್ರಮ್’ ಯೋಜನೆಯಡಿ ತರಲು ಚಿಂತಿಸಲಾಗಿದೆ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಶೇ 11ರಷ್ಟು ಸಾರಿಗೆ ಸೆಸ್‌ನಿಂದ ಸುಮಾರು ₹250 ಕೋಟಿ ನೀಡಲು ಸಮ್ಮತಿಸಿದ್ದು, ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ, ಈ ವಲಯದ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ನೀಡಲಾಗುತ್ತದೆ’ ಎಂದು ಮಾಹಿತಿ ನೀಡಿದರು.

‘ಕಡ್ಡಾಯ ಗ್ರಾಚ್ಯುಟಿ ಯೋಜನೆಯಡಿ, ಆ ಹಣವನ್ನು ಉದ್ಯೋಗದಾತರು/ ಕಂಪನಿಯವರು ವಿಮಾ ಸಂಸ್ಥೆಯಲ್ಲಿ ತೊಡಗಿಸಬೇಕು. ಕಂಪನಿ ಆರ್ಥಿಕವಾಗಿ ದಿವಾಳಿಯಾದಂತಹ ಸಂದರ್ಭದಲ್ಲೂ ಉದ್ಯೋಗಿಗೆ ಸಿಗಬೇಕಾದ ಗ್ರಾಚ್ಯುಟಿ ಹಣ ಸಿಗಲಿದೆ. ರಾಜ್ಯ ಸರ್ಕಾರ ಶೀಘ್ರದಲ್ಲೇ ಈ ‘ಕಡ್ಡಾಯ ಗ್ರಾಚ್ಯುಟಿ’ ಮಸೂದೆಯನ್ನು ಮಂಡಿಸಲಿದೆ. ಇದು ಕಾಯ್ದೆಯಾದ ಮೇಲೆ ಸುಮಾರು 80 ಲಕ್ಷ ಉದ್ಯೋಗಿಗಳಿಗೆ ಸಹಾಯವಾಗಲಿದೆ’ ಎಂದು ಸಂತೋಷ್ ಲಾಡ್ ತಿಳಿಸಿದರು.

‘ಅಂಗಡಿಗಳಲ್ಲಿ ಹಾಗೂ ಇತರ ವಲಯದ ಉದ್ಯೋಗಿಗಳಲ್ಲಿ ಶೇ 5ರಷ್ಟು ಮೀಸಲು ಒದಗಿಸಲು ಪ್ರಯತ್ನಿಸುತ್ತಿದ್ದೇವೆ. ಕಳೆದ ಬಾರಿ ಸಿದ್ಧರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಮಸೂದೆ ಮಂಡಿಸಲು ಮುಂದಾದಾಗ, ಕೆಲವು ತಾಂತ್ರಿಕ ಅಡಚಣೆಗಳಿಂದ ಹಿಂದೆ ಸರಿದೆವು. ಈ ಬಾರಿ ಆ ಮಸೂದೆ ಸಿದ್ಧಪಡಿಸಲಾಗಿದೆ’ ಎಂದರು.

ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಮಾತನಾಡಿ, ‘ಪತ್ರಿಕಾ ಕ್ಷೇತ್ರದಲ್ಲಿ ಪತ್ರಿಕಾ ವಿತರಕರ ಕೊಡುಗೆ ಅಮೂಲ್ಯವಾದದ್ದು. ಅವರನ್ನು ಗುರುತಿಸಿ, ಯೋಜನೆ ತಲುಪಿಸಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯ ಕಾರ್ಮಿಕ ಇಲಾಖೆ ವತಿಯಿಂದ ‘ಇ-ಶ್ರಮ್’ ಯೋಜನೆ ಒದಗಿಸಲಾಗುತ್ತಿದೆ. ಪತ್ರಿಕಾ ವಿತರಕರ ಹಲವು ಬೇಡಿಕೆಗಳಿದ್ದು, ಹಂತಹಂತವಾಗಿ ಅವುಗಳನ್ನು ಈಡೇರಿಸಲು ಪ್ರಯತ್ನಿಸಲಾಗುವುದು’ ಎಂದರು.

ಕಾರ್ಮಿಕ ಇಲಾಖೆ ಆಯುಕ್ತ ಎಚ್.ಎನ್. ಗೋಪಾಲಕೃಷ್ಣ ಮಾತನಾಡಿ, ‘ರಾಜ್ಯದಲ್ಲಿ ಒಂದು ಕೋಟಿಗೂ ಮೀರಿದ ಅಸಂಘಟಿತ ಕಾರ್ಮಿಕರಿದ್ದರೂ, ಯೋಜನೆಗೆ ನೋಂದಾಯಿಸಿಕೊಳ್ಳುವವರ ಸಂಖ್ಯೆ ಕಡಿಮೆ ಇದೆ. 30 ಸಾವಿರ ಪತ್ರಿಕಾ ವಿತರಕರಲ್ಲಿ, 5 ಸಾವಿರ ಜನರು ಮಾತ್ರ ನೋಂದಣಿ ಮಾಡಿಕೊಂಡಿದ್ದಾರೆ. ಎಲ್ಲರೂ ನೋಂದಣಿ ಮಾಡಿಕೊಂಡರೆ, ಮುಂದಿನ ದಿನಗಳಲ್ಲಿ ಸೌಲಭ್ಯಗಳನ್ನು ವಿತರಿಸುವ ಸಂದರ್ಭದಲ್ಲಿ ಈ ದತ್ತಾಂಶಗಳು ಉಪಯೋಗಕ್ಕೆ ಬರುತ್ತವೆ’ ಎಂದು ಹೇಳಿದರು.

‘ಪ್ರಜಾವಾಣಿ ಪತ್ರಿಕೆಯ 75 ವರ್ಷಗಳ ಯಶಸ್ಸಿನ ಹಿಂದೆ ಪತ್ರಿಕಾ ವಿತರಕರ ಶ್ರಮವೂ ಇದೆ. ಅದನ್ನು ಗುರುತಿಸಿ ಯೋಜನೆಯನ್ನು ಅವರಿಗೆ ತಲುಪಿಸುವ ನಿಟ್ಟಿನಲ್ಲಿ ರಾಜ್ಯದಾದ್ಯಂತ ಈ ಕಾರ್ಯಕ್ರಮವನ್ನು ನಾವು ಹಮ್ಮಿಕೊಳ್ಳುತ್ತಿದ್ದೇವೆ. ಗುರುವಾರ ಒಂದೇ ದಿನ 500ಕ್ಕೂ ಹೆಚ್ಚು ಪತ್ರಿಕಾ ವಿತರಕರು ‘ಇ-ಶ್ರಮ್’ ಯೋಜನೆಗೆ ನೋಂದಣಿಯಾಗಿದ್ದಾರೆ’ ಎಂದು ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ತಿಳಿಸಿದರು.

ದಿ ಪ್ರಿಂಟರ್ಸ್ ಮೈಸೂರು ಲಿಮಿಟೆಡ್‌ನ ಸಿಇಒ ಸೀತಾರಾಮನ್ ಶಂಕರ್, ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ಕಿರಣ್ ಸುಂದರರಾಜನ್ ಭಾಗವಹಿಸಿದ್ದರು.

ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕಾ ಏಜೆಂಟರು ಮತ್ತು ವಿತರಕರಿಗೆ ಇ-ಶ್ರಮ್ ನೋಂದಣಿ ಕಾರ್ಯಕ್ರಮದಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಗುರುವಾರ ಪ್ರಜಾವಾಣಿ ಕಚೇರಿಯಲ್ಲಿ ಪತ್ರಿಕಾ ಏಜೆಂಟರು ಮತ್ತು ವಿತರಕರಿಗೆ ಇ ಶ್ರಮ್ ಕಾರ್ಡ್ ವಿತರಿಸಿದರು. ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ಕಿರಣ್ ಸುಂದರರಾಜನ್, ದಿ ಪ್ರಿಂಟರ್ಸ್ ಮೈಸೂರು ಲಿಮಿಟೆಡ್ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆ ಸಂಪಾದಕರೂ ಆದ ಸಿಇಒ ಸೀತಾರಾಮನ್ ಶಂಕರ್, ಕಾರ್ಮಿಕ ಇಲಾಖೆ ಆಯುಕ್ತ ಎಚ್.ಎನ್. ಗೋಪಾಲಕೃಷ್ಣ, ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಮತ್ತು ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ –ಪ್ರಜಾವಾಣಿ ಚಿತ್ರ

‘ಯೋಜನೆಗೆ 10 ವಲಯ ಸೇರ್ಪಡೆ’

‘ರಾಜ್ಯದ 394 ವಿವಿಧ ವಲಯಗಳಲ್ಲಿ 1 ಕೋಟಿಗೂ ಹೆಚ್ಚು ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರು ಇ-ಶ್ರಮ್ ಯೋಜನೆಗೆ ನೋಂದಣಿ ಮಾಡಿಕೊಳ್ಳಬಹುದು. ಪತ್ರಿಕಾ ವಿತರಕರ ಸೇರಿದಂತೆ ಅಂಗಡಿಕಾರರು, ಹಮಾಲರು, ಟೈಲರ್‌ಗಳು, ವೀಳ್ಯದೆಲೆ ವ್ಯಾಪಾರಿಗಳು, ಕ್ಷೌರಿಕ ವೃತ್ತಿ ನಿರತರು, ಛಾಯಾಗ್ರಾಹಕರು, ಶಾಮಿಯಾನ ವಿಭಾಗ, ಸಿನಿಮಾ ಕ್ಷೇತ್ರದಲ್ಲಿ ಕೆಲಸ ಮಾಡುವವರು ಸೇರಿದಂತೆ 10 ವರ್ಗದ ಅಸಂಘಟಿತ ಕಾರ್ಮಿಕರನ್ನು ‘ಇ-ಶ್ರಮ್’ ಯೋಜನೆಯಡಿ ರಾಜ್ಯದಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ಸೇರಿಸಿಕೊಳ್ಳಲಾಗುತ್ತದೆ’ ಎಂದು ಸಚಿವ ಸಂತೋಷ್ ಲಾಡ್ ತಿಳಿಸಿದರು.

‘ಪ್ರತಿ ಲೀಟರ್ ಪೆಟ್ರೋಲ್ ಹಾಗೂ ಡೀಸೆಲ್‌ಗೆ ₹1 ಸೆಸ್ ವಿಧಿಸಿ, ಇದರಿಂದ ಅಸಂಘಟಿತ ಕಾರ್ಮಿಕರ ‘ಕಾರ್ಪಸ್ ಫಂಡ್’ ಸ್ಥಾಪಿಸುವ ಯೋಜನೆ ಇದೆ. ಈ ಮೂಲಕ ಅಸಂಘಟಿತ ಕಾರ್ಮಿಕರಿಗೆ ಹೆಚ್ಚಿನ ಸೌಲಭ್ಯಗಳು ಕಲ್ಪಿಸಲು ಯೋಜಿಸಲಾಗಿದೆ’ ಎಂದರು.

ಎಸ್‌ಟಿ ಪಟ್ಟಿಗೆ ಕಾಡುಗೊಲ್ಲರು ದೇವೇಗೌಡರ ಜತೆಗೆ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಕಾಡುಗೊಲ್ಲರನ್ನು (ಅಡವಿಗೊಲ್ಲ) ಪರಿಶಿಷ್ಟ ಪಂಗಡದ (ಎಸ್‌ಟಿ) ಪಟ್ಟಿಗೆ ಸೇರ್ಪಡೆಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಯ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಅವರು ರಾಜ್ಯಸಭಾ ಸದಸ್ಯ ಎಚ್‌.ಡಿ.ದೇವೇಗೌಡ ಅವರನ್ನು ಗುರುವಾರ ಭೇಟಿ ಮಾಡಿ ಚರ್ಚಿಸಿದರು. ಸಮುದಾಯದ ಬೇಡಿಕೆ ವಿಷಯದಲ್ಲಿ ಕೇಂದ್ರ ಶೀಘ್ರ ತೀರ್ಮಾನ ತೆಗೆದು ಕೊಳ್ಳಲಿದೆ ಎಂದು ಭರವಸೆ ನೀಡಿದರು.

‘ಯಾವುದೇ ಸಮುದಾಯವನ್ನು ಪರಿಶಿಷ್ಟ ಪಂಗಡ ಅಥವಾ ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡುವುದಕ್ಕೆ ಅಥವಾ ಕೈ ಬಿಡುವುದಕ್ಕೆ ಹಾಗೂ ಇತರ ಪರಿಷ್ಕರಣೆಗೆ ಕೇಂದ್ರ ಸರ್ಕಾರ 1999ರಲ್ಲೇ ಕಾರ್ಯವಿಧಾನ ರೂಪಿಸಿದೆ. ಇದರ ಪ್ರಕಾರ, ಯಾವುದೇ ಪ್ರಸ್ತಾವನೆಯನ್ನು ಸಂಬಂಧಿಸಿದ ರಾಜ್ಯ ಸರ್ಕಾರ ಸಲ್ಲಿಸಬೇಕು. ಇದಕ್ಕೆ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ (ಆರ್‌ಜಿಐ) ಹಾಗೂ ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗ ಸಹಮತ ವ್ಯಕ್ತಪಡಿಸಬೇಕು. ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವಕ್ಕೆ ಆರ್‌ಜಿಐ ಈ ಹಿಂದೆ ಕೆಲವು ಸ್ಪಷ್ಟನೆಗಳನ್ನು ಕೇಳಿತ್ತು. ಅದಕ್ಕೆ ಕರ್ನಾಟಕ ಸರ್ಕಾರ ಉತ್ತರ ನೀಡಿತ್ತು. ಈ ಪ್ರಸ್ತಾವನೆ ಸದ್ಯ ಆರ್‌ಜಿಐ ಕಚೇರಿಯಲ್ಲಿದೆ. ಆರ್‌ಜಿಐ ಶಿಫಾರಸು ಮಾಡಿದ ಬಳಿಕ ಸಚಿವ ಸಂಪುಟ ಅಗತ್ಯ ತೀರ್ಮಾನ ತೆಗೆದುಕೊಳ್ಳಲಿದೆ’ ಎಂದು ಮೂಲಗಳು ತಿಳಿಸಿವೆ.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1. Piaggio Greaves - P_APE _MINI_GOODS YOM – 2020 Reg No – KA51AF9318
2. CB_CASE 770 BACKHOE LOADER. YOM – 2021 Reg No – Unregistered
3. CB_LPT1212_TATAMOTORS YOM – 2021 Reg No – KA53AA2794
4. CB_SANY MAKE EXCAVATOR MODEL SY 80C_9 YOM – 2023 Reg No – Unregistered
5. CB_AL 2518H FULLY BUILT TIPPER. YOM – 2019 Reg No – KA06AA6335 Reserve price: 13,03,600/-
6. ASHOK LEYLAND LIMITED - CB_AMBULANCE YOM – 2022 Reg No – KA07B4115
7. CB_VE_11_10_CAB_CHASSIS YOM – 2022 Reg No – KA53AA7485
8. MAHINDRA BOLERO PICK-UP YOM – 2021 Reg No – KA42B3227
9. CB_AL 3118 CAB CHASSIS GOODS. YOM – 2015 Reg No – KA40B0205
10. MAHINDRA BOLERO PICK-UP YOM – 2021 Reg No – KA11C1068

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION" INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 02.02.2024

(Please note that closing Auction date would not be a Weekly off / Holiday).

BRANCH ADDRESS:
KOTAK MAHINDRA BANK LTD., 22, MG ROAD, BANGALORE, KARNATAKA – 560001
OR
Contact: Muzzammilkhan N
Kotak Mahindra Bank Ltd.
Contact / 080 - 61564205

ಶಿಕ್ಷಕರ ನೇಮಕಾತಿ ತಡೆ: ಆದೇಶ ಮಾರ್ಪಾಡು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ 13,352 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಈ ಹಿಂದೆ ನೀಡಿದ್ದ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ಗುರುವಾರ ಮಾರ್ಪಡಿಸಿದೆ. ಈ ನೇಮಕಾತಿಗಳು ವಿವಾಹಿತ ಮಹಿಳೆಯರ ಆದಾಯ ಮತ್ತು ಜಾತಿ ಪ್ರಮಾಣಪತ್ರಗಳ ವಿವಾದಗಳಿಗೆ ಸಂಬಂಧಿಸಿದಂತೆ ಬಾಕಿ ಉಳಿದಿರುವ ಅರ್ಜಿಗಳ ತೀರ್ಪಿಗೆ ಒಳಪಟ್ಟಿರುತ್ತದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಹೈಕೋರ್ಟ್ ವಿಭಾಗೀಯ ಪೀಠವು 2023ರ ಅಕ್ಟೋಬರ್ 13ರಂದು ಆದೇಶಿಸಿತ್ತು. ಈ ಆದೇಶಕ್ಕೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠವು 2024ರ ಜನವರಿ 3ರಂದು ತಡೆಯಾಜ್ಞೆ ನೀಡಿತ್ತು. ‘ತಡೆಯಾಜ್ಞೆಯಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಹೀಗಾಗಿ, ಆದೇಶ ಮಾರ್ಪಡಿಸಿ ಶಿಕ್ಷಕರು ಉದ್ಯೋಗ ಮುಂದುವರಿಸಲು ಅನುಮತಿ ನೀಡಬೇಕು’ ಎಂದು ಕೋರಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಪ್ರಕರಣದ ವಿಚಾರಣೆಯನ್ನು ಗುರುವಾರ ನಡೆಸಿದ ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಹಾಗೂ ಅಹ್ಸಾನುದ್ದೀನ್ ಅಮಾನುಲ್ಲಾ ಅವರಿದ್ದ ಪೀಠ, ಜನವರಿ 3ಕ್ಕಿಂತ ಮೊದಲು ಕೆಲಸ ಮಾಡುತ್ತಿದ್ದ ಕಾರಣ ಶಿಕ್ಷಕರಿಗೆ ಶಾಲೆಗಳಲ್ಲಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಲು ರಾಜ್ಯ ಸರ್ಕಾರಕ್ಕೆ ಅನುಮತಿ ನೀಡಿತು. ಬಳಿಕ ವಿಚಾರಣೆಯನ್ನು ಮಾರ್ಚ್ 12ಕ್ಕೆ ಮುಂದೂಡಿತು.

ರಾಜ್ಯ ಸರ್ಕಾರವು ಶಿಕ್ಷಕರ ನೇಮಕಾತಿಯ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸುವಾಗ ವಿವಾಹಿತ ಮಹಿಳೆಯ ಪತಿಯ ಆದಾಯ ಪ್ರಮಾಣಪತ್ರ ಪರಿಗಣಿಸಿತ್ತು. ‘ಮದುವೆಯಾದ ಮಹಿಳೆಯರು ಪತಿಯ ಆದಾಯ ಪ್ರಮಾಣಪತ್ರವನ್ನೇ ಸಲ್ಲಿಸಬೇಕು ಎನ್ನುವ ಕುರಿತು ನೇಮಕಾತಿ ಅಧಿಸೂಚನೆಯಲ್ಲಿ ಸ್ಪಷ್ಟ ನಿರ್ದೇಶನ ಇರಲಿಲ್ಲ. ಮೆರಿಟ್ ಇದ್ದರೂ ನಮ್ಮನ್ನು ನೇಮಕಾತಿ ಪಟ್ಟಿಯಿಂದ ಕೈಬಿಡಲಾಗಿದೆ’ ಎಂದು ಆರೋಪಿಸಿ ಅವಕಾಶವಂಚಿತರು ಹೈಕೋರ್ಟ್‌ನ ಮೆಟ್ಟಿಲೇರಿದ್ದರು.

ಹೈಕೋರ್ಟ್‌ನ ಏಕಸದಸ್ಯ ಪೀಠವು, ‘ವಿವಾಹಿತ ಮಹಿಳೆಯ ತಂದೆಯ ಆದಾಯ ಪ್ರಮಾಣಪತ್ರವನ್ನೂ ಪರಿಗಣಿಸಬೇಕು’ ಎಂದು ಆದೇಶಿಸಿ, ತಾತ್ಕಾಲಿಕ ಆಯ್ಕೆಪಟ್ಟಿಯನ್ನು ರದ್ದುಗೊಳಿಸಿತ್ತು. ಕೋರ್ಟ್ ಆದೇಶದಂತೆ ಸರ್ಕಾರವು ಆಯ್ಕೆಪಟ್ಟಿಯನ್ನು ಪರಿಷ್ಕರಿಸಿತ್ತು. ಹೊಸ ಪಟ್ಟಿ ಪ್ರಕಟಿಸಿದಾಗ ಮೊದಲಿದ್ದ ಪಟ್ಟಿಯಿಂದ 451 ಅಭ್ಯರ್ಥಿಗಳು ಹೊರಗುಳಿದರು. ಪ್ರಕರಣ ಮತ್ತೆ ಕೋರ್ಟ್ ಮೆಟ್ಟಿಲೇರಿತ್ತು.

6 ಮಸೂದೆ ರಾಜ್ಯಪಾಲರ ಬಳಿ ಬಾಕಿ

ಬೆಂಗಳೂರು: ರಾಜ್ಯಪಾಲರ ಅಂಗೀಕಾರಕ್ಕೆ ಕಳಿಸಿದ್ದ 19 ಮಸೂದೆಗಳಲ್ಲಿ ಒಟ್ಟು ಆರು ಮಸೂದೆಗಳು ಅವರ ಬಳಿಯೇ ಉಳಿದಿದ್ದು, ತಾಂತ್ರಿಕ ಕಾರಣಗಳಿಗಾಗಿ ಉಳಿದಿವೆ ಎಂದು ಕಾನೂನು ಮತ್ತು ಸಂಸದೀಯ ಸಚಿವ ಎಚ್‌.ಕೆ.ಪಾಟೀಲ ಹೇಳಿದರು.

‘ಮುಖ್ಯವಾಗಿ ಯಲ್ಲಮ್ಮನಗುಡ್ಡ ಅಭಿವೃದ್ಧಿ ಮಂಡಳಿ, ಬಾಂಬೆ ಪಬ್ಲಿಕ್ ಟ್ರಸ್ಟ್ ಕಾಯ್ದೆಯ ಮಸೂದೆಗಳೂ ಇವೆ. ಕೆಲವು ವಿವರಗಳನ್ನು ಅವರು ಕೇಳಿದ್ದು, ಅವುಗಳಿಗೆ ಸೂಕ್ತ ಮಾಹಿತಿ ಒದಗಿಸಲಾಗಿದೆ. ಈ ಸಂಬಂಧ ನಮ್ಮ ಇಲಾಖೆ ಮತ್ತು ರಾಜಭವನದ ನಡುವೆ ಪತ್ರ ವ್ಯವಹಾರ ನಡೆಯುತ್ತಿದೆ’ ಎಂದು ತಿಳಿಸಿದರು.

ಕರ್ನಾಟಕ ಹೈಕೋರ್ಟ್ (ತಿದ್ದುಪಡಿ) ಮಸೂದೆ 2023 ಅನ್ನು ಸಚಿವ ಸಂಪುಟದಲ್ಲಿ ಒಪ್ಪಿಗೆ ಪಡೆಯದೇ ವಿಧಾನಮಂಡಲದ ಅಧಿವೇಶನದಲ್ಲಿ ಮಂಡಿಸುವ ಅಗತ್ಯ ಏನಿತ್ತು ಎಂಬುದನ್ನು ಉಲ್ಲೇಖಿಸಿಲ್ಲ. ಆ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ರಾಜ್ಯಪಾಲರು ಸೂಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಪ್ರತ್ಯೇಕ ರಾಷ್ಟ್ರಕ್ಕಾಗಿ ಬೇಡಿಕೆ ಸಂಸದ ಸುರೇಶ್ ಎಚ್ಚರಿಕೆ

ಒಂದನೇ ಪುಟದಿಂದ

‘ದಕ್ಷಿಣ ರಾಜ್ಯಗಳಿಂದ ಸಂಗ್ರಹಿಸಿದ ಹಣವನ್ನು ಉತ್ತರದ ರಾಜ್ಯಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಇದರಿಂದ ನಮಗೆ ಆರ್ಥಿಕವಾಗಿ ತೊಂದರೆಯಾಗುತ್ತಿದೆ. ನಾವು ನ್ಯಾಯಯುತವಾದ ಪಾಲನ್ನು ಕೇಳುತ್ತಿದ್ದೇವೆ. ನಮಗೆ ಅನ್ಯಾಯ ಮಾಡುವ ಮೂಲಕ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು ಹಿಂದಿ ಭಾಗದವರು ಹೇರುತ್ತಿದ್ದಾರೆ’ ಎಂದು ಹೇಳಿದರು.

‘ಕರ್ನಾಟಕದಿಂದ ವರ್ಷಕ್ಕೆ ₹4 ಲಕ್ಷ ಕೋಟಿ ತೆರಿಗೆಯನ್ನು ಕೇಂದ್ರ ಸರ್ಕಾರ ವಸೂಲಿ ಮಾಡುತ್ತಿದೆ. ಅದಕ್ಕೆ ಪ್ರತಿಯಾಗಿ ರಾಜ್ಯಕ್ಕೆ ಸಿಗುತ್ತಿರುವುದು ಅತ್ಯಲ್ಪ. 15ನೇ ಹಣಕಾಸು ಆಯೋಗದ ಶಿಫಾರಸು ಮಾಡಿರುವ ಅನುದಾನವೂ ಬಂದಿಲ್ಲ. ಇದನ್ನು ನಾವು ಪ್ರಶ್ನಿಸಬೇಕಾಗಿದೆ’ ಎಂದರು.

‘ಈ ಬಜೆಟ್‌ನಲ್ಲಿ ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಕೇಂದ್ರದ ತೆರಿಗೆ ಸಂಗ್ರಹಕ್ಕೆ ರಾಜ್ಯವು ಪ್ರಮುಖ ಕೊಡುಗೆ ನೀಡಿದರೂ ದೊಡ್ಡ ನೀರಾವರಿ ಯೋಜನೆಗಳು ಅಥವಾ ಇತರ ಯಾವುದೇ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕೇಂದ್ರವು ಕರ್ನಾಟಕಕ್ಕೆ ಸಹಾಯ ಮಾಡುತ್ತಿಲ್ಲ’ ಎಂದು ಅವರು ದೂರಿದರು.

ಸಂಸದ ಡಿ.ಕೆ. ಸುರೇಶ ದೇಶ ಇಬ್ಭಾಗದ ಮಾತುಗಳನ್ನಾಡಿದ್ದು ಖಂಡನೀಯ. ಜವಾಬ್ದಾರಿ ಅರಿತು ಮಾತನಾಡಬೇಕು. ಜನಪ್ರತಿನಿಧಿಯಾಗಿ ಈ ರೀತಿ ಮಾತನಾಡಬಾರದು

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಸುರೇಶ್ ಅವರನ್ನು ಕಾಂಗ್ರೆಸ್‌ನಿಂದ ಉಚ್ಚಾಟನೆ ಮಾಡಬೇಕು ಎಂದು ಕೇಂದ್ರ ಸಂಸದೀಯ ವ್ಯವಹಾರ ಸಚಿವ ಪ್ರಲ್ಹಾದ ಜೋಶಿ ಒತ್ತಾಯಿಸಿದರು.

ಈ ಬಗ್ಗೆ ಗುರುವಾರ ರಾತ್ರಿ ಸ್ಪಷ್ಟನೆ ನೀಡಿರುವ ಡಿ.ಕೆ. ಸುರೇಶ್, ‘ವಿವಾದ ಸೃಷ್ಟಿಸಲು ಬಿಜೆಪಿಯವರು ತಮ್ಮ ಹೇಳಿಕೆಯನ್ನು ತಿರುಚಿದ್ದಾರೆ’ ಎಂದು ದೂರಿದರು. ‘ಕರ್ನಾಟಕವು ಭಾರತದ ಭಾಗವಾಗಿಯೇ ಇರುತ್ತದೆ. ನಮ್ಮದು ಒಕ್ಕೂಟ ವ್ಯವಸ್ಥೆ. ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತಿರುವುದನ್ನು ಹೇಳಿದ್ದೇನೆ’ ಎಂದರು.

ಭದ್ರಾ ಮೇಲ್ದಂಡೆಗೆ ಶೀಘ್ರ ಅನುದಾನ ಶೆಖಾವತ್ ಭರವಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಅನುದಾನವನ್ನು ಶೀಘ್ರ ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಭರವಸೆ ನೀಡಿದರು.

ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ನೇತೃತ್ವದಲ್ಲಿ ಹಿರಿಯೂರಿನ ತಾಲ್ಲೂಕು ಕೃಷಿಕ ಸಮಾಜದ ಪದಾಧಿಕಾರಿಗಳು ಜಲಶಕ್ತಿ ಸಚಿವರನ್ನು ಗುರುವಾರ ಭೇಟಿ ಮಾಡಿದರು. ನಿಯೋಗಕ್ಕೆ ಸಚಿವರು ಈ ಭರವಸೆ ನೀಡಿದರು.

‘ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಪರಿಗಣಿಸಿ ₹5,300 ಕೋಟಿ ಅನುದಾನ ನೀಡಲಾಗುವುದು ಎಂದು ಕಳೆದ ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ಆದರೆ, ಈವರೆಗೆ ಅನುದಾನ ಬಿಡುಗಡೆ ಮಾಡಿಲ್ಲ’ ಎಂದು ನಿಯೋಗವು ಸಚಿವರ ಗಮನಕ್ಕೆ ತಂದಿತು.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಅ. ಬೆಂಗಳೂರು

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರ ಕಛೇರಿ
ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು
ಸಂಖ್ಯೆ/ಬಿ4/ಎಲ್.ಎನ್.ಡಿ/ರೈಬಾ/ಟೆಂಡರ್/ಸಿಆರ್–27/2023–24
ದಿ: 29.01.2024
ದೂ.:08222–252041 e-mail –dirnagarahole@aranya.gov.in

ಟೆಂಡರ್ ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2023–24ನೇ ಸಾಲಿನಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನಹೊಸಹಳ್ಳಿ, ಮೇಟಿಕುಪ್ಪೆ ಮತ್ತು ಆನೆಚೌಕೂರು ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ “ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4ರಲ್ಲಿನ ಷರತ್ತುಗಳಿಗನುಗುಣವಾಗಿ” ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಕರೆಯಲಾಗಿದೆ.

ಉಪಯೋಗಿತ ರೈಲ್ವೆ ಹಳಿಗಳನ್ನು ಖರೀದಿಸಿ, ಸಾಗಾಣಿಕೆ ಮಾಡಿ ಆನೆ ತಡೆ ಬ್ಯಾರಿಕೇಡ್ ನಿರ್ಮಿಸುವುದು.	14.671ಕಿ.ಮೀ (16 ಯುನಿಟ್)	2,686.35 ಲಕ್ಷಗಳು*

(* ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವ ನಿರೀಕ್ಷೆ ಮೇರೆಗೆ) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 12.02.2024 ಸಂಜೆ 5:30 ಗಂಟೆ. ಸದರಿ ದಿನಾಂಕದಂದು ಟೆಂಡರ್ ಆಗದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮರು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: ಮತ್ತು ಸಮಯ: 19.02.2024 ಸಂಜೆ 5:30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು
DIPR/DDMYS/KSMCA/991/2023-24

ಗುಲಬರ್ಗಾ ವಿಶ್ವವಿದ್ಯಾಲಯ
"ಜ್ಞಾನ ಗಂಗಾ", ಕಲಬುರಗಿ–585 106, ಕರ್ನಾಟಕ
ದೂ.: 08472–263202, ಫ್ಯಾಕ್ಸ್: 08472–263206, ಇ–ಮೇಲ್: root@guluni.kar.nic.in
ಕ್ರ.ಸಂ.ಗುವಿಕ/ಆಡಳಿತ–ಉಗ್ರಾಣ/2023–24/1639A ದಿನಾಂಕ : 31–01–2024

:: ಟೆಂಡರ್ ಅಧಿಸೂಚನೆ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ ::

ಈ ಕೆಳಗೆ ನಮೂದಿಸಿದ ಕೆಲಸಗಳಿಗಾಗಿ ಗುಲಬರ್ಗಾ ವಿಶ್ವವಿದ್ಯಾಲಯವು ಅರ್ಹ ಟೆಂಡರ್‌ದಾರರಿಂದ ಟೆಂಡರಗಳನ್ನು ಆಹ್ವಾನಿಸಿದೆ.
1) Name of work : Providing Manpower Services through Outsource Agency GU/2023-24/SE0011, 2) Amount put to tender : **Rs. 7,00,00,000/-**, 3) EMD : Rs. 10,50,000/-, 4) Tender type : Two bid system, 5) Pre-Bid Meeting of tender in e-portal: **27-02-2024**, 6) Last date for receipt o tender in e-portal : **29-02-2024**
ಟೆಂಡರ್ ಅಧಿಸೂಚನೆ ಕುರಿತಂತೆ ವಿವರವಾದ ಮಾಹಿತಿಗಾಗಿ ವೀಕ್ಷಿಸಬಹುದಾದ ವೆಬ್‌ಸೈಟ್ https://kppp.karnataka.gov.in ಇರುತ್ತದೆ. ಅಲ್ಲದೆ, ಆಡಳಿತ ವಿಭಾಗದಿಂದ ಕೂಡಾ ಕಛೇರಿ ಸಮಯದಲ್ಲಿ ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದು.
ಸಹಿ/– ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/762/ಕೆ.ಎಸ್.ಎಂ.ಸಿ.&ಎ/2023–24

HAVERI DISTRICT CO-OPERATIVE MILK PRODUCERS SOCIETIES UNION LTD.,
Veterinary Hospital Compound P.B.ROAD, Haveri –581 110, [Karnataka]
Ph.No. 08375–200540, 200650 E-Mail- purhavemul@gmail.com
IFT No. HAVEMUL/PUR/1618/2023-24 Date:-30.01.2024

SHORT TERM E-TENDER NOTIFICATION
(Through e-Procurement Only)

The Haveri District Co-Operative Milk Producers Societies Union Ltd., **(HAVEMUL)** invites tender from eligible Tenderers for “**Design, Supply, Erection & Commissioning of 1 nos POWDER FILLING MACHINE (NICHROME/EQUIVALENT MAKE) including necessary civil and electrical works at Product Dairy Premises Haveri on turnkey basis” as per our technical specification mentioned in tender documents. The tenderer can visit & examine the site on his own cost before participating in the tender.**

The Tender Processing charges (non-refundable) & **EMD** of Rs.**1,00,000-00** may be paid to e-portal in any one of the forms specified in the tender documents. Tender documents may be downloaded from e-procurement website http://eproc.karnataka.gov.in. Interested tenderers may obtain further information at the same address or, **email: support@ihelpdsk.com** and other details can be seen in the tender documents. The HAVEMUL will not be held responsible for the website problems if any, last date submission or non-receipt of the same.

1	Last Date & Time for receipt of tender	15.02.2024, 04.00 PM
2	Date & Time for Opening of Technical Bid	17.02.2024, 11.00 AM onwards
3	Date & Time for Opening of Financial Bid	19.02.2024, 11.10 AM onwards

Sd/- Managing Director
Haveri District Co-Operative Milk Union Ltd

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಎಂ.ಪಿ. ವಿಭಾಗ, ರಾಮನಗರ.
ದೂ. : 080–2727 1259. ಇ–ಮೇಲ್ : eempdrmgm@gmail.com
ಟೆಂಡರ್ ಪ್ರಕಟಣೆ ಸಂಖ್ಯೆ : 08/2023–24 ದಿನಾಂಕ : 20–11–2023

ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ
ಸಂಖ್ಯೆ : 03/2023–24, ದಿನಾಂಕ : 29–01–2024

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಬಂಡವಾಳ ಹೂಡಿಕೆದಾರರು / ಡೆವಲಪರ್‌ರವರುಗಳಿಂದ : https://kppp.karnataka.gov.in ಮುಖಾಂತರ “ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆ ಜಲಾಶಯದ ಕೆಳ ಭಾಗದ ಉದ್ಯಾನವನದ ಸೌಂದರೀಕರಣ ಹಾಗೂ ಅಭಿವೃದ್ಧಿ ಕಾಮಗಾರಿ ಪ್ರವಾಸೋದ್ಯಮ ಸೌಲಭ್ಯಗಳನ್ನು ಡಿ.ಬಿ.ಎಫ್.ಒ.ಟಿ. ಮಾದರಿಯಲ್ಲಿ ಲಭ್ಯವಿರುವ 72 ಎಕರೆ ಜಾಗವನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಗೆ” Request for Expression of Interest ಅನ್ನು ಆಹ್ವಾನಿಸಲಾಗಿರುತ್ತದೆ.

ಸದರಿ ಪ್ರಕಟಣೆಯನ್ನು ಕಾರಣಾಂತರದಿಂದ ವಿಸ್ತರಣೆ ಮಾಡಿ ಪ್ರಕಟಿಸಿದೆ. ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ : 13–02–2024 ರ ಸಂಜೆ 5.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 14–02–2024 ರ ಸಂಜೆ 5.30 ಗಂಟೆಗೆ, ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ : 19–02–2024 ರ ಬೆಳಿಗ್ಗೆ 11.00 ಗಂಟೆಗೆ ಉಳಿದಂತೆ ಮೂಲ ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕಾ.ನೀ.ನಿ.ನಿ., ಎಂ.ಪಿ. ವಿಭಾಗ, ರಾಮನಗರ.
ಡಿಐಪಿಆರ್/ರಾಮನಗರ/423/ಮಣಿಪಾಲ್/2023–24

ಶಾಲಾ ಶಿಕ್ಷಣ ಇಲಾಖೆ
1ನೇ ಮಹಡಿ, ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು–560001, ದೂರವಾಣಿ: (080) 22213129
ಸಂಖ್ಯೆ: ಪಿಇ/ಎಫ್‌ಡಿ/47/2015–16/2023–24 ದಿನಾಂಕ: 31.01.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಆಯುಕ್ತರವರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಇದು ವಿದ್ಯಾರ್ಥಿಗಳಿಂದ ಪಡೆದಿರುವ ಕ್ರೀಡಾ ಶುಲ್ಕದ ಹೆಚ್ಚುವರಿಯಾಗಿರುವ ಹಣವನ್ನು ನಿಶ್ಚಿತ ಠೇವಣಿಯಲ್ಲಿಡಲು ಪ್ರಸಿದ್ಧ ಸಾರ್ವಜನಿಕ ವಲಯದ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಬಡ್ಡಿ ದರ ನಮೂದಿಸಿದ ಪ್ರಸ್ತಾವನೆಗಳನ್ನು ಇ–ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಮೂಲಕ ಆಹ್ವಾನಿಸಿದೆ. ಟೆಂಡರ್ ವಿದ್ಯುನ್ಮಾನ ವಿಧಾನದಲ್ಲಿ ಇರತಕ್ಕದ್ದು ಮತ್ತು ಅನುಮೋದಿತ ತಾಂತ್ರಿಕ ಬಿಡ್‌ಗಳ ಹಣಕಾಸಿನ ಬಿಡ್ ಅನ್ನು ಮಾತ್ರ ತೆರೆಯಲಾಗುವುದು. ಬಿಡ್ ಪೂರ್ವ ಸಭೆಯ **ದಿನಾಂಕ: 12.02.2024 ರಂದು ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್ ಮೌಲ್ಯದ 1% ಇಎಂಡಿ ಜೊತೆಗೆ ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಪ್‌ಲೋಡ್ ಮಾಡುವ ಕಡೆಯ ದಿನಾಂಕ ಮತ್ತು ಸಮಯ: **15.02.2024 ರಂದು ಸಂಜೆ 5.00 ಗಂಟೆವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **17.02.2024 ರಂದು ಬೆಳಿಗ್ಗೆ 11.00 ಗಂಟೆಗೆ** ಮತ್ತು ಹಣಕಾಸಿನ ಬಿಡ್‌ಗಳನ್ನು ದಿನಾಂಕ **19.02.2024 ಅಥವಾ 20.02.2024 ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು. ಟೆಂಡರ್ ತೆರೆಯುವ ಸ್ಥಳ: **ಆಯುಕ್ತರವರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, 1ನೇ ಮಹಡಿ, ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು–560001.** ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಖುದ್ದಾಗಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್ ಡೆಸ್ಕ್–9611237631 ಇಲ್ಲಿಂದ ಪಡೆದುಕೊಳ್ಳಬಹುದು.

ಸಹಿ/- ಆಯುಕ್ತರು

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಮುಖ್ಯ ಇಂಜಿನಿಯರ್ (ವಿದ್ಯುತ್), ಬೆಂಗಳೂರು ಮಹಾನಗರ ಪ್ರದೇಶ ದಕ್ಷಿಣ ವಲಯ, ಬೆವಿಕಂ, ಬೆಂಗಳೂರು, ಇವರು ಬೆಂಗಳೂರು ಮಹಾನಗರ ವಲಯದ ಅಡಿಯಲ್ಲಿ ಬರುವ ಕೆಳಗಿನ ಸಿವಿಲ್ ಎಂಜಿನಿಯರಿಂಗ್ ಕಾಮಗಾರಿಗಳಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಗಳ ವಿವರ: ಬೆಂಗಳೂರು, ರಾಜಾಜಿನಗರ ಕವಿಪ್ರನಿನಿ ಆವರಣದಲ್ಲಿರುವ ಬೆವಿಕಂನ ಕೇಂದ್ರ ಉಗ್ರಾಣದಲ್ಲಿ ಹಾಲಿ ಇರುವ ರಸ್ತೆಯನ್ನು ಮರು ಡಾಂಬರೀಕರಣ ಮತ್ತು ಆರ್.ಸಿ.ಸಿ. ಡ್ರೈನ್ ಒದಗಿಸುವ ಕಾಮಗಾರಿ. **ಅಂದಾಜು ಮೊತ್ತ : ರೂ. 157.00 ಲಕ್ಷಗಳು**. ಟೆಂಡರ್‌ಗಿಟ್ಟ ಅಂದಾಜು ಮೊತ್ತ : **ರೂ. 126.43 ಲಕ್ಷಗಳು**. ಇ.ಎಂ.ಡಿ ಮೊತ್ತ : **ರೂ. 1.90 ಲಕ್ಷಗಳು**. ವಿಚಾರಣೆ ಸಂಖ್ಯೆ: **ಬೆವಿಕಂ/2023–24/ಆರ್‌ಡಿ/ವರ್ಕ್_ಇಂಡೆಂಟ್104.**

ವೇಳಾಪಟ್ಟಿ: 1) ಪೂರ್ವ ಬಿಡ್ ಸಭೆಯ ದಿನಾಂಕ ಮತ್ತು ಸಮಯ: **09.02.2024 @ 15.00 ಗಂಟೆಗಳು.** 2) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: **12.02.2024 ರಿಂದ 17.30 ಗಂಟೆಗಳವರೆಗೆ.** 3) ಟೆಂಡರ್‌ಗಳ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ಸಮಯ: **17.02.2024 ರಿಂದ 11.00 ಗಂಟೆಗಳವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **19.02.2024 11.30 ಗಂಟೆಗೆ.** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ. **ನಂತರ ತಿಳಿಸಲಾಗುವುದು.**

ಟೆಂಡರ್‌ನಲ್ಲಿ ಭಾಗವಹಿಸುವ ಕುರಿತು ವಿವರಗಳನ್ನು ವೆಬ್‌ಸೈಟ್ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ಗೆ ಭೇಟಿ ನೀಡುವ ಮೂಲಕ ದಿನಾಂಕ: **02.02.2024 ರಂದು** ಅಥವಾ ತದನಂತರ ಪಡೆಯಬಹುದು. ಯಾವುದೇ ಸ್ಪಷ್ಟೀಕರಣಕ್ಕಾಗಿ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ +91–80–46010000, +91–8068948777 ಅನ್ನು ಸಂಪರ್ಕಿಸಿ ಅಥವಾ support@helpdsk.comಗೆ ಇಮೇಲ್ ಮಾಡಬಹುದು.

ಸಹಿ/– ಮುಖ್ಯ ಇಂಜಿನಿಯರ್ (ವಿ), ವಾಣಿಜ್ಯ, ಕಾರ್ಯ& ಪಾಲನಾ, ಬೆಂಗಳೂರು ಮಹಾನಗರ ಪ್ರದೇಶ ದಕ್ಷಿಣ ವಲಯ, #14/3, 3ನೇ ಮಹಡಿ, ಎಂ.ಎ. ಭವನ, ಎನ್‌.ಟಿ. ರಸ್ತೆ, ಬೆಂಗಳೂರು–560001

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile App ಡೌನ್‌ಲೋಡ್ ಮಾಡಿಕೊಳ್ಳಿ

ಜಿಲ್ಲಾ ಪಂಚಾಯತ್ ತುಮಕೂರು.
ಉಪ ನಿರ್ದೇಶಕರು ಕಛೇರಿ(ಆಡಳಿತ) ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ.
ಕುಣಿಗಲ್ ರಸ್ತೆ, ತುಮಕೂರು–572101, ದೂರವಾಣಿ ಸಂ: 0816–2278616 e-mail: tmkddahvs@gmail.com
No:DDT/AH&VS/TIP/DRA/D.F/e-Tender/2023-24 ದಿನಾಂಕ: 31.01.2024

ಟೆಂಡರ್ ನೋಟಿಫಿಕೇಷನ್ (“KPPP PORTAL” ಮೂಲಕ ಮಾತ್ರ)

2023–24 ಮತ್ತು 2024–25ನೇ ಸಾಲಿಗೆ ತುಮಕೂರು ಜಿಲ್ಲೆಯ ಬರಪೀಡಿತ ತಿಪಟೂರು ತಾಲ್ಲೂಕಿಗೆ ಒಣಮೇವಿನ ಖರೀದಿಗೆ ಸಂಬಂಧಿಸಿದಂತೆ ಅರ್ಹ ಟೆಂಡರದಾರರಿಂದ KPPP PORTAL https://kppp.karnataka.gov.in ಮೂಲಕ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ಇಟ್ಟ ಮೊತ್ತ ರೂ. 109.35 ಲಕ್ಷಗಳು. ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ 31–1–2024 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು KPPP PORTAL Platform ನಲ್ಲಿ ದಿನಾಂಕ: 31–1–2024 ರಿಂದ 14–02–2024 ರವರೆಗೆ ಸಾಯಂಕಾಲ 5.00 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ KPPP PORTAL ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಉಪ ನಿರ್ದೇಶಕರು(ಆಡಳಿತ),
ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ತುಮಕೂರು.
DIPR/TUM/484/KSMCA/2023-24

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ, ಮಿಲ್ಲರ್ ಟ್ಯಾಂಕ್ ರಸ್ತೆ, ವಸಂತನಗರ, ಬೆಂಗಳೂರು–560052. Ph. No: 080-22535901/02.
Help Line No: 8277799990 E-mail: directorgokdom@gmail.com
Website: https://dom.karnataka.gov.in

ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ ವಿದ್ಯಾರ್ಥಿ ವೇತನದ ಶುಲ್ಕ ಮರುಪಾವತಿ ದಿನಾಂಕ ವಿಸ್ತರಣೆ ಪ್ರಕಟಣೆ 2023–24

ಅನ್‌ಲೈನ್ ಅಪ್ಲಿಕೇಶನ್

2023–24ನೇ ಸಾಲಿನ “ಶುಲ್ಕ ಮರುಪಾವತಿ” ಯೋಜನೆಯಡಿ ಅಲ್ಪಸಂಖ್ಯಾತರ ನಿರ್ದೇಶನಾಲಯ ಬೆಂಗಳೂರು ರವರಿಂದ ಪಿಯುಸಿ, ಡಿಪ್ಲೊಮಾ, ತಾಂತ್ರಿಕ ಮತ್ತು ವೃತ್ತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿ ಓದುತ್ತಿರುವ ಕರ್ನಾಟಕ ರಾಜ್ಯದಲ್ಲಿರುವ ಅರ್ಹ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ.

ಆನ್‌ಲೈನ್ ಅರ್ಜಿಗಾಗಿ ಈ ಕೆಳಗಿನ ಜಾಲತಾಣಕ್ಕೆ ಭೇಟಿ ನೀಡಿ

ವಿದ್ಯಾರ್ಥಿಗಳು ಈ ಕೆಳಗಿನ ಲಿಂಕ್‌ಗಳಿಗೆ ಭೇಟಿ ನೀಡುವ ಮೂಲಕ ಶುಲ್ಕ ಮರುಪಾವತಿಗೆ ಅರ್ಜಿ ಸಲ್ಲಿಸಬಹುದು. https://ssp.postmatric.karnataka.gov.in/ (ಸ್ಟೇಟ್ ಸ್ಕಾಲರ್ಷಿಪ್ ಪೋರ್ಟಲ್) https://dom.karnataka.gov.in(ಅಲ್ಪಸಂಖ್ಯಾತರ ನಿರ್ದೇಶನಾಲಯ–ಕರ್ನಾಟಕ ಸರ್ಕಾರ)

ಕೊನೆಯ ದಿನಾಂಕ

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : ಪೋಸ್ಟ್ – ಮೆಟ್ರಿಕ್ ಮತ್ತು ಮೆರಿಟ್–ಕಮ್–ಮೀನ್ಸ್ ಶುಲ್ಕ ಮರುಪಾವತಿ 15.02.2024ಕ್ಕೆ ವಿಸ್ತರಿಸಲಾಗಿದೆ.

ಅರ್ಹತೆಗಳು

- ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ ಜನಾಂಗಕ್ಕೆ ಸೇರಿದವರಾಗಿರಬೇಕು.
- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಹಿಂದಿನ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಕನಿಷ್ಠ 50% ಅಂಕಗಳನ್ನು ಪಡೆದಿರಬೇಕು.
- ಮೆಟ್ರಿಕ್ ನಂತರದ (ಶುಲ್ಕ ಮರುಪಾವತಿ) ಗಾಗಿ ಕುಟುಂಬದ ವಾರ್ಷಿಕ ವರಮಾನ ಒಟ್ಟು ಆದಾಯ ರೂ. 2 ಲಕ್ಷಗಳನ್ನು ಮೀರಿರಬಾರದು ಮತ್ತು ಮೆರಿಟ್–ಕಮ್–ಮೀನ್ಸ್ (ಶುಲ್ಕ ಮರುಪಾವತಿ) ಗಾಗಿ ರೂ.2.5 ಲಕ್ಷ ಮೀರಿರಬಾರದು.

ಅರ್ಜಿಗಳನ್ನು ಸಲ್ಲಿಸುವ ವಿಧಾನ ಮತ್ತು ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ವೆಬ್‌ಸೈಟ್ https://dom.karnataka.gov.in ಅನ್ನು ವೀಕ್ಷಿಸಿ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳನ್ನು(MIC) ಸಂಪರ್ಕಿಸಬಹುದು ಅಥವಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಹಾಯವಾಣಿ ಸಂಖ್ಯೆ: 8277799990 ಸಂಪರ್ಕಿಸಬಹುದು.

ಸೂಚನೆ : ಪ್ರಸ್ತುತ ಅಧಿಸೂಚನೆಯು ಶುಲ್ಕ ಮರುಪಾವತಿಗೆ ಮಾತ್ರ ಅನ್ವಯಿಸುತ್ತದೆ. ಅರ್ಜಿಗಳನ್ನು ಶುಲ್ಕ ಮರುಪಾವತಿ ಯೋಜನೆಯಡಿ ಮಾತ್ರ ಪರಿಗಣಿಸಲಾಗುತ್ತದೆ.

ದಿನಾಂಕ : 01.02.2024
ಸ್ಥಳ : ಬೆಂಗಳೂರು
ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/3359/ಎಂಎಎ/2023–24

ಕೇಂದ್ರ ಬಜೆಟ್ 2024-25

ಬಲ್ಕ್ ಡ್ರಗ್ ಪಾರ್ಕ್‌ಗಳ ಉತ್ತೇಜನಕ್ಕೆ ₹1,000 ಕೋಟಿ

‘ಬಲ್ಕ್ ಡ್ರಗ್ ಪಾರ್ಕ್‌ಗಳ’ ಉತ್ತೇಜನಕ್ಕಾಗಿ ಕೇಂದ್ರ ಸರ್ಕಾರ ಮಧ್ಯಂತರ ಬಜೆಟ್‌ನಲ್ಲಿ ₹ 1000 ಕೋಟಿ ಮೀಸಲಿಟ್ಟಿದೆ. ಕಳೆದ ವರ್ಷದ ಬಜೆಟ್‌ನಲ್ಲಿ ಇದಕ್ಕಾಗಿ ಕೇಂದ್ರ ₹ 900 ಕೋಟಿ ಮೀಸಲಿಟ್ಟಿತ್ತು.

ಒಟ್ಟಾರೆ ಔಷಧೀಯ ಉದ್ಯಮಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಈ ಬಾರಿ ₹ 1,300 ಕೋಟಿ ಒದಗಿಸಿದೆ. ದೇಶದಲ್ಲಿ ಜನರಿಗೆ ಕೈಗೆಟಕುವ ದರದಲ್ಲಿ ಜೆನೆರಿಕ್ ಔಷಧಗಳನ್ನು ಒದಗಿಸುವ ಜನೌಷಧಿ ಯೋಜನೆಗೆ ಈ ಬಾರಿ ₹ 285 ಕೋಟಿ ಒದಗಿಸಲಾಗಿದೆ. ಕಳೆದ ಬಾರಿ ಇದಕ್ಕಾಗಿ ₹ 110 ಒದಗಿಸಲಾಗಿತ್ತು.

ಸಾಮಾಜಿಕ ನ್ಯಾಯ ಸಚಿವಾಲಯಕ್ಕೆ ₹14 ಸಾವಿರ ಕೋಟಿ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯಕ್ಕೆ ಮಧ್ಯಂತರ ಬಜೆಟ್‌ನಲ್ಲಿ ₹14,225 ಕೋಟಿ ನಿಗದಿ ಮಾಡಲಾಗಿದೆ. ಇದು ಹಿಂದಿನ ಬಜೆಟ್‌ನ ಪರಿಷ್ಕೃತ ಅಂದಾಜಿಗೆ (₹11,078 ಕೋಟಿ) ಹೋಲಿಸಿದರೆ ಶೇಕಡ 28.4ರಷ್ಟು ಹೆಚ್ಚು.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಗೆ ₹13 ಸಾವಿರ ಕೋಟಿ, ಅಂಗವಿಕಲರ ಸಬಲೀಕರಣ ಇಲಾಖೆಗೆ ₹1,225 ಕೋಟಿಯನ್ನು ನಿಗದಿ ಮಾಡಲಾಗಿದೆ. 2023–24ರ ಪರಿಷ್ಕೃತ ಅಂದಾಜಿನಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಗೆ ₹9,853 ಕೋಟಿ ನೀಡಲಾಗಿತ್ತು. ಅಂಗವಿಕಲರ ಸಬಲೀಕರಣ ಇಲಾಖೆಗೆ ₹1,225 ಕೋಟಿ ನೀಡಲಾಗಿತ್ತು.

ಅಲ್ಪಸಂಖ್ಯಾತ ಮಕ್ಕಳಿಗೆ ಕಡಿಮೆ ಅನುದಾನ: ಕ್ರೈ

‘ಮಕ್ಕಳಿಗೆ ಹಂಚಿಕೆ ಮಾಡಿರುವ ಮೊತ್ತವು ಕಳೆದ ಬಜೆಟ್‌ಗಿಂತ ಹಲವು ಪಟ್ಟು ಹೆಚ್ಚಿದೆ. ಕಳೆದ ಬಜೆಟ್‌ನಲ್ಲಿ ₹1,03,790.70ಕೋಟಿ ಹಂಚಿಕೆಯಾಗಿದ್ದರೆ, ಈ ಬಾರಿ ₹1,09,493 ಕೋಟಿ ಹಂಚಿಕೆ ಮಾಡಲಾಗಿದೆ. ಆದರೆ, ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿನ ಮಕ್ಕಳಿಗೆ ಹಂಚಿಕೆ ಮಾಡಲಾಗಿರುವ ಮೊತ್ತದಲ್ಲಿ ಇಳಿಕೆಯಾಗಿದೆ. 2023–24ರಲ್ಲಿ ಈ ವರ್ಗಕ್ಕೆ ₹1582 ಕೋಟಿ ಹಂಚಿಕೆಯಾಗಿ ದ್ದರೆ ಈ ಬಾರಿ ₹1517.34 ಕೋಟಿ ಹಂಚಲಾಗಿದೆ’ ಎಂದು ಮಕ್ಕಳ ಹಕ್ಕುಗಳ ಸರ್ಕಾರೇತರ ಸಂಸ್ಥೆ ಕ್ರೈ ವಿಶ್ಲೇಷಿಸಿದೆ.

ಇದು ಬಿಜೆಪಿಯ ವಿದಾಯ ಬಜೆಟ್ ಆಗಿದೆ. ಜನವಿರೋಧಿ ಬಜೆಟ್‌ಗಳ ಒಂದು ದಶಕ ಪೂರೈಸಿದ ನಾಚಿಕೆಗೇಡಿನ ದಾಖಲೆಯನ್ನು ಬಿಜೆಪಿ ನಿರ್ಮಿಸಿದೆ. ಈ ದಾಖಲೆಯನ್ನು ಯಾರೂ ಮುರಿಯಲಾಗದು. ಏಕೆಂದರೆ, ಸಕಾರಾತ್ಮಕ ಸರ್ಕಾರ ಬರುವ ಕಾಲ ಹತ್ತಿರವಾಗಿದೆ.

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖಂಡ

ಪ್ರಜಾವಾಣಿ
ಶುಕ್ರವಾರ • ಫೆಬ್ರುವರಿ 2, 2024

ನವೋದ್ಯಮ ತೆರಿಗೆ ವಿನಾಯಿತಿ ವಿಸ್ತರಣೆ

ನವೋದ್ಯಮಗಳಿಗೆ, ಸರ್ಕಾರಿ ಸ್ವಾಮ್ಯದ ಹೂಡಿಕೆ ನಿಧಿಗಳಿಂದ ಹಾಗೂ ಪಿಂಚಣಿ ನಿಧಿಗಳಿಂದ ಆಗುವ ಹೂಡಿಕೆಗಳಿಗೆ ನೀಡಿರುವ ತೆರಿಗೆ ವಿನಾಯಿತಿಗಳನ್ನು ಕೇಂದ್ರವು 2025ರ ಮಾರ್ಚ್‌ವರೆಗೆ ಮುಂದುವರಿಸಲಿದೆ.

‘ತೆರಿಗೆ ಕ್ರಮದಲ್ಲಿ ಯಥಾಸ್ಥಿತಿ ಮುಂದುವರಿಸುವ ಉದ್ದೇಶದಿಂದ ನಾನು, ತೆರಿಗೆ ವಿನಾಯಿತಿಗಳನ್ನು 2025ರ ಮಾರ್ಚ್ 31ರವರೆಗೆ ವಿಸ್ತರಿಸುವ ಪ್ರಸ್ತಾವ ಮಾಡುತ್ತಿದ್ದೇನೆ’ ಎಂದು ನಿರ್ಮಲಾ ಸೀತಾರಾಮನ್ ಅವರು ಮಧ್ಯಂತರ ಬಜೆಟ್ ಭಾಷಣದಲ್ಲಿ ಹೇಳಿದರು.

ಸರ್ಕಾರವು ಮಾನ್ಯತೆ ನೀಡಿರುವ 1.17 ಲಕ್ಷ ನವೋದ್ಯಮಗಳು ‘ಸ್ಟಾರ್ಟಪ್ ಇಂಡಿಯಾ’ ಕ್ರಿಯಾ ಯೋಜನೆಯ ಅಡಿಯಲ್ಲಿ ತೆರಿಗೆ ವಿನಾಯಿತಿಗಳನ್ನು ಪಡೆದುಕೊಳ್ಳಬಹುದು. ಶಾರ್ದೂಲ್ ಅಮರಚಂದ್ ಮಂಗಲದಾಸ್ ಆ್ಯಂಡ್ ಕಂಪನಿಯ ಪಾಲುದಾರರಾದ ಗೌರಿ ಪುರಿ ಅವರು, ‘ನಿರೀಕ್ಷೆಯಂತೆಯೇ ಮಧ್ಯಂತರ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ನೀತಿ ನಿಯಮಗಳ ವಿಚಾರದಲ್ಲಿ ಸಂಯಮ ಕಾಯ್ದುಕೊಂಡಿದೆ’ ಎಂದು ಪ್ರತಿಕ್ರಿಯೆ ನೀಡಿದ್ದಾರೆ. ತೆರಿಗೆ ವಿನಾಯಿತಿಗಳನ್ನು ಮುಂದುವರಿಸುವ ಘೋಷಣೆಯು ಸ್ವಾಗತಾರ್ಹ ಎಂದು ಹೇಳಿದ್ದಾರೆ.

ಹೈನುಗಾರಿಕೆಗೆ ಉತ್ತೇಜನ

ದೇಶದಲ್ಲಿ ಹೈನುಗಾರಿಕೆಗೆ ಉತ್ತೇಜನ ನೀಡಲು ಸಮಗ್ರ ಯೋಜನೆ ಜಾರಿಗೊಳಿಸುವ ಘೋಷಣೆಯನ್ನು ಬಜೆಟ್‌ನಲ್ಲಿ ಮಾಡಲಾಗಿದೆ. ಹಾಲು ಉತ್ಪಾದನೆಯಲ್ಲಿ ಭಾರತವು ವಿಶ್ವದಲ್ಲೇ ನಂ.1 ಸ್ಥಾನದಲ್ಲಿದೆ. ಆದರೆ ಕಡಿಮೆ ಹಾಲು ನೀಡುವ ಹಸುಗಳ ಸಂಖ್ಯೆ ಹೆಚ್ಚಿದೆ. ಉತ್ಪಾದನೆ ಪ್ರಮಾಣ ಹೆಚ್ಚಿಸಲು ಕ್ರಮವಹಿಸಲಾಗುವುದು ಎಂದು ಹಣಕಾಸು ಸಚಿವರು ಹೇಳಿದರು.

2022–23 ರಲ್ಲಿ ದೇಶದಲ್ಲಿ 230 ದಶಲಕ್ಷ ಟನ್ ಹಾಲು ಉತ್ಪಾದನೆಯಾಗಿದ್ದು, ಒಟ್ಟು ಪ್ರಮಾಣ ಶೇ 4 ರಷ್ಟು ಏರಿಕೆಯಾಗಿದೆ. ಹೊಸದಾಗಿ ಅನುಷ್ಠಾನಗೊಳ್ಳಲಿರುವ ಯೋಜನೆಗಳು ಈಗಾಗಲೇ ಜಾರಿಯಲ್ಲಿರುವ ರಾಷ್ಟ್ರೀಯ ಗೋಕುಲ್ ಯೋಜನೆ ಮತ್ತು ರಾಷ್ಟ್ರೀಯ ಜಾನುವಾರು ಯೋಜನೆಗಳಿಗೆ ಪೂರಕವಾಗಿ ಇರಲಿವೆ.

ಮೀನುಗಾರಿಕೆ: 55 ಲಕ್ಷ ಉದ್ಯೋಗ ಸೃಷ್ಟಿ ಗುರಿ

ಮೀನುಗಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸರ್ಕಾರವು ಮೀನುಗಾರಿಕೆಗಾಗಿ ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಿದೆ ಎಂದು ಹಣಕಾಸು ಸಚಿವರು ಹೇಳಿದರು. ಮೀನುಗಾರರು, ಮೀನು ಮಾರಾಟಗಾರರು ಹಾಗೂ ಈ ಕ್ಷೇತ್ರದ ಉದ್ಯಮಗಳ ಚಟುವಟಿಕೆಗಳನ್ನು ಮತ್ತಷ್ಟು ಸಕ್ರಿಯಗೊಳಿಸಲಾಗುವುದು ಎಂದು ನುಡಿದರು.

‘ಪ್ರಧಾನ ಮಂತ್ರಿ ಮತ್ಸ್ಯ ಸಂಪದ’ ಯೋಜನೆಯ ಅನುಷ್ಠಾನವನ್ನು ತ್ವರಿತಗೊಳಿಸಿ ಪ್ರತಿ ಹೆಕ್ಟೇರ್‌ಗೆ ಮತ್ಸ್ಯ ಉತ್ಪಾದನೆ ಪ್ರಮಾಣವನ್ನು ಮೂರು ಟನ್‌ಗಳಿಂದ ಐದು ಟನ್‌ಗಳಿಗೆ ಹೆಚ್ಚಿಸುವ ಗುರಿ ಹಾಕಿಕೊಳ್ಳಲಾಗಿದೆ ಎಂದರು. ಮುಂದಿನ ಕೆಲ ವರ್ಷಗಳಲ್ಲಿ ಸೀಫುಡ್ ರಫ್ತು ಪ್ರಮಾಣವನ್ನು ದ್ವಿಗುಣಗೊಳಿಸಿ, 55 ಲಕ್ಷ ಉದ್ಯೋಗ ಸೃಷ್ಟಿ ಗುರಿಯನ್ನು ಇಟ್ಟುಕೊಳ್ಳಲಾಗಿದೆ ಎಂದು ಘೋಷಿಸಿದರು.

ರೈಲು: ರಾಜ್ಯಕ್ಕೆ ₹7,524 ಕೋಟಿ

ಒಂದನೇ ಪುಟದಿಂದ..

ರಾಯಚೂರಿನಲ್ಲಿ ಏಮ್ಸ್ ಸ್ಥಾಪಿಸಬೇಕೆಂಬ ರಾಜ್ಯದ ಬೇಡಿಕೆಗೆ ಕೇಂದ್ರ ಮನ್ನಣೆ ನೀಡಿಲ್ಲ.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ‘2009-14ರ ಅವಧಿಯಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ ವಾರ್ಷಿಕ ₹835 ಕೋಟಿ ಅನುದಾನ ನೀಡಲಾಗುತ್ತಿತ್ತು. ಈಗ ಅನುದಾನ ಬಿಡುಗಡೆ ಪ್ರಮಾಣ ಒಂಬತ್ತು ಪಟ್ಟು ಹೆಚ್ಚಾಗಿದೆ’ ಎಂದರು.

ರಾಜ್ಯದಲ್ಲಿ 31 ರೈಲ್ವೆ ಯೋಜನೆಗಳು ಅನುಷ್ಠಾನವಾಗುತ್ತಿದ್ದು, ಇವುಗಳ ಉದ್ದ 3,866 ಕಿ.ಮೀ. ಈ ಯೋಜನೆಗಳ ಒಟ್ಟು ಮೊತ್ತ ₹47,346 ಕೋಟಿ ಎಂದು ಅವರು ಮಾಹಿತಿ ನೀಡಿದರು.

ಯುಪಿಎ ಅವಧಿಯಲ್ಲಿ ವರ್ಷಕ್ಕೆ 114 ಕಿ.ಮೀ. ಹೊಸ ಮಾರ್ಗಗಳ ನಿರ್ಮಾಣ ಮಾಡಲಾಗುತ್ತಿತ್ತು. ಎನ್‌ಡಿಎ ಅವಧಿಯಲ್ಲಿ 166 ಕಿ.ಮೀ.ಗೆ ಏರಿದೆ. ವಿದ್ಯುದ್ದೀಕರಣ ವರ್ಷಕ್ಕೆ 18 ಕಿ.ಮೀ.ಯಿಂದ 369 ಕಿ.ಮೀ.ಗೆ ಹೆಚ್ಚಿದೆ. ರಾಜ್ಯದ ಶೇ 97 ರೈಲು ಮಾರ್ಗಗಳು ವಿದ್ಯುದ್ದೀಕರಣಗೊಂಡಿವೆ ಎಂದು ಅವರು ತಿಳಿಸಿದರು.

‘ರಾಜ್ಯದ 59 ನಿಲ್ದಾಣಗಳನ್ನು ಅಮೃತ ನಿಲ್ದಾಣಗಳನ್ನಾಗಿ ಮೇಲ್ದರ್ಜೆಗೆ ಏರಿಸಲಾಗುತ್ತದೆ. 2014ರಿಂದ 595 ರೈಲ್ವೆ ಮೇಲ್ಸೇತುವೆ ಹಾಗೂ ಕೆಳಸೇತುವೆಗಳನ್ನು ನಿರ್ಮಿಸಲಾಗಿದೆ. 77 ನಿಲ್ದಾಣಗಳಲ್ಲಿ ‘ಒಂದು ನಿಲ್ದಾಣ–ಒಂದು ಉತ್ಪನ್ನ’ ಮಳಿಗೆಗಳನ್ನು ಆರಂಭಿಸಲಾಗಿದೆ’ ಎಂದರು.

ಉಪನಗರಕ್ಕಿಲ್ಲ ಹಣ: ಬೆಂಗಳೂರಿನ ಸಂಚಾರ ದಟ್ಟಣೆ ತಗ್ಗಿಸಲು ರೂಪಿಸಲಾಗಿರುವ ಉಪನಗರ ರೈಲು ಯೋಜನೆಗೆ ಈ ಸಲ ಅನುದಾನ ಮೀಸಲಿಟ್ಟಿಲ್ಲ.

147 ಕಿ.ಮೀ. ಉದ್ದದ ಈ ಯೋಜನೆಗೆ ಕೇಂದ್ರ ಸಚಿವ ಸಂಪುಟ 2020ರಲ್ಲಿ ಅನುಮೋದನೆ ನೀಡಿತ್ತು. ₹15,767 ಕೋಟಿಯ ಈ ಯೋಜನೆಗೆ ಕೇಂದ್ರ ಶೇ 20 ಹಾಗೂ ರಾಜ್ಯ ಶೇ 20ರಷ್ಟು ಹಣ ಭರಿಸಬೇಕಿದೆ. ಶೇ 60 ಮೊತ್ತವನ್ನು ಸಾಲವಾಗಿ ಪಡೆಯಲಾಗುತ್ತದೆ. ಈ ಯೋಜನೆಗೆ ಎರಡು ಸರ್ಕಾರಗಳಿಂದ ಈವರೆಗೆ ₹1,100 ಕೋಟಿ ಬಂದಿದೆ.

‘ಈ ಯೋಜನೆಗೆ ಅನುದಾನ ಹಂಚಿಕೆ ಮಾಡದಿರುವುದು ದುರದೃಷ್ಟಕರ. ಕೇಂದ್ರ ಸರ್ಕಾರ ಈವರೆಗೆ ₹500 ಕೋಟಿ ಕೊಟ್ಟಿದ್ದರೆ, ರಾಜ್ಯ ಬಿಡುಗಡೆ ಮಾಡಿರುವುದು ₹600 ಕೋಟಿ. ಇದು ಯಾವುದಕ್ಕೂ ಸಾಲದು. ಬೆಂಗಳೂರಿನ ಹೆಚ್ಚು ಅಗತ್ಯವಾಗಿರುವ ಹಾಗೂ ಸವಾಲಿನ ಯೋಜನೆ ವಿಷಯದಲ್ಲಿ ನಿರ್ಲಕ್ಷ್ಯ ಸಲ್ಲದು. ಪೂರ್ಣ ಪ್ರಮಾಣದ ಬಜೆಟ್‌ನಲ್ಲಿ ಅಧಿಕ ಅನುದಾನ ಹಂಚಿಕೆ ಮಾಡಬೇಕು’ ಎಂದು ‘ಸಿಟಿಜನ್ಸ್ ಫಾರ್ ಸಿಟಿಜನ್ಸ್’ ಸಂಸ್ಥೆಯ ಸಂಸ್ಥಾಪಕ ರಾಜ್‌ಕುಮಾರ್ ದುಗರ್ ಆಗ್ರಹಿಸಿದರು.

ಹೊಸ ಮಾರ್ಗಗಳು

ಕಾಮಗಾರಿ ಹೆಸರು	ವೆಚ್ಚ (ಕೋಟಿ ₹ ಗಳಲ್ಲಿ)
ಗದಗ (ತಳ್ಕಲ್)–ವಾಡಿ	380
ಗಿಣಿಗೇರಾ–ರಾಯಚೂರು	300
ತುಮಕೂರು–ದಾವಣಗೆರೆ (ಮಾರ್ಗ–ಚಿತ್ರದುರ್ಗ)	300
ತುಮಕೂರು–ರಾಯದುರ್ಗ (ಮಾರ್ಗ–ಕಲ್ಯಾಣದುರ್ಗ)	250
ಬಾಗಲಕೋಟೆ–ಕುಡಚಿ	410
ಶಿವಮೊಗ್ಗ–ಶಿಕಾರಿಪುರ–ರಾಣೆಬೆನ್ನೂರು	200
ಬೆಳಗಾವಿ–ಧಾರವಾಡ (ಮಾರ್ಗ ಕಿತ್ತೂರು)	50
ಮಾರಿಕುಪ್ಪಂ–ಕುಪ್ಪಂ	170
ಕಡೂರು–ಚಿಕ್ಕಮಗಳೂರು–ಹಾಸನ	160
ಮಲಗೂರ–ಪಾಲಸಮುದ್ರಂ	20
ಹಾಸನ–ಬೇಲೂರು	5

ದ್ವಿಪಥ ಮಾರ್ಗಗಳ ಕಾಮಗಾರಿಗಳು

ಕಾಮಗಾರಿ ಹೆಸರು	ವೆಚ್ಚ (ಕೋಟಿ ₹ಗಳಲ್ಲಿ)
ಗದಗ–ಹೊಟಗಿ	197
ಪೆನುಕೊಂಡ–ಧರ್ಮಾವರಂ	180.4
ಬೈಯಪ್ಪನಹಳ್ಳಿ–ಹೊಸೂರು	150
ಯಶವಂತಪುರ–ಚನ್ನಸಂದ್ರ	150
ಲೋಂಡಾ–ಮೀರಜ್	200
ಹುಬ್ಬಳ್ಳಿ–ಚಿಕ್ಕಜಾಜೂರು	94
ಬೆಂಗಳೂರು ಕಂಟೋನ್ಮೆಂಟ್–ವೈಟ್‌ಫೀಲ್ಡ್	260
ಹೊಸಪೇಟೆ–ತಿನೈಘಾಟ್–ವಾಸ್ಕೊ ಡ ಗಾಮ	400
ಹೊಸೂರು–ಒಮಲೂರ	100.1

ಮಹಿಳೆಯರು, ಮಕ್ಕಳಿಗೆ ಸಿಕ್ಕಿದ್ದೇನು?

‘ಲಖ್‌ಪತಿ ದೀದಿ’ ಯೋಜನೆಯಡಿ ಹಳ್ಳಿಗಳಲ್ಲಿಯೇ ಸಣ್ಣ ಉದ್ಯಮಗಳ ಸ್ಥಾಪನೆಗೆ ಸ್ವಸಹಾಯ ಗುಂಪಿನ ಸದಸ್ಯೆಯರಿಗೆ ಪ್ರೋತ್ಸಾಹ

ಪಿಎಂಜೆಎವೈ ಅನುದಾನ ₹6800 ಕೋಟಿಯಿಂದ ₹7500 ಕೋಟಿಗೆ ಏರಿಕೆ

ಸ್ವಾಯತ್ತ ಸಂಸ್ಥೆಗಳಿಗೆ ಈ ಬಾರಿ ಕಳೆದ ಬಾರಿಗಿಂತ ಕಡಿಮೆ ಹಣ ಹಂಚಿಕೆ

ನವದೆಹಲಿ (ಪಿಟಿಐ): ನರೇಂದ್ರ ಮೋದಿ ಅವರ ಎರಡನೆಯ ಅವಧಿಯ ಸರ್ಕಾರದ ಕೊನೆಯ ಬಜೆಟ್ ಮಂಡಿಸಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಸಮಗ್ರ, ಸರ್ವ ವ್ಯಾಪಕತೆಯ, ಸರ್ವರನ್ನೂ ಒಳಗೊಳ್ಳುವ ಅಭಿವೃದ್ಧಿಯನ್ನು ಖಾತರಿಪಡಿಸುವುದರತ್ತ ತಮ್ಮ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಹೇಳಿದರು. ಸಮಾಜದ ವಿವಿಧ ಜನವರ್ಗಗಳಿಗೆ ಅವರು ಬಜೆಟ್‌ನಲ್ಲಿ ಯೋಜನೆಗಳನ್ನು ಘೋಷಿಸಿದರು.

‘ಲಖ್‌ಪತಿ ದೀದಿ’ ಮೂರು ಕೋಟಿಗೆ ಏರಿಕೆ: ಗ್ರಾಮೀಣ ಮಹಿಳೆಯರ ಬಹು ಜೀವನೋಪಾಯ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಅನುಷ್ಠಾನಗೊಳಿಸಿರುವ ‘ಲಖ್‌ಪತಿ ದೀದಿ’ ಯೋಜನೆಯಡಿ 3 ಕೋಟಿ ಮಹಿಳೆಯರಿಗೆ ತರಬೇತಿ ನೀಡುವ ಕುರಿತು ಮಧ್ಯಂತರ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಸರ್ಕಾರವು ಈ ಯೋಜನೆಯಡಿ ಹಳ್ಳಿಗಳಲ್ಲಿಯೇ ಸಣ್ಣ ಉದ್ಯಮಗಳ ಸ್ಥಾಪನೆಗೆ ಸ್ವಸಹಾಯ ಗುಂಪಿನ ಸದಸ್ಯೆಯರಿಗೆ ಪ್ರೋತ್ಸಾಹ ನೀಡಲಿದೆ. ಆ ಮೂಲಕ ಅವರು ವರ್ಷಕ್ಕೆ ಕನಿಷ್ಠ ₹1 ಲಕ್ಷ ಸುಸ್ಥಿರ ಆದಾಯಗಳಿಸುವಂತೆ ಮಾಡುವುದು ಈ ಯೋಜನೆಯ ಮೂಲ ಉದ್ದೇಶವಾಗಿದೆ. ಈ ಮೊದಲು ಯೋಜನೆಯಡಿ 2 ಕೋಟಿ ಮಹಿಳೆಯರಿಗೆ ತರಬೇತಿ ನೀಡುವ ಗುರಿ ಇತ್ತು.

‘ದೇಶದಲ್ಲಿ 83 ಲಕ್ಷ ಸ್ವಸಹಾಯ ಗುಂಪುಗಳಿವೆ. ಇವುಗಳಲ್ಲಿ ಒಟ್ಟು 9 ಕೋಟಿ ಮಹಿಳೆಯರಿದ್ದು, ಸ್ವಾವಲಂಬನೆ ಸಾಧಿಸುವ ಜೊತೆಗೆ ಗ್ರಾಮೀಣ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಬಹುದೊಡ್ಡ ಕೊಡುಗೆ ನೀಡುತ್ತಿದ್ದಾರೆ. ಈಗಾಗಲೇ, ಒಂದು ಕೋಟಿ ಮಹಿಳೆಯರು ಲಕ್ಷಾಧಿಪತಿಗಳಾಗಿದ್ದಾರೆ’ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಮಹಿಳೆ, ಮಕ್ಕಳ ಅಭಿವೃದ್ಧಿಗೆ ₹26 ಸಾವಿರ ಕೋಟಿ: 2024–25ರ ಕೇಂದ್ರ ಬಜೆಟ್‌ನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ₹ 26000 ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು, ಇದು ಕಳೆದ ಬಾರಿಗಿಂತ ಶೇ 2.52ರಷ್ಟು ಹೆಚ್ಚಿನ ಮೊತ್ತವಾಗಿದೆ.

‘ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0’ ಯೋಜನೆಗೆ ಅತಿಹೆಚ್ಚು, ಅಂದರೆ, ₹21,200 ಕೋಟಿ ಹಂಚಿಕೆ ಮಾಡಲಾಗಿದೆ. ಮಹಿಳಾ ಸಬಲೀಕರಣದ ‘ಮಿಷನ್ ಶಕ್ತಿ’ ಯೋಜನೆಗೆ ₹3145.97 ಕೋಟಿ ಹಾಗೂ ಮಕ್ಕಳ ರಕ್ಷಣೆಯ ‘ಮಿಷನ್ ವಾತ್ಸಲ್ಯ’ ಯೋಜನೆಗೆ ₹1472 ಕೋಟಿ ಹಂಚಿಕೆ ಮಾಡಲಾಗಿದೆ.

ಮಹಿಳೆಯರ ಸುರಕ್ಷತೆ ಮತ್ತು ರಕ್ಷಣೆಯ ಸಂಬಂಧದ ವಿವಿಧ ಸರ್ಕಾರಿ ಯೋಜನೆಗಳು ಮತ್ತು ಪ್ರಯತ್ನಗಳನ್ನು ಕ್ರೋಡೀಕರಿಸಿ, ಅದರ ಫಲ ಮಹಿಳೆಯರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು ‘ಮಿಷನ್ ಶಕ್ತಿ’ ಯೋಜನೆಯ ಗುರಿಯಾಗಿದೆ.

ಮಕ್ಕಳ ಸಮಗ್ರ ಬೆಳವಣಿಗೆಗೆ ಪೂರಕವಾದ ಸುರಕ್ಷಿತ ವಾತಾವರಣವನ್ನು ರೂಪಿಸುವುದು ‘ವಾತ್ಸಲ್ಯ’ ಯೋಜನೆಯ ಉದ್ದೇಶವಾಗಿದೆ. ಮಹಿಳೆಯರು ಮತ್ತು ಮಕ್ಕಳ ರಕ್ಷಣೆಯ ಸಂಬಂಧದ ಸ್ವಾಯತ್ತ ಸಂಸ್ಥೆಗಳಿಗೆ ಈ ಬಾರಿ ಕಳೆದ ಬಾರಿಗಿಂತ ಕಡಿಮೆ ಹಣ ಹಂಚಿಕೆ ಮಾಡಲಾಗಿದೆ. ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (ಸಿಎಆರ್‌ಎ), ರಾಷ್ಟ್ರೀಯ ಮಕ್ಕಳು ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಮತ್ತು ರಾಷ್ಟ್ರೀಯ ಮಹಿಳಾ ಆಯೋಗ ಮುಂತಾದ ಸ್ವಾಯತ್ತ ಸಂಸ್ಥೆಗಳಿಗಾಗಿ ಕಳೆದ ಬಜೆಟ್‌ನಲ್ಲಿ ₹168 ಕೋಟಿ ಹಂಚಿಕೆ ಮಾಡಲಾಗಿತ್ತು. ಈ ಬಾರಿ ₹153 ಕೋಟಿ ಹಂಚಿಕೆ ಮಾಡಲಾಗಿದೆ.

‘ನಾಲ್ಕು ಸಮುದಾಯಗಳ ಅಭಿವೃದ್ಧಿಗೆ ಆದ್ಯತೆ‘

‘ಬಡವರು, ಮಹಿಳೆಯರು, ಯುವಕರು ಮತ್ತು ಅನ್ನದಾತರು– ಈ ನಾಲ್ಕು ಸಮುದಾಯಗಳ ಅಭಿವೃದ್ಧಿಯೇ ನಮ್ಮ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ’ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದರು.

‘ಉತ್ತಮ ಬದುಕಿನ ಹುಡುಕಾಟದಲ್ಲಿರುವ ಈ ಸಮುದಾಯಗಳಿಗೆ ಸರ್ಕಾರದ ನೆರವಿನ ಅಗತ್ಯವಿದ್ದು, ಸರ್ಕಾರ ಅವರೊಂದಿಗೆ ನಿಲ್ಲಲಿದೆ. ಅವರ ಸಬಲೀಕರಣ ಮತ್ತು ಬೆಳವಣಿಗೆಯು ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತದೆ. ಅವರ ಪ್ರಗತಿಯು ದೇಶದ ಪ್ರಗತಿಯಾಗಿದೆ’ ಎಂದು ನಿರ್ಮಲಾ ಸೀತಾರಾಮನ್ ಅಭಿಪ್ರಾಯ ಪಟ್ಟರು 2047ರ ಹೊತ್ತಿಗೆ ದೇಶವನ್ನು ‘ವಿಕಸಿತ್ ಭಾರತ’ ಮಾಡಲು ತಾವು ಶ್ರಮಿಸುತ್ತಿರುವುದಾಗಿ ಅವರು ಹೇಳಿದರು.

ನರೇಗಾ: ₹86 ಸಾವಿರ ಕೋಟಿ ಹಂಚಿಕೆ

ನವದೆಹಲಿ (ಪಿಟಿಐ): ಗ್ರಾಮೀಣ ಜನರಿಗೆ ಉದ್ಯೋಗ ಖಾತ್ರಿ ನೀಡುವ ‘ನರೇಗಾ’ ಯೋಜನೆಗೆ 2024–25ರ ಬಜೆಟ್‌ನಲ್ಲಿ ₹ 86 ಸಾವಿರ ಕೋಟಿ ಹಂಚಿಕೆಯಾಗಿದೆ. ಕಳೆದ ಸಾಲಿನ ಬಜೆಟ್‌ಗೆ ಹೋಲಿಸಿದರೆ ಅನುದಾನದ ಮೊತ್ತ ಶೇ 43 ರಷ್ಟು ಹೆಚ್ಚಳವಾಗಿದೆಯಾದರೂ, ಹಾಲಿ ಹಣಕಾಸು ವರ್ಷದ ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ ‘ನರೇಗಾ’ ಹಂಚಿಕೆ ಯಲ್ಲಿ ಯಾವುದೇ ಏರಿಕೆ ಕಂಡುಬಂದಿಲ್ಲ.

2023–24ರ ಸಾಲಿನಲ್ಲಿ ‘ನರೇಗಾ’ ಯೋಜನೆಗೆ ₹ 60 ಸಾವಿರ ಕೋಟಿ ಹಂಚಿಕೆ ಮಾಡಲಾಗಿತ್ತು. ಪರಿಷ್ಕೃತ ಅಂದಾಜಿನ ಪ್ರಕಾರ ಈ ಮೊತ್ತವು ₹ 86 ಸಾವಿರ ಕೋಟಿಗೆ ಏರಿಕೆಯಾಗಿತ್ತು.

ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ₹ 1.77 ಲಕ್ಷ ಕೋಟಿ ಹಂಚಿಕೆಯಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ (₹ 1.57 ಲಕ್ಷ ಕೋಟಿ) ಈ ಬಾರಿ ಶೇ 12 ರಷ್ಟು ಏರಿಕೆ ಕಂಡುಬಂದಿದೆ. ಆದರೆ, ಕಳೆದ ಬಾರಿಯ ಪರಿಷ್ಕೃತ ಅಂದಾಜಿಗೆ (₹ 1.71 ಲಕ್ಷ ಕೋಟಿ) ಹೋಲಿಸಿದರೆ ಹಂಚಿಕೆಯು ಶೇ 3 ರಷ್ಟು ಹೆಚ್ಚಳವಾಗಿದೆ.

ನರೇಗಾ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಕುಟುಂಬದ ಕನಿಷ್ಠ ಒಬ್ಬರಿಗೆ 100 ದಿನಗಳ ಉದ್ಯೋಗದ ಖಾತ್ರಿ ನೀಡಲಾಗುತ್ತದೆ.

ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ (ಗ್ರಾಮೀಣ) ಮುಂದಿನ ಐದು ವರ್ಷಗಳಲ್ಲಿ ಇನ್ನೂ ಎರಡು ಕೋಟಿ ಮನೆ ನಿರ್ಮಾಣ ಮಾಡಲಾಗುವುದು ಎಂದು ನಿರ್ಮಲಾ ಸೀತಾರಾಮನ್ ಪ್ರಕಟಿಸಿದರು. ಈ ಯೋಜನೆಗೆ ₹ 54,500 ಕೋಟಿ ಹಂಚಿಕೆ ಮಾಡಲಾಗಿದೆ. 2023–24 ರಲ್ಲಿ ₹ 54,487 ಕೋಟಿ ಹಂಚಿಕೆ ಮಾಡಲಾಗಿತ್ತಾದರೂ, ಪರಿಷ್ಕೃತ ಅಂದಾಜಿನ ಬಳಿಕ ಈ ಮೊತ್ತವನ್ನು ₹ 32 ಸಾವಿರ ಕೋಟಿಗೆ ಕಡಿತಗೊಳಿಸಲಾಗಿತ್ತು. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಅನುದಾನಕ್ಕೆ ಕತ್ತರಿ ಹಾಕಲಾಗಿದೆ.

ಈ ಬಾರಿ ₹ 12 ಸಾವಿರ ಕೋಟಿ ತೆಗೆದಿರಿಸಲಾಗಿದೆ. ಕಳೆದ ಬಜೆಟ್‌ನಲ್ಲಿ ₹ 19 ಸಾವಿರ ಕೋಟಿ ಹಂಚಿಕೆ ಮಾಡಲಾಗಿದ್ದರೆ, ಪರಿಷ್ಕೃತ ಮೊತ್ತವನ್ನು ₹ 17 ಸಾವಿರ ಕೋಟಿಗೆ ನಿಗದಿಪಡಿಸಲಾಗಿತ್ತು.

ಕೃಷಿ: ಅನುದಾನ ಹೆಚ್ಚಳ

ಕೃಷಿ ಸಚಿವಾಲಯಕ್ಕೆ ಕಳೆದ ಬಾರಿಗಿಂತ ಹೆಚ್ಚಿನ ಮೊತ್ತವನ್ನು ತೆಗೆದಿರಿಸಲಾಗಿದ್ದು, ₹ 1.27 ಲಕ್ಷ ಕೋಟಿ ಹಂಚಿಕೆ ಮಾಡಲಾಗಿದೆ. ಇದರಲ್ಲಿ ಕೃಷಿ ಸಚಿವಾಲಯವು ₹ 1.17 ಲಕ್ಷ ಕೋಟಿ ಪಡೆಯಲಿದ್ದರೆ, ಕೃಷಿ ಸಂಶೋಧನಾ ಇಲಾಖೆಗೆ (ಡಿಎಆರ್‌ಇ) ₹ 9,941 ಕೋಟಿ ಹಂಚಿಕೆ ಮಾಡಲಾಗಿದೆ.

ಹಾಲಿ ಹಣಕಾಸು ವರ್ಷದ ಪರಿಷ್ಕೃತ ಅಂದಾಜು ಪ್ರಕಾರ ಕೃಷಿ ಸಚಿವಾಲಯಕ್ಕೆ ₹ 1.16 ಲಕ್ಷ ಕೋಟಿ ಹಂಚಿಕೆ ಮಾಡಲಾಗಿದೆ. ಪ್ರಧಾನ ಮಂತ್ರಿ ಕಿಸಾನ್ ಯೋಜನೆಗೆ ಕಳೆದ ಬಜೆಟ್‌ನಂತೆ ಈ ಬಾರಿಯೂ ₹ 60 ಸಾವಿರ ಕೋಟಿ ಹಂಚಿಕೆ ಮಾಡಲಾಗಿದೆ. ಈ ಯೋಜನೆಯಡಿ ರೈತರಿಗೆ ವರ್ಷದಲ್ಲಿ ಮೂರು ಕಂತುಗಳಲ್ಲಿ ಒಟ್ಟು ₹ 6 ಸಾವಿರ ಸಹಾಯಧನ ನೀಡಲಾಗುತ್ತಿದೆ.

‘ಪಿಎಂ–ಕಿಸಾನ್ ಯೋಜನೆಯಡಿ 11.8 ಕೋಟಿ ರೈತರಿಗೆ ನೇರ ಸಹಾಯಧನ ನೀಡಲಾಗಿದೆ. ಬೆಳೆ ವಿಮೆ ಯೋಜನೆಯಡಿ 4 ಕೋಟಿ ರೈತರು ನೆರವು ಪಡೆದಿದ್ದಾರೆ. ಪಿ.ಎಂ ಕಿಸಾನ್ ಸಂಪದ ಯೋಜನೆಯಿಂದ 38 ಲಕ್ಷ ರೈತರಿಗೆ ಪ್ರಯೋಜನವಾಗಿದ್ದು, 10 ಲಕ್ಷ ಉದ್ಯೋಗ ಸೃಷ್ಟಿಸಲಾಗಿದೆ’ ಎಂದು ಹಣಕಾಸು ಸಚಿವರು ಮಾಹಿತಿ ನೀಡಿದರು.

ಕೃಷಿ, ಗ್ರಾಮೀಣಾಭಿವೃದ್ಧಿಗೆ ಆದ್ಯತೆ

ವಿಶ್ಲೇಷಣೆ

ವಿಲಾಸ್ ಜಾಧವ್

ದೇಶದ ಸಮಗ್ರ ಬೆಳವಣಿಗೆಗೆ ಅಗತ್ಯವಿರುವ ಮೂಲಸೌಕರ್ಯಗಳಿಗೆ ಅದರಲ್ಲೂ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಬಜೆಟ್‌ನಲ್ಲಿ ಆದ್ಯತೆ ಸಿಕ್ಕಿದೆ ಎನ್ನಬಹುದು.

ಮೊದಲನೆಯದಾಗಿ ಯುವಜನರು, ಎರಡನೆಯದಾಗಿ ರೈತ ಮಹಿಳೆಯರು ಅಥವಾ ಸಾಮಾನ್ಯ ಮಹಿಳೆಯರು, ಮೂರನೆಯದಾಗಿ ರೈತರು, ಕಡಿಮೆ ಆದಾಯದ ಅಥವಾ ರಾಷ್ಟ್ರದ ಕಟ್ಟ ಕಡೆಯ ಜನರಾದ ಕಡುಬಡವರ ಬದುಕು ಹಸನಾಗಿಸಲು ಹೆಚ್ಚಿನ ಗಮನ ಕೊಟ್ಟಿರುವುದು ಕಾಣಿಸುತ್ತಿದೆ.

ರೈತರು ಇವತ್ತಿನವರೆಗೂ ಬಿತ್ತನೆಯಿಂದ ಬೆಳೆ ತೆಗೆಯುವುದಕ್ಕಷ್ಟೇ ಸೀಮಿತವಾಗಿದ್ದಾರೆ. ಬೆಳೆ ಬೆಳೆಯುವುದು ಅದನ್ನು ಹೇಗೋ ಮಾರಾಟ ಮಾಡಿ ಕೈತೊಳೆದುಕೊಳ್ಳುವುದಷ್ಟೇ ಅವರ ಆದ್ಯತೆಯಾಗಿದೆ. ಬೆಳೆಯ ಮೌಲ್ಯ ವರ್ಧನೆಗೆ ಗಮನವನ್ನೇ ಕೊಡುವುದಿಲ್ಲ. ಆದರೆ, ಈ ಬಜೆಟ್‌ನಲ್ಲಿ ಕೃಷಿ ಬೆಳೆಗಳ ಮೌಲ್ಯವರ್ಧನೆ ಗಾಗಿ ಹೆಚ್ಚಿನ ಪ್ರೋತ್ಸಾಹದ ಕ್ರಮಗಳನ್ನು ಸರ್ಕಾರ ಪ್ರಕಟಿಸಿದೆ. ಕೃಷಿ ಉತ್ಪನ್ನಗಳ ಸಂಸ್ಕರಣೆ, ಗ್ರೇಡಿಂಗ್, ಬ್ರ್ಯಾಂಡಿಂಗ್‌ಗೆ ವಿಶೇಷ ಯೋಜನೆಗಳನ್ನು ರೂಪಿಸಿದೆ.

ದೇಶದ 142 ಕೋಟಿ ಜನರಲ್ಲಿ ಸುಮಾರು 65 ಕೋಟಿ ಜನರು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಇದರಲ್ಲಿ ಅರ್ಧದಷ್ಟು ಜನರು ಯುವ ರೈತರು. ಇವರು ಬೆಳೆ ಬೆಳೆಯಲಷ್ಟೇ ಸೀಮಿತರಾಗಿ, ಅದು ಒಂದು ಋತುವಿಗೆ ಮಾತ್ರ ಭೂಮಿ ಉಳಿಮೆ ಮಾಡುವುದರಲ್ಲಿ ನಿರತರಾಗಿದ್ದಾರೆ. ಈಗ ಪ್ರಕಟಿಸಿರುವ ಉತ್ತೇಜನಕಾರಿ ಕ್ರಮಗಳಾದ ಕೊಯ್ಲೋತ್ತರ ಚಟುವಟಿಕೆ (ಪೋಸ್ಟ್ ಹಾರ್ವೆಸ್ಟಿಂಗ್), ಸಂಸ್ಕರಣೆ, ಗ್ರೇಡಿಂಗ್, ಬ್ರ್ಯಾಂಡಿಂಗ್ ಹಾಗೂ ಮೌಲ್ಯ ವರ್ಧನೆಯ ಚಟುವಟಿಕೆಗಳು ಈ ಯುವ ರೈತರನ್ನು ವರ್ಷ ಪೂರ್ತಿ ಕೃಷಿ ಚಟುವಟಿಕೆಯಲ್ಲಿ ತೊಡಗಿಸಲಿವೆ. ಇವು ರೈತರ ಆದಾಯವನ್ನು ದ್ವಿಗುಣ ಮಾಡಲು ಕೂಡ ನೆರವಾಗಲಿವೆ.

ಈಗಾಗಲೇ ಕೃಷಿಯಲ್ಲಿ ನ್ಯಾನೊ ಯೂರಿಯಾವನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಲಾಗುತ್ತಿದೆ. ಉತ್ತಮ ಫಲಿತಾಂಶ ಕೂಡ ಸಿಕ್ಕಿದೆ. ಇದೇ ಮಾದರಿಯಲ್ಲಿ ನ್ಯಾನೊ ಡಿಎಪಿ ಪರಿಚಯಿಸುತ್ತಿರುವುದು ಮತ್ತೊಂದು ಪ್ರಮುಖ ಬೆಳವಣಿಗೆ. ಇದು ಉತ್ತಮ ಹೆಜ್ಜೆ ಎನ್ನುವುದು ನಿಸ್ಸಂಶಯ. ನ್ಯಾನೊ ಡಿಎಪಿ ಬಳಕೆಯು ಪರಿಸರದ ಮೇಲಿನ ಹಾನಿ ತಗ್ಗಿಸಲಿದೆ. ಕೃಷಿ ಉತ್ಪಾದನೆ, ಇಳುವರಿ ಹೆಚ್ಚಿಸಲು ನೆರವಾಗಲಿದೆ. ನ್ಯಾನೊ ಡಿಎಪಿ ಕೃಷಿ ವಲಯಕ್ಕೆ ಒಂದು ದೊಡ್ಡ ಬೂಮ್ ಆಗಲಿದೆ.

ಇನ್ನು, ಕೃಷಿ ಕ್ಷೇತ್ರದಲ್ಲಿ ಇಡೀ ದೇಶದಲ್ಲೇ ಅತಿ ಕಡಿಮೆ ಇಳುವರಿಯ ಬೆಳೆಗಳೆಂದರೆ ಎಣ್ಣೆಕಾಳುಗಳು. ಇವತ್ತಿಗೂ ನಾವು ಎಣ್ಣೆಕಾಳುಗಳಲ್ಲಿ ಸ್ವಾವಲಂಬನೆ ಸಾಧಿಸಿಲ್ಲ, ಎಣ್ಣೆಕಾಳುಗಳಿಂದ ತಯಾರಿಸಿದ ಎಣ್ಣೆಯನ್ನು ಇವತ್ತಿಗೂ ಆಮದು ಮಾಡಿಕೊಳ್ಳುತ್ತಿದ್ದೇವೆ. ಇಳುವರಿ ಕುಂಠಿತ ಸಮಸ್ಯೆ ನೀಗಿಸುವ ಸಲುವಾಗಿ ಆತ್ಮನಿರ್ಭರ ಭಾರತ ಯೋಜನೆಯಡಿ ಹೆಚ್ಚು ಇಳುವರಿಯ ಎಳ್ಳೆಕಾಳುಗಳ ಸಂಶೋಧನೆಗೂ ಅವಕಾಶ ಕಲ್ಪಿಸಲಾಗಿದೆ. ಕೃಷಿಯೇತರವೆಂದು ಪರಿಗಣಿಸಿರುವ ಮತ್ತೊಂದು ಪ್ರಮುಖ ವಲಯವೆಂದರೆ ಹೈನುಗಾರಿಕೆ. ಒಟ್ಟು ಹಾಲು ಉತ್ಪಾದನೆಯಲ್ಲಿ ನಾವು ವಿಶ್ವದಲ್ಲೇ ಮುಂದಿದ್ದೇವೆ. ಆದರೆ, ಇಳುವರಿ ವಿಚಾರದಲ್ಲಿ ತುಂಬಾ ಹಿಂದಿದ್ದೇವೆ. ಕಡಿಮೆ ಇಳುವರಿ ನೀಡುವ ರಾಸುಗಳ ಸಂಖ್ಯೆ ದೇಶದಲ್ಲಿ ಹೆಚ್ಚಿದೆ. ಹಾಗಾಗಿ ಹಾಲು ಉತ್ಪಾದನೆಯಲ್ಲಿ ಹೆಚ್ಚು ಇಳುವರಿ ಸಾಧಿಸಲು ಪೂರಕ ಯೋಜನೆಗಳನ್ನು ಸಹ ಪ್ರಸ್ತಾಪಿಸಿರುವುದು ಉತ್ತಮ ಬೆಳವಣಿಗೆ.

ಹೈನುಗಾರಿಕೆ ಜತೆಗೆ ಮೀನುಗಾರಿಕೆಗೂ ಈ ಬಾರಿ ಉತ್ತೇಜನ ಸಿಕ್ಕಿದೆ. ಮೀನು ಉತ್ಪಾದನೆ ಮತ್ತು ರಫ್ತು ಹೆಚ್ಚಿಸಲು ಹಾಗೂ ಈ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಗಾಗಿ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ ಪ್ರಕಟಿಸಿರುವುದು ಮಹತ್ವದ ಹೆಜ್ಜೆಯೇ ಸರಿ. ರೈತರಿಗೆ ಕೃಷಿ ಹೊಂಡಗಳಲ್ಲಿ ಮೀನು ಸಾಕಲು ಬೇಕಾದ ಸೂಕ್ತ ತರಬೇತಿ ಮತ್ತು ಸೌಲಭ್ಯಗಳು ಇದರಡಿ ಸಿಗಲಿವೆ.

ಆಹಾರ ಸಂಸ್ಕರಣಾ ವಲಯದಲ್ಲಿ ಎಂಎಸ್‌ಎಂಇಗಳಿಗೂ ಹೆಚ್ಚಿನ ಅನುದಾನ ಸಿಕ್ಕಿದೆ. ರೈತ ಮಹಿಳೆಯರನ್ನು ಒಳಗೊಂಡಂತೆ ಒಂದು ಕೋಟಿ ಮಹಿಳೆಯರನ್ನು ಲಕ್ಷಾಧೀಶೆಯರನ್ನಾಗಿಸುವ ಯೋಜನೆ, ಪಿಎಂ ಕಿಸಾನ್ ಯೋಜನೆಯಡಿ ರೈತರಿಗೆ ನೇರ ನಗದು ವರ್ಗಾವಣೆ ಇವೆಲ್ಲವೂ ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಲಿವೆ.

ವಿಶ್ವದ ಆರ್ಥಿಕತೆಯಲ್ಲಿ ಯಾವುದೇ ಕ್ಷೇತ್ರದಲ್ಲಿ ಸಾಧಿಸಲಾಗದ್ದನ್ನು ಕೃಷಿ ಕ್ಷೇತ್ರದಲ್ಲಿ ಸಾಧಿಸುತ್ತಿರುವುದನ್ನು ನೋಡುತ್ತಿದ್ದೇವೆ. ಕೋವಿಡ್ ಕಾಲದಲ್ಲಿ ಎಲ್ಲಾ ಕ್ಷೇತ್ರದಲ್ಲಿ ಪ್ರಗತಿ ಇಳಿಮುಖವಾದರೆ, ಕೃಷಿ ಕ್ಷೇತ್ರ ಇಳಿಮುಖ ಕಾಣಲಿಲ್ಲ. ನಾವು ಕೃಷಿ ಕ್ಷೇತ್ರದಲ್ಲಿ ಯಶಸ್ಸು ಕಂಡಿದ್ದೇವೆ. ಆದರೆ, 90ರ ದಶಕದಲ್ಲಿ ಈ ಕ್ಷೇತ್ರದಲ್ಲಿ ಹೂಡಿಕೆ ಯಾವ ಪ್ರಮಾಣದಲ್ಲಿತ್ತೋ ಅದಕ್ಕಿಂತ ಶೇ 10ರಷ್ಟು ಮಾತ್ರ ಹೆಚ್ಚಾಗಿದೆ. ನಿರೀಕ್ಷಿತ ಪ್ರಮಾಣದಲ್ಲಿ ಹೂಡಿಕೆ ಹೆಚ್ಚುತ್ತಿಲ್ಲ. ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಸವಾಲು, ಸಮಸ್ಯೆಗಳು ಇವತ್ತಿಗೂ ಇವೆ. ಅವುಗಳನ್ನು ನಿವಾರಿಸಲು ಸಂಪೂರ್ಣ ಅಲ್ಲದಿದ್ದರೂ ಸಮಾಧಾನಕರ, ಉತ್ತೇಜನ ಕ್ರಮಗಳು ಬಜೆಟ್‌ನಲ್ಲಿ ಘೋಷಣೆಯಾಗಿವೆ. ಬೇರೆಲ್ಲಾ ಕ್ಷೇತ್ರಗಳಿಗೆ ಹೋಲಿಸಿ ನೋಡಿದಾಗ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಬಂಪರ್ ಅಲ್ಲದಿದ್ದರೂ ಒಂದಿಷ್ಟು ಸಮಾಧಾನಕರ, ತೃಪ್ತಿಕರ ಪಾಲು ಸಿಕ್ಕಿದೆ. ಈ ಕ್ಷೇತ್ರಗಳಿಗೆ ಇದೊಂದು ಸಮಗ್ರ, ಅಭಿವೃದ್ಧಿ ಕೇಂದ್ರಿತ ಬಜೆಟ್ ಆಗಿದೆ.

ಸಹಾಯಕ ಪ್ರಾಧ್ಯಾಪಕ, ಐಸೆಕ್

ಪ್ರತಿಕ್ರಿಯೆಗಳು

ವಿನಾಶಕಾರಿ ಬಜೆಟ್– ಸಿ.ಎಂ

ಬೆಂಗಳೂರು: ‘ಕೇಂದ್ರ ಸರ್ಕಾರ ಮಧ್ಯಂತರ ಬಜೆಟ್‌ನಲ್ಲಿ ವಿಕಸಿತ ಭಾರತ ಎಂದು ಹೇಳಿಕೊಂಡಿದೆ. ವಿಕಸಿತ ಅಲ್ಲ, ಇದು ಭಾರತದ ವಿನಾಶಕಾರಿ ಬಜೆಟ್’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘2023–24ನೇ ಸಾಲಿಗಿಂತ ಈ ಸಾಲಿನ ಬಜೆಟ್ ಗಾತ್ರದಲ್ಲಿ ಶೇ 5.8ರಷ್ಟು ಹೆಚ್ಚಾಗಿದೆ. ಆದರೆ, ನಿರುದ್ಯೋಗ, ಬೆಲೆ ಏರಿಕೆ, ಬರಗಾಲ, ರೈತರ ಸಮಸ್ಯೆಗಳ ಬಗ್ಗೆ ಇದರಲ್ಲಿ ಪ್ರಸ್ತಾಪವೇ ಇಲ್ಲ. ಸಾಲ ಹೆಚ್ಚಾಗಿರುವುದು, ಒಟ್ಟು ಸಾಲ ಪ್ರಮಾಣ ವಿಪರೀತ ಏರಿಕೆ ಆಗಿರುವುದನ್ನು ಉಲ್ಲೇಖಿಸಿಲ್ಲ. ಒಟ್ಟಾರೆಯಾಗಿ ನಿರಾಶಾದಾಯಕ ಬಜೆಟ್’ ಎಂದು ವಿಶ್ಲೇಷಿಸಿದರು.

‘ಬಡವರು, ಯುವಕರು, ರೈತರು, ಮಹಿಳೆಯರ ಪ್ರಗತಿಗೆ ಬಜೆಟ್‌ನಲ್ಲಿ ಕಾರ್ಯಕ್ರಮಗಳೇ ಇಲ್ಲ. ಕಾರ್ಪೊರೇಟ್ ವಲಯದ ಮೇಲಿನ ತೆರಿಗೆ ಪ್ರಮಾಣವನ್ನು ಶೇ 30ರಷ್ಟು ಇಳಿಸಿ, ಉಳಿದ ಭಾರವನ್ನು ಬಡವರು, ಮಧ್ಯಮ ವರ್ಗದವರ ಮೇಲೆ ಹೇರಿದ್ದಾರೆ. ಹೀಗಾಗಿ ಇದು ಬಡವರ, ಮಹಿಳೆಯರ, ಅಲ್ಪಸಂಖ್ಯಾತರ, ದಲಿತರ ವಿರೋಧಿ ಬಜೆಟ್’ ಎಂದು ಟೀಕಿಸಿದರು.

ಸರ್ವಸ್ಪರ್ಶಿ ಬಜೆಟ್

ಕೇಂದ್ರ ಬಜೆಟ್ ದೇಶದ ಭವಿಷ್ಯವನ್ನು ಕೇಂದ್ರೀಕರಿಸಿದೆ. ಚುನಾವಣಾ ಗಿಮಿಕ್‌ಗಳಿಲ್ಲದ ಸರ್ವಸ್ಪರ್ಶಿ ಮತ್ತು ಸರ್ವವ್ಯಾಪಿ ಆಗಿದೆ. 1 ಕೋಟಿ ಮನೆಗಳಿಗೆ ಸೌರ ವಿದ್ಯುತ್ ಅಳವಡಿಕೆ ಮತ್ತು 9 ಕೋಟಿ ಸ್ವ–ಸಹಾಯ ಗುಂಪುಗಳಿಗೆ ನೆರವು ನೀಡುವ ಕಾರ್ಯಕ್ರಮಗಳು ಜನಪರವಾಗಿವೆ.

ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ಕರ್ನಾಟಕ ಘಟಕ

ಕೇಂದ್ರದ ಮನವೊಲಿಸುತ್ತೇನೆ

ರಾಜ್ಯದ ಸಮಸ್ಯೆಗಳ ಬಗ್ಗೆ ಅರಿವಿದೆ. ಅನ್ಯಾಯ ಸರಿಪಡಿಸಲು ಕೇಂದ್ರದ ಮನವೊಲಿಸುತ್ತೇನೆ. ಜನರ ಪರವಾಗಿ ಧ್ವನಿ ಎತ್ತುತ್ತೇನೆ. ಇದು ಮಧ್ಯಂತರ ಬಜೆಟ್. ಪೂರ್ಣ ಪ್ರಮಾಣದ ಬಜೆಟ್ ಮಂಡನೆಯಾದಾಗ ಕರ್ನಾಟಕಕ್ಕೆ ದೊಡ್ಡ ಪ್ರಮಾಣದಲ್ಲಿ ನೆರವು ಸಿಗುತ್ತದೆ ಎನ್ನುವ ನಿರೀಕ್ಷೆ ಇದೆ

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಕೇಂದ್ರ ಬಜೆಟ್ 2024-25

‘ವಿಮಾನನಿಲ್ದಾಣಗಳ ಸಂಖ್ಯೆ ದುಪ್ಪಟ್ಟು’

ನವದೆಹಲಿ (ಪಿಟಿಐ): ವಿಮಾನನಿಲ್ದಾಣಗಳ ವಿಸ್ತರಣೆ ಮತ್ತು ಹೊಸ ವಿಮಾನನಿಲ್ದಾಣಗಳ ಅಭಿವೃದ್ಧಿ ತ್ವರಿತಗತಿಯಲ್ಲಿ ಸಾಗಿದೆ. 10 ವರ್ಷಗಳಲ್ಲಿ ವಿಮಾನನಿಲ್ದಾಣಗಳ ಸಂಖ್ಯೆ ದ್ವಿಗುಣವಾಗಿದ್ದು, 149ಕ್ಕೆ ಏರಿದೆ.

ಏರ್ ಇಂಡಿಯಾ, ಇಂಡಿಗೋ, ಆಕಾಸಾ ಏರ್ ಸಂಸ್ಥೆಗಳು ಕಳೆದ ಒಂದು ವರ್ಷದಲ್ಲಿ 1,120 ಹೊಸ ವಿಮಾನಗಳಿಗೆ ಖರೀದಿ ಆದೇಶ ನೀಡಿವೆ ಎಂದು ಮಧ್ಯಂತರ ಬಜೆಟ್ ಮಂಡಿಸಿದ ಸಚಿವೆ ನಿರ್ಮಲಾ ಹೇಳಿದರು.

ಎರಡು ಮತ್ತು ಮೂರನೇ ಹಂತದ ನಗರಗಳಿಗೆ ಉಡಾನ್ ಯೋಜನೆಯಡಿ ವೈಮಾನಿಕ ಸೇವೆ ಒದಗಿಸಲಾಗುತ್ತಿದೆ. 517 ಹೊಸ ಮಾರ್ಗ ಪರಿಚಯಿಸಿದ್ದು, 1.3 ಕೋಟಿ ಪ್ರಯಾಣಿಕರು ವಿಮಾನಯಾನ ಮಾಡುತ್ತಿದ್ದಾರೆ ಎಂದರು.

ಶಾಲಾ ಶಿಕ್ಷಣಕ್ಕೆ ಗರಿಷ್ಠ ಮೊತ್ತ

ನವದೆಹಲಿ (ಪಿಟಿಐ): ಮಧ್ಯಂತರ ಬಜೆಟ್‌ನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ₹ 73,008 ಕೋಟಿ ನಿಗದಿಪಡಿಸಲಾಗಿದೆ. ಇದು, ಬಜೆಟ್‌ನಲ್ಲಿ ಹಂಚಿಕೆಯಾದ ಗರಿಷ್ಠ ಮೊತ್ತವಾಗಿದೆ.

ಕಳೆದ ವರ್ಷ ₹ 72,473 ಕೋಟಿ ಹಂಚಿಕೆಯಾಗಿದ್ದು, ಈ ವರ್ಷ ತುಸು ಏರಿಕೆಯಾಗಿದೆ. ಶಿಕ್ಷಣ ಸಚಿವಾಲಯವು ಜಾರಿಗೊಳಿಸುವ, ಸರ್ಕಾರಿ ಶಾಲೆಗಳನ್ನು ಮೇಲ್ದರ್ಜೆಗೇರಿಸಲು ಒತ್ತು ನೀಡುವ ‘ಪಿ.ಎಂ ಶ್ರೀ’ ಯೋಜನೆಗೆ ₹ 6,050 ಕೋಟಿ ಹಂಚಿಕೆ ಮಾಡಲಾಗಿದೆ. ಕಳೆದ ಹಣಕಾಸು ವರ್ಷದಲ್ಲಿ ₹ 2,800 ಕೋಟಿ ಹಂಚಿಕೆ ಮಾಡಲಾಗಿತ್ತು. ಸರ್ಕಾರಿ ಶಾಲೆಗಳ ಮೇಲ್ದರ್ಜೆಗೇರಿಸಿ ಗುಣಮಟ್ಟ ಶಿಕ್ಷಣದ ಜೊತೆಗೆ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಾತಾವರಣ ಕಲ್ಪಿಸುವುದು ಈ ಯೋಜನೆಯ ಗುರಿಯಾಗಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಪ್ರಜಾವಾಣಿ

ಶುಕ್ರವಾರ, 2ಫೆಬ್ರುವರಿ 2024

ಭಾರತದ ಅಭಿವೃದ್ಧಿಯ ಅಡಿಪಾಯವನ್ನು ಬಲಪಡಿಸುವ ಖಾತರಿಯನ್ನು ನೀಡಿರುವ ಈ ಬಜೆಟ್, ದೇಶದ ಆಧಾರ ಸ್ತಂಭಗಳಾದ ಯುವ ಜನರು, ಬಡಜನರು, ಮಹಿಳೆಯರು ಮತ್ತು ರೈತರನ್ನು ಸಶಕ್ತಗೊಳಿಸುತ್ತದೆ. ಇದು ದೇಶದ ಭವಿಷ್ಯವನ್ನು ರೂಪಿಸುವ ಬಜೆಟ್ ಆಗಿದ್ದು, ಯುವ ಭಾರತದ ಯುವ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತದೆ. ಇದು ಕೇವಲ ಮಧ್ಯಂತರ ಬಜೆಟ್ ಅಲ್ಲ, ಬದಲಿಗೆ ಒಳಗೊಳ್ಳುವಿಕೆ ಮತ್ತು ಹೊಸತನದಿಂದ ಕೂಡಿರುವ ಬಜೆಟ್

-ನರೇಂದ್ರ ಮೋದಿ, ಪ್ರಧಾನಿ

₹ 24,931 ಕೋಟಿ
ಮೆಟ್ರೊ ಯೋಜನೆಗಳಿಗಾಗಿ 2024–25ನೇ ಸಾಲಿಗೆ ಹಂಚಿಕೆ ಮಾಡಿರುವ ಮೊತ್ತ. ಅಲ್ಲದೆ, ಇ–ಬಸ್‌ಗಳ ಖರೀದಿಗೆ ₹ 1,300 ಕೋಟಿ ಹಂಚಿಕೆ ಮಾಡಲಾಗಿದೆ

₹ 3,712 ಕೋಟಿ
ಆಯುಷ್ ಸಚಿವಾಲಯಕ್ಕೆ ಹಂಚಿಕೆ ಮಾಡಲಾದ ಮೊತ್ತ. ಕಳೆದ ವರ್ಷ ಹಂಚಿಕೆಯಾಗಿದ್ದ ₹ 3,000 ಕೋಟಿಗೆ ಹೋಲಿಸಿದರೆ ಶೇ 23.74ರಷ್ಟು ಏರಿಕೆಯಾಗಿದೆ.

₹ 2,300 ಕೋಟಿ
ನಾಗರಿಕ ವಿಮಾನಯಾನ ಸಚಿವಾಲಯಕ್ಕೆ ಪ್ರಸಕ್ತ ಹಣಕಾಸು ವರ್ಷ ಹಂಚಿಕೆಯಾಗಿರುವ ಮೊತ್ತ. ಕಳೆದ ಆರ್ಥಿಕ ವರ್ಷದಲ್ಲಿ ಹಂಚಿಕೆಯಾಗಿದ್ದ 2,922.12 ಕೋಟಿಗೆ ಹೋಲಿಸಿದರೆ ಗಣನೀಯವಾಗಿ ಇಳಿಕೆಯಾಗಿದೆ.

ಮೂರು ಆರ್ಥಿಕ ಕಾರಿಡಾರ್ ಅಭಿವೃದ್ಧಿ

ನವದೆಹಲಿ (ಪಿಟಿಐ): ದೇಶದಲ್ಲಿ ಮೂರು ಪ್ರಮುಖ ಆರ್ಥಿಕ ರೈಲ್ವೆ ಕಾರಿಡಾರ್ ಯೋಜನೆ ಜಾರಿಗೊಳಿಸಲಿದ್ದು, 40 ಸಾವಿರ ಬೋಗಿಗಳನ್ನು ವಂದೇ ಭಾರತ್ ಬೋಗಿಗಳಿಗೆ ಸಮಾನವಾಗಿ ಪರಿವರ್ತಿಸಲಾಗುವುದು ಎಂದು ಕೇಂದ್ರ ಪ್ರಕಟಿಸಿದೆ.

ಮಧ್ಯಂತರ ಬಜೆಟ್‌ನಲ್ಲಿ ಈ ವಿಷಯ ತಿಳಿಸಿದ ಸಚಿವೆ ನಿರ್ಮಲಾ ಸೀತಾರಾಮನ್, ‘ದೊಡ್ಡ ನಗರಗಳಲ್ಲಿ ಸಾರಿಗೆ ಸೌಲಭ್ಯ ಆಧರಿಸಿದ ಅಭಿವೃದ್ಧಿಗೆ ಪೂರಕವಾಗಿ ಮೂರು ಹಂತದ ಸಾರಿಗೆ ಸೇವೆಗೆ ಆದ್ಯತೆ ನೀಡಲಾಗುವುದು’ ಎಂದರು.

ಇಂಧನ, ಖನಿಜ ಮತ್ತು ಸಿಮೆಂಟ್ ಕಾರಿಡಾರ್, ಬಂದರು ಸಂಪರ್ಕ ಕಾರಿಡಾರ್, ಅತ್ಯಧಿತ ಸಂಚಾರ ದಟ್ಟಣೆ ಕಾರಿಡಾರ್ -ಕೇಂದ್ರ ಅಭಿವೃದ್ಧಿಗೆ ಚಿಂತನೆ ನಡೆಸಿರುವ ಕಾರಿಡಾರ್‌ಗಳು. ಬಹು ಹಂತದ ಸಂಪರ್ಕ ವ್ಯವಸ್ಥೆ ಸಾಕಾರಗೊಳಿಸಲು ಪ್ರಧಾನಮಂತ್ರಿ ಗತಿಶಕ್ತಿ ಯೋಜನೆಯಡಿ ಇವುಗಳನ್ನು ಜಾರಿಗೊಳಿಸಲಾಗುತ್ತಿದೆ ಎಂದರು.

ಕಾರಿಡಾರ್‌ಗಳ ನಿರ್ಮಾಣದಿಂದ ಸಾರಿಗೆ ದಟ್ಟಣೆ ತಗ್ಗಲಿದೆ, ಪ್ಯಾಸೆಂಜರ್ ರೈಲು ಸೇವೆ ಉತ್ತಮಗೊಳ್ಳಲಿದೆ. ಸರಕುಸಾಗಣೆ ಕಾರ್ಯದಕ್ಷತೆ ಹೆಚ್ಚಲಿದ್ದು, ವೆಚ್ಚ ತಗ್ಗಲಿದೆ ಎಂದರು. ಬೋಗಿಗಳ ಪರಿವರ್ತನೆಯಿಂದ ಪ್ರಯಾಣಿಕರಿಗೆ ಸುರಕ್ಷಿತ, ಅನುಕೂಲಕರ, ಆರಾಮದಾಯಕ ಸೇವೆಯನ್ನು ಒದಗಿಸುವುದು ಸಾಧ್ಯವಾಗಲಿದೆ ಎಂದು ವಿವರಿಸಿದರು.

ದೇಶದಲ್ಲಿ ಈಗ ಮಧ್ಯಮ ವರ್ಗವು ವಿಸ್ತರಣೆಯಾಗುತ್ತಿದೆ. ನಗರೀಕರಣ ಪ್ರಕ್ರಿಯೆಯು ಕ್ಷಿಪ್ರಗತಿಯಲ್ಲಿ ಆಗುತ್ತಿದೆ. ವಿವಿಧ ನಗರಗಳ ಮೆಟ್ರೊ ಸಾರಿಗೆಗಳಲ್ಲಿ ನಿತ್ಯ ಒಂದು ಕೋಟಿ ಜನರು ಪ್ರಯಾಣಿಸುತ್ತಿದ್ದಾರೆ. ಈಗ ದೇಶದ 20 ನಗರಗಳಲ್ಲಿ 895 ಕಿ.ಮೀ ಮೆಟ್ರೊ ಸಾರಿಗೆ ಸೌಲಭ್ಯವಿದೆ. 986 ಕಿ.ಮೀ. ಮಾರ್ಗ ಅಭಿವೃದ್ಧಿ ಹಂತದಲ್ಲಿದೆ ಎಂದು ಹೇಳಿದರು.

ನಗರ ಪ್ರದೇಶಗಳಲ್ಲಿ ಕ್ಷಿಪ್ರ ಸಾರಿಗೆ ಸೌಲಭ್ಯವನ್ನು ಕಲ್ಪಿಸಲು ಮೆಟ್ರೊ ರೈಲು ಮತ್ತು ನಮೊ ಭಾರತ್ ರೈಲು ಸೇವೆಗಳಿಗೆ ಹೆಚ್ಚಿನ ಒತ್ತು ನೀಡಲು ಸರ್ಕಾರ ತೀರ್ಮಾನಿಸಿದೆ ಎಂದು ಹೇಳಿದರು.

ಹೆದ್ದಾರಿ ಪ್ರಾಧಿಕಾರಕ್ಕೆ ₹ 1.68 ಲಕ್ಷ ಕೋಟಿ

ನವದೆಹಲಿ: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ (ಎನ್‌ಎಚ್‌ಎಐ) 2024–25ನೇ ಹಣಕಾಸು ಸಾಲಿಗೆ ₹ 1.68 ಲಕ್ಷ ಕೋಟಿ ಹಂಚಿಕೆ ಮಾಡಲಾಗಿದೆ. ಕಳೆದ ವರ್ಷ ₹ 1.67 ಲಕ್ಷ ಕೋಟಿ ಹಂಚಿಕೆಯಾಗಿತ್ತು.

ಅಲ್ಲದೆ, ಈ ಆರ್ಥಿಕ ವರ್ಷದಲ್ಲಿ ಹೆದ್ದಾರಿ ವಲಯಕ್ಕೆ ₹ 2.78 ಲಕ್ಷ ಕೋಟಿ ಹಂಚಿಕೆಯಾಗಿದೆ. ಇದು, ಕಳೆದ ವರ್ಷ ₹ 2.76 ಲಕ್ಷ ಕೋಟಿ ಆಗಿತ್ತು.

ದೇಶದಲ್ಲಿ ಒಂಬತ್ತು ವರ್ಷಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಯಲ್ಲಿ ಶೇ 60ರಷ್ಟು ಪ್ರಗತಿಯಾಗಿದೆ. ಏಪ್ರಿಲ್ 2014ರಲ್ಲಿ ರಾಷ್ಟ್ರೀಯ ಹೆದ್ದಾರಿಯ ಉದ್ದ 91,287 ಕಿ.ಮೀ ಇದ್ದರೆ, ಈಗ ಅದು 1.45 ಲಕ್ಷ ಕಿ.ಮೀ ಆಗಿದೆ. 2025ನೇ ಹಣಕಾಸು ವರ್ಷದಲ್ಲಿ ಇದನ್ನು 2 ಲಕ್ಷ ಕಿ.ಮೀ.ಗೆ ಏರಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ಲಕ್ಷದ್ವೀಪ ಸೇರಿ ಪ್ರವಾಸಿ ತಾಣಗಳ ಅಭಿವೃದ್ಧಿ

ನವದೆಹಲಿ (ಪಿಟಿಐ): ಲಕ್ಷದ್ವೀಪ ಸೇರಿದಂತೆ ದ್ವೀಪ ಪ್ರದೇಶಗಳಲ್ಲಿ ಪ್ರವಾಸೋದ್ಯಮ ಮೂಲಸೌಕರ್ಯ ಮತ್ತು ಸೌಲಭ್ಯ ಕಲ್ಪಿಸುವ ಮೂಲಕ ದೇಶಿ ಪ್ರವಾಸೋದ್ಯಮಕ್ಕೆ ಸರ್ಕಾರ ಉತ್ತೇಜನ ನೀಡಲಿದೆ.

ದೇಶವು ಆರ್ಥಿಕವಾಗಿ ಸದೃಢವಾಗಿದ್ದು, ಇದು ಪ್ರವಾಸೋದ್ಯಮದ ಅಭಿವೃದ್ಧಿಗೆ ನೆರವಾಗುತ್ತಿದೆ. ಇದರಿಂದಾಗಿ ಇನ್ನು ಮಧ್ಯಮ ವರ್ಗ ಕೂಡಾ ಪ್ರವಾಸಕ್ಕೆ ತೆರಳುವ, ಹೆಚ್ಚಿನ ಸ್ಥಳಗಳಿಗೆ ಭೇಟಿ ನೀಡುವ ಗುರಿ ಹೊಂದಬಹುದು. ಆಧ್ಯಾತ್ಮಿಕ ಪ್ರವಾಸೋದ್ಯಮ ಸೇರಿ ಒಟ್ಟಾರೆ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಪುಲ ಅವಕಾಶಗಳಿವೆ ಎಂದರು.

ಐಎಂಇಇಸಿ ಕಾರಿಡಾರ್‌ಗೆ ಬದ್ಧತೆ: ಕಳೆದ ವರ್ಷ ಪ್ರಾರಂಭಿಸಲಾದ ಭಾರತ– ಮಧ್ಯಪ್ರಾಚ್ಯ– ಯುರೋಪ್ ಆರ್ಥಿಕ ಕಾರಿಡಾರ್‌ಗೆ (ಐಎಂಇಇಸಿ) ಪಶ್ಚಿಮ ಏಷ್ಯಾದಲ್ಲಿನ ಪ್ರಕ್ಷುಬ್ಧ ಸ್ಥಿತಿಯ ಹೊರತಾಗಿಯೂ ನವದೆಹಲಿ ತನ್ನ ಬದ್ಧತೆಯನ್ನು ಪುನರುಚ್ಚರಿಸಿದೆ.

ಈ ಕಾರಿಡಾರ್ ಭಾರತ ಮತ್ತು ಇತರ ದೇಶಗಳ ಕಾರ್ಯತಂತ್ರ ಮತ್ತು ಆರ್ಥಿಕ ಬದಲಾವಣೆಗೆ ಕಾರಣವಾಗಲಿದೆ ಎಂದು ಮಧ್ಯಂತರ ಬಜೆಟ್ ಮಂಡನೆ ವೇಳೆ ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಅತಿ ಕಡಿಮೆ ಅವಧಿ ಭಾಷಣ

ನವದೆಹಲಿ (ಪಿಟಿಐ): ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ತಮ್ಮ ಆರನೇ ಬಜೆಟ್ ಮಂಡಿಸಿದ್ದು, 56 ನಿಮಿಷ ಓದಿದರು. ಇದು, ಅವರ ಅತಿ ಕಡಿಮೆ ಅವಧಿಯ ಬಜೆಟ್ ಭಾಷಣ.

ಹಿಂದೆ 2020ರಲ್ಲಿ ಗರಿಷ್ಠ ಅಂದರೆ 2 ಗಂಟೆ 40 ನಿಮಿಷ ಬಜೆಟ್ ಓದಿದ್ದರು. 2019ರಲ್ಲಿ 2 ಗಂಟೆ 17 ನಿಮಿಷ, 2021ರಲ್ಲಿ 1 ಗಂಟೆ 50 ನಿಮಿಷ, 2022ರಲ್ಲಿ 92 ನಿಮಿಷ, 2023ರಲ್ಲಿ 87 ನಿಮಿಷ ಓದಿದ್ದರು.

‘ನಮ್ಮ ಸರ್ಕಾರ ಜುಲೈನಲ್ಲಿ ಪೂರ್ಣ ಬಜೆಟ್ ಮಂಡಿಸಲಿದೆ’ ಎಂದು ಭಾಷಣದ ನಡುವೆ ಸಚಿವೆ ಹೇಳಿದಾಗ ಆಡಳಿತ ಪಕ್ಷದ ಸದಸ್ಯರು ಮೇಜುಕುಟ್ಟಿ ಹರ್ಷ ವ್ಯಕ್ತಪಡಿಸಿದರು.

ಪ್ರತಿಪಕ್ಷದವರು ಕುತೂಹಲದಿಂದ ಭಾಷಣ ಆಲಿಸಿದ್ದು ಗಮನಾರ್ಹ ವಾಗಿತ್ತು. ಆದರೆ, ಸಚಿವೆ ‘ನಮ್ಮ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಲಿದೆ’ ಎಂದು ಹೇಳಿದ ಸಂದರ್ಭಗಳಲ್ಲಿ ಅಲ್ಲಲ್ಲಿ ಆಕ್ಷೇಪಗಳು ಕೇಳಿಬಂದವು.

ಪ್ರಧಾನಿ ನರೇಂದ್ರ ಮೋದಿ ಅವರು ಸದನ ಪ್ರವೇಶಿಸಿದಾಗ ಬಿಜೆಪಿ ಸದಸ್ಯರು ‘ಭಾರತ್ ಮಾತಾ ಕೀ ಜೈ, ಜೈ ಶ್ರೀರಾಮ್, ಜೈ ಸಿಯಾರಾಂ ಘೋಷಣೆಗಳನ್ನು ಕೂಗಿದರು.

ಸಚಿವೆ ಹಿಂದೆ ಬಜೆಟ್‌ನಲ್ಲಿ ತಮಿಳು ಕವಿಗಳು, ಚಿಂತಕರ ಹೆಸರು ಉಲ್ಲೇಖಿಸಿದ್ದರು. ಈ ಬಾರಿ ಇರಲಿಲ್ಲ. ಆದರೆ, ಭಾಷಣದಲ್ಲಿ ಕನಿಷ್ಠ 8 ಬಾರಿ ಪ್ರಧಾನಿ ಮೋದಿ ಹೆಸರು ಉಲ್ಲೇಖಿಸಿದರು.

ನಿರ್ಮಲಾ ಅವರ ಪುತ್ರಿ ವಂಗಮಾಯಿ ಪರಕಾಲ ಮತ್ತು ಸಂಬಂಧಿಕರಾದ ಕೃಷ್ಣಮೂರ್ತಿ ಲಕ್ಷ್ಮಿನಾರಾಯಣ, ವಿದ್ಯಾ ಲಕ್ಷ್ಮಿನಾರಾಯಣ ಸಭಿಕರ ಗ್ಯಾಲರಿ–3ರಲ್ಲಿ ಮೊದಲ ಸಾಲಿನಲ್ಲಿದ್ದರು.

ರೇಷ್ಮೆ ಸೀರೆ ಧರಿಸಿದ್ದ ಸಚಿವೆ ಬಜೆಟ್ ಮಂಡನೆಗೂ ಮುನ್ನ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಆದರು. ಒಂದು ಚಮಚ ಮೊಸರು, ಸಕ್ಕರೆ ನೀಡಿದ ರಾಷ್ಟ್ರಪತಿ, ಸಚಿವೆಗೆ ಶುಭ ಕೋರಿದರು.

ಎಫ್‌ಡಿಐ, ಜಿಡಿಪಿಗೆ ಹೊಸ ವಿಸ್ತೃತ ವಿವರಣೆ: ಭಾಷಣದಲ್ಲಿ ಎಫ್‌ಡಿಐ ಮತ್ತು ಜಿಡಿಪಿಗೆ ಹೊಸ ವಿಸ್ತೃತ ವಿವರಣೆಯನ್ನು ಸಚಿವೆ ನೀಡಿದರು. ಆ ಪ್ರಕಾರ, ಎಫ್‌ಡಿಐ ಎಂದರೆ ‘ಫರ್ಸ್ಟ್ ಡೆವಲಪ್ ಇಂಡಿಯಾ’, ಜಿಡಿಪಿ ಎಂದರೆ ‘ಗವರ್ನೆನ್ಸ್, ಡೆವಲಪ್‌ಮೆಂಟ್, ಫರ್ಫಾರ್ಮೆನ್ಸ್’. ಬಜೆಟ್ ಬಾಷಣ ಮುಗಿದಂತೆ ನಿರ್ಮಲಾ ಅವರ ಆಸನದ ಬಳಿಗೇ ತೆರಳಿ ಪ್ರಧಾನಿ ಮೋದಿ ಅಭಿನಂದಿಸಿದರು. ಹಿಂದೆಯೇ ಹಲವು ಸಚಿವರೂ ಅಭಿನಂದಿಸಿದರು.

9–14 ವರ್ಷದ ಹೆಣ್ಣು ಮಕ್ಕಳಿಗೆ ಗರ್ಭಕಂಠದ ಕ್ಯಾನ್ಸರ್ ಲಸಿಕೆಗೆ ಪ್ರೋತ್ಸಾಹ

ಹೆಚ್ಚು ವೈದ್ಯಕೀಯ ಕಾಲೇಜು ಸ್ಥಾಪನೆ

ನವದೆಹಲಿ (ಪಿಟಿಐ): ವಿವಿಧ ಇಲಾಖೆಗಳ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳ ಮೂಲ ಸೌಕರ್ಯಗಳನ್ನು ಬಳಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವ ಯೋಜನೆಯನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ 2024–25ರ ಮಧ್ಯಂತರ ಬಜೆಟ್‌ನಲ್ಲಿ ಪ್ರಕಟಿಸಿದರು.

ಈ ಉದ್ದೇಶಕ್ಕಾಗಿ ಸಮಿತಿಯನ್ನು ರಚಿಸಲಾಗುವುದು. ಅದು ಈ ಕುರಿತು ಇರುವ ಸಮಸ್ಯೆಗಳನ್ನು ಪರಿಶೀಲಿಸಿ, ಸೂಕ್ತ ಶಿಫಾರಸುಗಳನ್ನು ಮಾಡುತ್ತದೆ ಎಂದರು.

ಸರ್ಕಾರ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದ್ದು, 2014ರಿಂದ ಈಚೆಗೆ ದೇಶದಲ್ಲಿ 7 ಐಐಟಿಗಳು, 16 ಐಐಐಟಿಗಳೂ, 7 ಐಐಎಂಗಳು, 15 ಏಮ್ಸ್ ಮತ್ತು 390 ವಿಶ್ವವಿದ್ಯಾಲಯ ಗಳನ್ನು ಸ್ಥಾಪಿಸಿದೆ ಎಂದು ಹೇಳಿದರು.

‘ಕೌಶಲ ಭಾರತ್ ಮಿಷನ್’ ಅಡಿಯಲ್ಲಿ 1.4 ಕೋಟಿ ಯುವ ಜನರಿಗೆ ತರಬೇತಿ ನೀಡಲಾಗಿದೆ. ಅಲ್ಲದೆ 54 ಲಕ್ಷ ಯುವ ಜನರಿಗೆ ಕೌಶಲವೃದ್ಧಿ ಮತ್ತು ಪುನರ್ ಕೌಶಲ ತರಬೇತಿ ಪಡೆದಿದ್ದಾರೆ. ಅಲ್ಲದೆ 3,000 ಹೊಸ ಐಟಿಐಗಳನ್ನೂ ಸ್ಥಾಪಿಸಲಾಗಿದೆ ಎಂದರು.

ಗರ್ಭಕಂಠ ಕ್ಯಾನ್ಸರ್ ಲಸಿಕೆಗೆ ಪ್ರೋತ್ಸಾಹ: ‘ದೇಶದಲ್ಲಿ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು 9–14 ವರ್ಷದ ಹೆಣ್ಣು ಮಕ್ಕಳಿಗೆ ಲಸಿಕೆ ಹಾಕಿಸುವಂತೆ ಪ್ರೋತ್ಸಾಹಿಸಲಾಗುವುದು ಎಂದು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಇತ್ತೀಚಿನ ಕೆಲ ಅಂದಾಜಿನ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ ಸುಮಾರು 80 ಸಾವಿರ ಮಹಿಳೆಯರು ಗರ್ಭಕಂಠದ ಕ್ಯಾನ್ಸರ್‌ಗೆ ಒಳಗಾಗುತ್ತಿದ್ದು, 35 ಸಾವಿರ ಮಂದಿ ಸಾವಿಗೀಡಾಗುತ್ತಿದ್ದಾರೆ. ಗರ್ಭಕಂಠ ಕ್ಯಾನ್ಸರ್‌ಗೆ ಸೀರಂ ಇನ್‌ಸ್ಟಿಟ್ಯೂಟ್ ತಯಾರಿಸಿರುವ ‘ಸರ್ವಾವ್ಯಾಕ್’ ಲಸಿಕೆಯು ಮಾರುಕಟ್ಟೆಯಲ್ಲಿ ಸದ್ಯ ದೊರೆಯುತ್ತಿದೆ. ಇದರ ಪ್ರತಿ ಡೋಸ್‌ಗೆ ₹ 2,000 ನಿಗದಿ ಮಾಡಲಾಗಿದೆ. ಅಮೆರಿಕದ ಎಂಎಸ್‌ಡಿ ಫಾರ್ಮಾಸುಟಿಕಲ್ ಕಂಪನಿಯ ಎಚ್‌ಪಿವಿ ಲಸಿಕೆಯೂ ಲಭ್ಯವಿದ್ದು, ಅದರ ಪ್ರತಿ ಡೋಸ್‌ಗೆ ₹ 3,927 ನಿಗದಿಯಾಗಿದೆ.

‘9ರಿಂದ 14 ವರ್ಷದ ಬಾಲಕಿಯರಿಗೆ ಗರ್ಭಕಂಠ ಕ್ಯಾನ್ಸರ್ ತಡೆ ಲಸಿಕೆ ಹಾಕುವ ಸರ್ಕಾರದ ಘೋಷಣೆ ಶ್ಲಾಘನೀಯ. ಗರ್ಭಕಂಠ ಕ್ಯಾನ್ಸರ್ ತಡೆ ಮತ್ತು ಲಸಿಕೆ ಬಳಕೆಗೆ ಸಂಬಂಧಿಸಿದಂತೆ ನಾವೆಲ್ಲ ಪ್ರತಿಜ್ಞೆ ಮಾಡಬೇಕಿದೆ’ ಎಂದು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸಿಇಒ ಆದಾರ್ ಪೂನಾವಾಲಾ ಹೇಳಿದರು.

ಸಮಗ್ರ ಕಾರ್ಯಕ್ರಮ: ತಾಯಿ– ಮಕ್ಕಳ ಆರೋಗ್ಯ ರಕ್ಷಣೆಗಾಗಿ ವಿವಿಧ ಯೋಜನೆಗಳನ್ನು ಒಂದು ಸಮಗ್ರ ಕಾರ್ಯಕ್ರಮದಡಿ ತರಲಾಗುವುದು. ಲಸಿಕಾ ಕಾರ್ಯಕ್ರಮಗಳನ್ನು ನಿರ್ವಹಿಸಲು ಹೊಸದಾಗಿ ವಿನ್ಯಾಸ ಮಾಡಲಾಗಿರುವ ‘ಯು–ವಿನ್’ ವೇದಿಕೆ ಮೂಲಕ ಇಂದ್ರಧನುಷ್ ಯೋಜನೆಯ ವೇಗವನ್ನು ದೇಶದಾದ್ಯಂತ ಹೆಚ್ಚಿಸಲಾಗುವುದು. ‘ಸಕ್ಷಮ್ ಅಂಗನವಾಡಿ’ ಮತ್ತು ‘ಪೋಷಣ್ 2.0’ ಅಡಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿ, ಸುಧಾರಿತ ಪೌಷ್ಟಿಕ ಆಹಾರ ವಿತರಣೆ ಕಾರ್ಯವನ್ನು ಸುಧಾರಿಸಲಾಗುವುದು ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

‘ಆಯುಷ್ಮಾನ್ ಭಾರತ್’ ವಿಸ್ತರಣೆ

ಆಯುಷ್ಮಾನ್ ಭಾರತ್ ವಿಮಾ ಯೋಜನೆಯಡಿ ಆರೋಗ್ಯ ರಕ್ಷಣೆಯನ್ನು ಎಲ್ಲ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ವಿಸ್ತರಿಸಲಾಗುವುದು ಎಂದು ಹಣಕಾಸು ಸಚಿವರು ಘೋಷಿಸಿದರು.

ಆಯುಷ್ಮಾನ್ ಭಾರತ್– ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯು ಬೃಹತ್ ಸಾರ್ವಜನಿಕ ಆರೋಗ್ಯ ವಿಮಾ ಯೋಜನೆಯಾಗಿದ್ದು, 12 ಕೋಟಿ ಕುಟುಂಬಗಳು ಇದರ ವ್ಯಾಪ್ತಿಯಲ್ಲಿವೆ. ಪ್ರತಿ ಕುಟುಂಬವು ₹ 5 ಲಕ್ಷದವರೆಗೆ ಉಚಿತ ಚಿಕಿತ್ಸೆ ಪಡೆಯಬಹುದಾಗಿದೆ. ಮಧ್ಯಂತರ ಬಜೆಟ್‌ನಲ್ಲಿ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಗೆ (ಪಿಎಂಜೆಎವೈ) ಹಂಚಿಕೆಯನ್ನು ₹6,800 ಕೋಟಿಯಿಂದ ₹7,500 ಕೋಟಿಗೆ ಹೆಚ್ಚಿಸಲಾಗಿದೆ.

‘ಎಲ್ಲರನ್ನೂ ಒಳಗೊಳ್ಳುವ ಆಶಯ’

ವಿಶ್ಲೇಷಣೆ

ಡಾ.ಮಾಲಿನಿ ಎಲ್.ತಂತ್ರಿ
ಡಾ.ಸಿ.ನಳಿನ್‌ಕುಮಾರ್

ಯುವ ಸಮುದಾಯ, ಮಹಿಳೆಯರ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುವುದು ಎಂದು ಬಜೆಟ್ ಮಂಡನೆ ಪೂರ್ವದಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದರು. ಅವರ ಮಾತು–ಆಶಯಗಳಿಗೆ ಪೂರಕ ಎಂಬಂತೆ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ 6ನೇ ಬಜೆಟ್‌ನಲ್ಲಿ, ಮಹಿಳೆ ಮತ್ತು ಯುವ ಜನತೆಯ ಕಲ್ಯಾಣಕ್ಕೆ ಒತ್ತು ನೀಡುವ ಕಾರ್ಯಕ್ರಮಗಳನ್ನು ಪ್ರಕಟಿಸಿದ್ದಾರೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಯಾವುದೇ ಜಾತಿ, ಸಮುದಾಯ ಅಥವಾ ಧರ್ಮಕ್ಕೆ ಸೇರಿರುವ ಯುವ ಜನತೆ ಹಾಗೂ ಮಹಿಳೆಯರ ಅಭಿವೃದ್ಧಿಗೆ ತಮ್ಮ ಸರ್ಕಾರ ಬದ್ಧವಾಗಿದೆ ಎಂದೂ ಪ್ರಧಾನಿ ಹೇಳಿದ್ದರು. ಹೀಗಾಗಿ, ಹೆಚ್ಚು ಒಳಗೊಳ್ಳುವ ಉದ್ದೇಶವನ್ನು ಹಾಗೂ ಯುವ ಜನತೆ ಮತ್ತು ಮಹಿಳೆಯರ ಸಾಮರ್ಥ್ಯಕ್ಕೆ ಇಂಬು ನೀಡುವ ಮೂಲಕ ದೇಶದ ಭವಿಷ್ಯವನ್ನು ಭದ್ರಗೊಳಿಸುವ ಆಶಯವನ್ನೂ ಬಜೆಟ್‌ನಲ್ಲಿ ವ್ಯಕ್ತಪಡಿಸಲಾಗಿದೆ.

2011ರ ಜನಸಂಖ್ಯೆ ಪ್ರಕಾರ, ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಶೇ 48.6. ಅದೇ ರೀತಿ ಯುವ ಜನತೆಯ ಪ್ರಮಾಣ ಶೇ 68ರಷ್ಟಿದ್ದು, ವಿಶ್ವದಲ್ಲಿಯೇ ಹೆಚ್ಚು ಯುವ ಸಮುದಾಯ ಹೊಂದಿದ ಹೆಗ್ಗಳಿಕೆ ಭಾರತದ್ದು.

ದೇಶದ ಅಭಿವೃದ್ಧಿಗೆ ಯುವ ಜನತೆ ಮತ್ತು ಮಹಿಳೆಯರು ಸಹ ಗಮನಾರ್ಹ ಕೊಡುಗೆ ನೀಡುವಂತಾಗಬೇಕು ಎಂದರೆ, ಅವರಿಗೆ ವಿಪುಲ ಉದ್ಯೋಗಾವಕಾಶ ಒದಗಿಸುವ ವ್ಯವಸ್ಥೆಯಾಗಬೇಕು. ಇದಕ್ಕೆ ಬಂಡವಾಳ ಹೂಡುವುದು ಮುಖ್ಯವಾಗುತ್ತದೆ.

ಉದ್ಯೋಗ ಸೃಜನೆಗಾಗಿ ನೂತನ ಶಿಕ್ಷಣ ನೀತಿ, ‘ಪ್ರಧಾನ ಮಂತ್ರಿ ಶ್ರೀ’(ಪಿಎಂ ಸ್ಕೂಲ್ಸ್ ಫಾರ್ ರೈಸಿಂಗ್ ಇಂಡಿಯಾ) ಉಪಕ್ರಮಗಳಿಗೆ ಬಜೆಟ್‌ನಲ್ಲಿ ಅಪಾರ ಶ್ಲಾಘನೆ ವ್ಯಕ್ತವಾಗಿದೆ. ಇದು ಮಧ್ಯಂತರ ಬಜೆಟ್. ಹೀಗಾಗಿ, ಉದ್ಯೋಗ ಸೃಷ್ಟಿ ವಿಷಯದಲ್ಲಿ ಲೋಕಸಭಾ ಚುನಾವಣೆ ನಂತರ ಅಧಿಕಾರಕ್ಕೆ ಬರುವ ಹೊಸ ಸರ್ಕಾರದ ಹಾದಿಯನ್ನು ಸುಗಮಗೊಳಿಸುವ ಸಂಬಂದ ಸರ್ಕಾರ ಪ್ರಜ್ಞಾಪೂರ್ವಕ ಹೆಜ್ಜೆಗಳನ್ನು ಇಟ್ಟಿರುವುದನ್ನು ಇದು ತೋರಿಸುತ್ತದೆ.

2023–24ನೇ ಸಾಲಿನಲ್ಲಿ ‘ಪಿಎಂ ಶ್ರೀ’ ಯೋಜನೆಗೆ ನಿಗದಿ ಮಾಡಲಾಗಿದ್ದ ಬಜೆಟ್ ಅಂದಾಜನ್ನು ₹4 ಸಾವಿರ ಕೋಟಿಯಿಂದ ₹6,050 ಕೋಟಿಗೆ ಹೆಚ್ಚಳ ಮಾಡಲಾಗಿತ್ತು. ಆದರೆ, ಅದೇ ಹಣಕಾಸು ವರ್ಷದ ಪರಿಷ್ಕೃತ ಅಂದಾಜಿನಲ್ಲಿ ಈ ಮೊತ್ತವನ್ನು ₹4 ಸಾವಿರ ಕೋಟಿಯಿಂದ ₹2,800 ಕೋಟಿಗೆ ಇಳಿಸಲಾಗಿತ್ತು.

ಈ ಬಾರಿಯ ಬಜೆಟ್‌ನ ಮತ್ತೊಂದು ಪ್ರಮುಖ ಅಂಶವೆಂದರೆ, ರಾಷ್ಟ್ರೀಯ ಅಪ್ರೆಂಟ್‌ಷಿಪ್ ತರಬೇತಿ ಯೋಜನೆಗೆ (ಎನ್‌ಎಟಿಎಸ್) ಹಂಚಿಕೆಯನ್ನು ಗಮನಾರ್ಹವಾಗಿ ಹೆಚ್ಚಳ ಮಾಡಿರುವುದು. 2023–24ನೇ ವಿತ್ತೀಯ ವರ್ಷದಲ್ಲಿ ಈ ಯೋಜನೆಗೆ ₹ 440 ಕೋಟಿ ಹಂಚಿಕೆ ಮಾಡಲಾಗಿತ್ತು. 2024–25ನೇ ಬಜೆಟ್‌ನಲ್ಲಿ ಈ ಮೊತ್ತವನ್ನು ₹600 ಕೋಟಿಗೆ ಹೆಚ್ಚಿಸಲಾಗಿದೆ. ಯುವ ಜನತೆಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರದ ಬದ್ಧತೆಯನ್ನು ಇದು ಖಾತ್ರಿಪಡಿಸುತ್ತದೆ.

7 ಐಐಟಿ, 16 ಐಐಐಟಿ, 7ಐಐಎಂ, 15 ಎಐಐಎಂಎಸ್ ಹಾಗೂ 390 ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿರುವ ಬಗ್ಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಸ್ತಾಪಿಸಿದ್ದಾರೆ. ಉದ್ಯೋಗ ಸೃಷ್ಟಿ ಹೆಚ್ಚಿಸುವುದಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದೂ ಹೇಳಿದ್ದಾರೆ. ಆದರೆ, ಈ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಹಲವು ವರ್ಷಗಳ ಅವಧಿಯಲ್ಲಿ ಸ್ಥಾಪಿಸಲಾಗಿದೆಯೇ ಹೊರತು, ಕಳೆದ ಒಂದೇ ವರ್ಷದಲ್ಲಿ ಅಲ್ಲ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ಹೀಗಾಗಿ, ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ ಬಜೆಟ್‌ನಲ್ಲಿನ ಈ ಅಂಶಗಳನ್ನು, ಯುವ ಜನರ ಸಬಲೀಕರಣಕ್ಕೆ ಸಂಬಂಧಿಸಿ ಸರ್ಕಾರದ ಬದ್ಧತೆಯನ್ನು ಪ್ರದರ್ಶಿಸುವ ‘ಪ್ರೊಗ್ರೆಸ್ ಕಾರ್ಡ್’ ಎಂದೇ ಪರಿಗಣಿಸಬೇಕಾಗುತ್ತದೆ. ಪಿಎಂ ಮುದ್ರಾ ಯೋಜನೆ, ಫಂಡ್ ಆಫ್ ಫಂಡ್ಸ್, ಸ್ಟಾರ್ಟ್‌ಅಪ್ ಇಂಡಿಯಾ, ಸ್ಟಾರ್ಟ್‌ಅಪ್ ಕ್ರೆಡಿಟ್ ಗ್ಯಾರಂಟಿ ಯೋಜನೆಗಳ ಬಗ್ಗೆಯೂ ಇದೇ ಮಾತನ್ನು ಹೇಳಬಹುದು.

ಮಹಿಳೆಯರ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ ವಿಶೇಷವಾಗಿ ಪ್ರಸ್ತಾಪಿಸಿರುವಾಗ, ‘ನಾರಿಶಕ್ತಿ’ ಯೋಜನೆ ಗಮನ ಸೆಳೆಯುತ್ತದೆ. ಆಶಾ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಆಯುಷ್ಮಾನ್ ಭಾರತ್ ಯೋಜನೆಯಡಿ ಆರೋಗ್ಯ ವಿಮೆ ಸೌಲಭ್ಯ ವಿಸ್ತರಿಸಲಾಗಿದೆ.

‘ಲಾಖ್‌ಪತಿ ದೀದಿ’ ಯೋಜನೆಯಡಿ, ಪ್ರಯೋಜನ ಪಡೆಯುವ ಮಹಿಳೆಯರ ಸಂಖ್ಯೆಯನ್ನು 3 ಕೋಟಿಗೆ ಹೆಚ್ಚಿಸಲಾಗುವುದು ಎಂದು ಹೇಳಲಾಗಿದೆ. ಆದರೆ, ಈ ಉದ್ದೇಶಕ್ಕಾಗಿ ರೂಪಿಸಲಾಗಿರುವ ವಿವಿಧ ಯೋಜನೆಗಳಿಗೆ ಅನುದಾನ ಹಂಚಿಕೆ ಮಾಡಿರುವುದು ಬಜೆಟ್‌ನಲ್ಲಿ ಕಂಡುಬರುವುದಿಲ್ಲ.

ದೇಶದ ಅಭಿವೃದ್ಧಿಯಲ್ಲಿ ಎರಡು ಪ್ರಬಲ ಆಧಾರ ಸ್ತಂಭಗಳಿದ್ದಂತೆ ಎಂಬುದಾಗಿ ಯುವ ಸಮುದಾಯ ಹಾಗೂ ಮಹಿಳೆಯರನ್ನು ಕೇಂದ್ರ ಸರ್ಕಾರ ಬಣ್ಣಿಸುತ್ತದೆ. ಇದು ಈ ಮಧ್ಯಂತರ ಬಜೆಟ್‌ನಲ್ಲಿಯೂ ವ್ಯಕ್ತವಾಗಿದೆ. ಈ ವಿಷಯಕ್ಕೆ ಸಂಬಂಧಿಸಿ ಒಂದೆಡೆ ಮಹತ್ವಾಕಾಂಕ್ಷೆ, ಇನ್ನೊಂದೆಡೆ ಕಾರ್ಯಸಾಧನೆಗಾಗಿ ಸಾಗಬೇಕಾದ ಹಾದಿ ಕಠಿಣವಾಗಿದೆ.

ಲೇಖಕಿ: ಪ್ರಾಧ್ಯಾಪಕಿ, ಐಸೆಕ್, ಬೆಂಗಳೂರು
ಲೇಖಕ: ಪ್ರಾಧ್ಯಾಪಕ, ಪಿಇಎಸ್ ವಿಶ್ವವಿದ್ಯಾಲಯ, ಬೆಂಗಳೂರು

ಪ್ರತಿಕ್ರಿಯೆಗಳು

ಭಾರತದ ಅಭಿವೃದ್ಧಿಯ ಸಂಕಲ್ಪವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಗಮನಹರಿಸಿರುವ ಬಜೆಟ್ ರಾಮರಾಜ್ಯದ ದೃಷ್ಟಿ ಕೋನ ಹೊಂದಿದ್ದು, ಸ್ವಾವಲಂಬನೆಯ ಪ್ರತಿಜ್ಞೆ ಮಾಡಿದೆ. ಬಡತನ ನಿರ್ಮೂಲನೆಗೆ ಬಜೆಟ್ ಒತ್ತು ಕೊಟ್ಟಿದೆ

ಜೆ.ಪಿ.ನಡ್ಡಾ, ಬಿಜೆಪಿ ಅಧ್ಯಕ್ಷ

ಪ್ರತಿ ವಲಯದಲ್ಲಿ ಭಾರತವನ್ನು ಅಗ್ರಗಣ್ಯ ರಾಷ್ಟ್ರವನ್ನಾಗಿಸುವ ನಿಟ್ಟಿನಲ್ಲಿ 10 ವರ್ಷಗಳಲ್ಲಿ ಮೋದಿ ಸರ್ಕಾರ ಸಾಧಿಸಿದ ಮೈಲಿಗಲ್ಲುಗಳ ಮೇಲೆ ಬಜೆಟ್ ಬೆಳಕು ಚೆಲ್ಲುತ್ತದೆ. ಅಲ್ಲದೆ ಆ ಮೂಲಕ ವಿಕಸಿತ ಭಾರತದ ಭವ್ಯವಾದ ಸೌಧ ನಿರ್ಮಿಸುವ ನೋಟವನ್ನು ಬೀರುತ್ತದೆ

ಅಮಿತ್ ಶಾ, ಗೃಹ ಸಚಿವ

ಆರ್ಥಿಕ ಸಮೀಕ್ಷೆ ಮತ್ತು ಮಧ್ಯಂತರ ಬಜೆಟ್‌ನಲ್ಲಿ ಅದೇ ಅಂಕಿ ಅಂಶಗಳಿವೆ. ಪ್ರತಿ ಸಂಖ್ಯೆಯೂ ಆರ್ಥಿಕ ತಜ್ಞರು, ಕ್ಷೇತ್ರ ಪರಿಣತರಿಗೆ ಸವಾಲು ಎಸೆದಿವೆ. ಸಚಿವೆ ಜಿಡಿಪಿ ಉಲ್ಲೇಖಿಸುತ್ತಾರೆ, ತಲಾ ಆದಾಯ ಉಲ್ಲೇಖಿಸುವುದಿಲ್ಲ. ಹಣದುಬ್ಬರ ಎನ್ನುತ್ತಾರೆ. ಆಹಾರದ ಹಣದುಬ್ಬರ ಸದ್ಯ ಶೇ 7.7ರಷ್ಟಿದೆ ಎಂಬುದನ್ನು ಮರೆಯುತ್ತಾರೆ

ಪಿ.ಚಿದಂಬರಂ, ಮಾಜಿ ಹಣಕಾಸು ಸಚಿವ

ಮೂಲಸೌಕರ್ಯಕ್ಕೆ ₹11.11 ಲಕ್ಷ ಕೋಟಿ

ನವದೆಹಲಿ (ಪಿಟಿಐ): 2024–25ನೇ ಹಣಕಾಸು ವರ್ಷದಲ್ಲಿ ಮೂಲಸೌಕರ್ಯ ಕ್ಷೇತ್ರದಲ್ಲಿ ₹ 11.11 ಲಕ್ಷ ಕೋಟಿ ವ್ಯಯಿಸುವ ಭರವಸೆಯನ್ನು ಸಚಿವೆ ನಿರ್ಮಲಾ ಸೀತಾರಾಮನ್ ನೀಡಿದ್ದಾರೆ.

ಮೋದಿ ಸರ್ಕಾರದ ಮೂರನೇ ಅವಧಿಯ ಆದ್ಯತೆಗಳನ್ನು ಪಟ್ಟಿ ಮಾಡಿದ ಸಚಿವೆ, ಸುಸ್ಥಿರಾಭಿವೃದ್ಧಿ, ಸೇರ್ಪಡೆಯುಕ್ತ ಅಭಿವೃದ್ಧಿ ಜೊತೆಗೆ ಸಂಪನ್ಮೂಲ ಸೃಷ್ಟಿಗೂ ಸರ್ಕಾರ ಆದ್ಯತೆ ನೀಡಲಿದೆ ಎಂದು ಹೇಳಿದರು.

ರಸ್ತೆ, ಬಂದರು, ವಿಮಾನನಿಲ್ದಾಣಗಳ ಅಭಿವೃದ್ಧಿ ಒಳಗೊಂಡು ಮೂಲಸೌಕರ್ಯ ಕ್ಷೇತ್ರದಲ್ಲಿ ಒಟ್ಟು ₹ 11.11 ಲಕ್ಷ ಕೋಟಿ ವ್ಯಯಿಸಲಿದ್ದು, ಇದು ಕಳೆದ ಸಾಲಿಗಿಂತ ಶೇ 11ರಷ್ಟು ಏರಿಕೆಯಾಗಿದೆ ಎಂದರು.

ಅಲ್ಲದೆ, ಮೂಲಸೌಕರ್ಯ ಕ್ಷೇತ್ರಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರಗಳಿಗೆ 1.3 ಲಕ್ಷ ಕೋಟಿಯನ್ನು ದೀರ್ಘಾವಧಿ ಸಾಲವಾಗಿ ಒದಗಿಸಲಾಗುವುದು. ಆಧುನಿಕ ದಾಸ್ತಾನು ಮತ್ತು ಪೂರೈಕೆ ವ್ಯವಸ್ಥೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಖಾಸಗಿ–ಸಾರ್ವಜನಿಕ ಸಹಭಾಗಿತ್ವಕ್ಕೆ ಉತ್ತೇಜನ ನೀಡಲಾಗುವುದು ಎಂದರು.

ಬುಡಕಟ್ಟು ಸಚಿವಾಲಯಕ್ಕೆ ಶೇ 70ರಷ್ಟು ಅನುದಾನ ಹೆಚ್ಚಳ

ಬುಡಕಟ್ಟು ವ್ಯವಹಾರಗಳ ಸಚಿವಾಲಯಕ್ಕೆ ಈ ಸಾಲಿನ ಬಜೆಟ್‌ನಲ್ಲಿ ₹13,000 ಕೋಟಿ ಅನುದಾನ ನೀಡಲಾಗಿದೆ. 2023–24ನೇ ಸಾಲಿನ ಬಜೆಟ್ ಅನುದಾನಕ್ಕೆ ಹೋಲಿಸಿದರೆ ಈ ವಲಯಕ್ಕೆ ಈ ಬಾರಿ ಶೇ 70ರಷ್ಟು ಅನುದಾನವನ್ನು ಹೆಚ್ಚಿಸಲಾಗಿದೆ.

ಕಳೆದ ಬಜೆಟ್‌ನಲ್ಲಿ ₹7,605 ಕೋಟಿ ಅನುದಾನ ನೀಡಲಾಗಿತ್ತು.

ಈ ಅನುದಾನದಲ್ಲಿ, ಬುಡಕಟ್ಟು ಸಮುದಾಯದ ಮಕ್ಕಳಿಗಾಗಿ ಮೀಸಲಿರುವ ಏಕಲವ್ಯ ಮಾದರಿ ವಸತಿ ಶಾಲೆ (ಎಎಂಆರ್‌ಎಸ್) ನಿರ್ಮಾಣಕ್ಕಾಗಿ ₹6,399 ಕೋಟಿ, ಪ್ರಧಾನ ಮಂತ್ರಿ ಆದಿ ಆದರ್ಶ ಗ್ರಾಮ ಯೋಜನೆಗೆ ₹1,000 ಕೋಟಿ ಹಂಚಿಕೆ ಮಾಡಲಾಗಿದೆ.

ಕಳೆದ ಸಾಲಿನ ಬಜೆಟ್‌ನಲ್ಲಿ ಕ್ರಮವಾಗಿ ₹2,471ಕೋಟಿ ಮತ್ತು ₹300 ಕೋಟಿ ಅನುದಾನ ನೀಡಲಾಗಿತ್ತು.

ಬುಡಕಟ್ಟು ಸಂಶೋಧನಾ ಸಂಸ್ಥೆಗೆ ₹111 ಕೋಟಿ ಮೀಸಲಿಡಲಾಗಿದೆ. ಕಳೆದ ಬಜೆಟ್‌ನಲ್ಲಿ ₹50 ಕೋಟಿ ಮೀಸಲಿಡಲಾಗಿತ್ತು.

‘ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಶಿಷ್ಯವೃತ್ತಿ ಮತ್ತು ವಿದ್ಯಾರ್ಥಿ ವೇತನ’ಕ್ಕೆ ₹165 ಕೋಟಿ ಹಂಚಿಕೆ ಮಾಡಲಾಗಿದೆ.

ಗಿಗ್, ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೇವೆ

ನವದೆಹಲಿ (ಪಿಟಿಐ): ಗಿಗ್ ಕಾರ್ಮಿಕರು, ಕಟ್ಟಡ, ನಿರ್ಮಾಣ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೇವೆ ವಿಸ್ತರಿಸಲು ನಿರ್ಧರಿಸಿರುವ ಕೇಂದ್ರ, ಈ ವರ್ಗದ ಕಾರ್ಮಿಕರ ವಿವರ ಸಂಗ್ರಹಿಸಲು ಪೋರ್ಟಲ್ ಆರಂಭಿಸಲು ತೀರ್ಮಾನಿಸಿದೆ.

ಪೋರ್ಟಲ್ ಮೂಲಕ ಈ ವರ್ಗದ ಕಾರ್ಮಿಕರ ಸಮಗ್ರ ವಿವರ ಸಂಗ್ರಹಿಸಲಾಗುವುದು. ಆರೋಗ್ಯ ಸೇವೆ, ಸುಲಭ ಸಾಲ ವ್ಯವಸ್ಥೆ, ಆಹಾರ ಮತ್ತಿತರ ಸೇವೆಗಳನ್ನು ಒದಗಿಸಲಾಗುವುದು ಎಂದು ಸಚಿವೆ ನಿರ್ಮಲಾ ಹೇಳಿದರು.

ಉಬರ್, ಓಲಾ, ಸ್ವಿಗ್ಗಿ, ಜೊಮಾಟೊ, ವಿವಿಧ ಇ–ಕಾಮರ್ಸ್ ವೇದಿಕೆಗಳಲ್ಲಿನ ಕಾರ್ಮಿಕರನ್ನು ಗಿಗ್ ಕಾರ್ಮಿಕರು ಎಂದು ಗುರುತಿಸಲಾಗುತ್ತದೆ. ಇವರು ಸದ್ಯ ಭವಿಷ್ಯ ನಿಧಿ, ಗುಂಪು ವಿಮೆ, ಪಿಂಚಣಿ ಸೌಲಭ್ಯ ವಂಚಿತರಾಗಿದ್ದಾರೆ.

ಭಾರತದಲ್ಲಿ ಕಾರ್ಮಿಕರ ಒಟ್ಟು ಬಲ 50 ಕೋಟಿ ಇದ್ದು, ಇವರಲ್ಲಿ ಕೃಷಿ ಕೂಲಿ, ಗ್ರಾಮೀಣ ನೌಕರರು ಸೇರಿ 40 ಕೋಟಿ ಅಸಂಘಟಿತ ವಲಯದಲ್ಲಿಯೇ ಇದ್ದಾರೆ.

ಯುವಜನರಿಗೆ ಅವಕಾಶ ಕಲ್ಪಿಸಲು ಅಪ್ರೆಂಟಿಸ್‌ಷಿಪ್ ಕಾಯ್ದೆಗೆ ತಿದ್ದುಪಡಿ ತರಲಾಗುವುದು. ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ ಸ್ಥಾಪಿಸಿ, 5 ವರ್ಷಗಳಲ್ಲಿ ₹ 50 ಸಾವಿರ ಕೋಟಿ ಹಂಚಿಕೆ ಮಾಡಲಾಗುವುದು ಎಂದರು.

ರಕ್ಷಣಾ ಕ್ಷೇತ್ರಕ್ಕೆ ₹ 6.21 ಲಕ್ಷ ಕೋಟಿ

ರಕ್ಷಣಾ ಕ್ಷೇತ್ರದಲ್ಲಿ ‘ಆತ್ಮನಿರ್ಭರ ಭಾರತ’ ಚಿಂತನೆಗೆ ಮತ್ತಷ್ಟು ಉತ್ತೇಜನದ ಭರವಸೆಯನ್ನು ಕೇಂದ್ರ ನೀಡಿದ್ದು, 2024–25 ಸಾಲಿಗೆ ಬಜೆಟ್ ಅನುದಾನದಲ್ಲಿ ಅಲ್ಪಪ್ರಮಾಣದಲ್ಲಿ ಏರಿಕೆ ಮಾಡಿದೆ.

2024–25ನೇ ಹಣಕಾಸು ಸಾಲಿಗೆ ರಕ್ಷಣಾ ಕ್ಷೇತ್ರಕ್ಕೆ ₹ 6.21 ಲಕ್ಷ ಕೋಟಿಯನ್ನು ಹಂಚಿಕೆ ಮಾಡಿದೆ. ಕಳೆದ ವರ್ಷದ ಬಜೆಟ್‌ನಲ್ಲಿ ಒಟ್ಟು ₹ 5.94 ಲಕ್ಷ ಕೋಟಿ ಹಂಚಿಕೆ ಮಾಡಲಾಗಿತ್ತು.

ಆಧುನಿಕ ಶಸ್ತ್ರಾಸ್ತ್ರಗಳು, ಯುದ್ಧವಿಮಾನ, ಯುದ್ಧನೌಕೆ ಮತ್ತು ಇತರೆ ಸೇನಾ ಹಾರ್ಡ್‌ವೇರ್‌ಗಳ ಖರೀದಿಗಾಗಿ ಈ ಪೈಕಿ ₹ 1.72 ಲಕ್ಷ ಕೋಟಿ ಕಾಯ್ದಿರಿಸಲಾಗಿದೆ ಎಂದೂ ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದರು.

ರಕ್ಷಣಾ ಸೇವೆಯ ವೆಚ್ಚದಲ್ಲಿ ವಿಮಾನಗಳು, ಏರೊ ಎಂಜಿನ್‌ಗಳ ಖರೀದಿಗೆ ₹ 40,777 ಕೋಟಿ ಹಾಗೂ ಇತರೆ ಪರಿಕರಗಳಿಗಾಗಿ ವ್ಯಯಿಸಲು ₹ 60,343 ಕೋಟಿ ಹಂಚಿಕೆ ಮಾಡಲಾಗಿದೆ ಎಂದು ಹೇಳಿದರು.

ಆವಿಷ್ಕಾರ, ಸಂಶೋಧನಾ ಕ್ಷೇತ್ರಕ್ಕೆ ಉತ್ತೇಜನಕ್ಕಾಗಿ ₹ 1 ಲಕ್ಷ ಕೋಟಿ ನಿಧಿ

ನವೀನ ಸಂಶೋಧನೆ ಮತ್ತು ಆವಿಷ್ಕಾರಕ್ಕೆ ಖಾಸಗಿ ವಲಯದವರಿಗೆ ಉತ್ತೇಜನ ನೀಡಲು 50 ವರ್ಷ ಅವಧಿಗೆ ಬಡ್ಡಿರಹಿತ ಉಚಿತ ಸಾಲ ಒದಗಿಸಲು ₹ 1 ಲಕ್ಷ ಕೋಟಿಯ ಆವರ್ತನಿಧಿ ಸ್ಥಾಪಿಸಲಾಗುತ್ತದೆ.

ಮಧ್ಯಂತರ ಬಜೆಟ್‌ನಲ್ಲಿ ಸಚಿವೆ ನಿರ್ಮಲಾ ಸೀತಾರಾಮನ್ ಈ ವಿಷಯ ಪ್ರಕಟಿಸಿದರು. ‘ತಂತ್ರಜ್ಞಾನದತ್ತ ಒಲವುಳ್ಳ ಭಾರತದ ಯುವಜನರಿಗೆ ಇದು ಸುವರ್ಣಯುಗವಾಗ ಲಿದೆ’ ಎಂದು ಬಣ್ಣಿಸಿದರು.

ಹೊಸ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಆವಿಷ್ಕಾರ ಕೈಗೊಳ್ಳಲು ಈ ಕ್ರಮವು ಖಾಸಗಿ ವಲಯದಲ್ಲಿ ಉತ್ತೇಜನ ನೀಡಲಿದೆ. ಯವಶಕ್ತಿ ಮತ್ತು ತಂತ್ರಜ್ಞಾನ ಒಗ್ಗೂಡಿಸುವ ಕಾರ್ಯಕ್ರಮಗಳು ಈಗಿನ ಅಗತ್ಯವಾಗಿದೆ ಎಂದರು.

‘ಸೋಲಾರ್: ಕೋಟಿ ಕುಟುಂಬಗಳಿಗೆ ವಾರ್ಷಿಕ ತಲಾ ₹18,000 ಉಳಿತಾಯ’



ನವದೆಹಲಿ (ಪಿಟಿಐ): ಪ್ರಧಾನಮಂತ್ರಿ ಸೂರ್ಯೋದಯ ಯೋಜನೆಯಿಂದಾಗಿ ಒಂದು ಕೋಟಿ ಕುಟುಂಬಗಳು ಪ್ರತಿ ತಿಂಗಳು ಗರಿಷ್ಠ 300 ಯೂನಿಟ್‌ಗಳಷ್ಟು ಉಚಿತ ವಿದ್ಯುತ್ ಪಡೆಯಲಿವೆ. ಇದರಿಂದ ವಾರ್ಷಿಕ ₹18 ಸಾವಿರ ಉಳಿತಾಯವಾಗಲಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ತಿಳಿಸಿದರು.

ಯೋಜನೆಯ ಅನುಕೂಲಗಳ ಬಗ್ಗೆ ತಿಳಿಸಿದ ಅವರು, ‘ಉಚಿತ ಸೋಲಾರ್ ವಿದ್ಯುತ್‌ನಿಂದ ಕುಟುಂಬಗಳು ವಾರ್ಷಿಕ ₹15,000ರಿಂದ ₹18,000 ಉಳಿತಾಯ ಮಾಡಬಹುದು. ಹೆಚ್ಚುವರಿ ವಿದ್ಯುತ್ ಅನ್ನು ವಿತರಣಾ ಕಂಪನಿಗಳಿಗೆ ಮಾರಾಟ ಮಾಡಬಹುದು’ ಎಂದು ತಿಳಿಸಿದರು.

ದೇಶದಾದ್ಯಂತ ಒಂದು ಕೋಟಿ ಮನೆಗಳ ಮೇಲೆ ಸೌರವಿದ್ಯುತ್ ಘಟಕ ಅಳವಡಿಸುವ ಉದ್ದೇಶದಿಂದ ಕಳೆದ ಜನವರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ‘ಪ್ರಧಾನಮಂತ್ರಿ ಸೂರ್ಯೋದಯ ಯೋಜನೆ’ಯನ್ನು ಘೋಷಿಸಿದ್ದರು.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7500-10800
ತಿಪಟೂರು	₹8800-9800

ವಿನಿಮಯ ದರ

$ ಡಾಲರ್	82.98
£ ಪೌಂಡ್	105.02
€ ಯುರೊ	89.61

ಷೇರುಪೇಟೆ ವಹಿವಾಟು 106



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,725
ಇಂದಿನ ಅಂತ್ಯ	21,695
▼	30
ದಿನದ ಕನಿಷ್ಠ	21,658

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹161
ಆರ್‌ಎಸ್‌ಎಸ್-5	₹156
ಗುಡ್ ಲಾಟ್	₹139

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು 100ಕ್ಕೆ	₹570
12 ಕ್ಕೆ	₹75
ಮೈಸೂರು 100ಕ್ಕೆ	₹572

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1510 (1505)
ಸೋಯಾ (ರಿಫೈನ್ಡ್)	₹880 (870)
ಸೂರ್ಯಕಾಂತಿ (ರಿಫೈನ್ಡ್)	₹910 (910)
ಪಾಮೋಲಿನ್	₹845 (845)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹200-467
ದ್ವಿತಳಿ (ಬಿ.ವಿ)	₹333-589

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹14500
ಎಸಿ	₹7900
ಆರ್‌ಪಿ	₹12750
ಆರ್‌ಸಿ	₹7500

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

SAD DEMISE

Smt. S.V. Kamala Bai
W/o Late S S Visweswara (Sajjan Lodge)
DoB 02.06.1953 DoD 01.02.2024
With Profound Grief & Sorrow we inform the Sad demise On 01/02/2024
Sorrowing Family Members

SHRADDHANJALI

Shri. ASHOKA HAVANUR
61yrs
Managing Trustee & Treasurer
HAVANUR COLLEGE OF LAW
Left for his heavenly abode on 21.01.2024
His passing away has been sudden, untimely & an unbearable loss to us all.
The shock is too severe to bear to lose one we held so dear
May his departed soul rest in eternal peace
Deeply mourned by his mother and all family members
Respectful homage and deep gratitude by the Trustees, Principal, Staff and Students of Havanur College of Law

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಹೆಚ್.ಎಸ್.ಶಿವಲಿಂಗಯ್ಯರವರು
ಗೌ॥ ಮಾಜಿ ಉಪಾಧ್ಯಕ್ಷರು ಮತ್ತು ಹಾಲಿ ನಿರ್ದೇಶಕರು
ಶ್ರೀ ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಇಲ್ಲಿ ಉಪಾಧ್ಯಕ್ಷರಾಗಿ ಮತ್ತು ನಿರ್ದೇಶಕರಾಗಿ ಸುಧೀರ್ಘವಾಗಿ ಸೇವೆ ಸಲ್ಲಿಸಿದ್ದು, ಇವರು ದಿನಾಂಕ: 31.01.2024 ರಂದು ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಇವರ ಕುಟುಂಬದವರಿಗೆ ಈ ದುಃಖವನ್ನು ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗ
ಶ್ರೀ ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, 3ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು–560010

LOOKING TO BUILD, BUY OR SELL A PROPERTY
Please refer Classifieds on Sunday

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ ಬಂಟ್ವಾಳ				ಸಾಗರ	
ಕೋಕ	18000-28500	ಹಳತು	30000-44500	ಬಿಳಿಗೋಟು	20199-29199
ಹೊಸತು	28500-35000	ಕುಮಟ		ಚಾಲಿ	23199-37610
ಹಳತು	42000-44000	ಹಳೆಚಾಲಿ	35069-37789	ಕೋಕ	11899-31599
ಕಾರ್ಕಳ		ಹೊಸಚಾಲಿ	31669-34079	ಕೆಂಪುಗೋಟು	25399-37099
ಹೊಸತು	25000-35000	ಚಿಪ್ಪು	21209-33069	ರಾಶಿ	30899-48799
		ಕೋಕ	14129-27370	ಸಿಪ್ಪೆಗೋಟು	10000-19599

ಆದಾಯ ತೆರಿಗೆ ಮಿತಿ ಯಥಾಸ್ಥಿತಿ

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ಮಂಡನೆಯಾದ ಕೇಂದ್ರದ ಮಧ್ಯಂತರ ಬಜೆಟ್‌ನಲ್ಲಿ ಆದಾಯ ತೆರಿಗೆ ಮಿತಿಯಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ.

ಹಳೆಯ ಮತ್ತು ಹೊಸ ತೆರಿಗೆ ಪದ್ಧತಿಯಡಿ ಯಾವುದೇ ಬದಲಾವಣೆ ಮಾಡಿಲ್ಲ. ನೇರ ಮತ್ತು ಪರೋಕ್ಷ ತೆರಿಗೆಯಡಿಯೂ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ.

'ಆಮದು ಸುಂಕ ಸೇರಿದಂತೆ ತೆರಿಗೆ ಮಿತಿಯಲ್ಲಿ ಬದಲಾವಣೆ ಮಾಡಿಲ್ಲ. ಆದರೆ, ನವೋದ್ಯಮಗಳಿಗೆ ಉತ್ತೇಜನ ನೀಡಲು ಒತ್ತು ನೀಡಲಾಗಿದೆ' ಎಂದು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ವಿವಾದಿತ ನೇರ ತೆರಿಗೆ ಬೇಡಿಕೆಗಳನ್ನು ಹಿಂಪಡೆಯಲಾಗಿದೆ. ಇದರಿಂದ 1 ಕೋಟಿ ತೆರಿಗೆದಾರರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

2009-10ನೇ ಸಾಲಿಗೆ ಪಾವತಿದಾರರ ವಿವಾದಗಳಿಗೆ ಸಂಬಂಧಿಸಿದಂತೆ ₹25 ಸಾವಿರಕ್ಕಿಂತ ಕಡಿಮೆ ಮೊತ್ತಕ್ಕೆ ನೀಡಲಾದ ಪರಿಹಾರವನ್ನು ರದ್ದು-ಪಡಿಸಲಾಗಿದೆ. 2010-11ರಿಂದ 2014-15ರ ವರೆಗೆ ₹10 ಸಾವಿರಗಿಂತ ಕಡಿಮೆ ಮೊತ್ತಕ್ಕೆ ನೀಡಲಾದ ಪರಿಹಾರವನ್ನೂ ರದ್ದುಪಡಿಸಲಾಗಿದೆ.

ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ಮಧ್ಯಂತರ ಬಜೆಟ್‌ನಲ್ಲಿ ಯಾವುದೇ ಹೊಸ ಯೋಜನೆಗಳು ಘೋಷಣೆಯಾಗದಿರುವುದು ಷೇರುಪೇಟೆ ಮೇಲೂ ಪರಿಣಾಮ ಬೀರಿತು.

ಆರಂಭಿಕ ವಹಿವಾಟಿನಲ್ಲಿ ಗಳಿಕೆ ಕಂಡಿದ್ದ ಸೂಚ್ಯಂಕಗಳು ವಹಿವಾಟಿನ ಅಂತ್ಯದಲ್ಲಿ ಇಳಿಕೆ ಕಂಡವು. ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) 106 ಅಂಶ ಇಳಿಕೆಯಾಗಿ 71,645ಕ್ಕೆ ಅಂತ್ಯಗೊಂಡಿತು. ಆರಂಭಿಕ ವಹಿವಾಟಿನಲ್ಲಿ 72,151ಕ್ಕೆ ಮುಟ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 30 ಅಂಶ ಇಳಿದು, 21,697ಕ್ಕೆ ವಹಿವಾಟು ಕೊನೆಗೊಂಡಿತು. ಆರಂಭಿಕ ವಹಿವಾಟಿನಲ್ಲಿ 21,832 ಕ್ಕೆ ಮುಟ್ಟಿತ್ತು.

ಮುಂಬೈ ಧಾರಣೆ

ಶೇಂಗಾ
01-2-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1515)
ಒಂದು ವಾರದ ಡೆಲಿವರಿ	1515 (1510)
ಸೋಯಾ ಕಚ್ಚಾ	838 (835)
ಪಾಮ್ ವಾರದ ಡೆಲಿವರಿ	843 (843)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹62,300 (62,500)
ಬೆಳ್ಳಿ ಕೆ.ಜಿ ₹70,800 (71,600)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಶೇಂಗಾ, ಸೋಯಾಬೀನ್, ಸೂರ್ಯಕಾಂತಿ ಉತ್ಪಾದನೆ ಹೆಚ್ಚಿಸಲು ಕ್ರಮ

ಖಾದ್ಯ ತೈಲ ಸ್ವಾವಲಂಬನೆ ಜಪ

ನವದೆಹಲಿ (ಪಿಟಿಐ): ಭಾರತವು ಖಾದ್ಯ ತೈಲ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಸರ್ಕಾರ ಕೈಗೊಳ್ಳಲಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಲೋಕಸಭೆಯಲ್ಲಿ ಗುರುವಾರ ಕೇಂದ್ರದ ಮಧ್ಯಂತರ ಬಜೆಟ್ ಮಂಡಿಸಿದ ಅವರು, 'ಸರ್ಕಾರವು ಉತ್ಪಾದನೆಗೆ ಪೂರಕವಾದ ಕಾರ್ಯತಂತ್ರ ರೂಪಿಸಲಿದೆ. ದೇಶೀಯ ಮಟ್ಟದಲ್ಲಿ ಎಣ್ಣೆಕಾಳು ಬೀಜಗಳ ಉತ್ಪಾದನೆಗೆ ಒತ್ತು ನೀಡಲಿದೆ' ಎಂದು ಘೋಷಿಸಿದರು.

ಕೊಯ್ಲೋತ್ತರ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಸರ್ಕಾರಿ-ಖಾಸಗಿ ಸಹಭಾಗಿತ್ವದಡಿ ಹೂಡಿಕೆಗೆ ಕ್ರಮವಹಿಸಲಿದೆ. ಆ ಮೂಲಕ ರೈತರ ಆದಾಯವನ್ನು ದ್ವಿಗುಣಗೊಳಿಸುವ ಗುರಿ

ಹೊಂದಲಾಗಿದೆ ಎಂದು ತಿಳಿಸಿದರು.

ಎಲ್ಲಾ ಕೃಷಿ ಹವಾಮಾನ ವಲಯಗಳಲ್ಲಿ ದ್ರವರೂಪದ ನ್ಯಾನೊ ಡಿಎಪಿ ರಸಗೊಬ್ಬರವನ್ನು ಪೂರೈಸಲು ನಿರ್ಧರಿಸಿದೆ ಎಂದರು.

2022ರಲ್ಲಿಯೇ ಎಣ್ಣೆಕಾಳುಗಳ ಉತ್ಪಾದನೆಯಲ್ಲಿ 'ಆತ್ಮನಿರ್ಭರ' ನೀತಿಯನ್ನು ಅಳವಡಿಸಿಕೊಳ್ಳಲಾಗಿದೆ. ಹಾಗಾಗಿ ದೇಶೀಯವಾಗಿ ಸಾಸಿವೆ, ಶೇಂಗಾ, ಎಳ್ಳು, ಸೋಯಾಬೀನ್ ಮತ್ತು ಸೂರ್ಯಕಾಂತಿ ಉತ್ಪಾದನೆ ಹೆಚ್ಚಿಸಲು ಒತ್ತು ನೀಡಲಾಗಿದೆ.

ಅತಿಹೆಚ್ಚಿನ ಇಳುವರಿ ತಳಿ, ಆಧುನಿಕ ತಂತ್ರಜ್ಞಾನ ಅಳವಡಿಕೆ, ಮಾರುಕಟ್ಟೆ ಸಂಪರ್ಕ, ಬೆಳೆಯ ಮೌಲ್ಯವರ್ಧನೆ, ಬೆಳೆ ವಿಮೆಯಂತಹ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದರು.

ಆಮದು ಎಷ್ಟು?: ದೇಶೀಯ ಬೇಡಿಕೆಗೆ ಅನುಗುಣವಾಗಿ ಭಾರತವು ವಿದೇಶಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಖಾದ್ಯ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. 2022–23ರ ಮಾರುಕಟ್ಟೆ ವರ್ಷದಲ್ಲಿ ₹1.28 ಲಕ್ಷ ಕೋಟಿ ಮೊತ್ತದ 165 ಲಕ್ಷ ಟನ್‌ನಷ್ಟು ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಂಡಿದೆ.

ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಉತ್ತೇಜನ

ಚಾರ್ಜಿಂಗ್ ಘಟಕಗಳ ಸ್ಥಾಪನೆ ಮತ್ತು ಉತ್ಪಾದನೆಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವ ಮೂಲಕ ದೇಶದಲ್ಲಿ ಎಲೆಕ್ಟ್ರಿಕ್ ವಾಹನಗಳ ವಲಯದ ಅಭಿವೃದ್ಧಿ ಮತ್ತು ಅವುಗಳ ಬಳಕೆಗೆ ಉತ್ತೇಜನ ನೀಡಲು ಸರ್ಕಾರ ಕ್ರಮಕೈಗೊಳ್ಳಲಿದೆ ಎಂದು ಸಚಿವೆ ನಿರ್ಮಲಾ ಹೇಳಿದರು.

ಸಾರ್ವಜನಿಕ ಸಾರಿಗೆ ಸೇವೆಯಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಬಳಕೆ ಹೆಚ್ಚು ಆದ್ಯತೆ ನೀಡಲಾಗುವುದು. ಪೆಟ್ರೋಲ್‌ನಲ್ಲಿ ಜೈವಿಕ ಇಂಧನ ಮಿಶ್ರಣ ಬಳಕೆಗೂ ಉತ್ತೇಜನ ನೀಡಲಾಗುವುದು. ಈ ಮೂಲಕ ಪರಿಸರ ಸ್ನೇಹಿ ಸಾರಿಗೆ ವ್ಯವಸ್ಥೆ ರೂಪಿಸಲು ಸರ್ಕಾರ ಬದ್ಧವಾಗಿದೆ ಎಂದರು.

ಮೂಲ ಸೌಕರ್ಯಕ್ಕೆ ಒತ್ತು: ಎಫ್‌ಕೆಸಿಸಿಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರದ ಮಧ್ಯಂತರ ಬಜೆಟ್, ದೇಶದಲ್ಲಿ ಉತ್ಪಾದನೆಯ ಮೂಲ ಸೌಕರ್ಯ ಹೆಚ್ಚಿಸಲು ನೆರವಾಗಲಿದ್ದು ಆಡಳಿತ, ಅಭಿವೃದ್ಧಿ ಹಾಗೂ ಕಾರ್ಯಕ್ಷಮತೆಯ ಮೇಲೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಿದೆ ಎಂದು ಎಫ್‌ಕೆಸಿಸಿಐ ಹೇಳಿದೆ.

2024–25ನೇ ಹಣಕಾಸು ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 6.5ರಿಂದ ಶೇ 5.8ಕ್ಕೆ ಇಳಿಸಲಾಗಿದೆ. ಇದರಿಂದ ಬಜೆಟ್ ಬೆಳವಣಿಗೆಯ ಮಾನದಂಡಗಳನ್ನು ಪೂರೈಸುವ ನಿರೀಕ್ಷೆಯಿದೆ ಎಂದು ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಹೇಳಿದ್ದಾರೆ.

ಮಹಿಳೆಯರು, ಯುವಕರು, ರೈತರು ಮತ್ತು ಬಡವರನ್ನು ಒಳಗೊಂಡ

ರಮೇಶ್ ಚಂದ್ರ ಲಹೋಟಿ

ನಾಲ್ಕು ವರ್ಗದ ಆದ್ಯತಾ ಕ್ಷೇತ್ರಗಳ ಮೇಲೆ ಆಯವ್ಯಯವನ್ನು ಕೇಂದ್ರೀಕರಿಸಲಾಗಿದೆ. ಇದು ಹಣಕಾಸು ಗಾತ್ರಕ್ಕಿಂತ ಗುಣಮಟ್ಟದ ಬೆಳವಣಿಗೆಯ ಗುರಿ ಹೊಂದಿದೆ ಎಂದು ಹೇಳಿದ್ದಾರೆ.

ಯಾವುದೇ ಹೆಚ್ಚುವರಿ ತೆರಿಗೆಗಳನ್ನು ವಿಧಿಸದಿರುವುದು ಸ್ವಾಗತಾರ್ಹ. ಸಂಪರ್ಕ, ಮೂಲ ಸೌಕರ್ಯ ಮತ್ತು ರೈಲ್ವೆ ಕಾರಿಡಾರ್‌ಗೆ ಆದ್ಯತೆ ಸಿಕ್ಕಿದೆ. ಯುರೋಪಿಗೆ ಉದ್ದೇಶಿತ ಮಧ್ಯಪ್ರಾಚ್ಯ ಕಾರಿಡಾರ್ ನಿರ್ಮಾಣವು ಉತ್ತಮ ಹೆಜ್ಜೆಯಾಗಿದೆ. ಇದು ದೇಶದ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದಿದ್ದಾರೆ.

ಆರ್ಥಿಕ ಪ್ರಗತಿಗೆ ಸಹಕಾರಿ: ಕಾಸಿಯಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಂತರ ಆಯವ್ಯಯದಲ್ಲಿ ಕೈಗಾರಿಕೋದ್ಯಮಿಗಳು, ತೆರಿಗೆ ಪಾವತಿದಾರರಿಗೆ ಹೊಸತೇನೂ ಇಲ್ಲ. ರೈಲ್ವೆ, ರೈಲ್ವೆ ಕಾರಿಡಾರ್, ಮೆಟ್ರೊ ರೈಲು ಮಾರ್ಗದ ಮೂಲ ಸೌಕರ್ಯ ಅಭಿವೃದ್ಧಿಗೆ ಅನುದಾನ ಮೀಸಲಿಡಲಾಗಿದೆ. ಇದು ದೇಶದ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಹೇಳಿದೆ.

ವಿತ್ತೀಯ ಕೊರತೆಯು ಇಳಿಕೆಯಾಗಲಿದೆ ಎಂಬ ನಿರೀಕ್ಷೆ ಹೊಂದಿರುವುದು ಸ್ವಾಗತಾರ್ಹ. ಇದು ಹಣದುಬ್ಬರವನ್ನು ನಿಯಂತ್ರಿಸುತ್ತದೆ ಎಂದು ಕಾಸಿಯಾ ಅಧ್ಯಕ್ಷ ಸಿ.ಎ. ಶಶಿಧರ ಶೆಟ್ಟಿ ಅಭಿಪ್ರಾಯಪಟ್ಟಿದ್ದಾರೆ.

ಹೂಡಿಕೆಯ ಅಗತ್ಯಗಳನ್ನು

ಸಿ.ಎ. ಶಶಿಧರ ಶೆಟ್ಟಿ

ಪೂರೈಸುವ ಮೂಲಕ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ತರಬೇತಿ ನೀಡುವುದನ್ನು ಹೊರತುಪಡಿಸಿದರೆ ಕೈಗಾರಿಕೆಗಳಿಗೆ ವಿಶೇಷ ಒತ್ತು ನೀಡಿಲ್ಲ ಎಂದು ಹೇಳಿದ್ದಾರೆ.

ಸಾರ್ವಜನಿಕ, ಖಾಸಗಿ ಹೂಡಿಕೆ ಮಾದರಿ ಮೂಲಕ ಅತಿಸಣ್ಣ ಆಹಾರ ಸಂಸ್ಕರಣಾ ಯೋಜನೆಗೆ ಒತ್ತು ನೀಡಲಾಗಿದೆ. ಇದರಿಂದ ದೇಶದ ಕೃಷಿಗೆ ಮಾತ್ರವಲ್ಲದೆ ಕೈಗಾರಿಕೆಗಳಿಗೂ ಉತ್ತೇಜನ ಸಿಗಲಿದೆ ಎಂದು ಶಶಿಧರ ಶೆಟ್ಟಿ ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಬೆಂಗಳೂರಿನಲ್ಲಿ SLVಹೋಂ ನರ್ಸಿಂಗ್ ನಲ್ಲಿ ಕೆಲಸ ಮಾಡಲು ಹುಡುಗಿಯರು, ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು (18 ರಿಂದ 45) ಊಟ ವಸತಿಯೊಂದಿಗೆ ಟ್ರೇನಿಂಗ ಕೊಟ್ಟು ಸಂಬಳ 12,000/ ರಿಂದ 20,000/ ವರೆಗೆ ಕೊಡಲಾಗುವುದು. ಆಸಕ್ತಿ ಉಳ್ಳವರು ಕರೆಮಾಡಿ. 7019869181, 9071106371

✓ ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430366, 9663563555

ಕೃಷಿ ಕೆಲಸ ಮಾಡಲು ಕಾರ್ಮಿಕರು ಬೇಕಾಗಿದ್ದಾರೆ. ಸ್ಥಳ: ಮುಳಬಾಗಲು, ವಸತಿ ಸೌಕರ್ಯ ನೀಡಲಾಗುವುದು. ದಂಪತಿಗಳಿಗೆ ಅವಕಾಶ, 14ಸಾವಿರ . 9916011953.

Multiple Vacancy

REQUIRED, EXPERIENCED Telecaller & LoanRecovery Supervisor For BankLoan collection. Salary 30,000+ Incentive Contact: 9620206756

Part-Time Jobs

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Situation Required

ಕನ್ನಡ ಟೆಲಿಕಾಲರ್ ಗಳು ಬೇಕಾಗಿದ್ದಾರೆ. (ಹೊಸಬರು/ ಅನುಭವಿಗಳು) ಸ್ಥಳ : ಮೈಸೂರು, ಬಿಜಾಪುರ, ಬೆಂಗಳೂರು, ಬಾಗಲಕೋಟೆ ಮತ್ತು ಗದಗ ವೇತನ (ಮಾಸಿಕ ರೂ. 15000/-), ಕೆಲಸದ ಸಮಯ: ಮಧ್ಯಾಹ್ನ 2:00 ರಿಂದ ರಾತ್ರಿ 8:30ರ ವರೆಗೆ, ಆಸಕ್ತರು 7669250202ಗೆ ಮಿಸ್ಡ್ ಕಾಲ್ ನೀಡಿರಿ

Wanted

ಜೋಳದ ರೊಟ್ಟಿ ಕಾರ್ಖಾನೆಯಲ್ಲಿ ರೊಟ್ಟಿ ಮಾಡಲು ಕೆಲಸಕ್ಕೆ ಬೇಕಾಗಿದ್ದಾರೆ. ಮಲ್ಲೇಶ್ವರಂ ಬೆಂಗಳೂರು ಮೊ. ಸಂ. 9019626612

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಯಿದೆ. 13,000- 17,000. 8951315839, 9141634619

ಪ್ರವಾಸ

Travel

ಸುಸಜ್ಜಿತ ವ್ಯವಸ್ಥೆಗಳೊಂದಿಗೆ 24.02.2024 24.03.2024 12.04.2024 ರಿಂದ 8/12 ದಿನಗಳ ಕಾಶಿ,ಗಯಾ,ಅಯೋಧ್ಯಾ. 20.02.2024 ರಿಂದ 11 ದಿನಗಳ ಗುಜರಾತ್ ಉಜ್ಜಯಿನಿ ಮಹಾಕಾಳೇಶ್ವರ. 11.03.2024 12.04.2024 ರಿಂದ 11 ದಿನಗಳ ಅಯೋಧ್ಯಾ,ಮುಕ್ತಿನಾಥ ನೇಪಾಳ,ಕಾಶಿ. 20.03.2024 12.04.2024 ರಿಂದ 12 ದಿನಗಳ ವೈಷ್ಣೋದೇವಿ ಕಾಶ್ಮೀರ್ ಟುಲಿಪ್ ಗಾರ್ಡನ್. 17.05.2024 26.05.2024 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆಗಳು. 27.02.2024 11.03.2024 ರಿಂದ 5 ದಿನಗಳ ದುಬೈ,ಅಬುದಾಬಿ ಶಾರ್ಜಾ. 24.03.2024 25.04.2024 ರಿಂದ 7/11 ದಿನಗಳ ಸಿಂಗಾಪುರ,ಮಲೇಶಿಯಾ ಥೈಲ್ಯಾಂಡ್. 12.04.2024 25.04.2024 14.05.2024 ರಿಂದ 13/16 ದಿನಗಳ ಯುಕೆ,ಯುರೋಪ್ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

22.02.2024 15.03.2024 ಅಯೋಧ್ಯಾ,ಕಾಶಿ,ಬುದ್ಧಗಯಾ ಬೈದ್ಯನಾಥ್.04.03.2024 ಸೋಮನಾಥ್,ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ ಮಹಾಕಾಳೇಶ್ವರ. 02.03.2024 17.03.2024 ಮಹಾಶಿವರಾತ್ರಿ ನೇಪಾಳ,ಮುಕ್ತಿನಾಥ ಪೋಕ್ರ,ಲುಂಬಿನಿ. 11.05.2024 23.05.2024 ಚಾರ್‌ಧಾಮ್ ಪ್ರವಾಸ ಮಧ್ಯ/ದಕ್ಷಿಣಆಂಧ್ರ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವಲ್‌ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 7204173686 9686708171

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Koppal

ಕೊಪ್ಪಳ ಜಿಲ್ಲೆ ಕುಷ್ಟಗಿ.ತಾಲ್ಲೂಕು, ಹನುಮಸಾಗರ ಪಟ್ಟಣದಲ್ಲಿ, ರಾಜ್ಯ_ಹೆದ್ದಾರಿ`59 ಕುಷ್ಟಗಿ_ಮುಖ್ಯರಸ್ತೆಗೆ ಹೊಂದಿಕೊಂಡಿರುವ 6_ಸೈಟ್`ಗಳು ಮಾರಾಟಕ್ಕಿವೆ. (ಒಟ್ಟು,8400 ಚದುರ.ಅಡಿ) ಮಾಹಿತಿಗಾಗಿ`ಸಂಪರ್ಕಿಸಿ: 9901594833, 8431173450.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD Classifieds More value, more impact
ಪ್ರಜಾವಾಣಿ
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

ಅಭಿವೃದ್ಧಿಗೆ ವೇಗ ನೀಡಲು ಕಸರತ್ತು

● ಕಾವ್ಯ ಡಿ.

ಕಾವ್ಯ ಡಿ.

ಬೆಂಗಳೂರು: ಲೋಕಸಭಾ ಚುನಾವಣೆ ವರ್ಷವಾದರೂ ಉಚಿತ ಗ್ಯಾರಂಟಿಗಳ ಗೋಜಿಗೆ ಹೋಗದೆ ವಾಸ್ತವಾಂಶದ ಆಧಾರದ ಮೇಲೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಧ್ಯಂತರ ಬಜೆಟ್ ಮಂಡಿಸಿದ್ದಾರೆ.

ಬಜೆಟ್‌ನಲ್ಲಿ ಮತದಾರರ ಓಲೈಕೆಯ ಪ್ರಯತ್ನ ಇಲ್ಲ. ಉಚಿತ, ಖಚಿತ, ಜನಪ್ರಿಯ ಎಂಬ ಪದಗಳು ದೂರ ಉಳಿದಿವೆ. ಒಟ್ಟಾರೆಯಾಗಿ ವಿತ್ತೀಯ ಕೊರತೆ ನಡುವೆ ಅಭಿವೃದ್ಧಿಯ ವೇಗ ಹೆಚ್ಚಿಸಲು ಹಣಕಾಸು ಸಚಿವರು ಇನ್ನಿಲ್ಲದ ಕಸರತ್ತು ನಡೆಸಿದ್ದಾರೆ.

ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ ಕಾಯ್ದೆ ಪ್ರಕಾರ ವಿತ್ತೀಯ ಕೊರತೆಯು ಶೇ 3ಕ್ಕಿಂತ ಹೆಚ್ಚಿಗೆ ಇರಬಾರದು. ಆದರೆ, ಸರ್ಕಾರದ ಆದಾಯ ಮತ್ತು ವೆಚ್ಚಗಳ ನಡುವಿನ ವಿತ್ತೀಯ ಕೊರತೆಯು 2023-24ನೇ ಸಾಲಿನಲ್ಲಿ ಜಿಡಿಪಿಯ ಶೇ 5.8 ರಷ್ಟಿದೆ. 2024-25ನೇ ಸಾಲಿನಲ್ಲಿ ವಿತ್ತೀಯ ಕೊರತೆಯು ಶೇ 5.1ರಷ್ಟು ಇರಲಿದ್ದು, 2025-26ನೇ ಸಾಲಿನ ವೇಳೆಗೆ ಆದಾಯ ಮತ್ತು ವೆಚ್ಚದ ನಡುವಿನ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 4.5ಕ್ಕೆ ತಗ್ಗಿಸಬೇಕು ಎನ್ನುವುದು ಸರ್ಕಾರದ ಗುರಿಯಾಗಿದೆ.

ಸರ್ಕಾರ ಇದನ್ನು ಹೇಗೆ ನಿಭಾಯಿಸುತ್ತದೆ ಎನ್ನುವುದನ್ನು ಕಾದುನೋಡಬೇಕಾಗಿದೆ. ಆದರೆ, ಜಗತ್ತಿನ ಪ್ರಮುಖ ದೇಶಗಳು ಶೇ 2ರಷ್ಟು ಜಿಡಿಪಿ ಬೆಳವಣಿಗೆ ಸಾಧಿಸಲು ಹರಸಾಹಸ ಪಡುತ್ತಿರುವಾಗ ಭಾರತದ ಜಿಡಿಪಿ ಶೇ 7ರಷ್ಟು ಗಡಿಯಲ್ಲಿರುವುದು ಆಶಾದಾಯಕವಾಗಿದೆ.

ತೆರಿಗೆದಾರರಿಗೆ ನಿರಾಸೆ: ಆದಾಯ ತೆರಿಗೆ ಇಳಿಕೆಯ ನಿರೀಕ್ಷೆಯಲ್ಲಿ ಇದ್ದವರಿಗೆ ಬಜೆಟ್ ನಿರಾಸೆಮೂಡಿಸಿದೆ.

ಹಣದುಬ್ಬರ ಏರಿಕೆಯಾಗಿರುವಾಗ ತೆರಿಗೆ ಸ್ಲ್ಯಾಬ್‌ಗಳಲ್ಲಿ ಬದಲಾವಣೆ ತರದಿದ್ದರೆ ಹೇಗೆ ಎಂಬ ಬೇಸರ ತೆರಿಗೆದಾರರಲ್ಲಿ ಮನೆ ಮಾಡಿದೆ. ಇನ್ನು ಪರೋಕ್ಷ ತೆರಿಗೆಗಳಲ್ಲೂ ಬದಲಾವಣೆ ಆಗಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ, ಮತ್ತೆ ಅಧಿಕಾರಕ್ಕೆ ಬರುತ್ತೇವೆ ಎನ್ನುವ ವಿಶ್ವಾಸದಲ್ಲಿರುವ ಬಿಜೆಪಿ ಜನಪ್ರಿಯ ಗ್ಯಾರಂಟಿಗಳ ಮೊರೆ ಹೋಗಿಲ್ಲ. ಆರ್ಥಿಕ ಶಿಸ್ತಿನ ತಳಹದಿಯ ಮೇಲೆ ಬಜೆಟ್ ಮಂಡಿಸಲಾಗಿದೆ. ದೇಶದ ಅರ್ಥ ವ್ಯವಸ್ಥೆಯ ದೃಷ್ಟಿಕೋನದಲ್ಲಿ ಇದೊಂದು ಉತ್ತಮ ನಡೆ.

(ಲೇಖಕಿ– ಚಾರ್ಟರ್ಡ್ ಅಕೌಂಟೆಂಟ್)

ಉದ್ಯಮ ಪೂರಕ; ಸಂಶೋಧನೆಗೆ ಒತ್ತು

● ಮದನ್ ಪದಕಿ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಗುರುವಾರ ಮಂಡಿಸಿದ 2024–25ನೇ ಸಾಲಿನ ಮಧ್ಯಂತರ ಬಜೆಟ್ ಇನ್ನಷ್ಟು ಹೊಸ ತಂತ್ರಜ್ಞಾನಗಳ ಆವಿಷ್ಕಾರಕ್ಕೆ, ನಿರಂತರ ಸಂಶೋಧನೆಗಳಿಗೆ ನಾಂದಿ ಹಾಡಲಿದೆ.

ಭಾರತದ ಬ್ಯಾಂಕಿಂಗ್ ವ್ಯವಸ್ಥೆ ಹಾಗೂ ಹಣಕಾಸು ನೆರವಿನ ವ್ಯವಸ್ಥೆಗಳು ಉತ್ಪಾದನೆ, ಸಿದ್ಧ ವಸ್ತುಗಳು, ಇತರೆ ಸ್ವತ್ತುಗಳ ಮಾರುಕಟ್ಟೆ ಮೌಲ್ಯದ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿವೆ. ಒಂದು ಕಂಪನಿ, ಉದ್ಯಮ ಆರಂಭಿಸುವಾಗ ಅದು ಭವಿಷ್ಯದಲ್ಲಿ ಯಶಸ್ವಿಯಾಗಲಿದೆಯೇ?, ಲಾಭ ತಂದುಕೊಡಲಿದೆಯೇ? ಹೊಸ ಉದ್ಯಮಗಳು ಆರಂಭಿಕ ಸಮಸ್ಯೆಗಳಿಂದ ಮುಕ್ತವಾಗಿವೆಯೇ

ಎನ್ನುವುದರ ಆಧಾರದ ಮೇಲೆ ನೀಡುವ ಸಾಲದ ಮೊತ್ತವನ್ನು ನಿಗದಿ ಮಾಡಲಾಗುತ್ತದೆ.

ವಿಶ್ವದಲ್ಲಿ ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿದ್ದರೂ, ತಂತ್ರಜ್ಞಾನ ಆಧಾರಿತ ಉದಯೋನ್ಮುಖ ಉದ್ಯಮಗಳಿಗೆ ನಿರೀಕ್ಷಿತ ಹಣಕಾಸಿನ ನೆರವು ಯಾವುದೇ ಮೂಲದಿಂದ ದೊರೆಯುತ್ತಿಲ್ಲ ಎನ್ನುವುದು ಕಟು ವಾಸ್ತವ. ಕೃತಕ ಬುದ್ಧಿಮತ್ತೆ, ಡ್ರೋನ್‌ಗಳ ಅಭಿವೃದ್ಧಿ, ಆಧುನಿಕ ವೈದ್ಯಕೀಯ, ರೋಬಾಟಿಕ್‌ನಂತಹ ತಂತ್ರಜ್ಞಾನ ಆಧಾರಿತ ಉದ್ಯಮದಲ್ಲಿ ಯುವ ಜನರು ಯಶಸ್ಸು ಕಾಣಬೇಕಾದರೆ, ತಮ್ಮದೇ ಕಂಪನಿ ಆರಂಭಕ್ಕೆ ಮೊದಲು ಬಹಳ ಸಂಶೋಧನೆಗಳನ್ನು ಕೈಗೊಳ್ಳಬೇಕಾಗುತ್ತದೆ. ಇದಕ್ಕೆ ಅಪಾರ

ಮದನ್ ಪದಕಿ

ಸಮಯ ಹಾಗೂ ಹಣದ ಅವಶ್ಯ ಇರುತ್ತದೆ. ದೇಶದ ಯಾವ ಬ್ಯಾಂಕ್ ಅಥವಾ ಹಣಕಾಸಿನ ಸಂಸ್ಥೆಯೂ ಸಂಶೋಧನಾ ಕಾರ್ಯಕ್ಕೆ ನೆರವು ನೀಡುವುದೇ ಇಲ್ಲ.

ಇಂತಹ ಸೂಕ್ಷ್ಮಗಳನ್ನೂ ಗಮನದಲ್ಲಿಟ್ಟುಕೊಂಡು ಉದ್ಯಮ ಸ್ಥಾಪಿಸುವ ಯುವ ಜನರಿಗೆ ಕೇಂದ್ರ ಬಜೆಟ್‌ನಲ್ಲಿ ₹1 ಲಕ್ಷ ಕೋಟಿ ಮೀಸಲಿಡುವ ನಿರ್ಧಾರ ಪ್ರಕಟಿಸಲಾಗಿದೆ. 50 ವರ್ಷಗಳವರೆಗೆ ಬಡ್ಡಿ ರಹಿತ ಸಾಲಸೌಲಭ್ಯ ಕಲ್ಪಿಸುವ ನಿರ್ಧಾರ ಭವಿಷ್ಯದ ತಂತ್ರಜ್ಞಾನ ಭಾರತ ನಿರ್ಮಾಣಕ್ಕೆ ನಾಂದಿಹಾಡಲಿದೆ.

ಆತ್ಮನಿರ್ಭರ್ ಭಾರತಕ್ಕೆ ಪೂರಕವಾಗಿ ಹೊಸ ಯೋಜನೆಯೊಂದನ್ನು ಜಾರಿಗೆ ತರುವ ಆಶಯವನ್ನೂ ಬಜೆಟ್ ಒಳಗೊಂಡಿದೆ. ರಕ್ಷಣಾ ವಲಯ ಬಲಪಡಿಸಲು, ಸೈಬರ್ ಸೆಕ್ಯೂರಿಟಿಗೆ ಒತ್ತು ನೀಡಲು ಇಂತಹ ಪ್ರೋತ್ಸಾಹಗಳು ಪ್ರೇರಕವಾಗಿವೆ.

ದೇಶದ ಸ್ಥಳೀಯ ಪ್ರವಾಸೋದ್ಯಮ ಬಲಪಡಿಸುವ ಆಲೋಚನೆಯೂ ಅತ್ಯಂತ ಮಹತ್ವದ ವಿಚಾರ. ಕರ್ನಾಟಕ ದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯು ಪ್ರೇಕ್ಷಣೀಯ ಸ್ಥಳಗಳ ಅಭಿವೃದ್ಧಿಯ ಜತೆಗೆ ಸ್ಥಳೀಯ ಆರ್ಥಿಕ ಚಟುವಟಿಕೆ ಗಳಿಗೂ ಉತ್ತೇಜನ ನೀಡಲಿದೆ. ಹೋಟೆಲ್‌ಗಳು, ರೆಸಾರ್ಟ್, ಸಾರಿಗೆ ಅಂಗಡಿ–ಮುಂಗಟ್ಟುಗಳ ಬೆಳವಣಿಗೆ ಜತೆಗೆ ಸ್ಥಳೀಯರಿಗೆ ಸಾಕಷ್ಟು ಉದ್ಯೋಗಾ ವಕಾಶಗಳು ದೊರೆಯಲಿವೆ. ಕರ್ನಾಟಕ ಈಚೆಗೆ ಘೋಷಿಸಿದ 'ನಮ್ಮ ಸ್ಮಾರಕ' ಯೋಜನೆಯಲ್ಲೇ 25 ಸಾವಿರ ಸ್ಮಾರಕ ಗಳನ್ನು ಗುರುತಿಸಲಾಗಿದೆ. ಇಂತಹ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಬಜೆಟ್ ನೆರವಾಗಲಿದೆ.

ಮಾಲಿನ್ಯರಹಿತ ಸುಂದರ ಪರಿಸರದ ಪರಿಕಲ್ಪನೆಯಲ್ಲಿ ಬ್ಯಾಟರಿ ಚಾಲಿತ ಎಲೆಕ್ಟ್ರಿಕಲ್ ವಾಹನಗಳ ಪಾತ್ರ ಮಹತ್ವದ್ದಾಗಿದೆ. ಕೇಂದ್ರ ಬಜೆಟ್‌ನಲ್ಲಿ ಇವಿ ವಾಹನಗಳಿಗೆ ಸಾಕಷ್ಟು ಅನುಕೂಲಕರ ಅಂಶಗಳನ್ನು ಪ್ರಕಟಿಸಲಾಗಿದೆ. ಇದು ಬರಿ ವಾಹನಗಳನ್ನು ಖರೀದಿಸುವವರಿಗೆ ಅಷ್ಟೇ ಅಲ್ಲ, ಬ್ಯಾಟರಿ ಉತ್ಪಾದನೆ, ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆ, ನಿರ್ವಹಣೆ, ಉದ್ಯೋಗ ಸೇರಿದಂತೆ ಹಲವು ಆಯಾಮಗಳಲ್ಲಿ ಸ್ಥಳೀಯ ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತದೆ.

ಒಂದು ಕೋಟಿ ಮನೆಗಳ ಮೇಲೆ ಸೋಲಾರ್ ವಿದ್ಯುತ್ ಘಟಕ ಅಳವಡಿಸುವ ಯೋಜನೆ ಉತ್ಪಾದನೆ, ಉದ್ಯೋಗಕ್ಕೆ ದಾರಿ ಮಾಡಿಕೊಡುವು ದಲ್ಲದೇ ಸಾಂಪ್ರದಾಯಿಕ ವಿದ್ಯುತ್ ಬಳಕೆಯ ಮೇಲಿನ ಅವಲಂಬನೆ ಕಡಿಮೆ ಮಾಡಿ, ಗ್ರಾಮೀಣರು ವಿದ್ಯುತ್ ಸ್ವಾವಲಂಬನೆ ಪಡೆಯಲು ಕಾರಣವಾಗಲಿದೆ. ಮಹಿಳಾ ಸ್ವಸಹಾಯ ಗುಂಪುಗಳ ಬಲವರ್ಧನೆಗೂ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ. ಮುದ್ರಾ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಅನುಕೂಲಕರ ಸೂತ್ರಗಳನ್ನು ಪರಿಚಯಿ ಸಲಾಗಿದೆ. ಕೃಷಿ ಉಪಕಸುಬು ಹೈನುಗಾರಿಕೆಯನ್ನು ಬಲಪಡಿಸಲು, ಹಾಲು, ಮೊಸರು ತುಪ್ಪ ಹಾಗೂ ಹಾಲಿನ ಬಳಕೆಯ ಇತರೆ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸಲು ಹಲವು ಪ್ರೋತ್ಸಾಹದಾಯಕ ಅಂಶಗಳನ್ನು ಘೋಷಿಸಲಾಗಿದೆ.

(ಲೇಖಕ– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಒನ್ ಬ್ರಿಡ್ಜ್ ಮತ್ತು ಅಧ್ಯಕ್ಷ ಟೈ ಬೆಂಗಳೂರು)

ಫಾಸ್ಟ್ಯಾಗ್: ಕೆವೈಸಿ ಪೂರ್ಣಕ್ಕೆ ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): ಬ್ಯಾಂಕ್ ಖಾತೆಯಲ್ಲಿ ಹಣ ಹೊಂದಿದ್ದರೂ ಕೆವೈಸಿ ಪೂರ್ಣಗೊಳಿಸದ ಫಾಸ್ಟ್ಯಾಗ್‌ಗಳನ್ನು ನಿಷ್ಕ್ರಿಯಗೊಳಿಸಲು ನೀಡಿದ್ದ ಗಡುವನ್ನು ಫೆಬ್ರುವರಿ 29ರ ವರೆಗೆ ವಿಸ್ತರಿಸಲಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ತಿಳಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ ಆದೇಶ ಉಲ್ಲಂಘಿಸಿ ನಿರ್ದಿಷ್ಟ ವಾಹನಕ್ಕೆ ಬಹು ಫಾಸ್ಟ್ಯಾಗ್‌ಗಳನ್ನು ಬಳಕೆ ಮಾಡಲಾಗುತ್ತಿತ್ತು. ಅಲ್ಲದೇ, ಕೆವೈಸಿ ಇಲ್ಲದೆಯೇ ಫಾಸ್ಟ್ಯಾಗ್‌ಗಳನ್ನು ನೀಡಲಾಗುತ್ತಿತ್ತು. ಇದಕ್ಕೆ ಕಡಿವಾಣ ಹಾಕಲು ಪ್ರಾಧಿಕಾರವು ಈ ಕ್ರಮಕೈಗೊಂಡಿದೆ.

ದೇಶದಲ್ಲಿ ಕೆವೈಸಿ ಪೂರ್ಣಗೊಳಿಸದ 1.27 ಕೋಟಿ ಫಾಸ್ಟ್ಯಾಗ್‌ಗಳಿವೆ. ಜನವರಿ 31ರವರೆಗೆ ನೀಡಿದ್ದ ಗಡುವಿನೊಳಗೆ ಕೇವಲ 7 ಲಕ್ಷ ಕೆವೈಸಿಗಳಷ್ಟೇ ಪೂರ್ಣಗೊಂಡಿವೆ. ಹಾಗಾಗಿ, ಅವಧಿ ವಿಸ್ತರಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ದ್ವಿದಳ ಧಾನ್ಯ ಮಂಡಳಿ–ಅಂಚೆ ಇಲಾಖೆ ಒಪ್ಪಂದ

ಮನೆ ಬಾಗಿಲಿಗೆ 'ಭೀಮಾ' ಬೇಳೆ

● ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯು ಭೌಗೋಳಿಕ ಸೂಚಕ (ಜಿಐ ಟ್ಯಾಗ್) ಮಾನ್ಯತೆಯ 'ಭೀಮಾ ಪಲ್ಸಸ್' ಬ್ರ್ಯಾಂಡ್‌ನ 'ಪ್ರೀಮಿಯಂ' ಹಾಗೂ 'ಸ್ಪೆಷಲ್' ತೊಗರಿ ಬೇಳೆ ಪ್ಯಾಕೆಟ್‌ಗಳನ್ನು ಆನ್‌ಲೈನ್ ಮೂಲಕ ಮಾರಾಟ ಆರಂಭಿಸಿದೆ.

ಗ್ರಾಹಕರ ಮನೆಗಳಿಗೆ ತ್ವರಿತವಾಗಿ ತಲುಪಿಸಲು ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಮತ್ತು ಕರ್ನಾಟಕ ಅಂಚೆ ವೃತ್ತದ ನಡುವೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಬೆಂಗಳೂರಿನಲ್ಲಿ ಈಚೆಗೆ ಉಭಯ ಪಾಲುದಾರರು ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಕಲಬುರಗಿಯ ಗುಣಮಟ್ಟದ ತೊಗರಿ ಬೇಳೆಯ ರುಚಿ ಸವಿಯಲು ಬಯಸುವವರು ದೇಶದ ಯಾವುದೇ ಭಾಗದಿಂದ ಖರೀದಿಸಿದರೂ ಅದನ್ನು ಅವರ ಮನೆ ಬಾಗಿಲಿಗೆ ಅಂಚೆ ಇಲಾಖೆ ತಲುಪಿಸಲಿದೆ.

ತಲಾ ಒಂದು ಕೆ.ಜಿ.ಯ 'ಪ್ರೀಮಿಯಂ' ಹಾಗೂ 'ಸ್ಪೆಷಲ್' ತೊಗರಿ ಬೇಳೆ ಕೆಲವು ತಿಂಗಳಿಂದ ಇ-ಕಾಮರ್ಸ್‌ಗಳಲ್ಲಿ ಲಭ್ಯವಿದ್ದು, ಗ್ರಾಹಕರ ಮೆಚ್ಚುಗೆ ಗಳಿಸುತ್ತಿದೆ.

ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯು ಪ್ರಸ್ತುತ ತನ್ನ ವೆಬ್‌ಸೈಟ್ bhimapulses.comನಲ್ಲಿ 'ಕ್ಯಾಶ್ ಆನ್ ಡೆಲಿವರಿ' ಮೂಲಕ ಮಾರಾಟ ಮಾಡುತ್ತಿದೆ. ಇದನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಲು ಅಂಚೆ ಇಲಾಖೆಯ ಜತೆಗೆ ಒಪ್ಪಂದ ಮಾಡಿಕೊಂಡಿದ್ದು, ಕ್ಯಾಶ್ ಆನ್ ಡೆಲಿವರಿ ಜತೆಗೆ ಆನ್‌ಲೈನ್ ಪಾವತಿ ಆಯ್ಕೆಯನ್ನು ಗ್ರಾಹಕರಿಗೆ ಒದಗಿಸಲಿದೆ.

'ಭೀಮಾ ಪಲ್ಸಸ್ ತೊಗರಿ ಬೇಳೆಗೆ ಅಮೆಜಾನ್, ಫ್ಲಿಪ್‌ಕಾರ್ಟ್, ರಿಲಯನ್ಸ್‌ಗಳಿಂದ ಸಾಕಷ್ಟು ಬೇಡಿಕೆ ಬರುತ್ತಿದೆ. ಬೆಂಗಳೂರಿನ ಹಲವು ರಿಲಯನ್ಸ್ ಸ್ಟೋರ್‌ಗಳಲ್ಲಿ ಭೀಮಾ ಪಲ್ಸಸ್ ಬೇಳೆ ಮಾರಾಟ

ಭೀಮಾ ಪಲ್ಸಸ್ ಸ್ಪೆಷಲ್ ತೊಗರಿ ಬೇಳೆ

ಆಗುತ್ತಿದೆ. ಎರಡು ತಿಂಗಳ ಅವಧಿಯಲ್ಲಿ ಸುಮಾರು 7 ಟನ್ ಬೇಳೆ ಮಾರಾಟ ಆಗಿದೆ' ಎಂದು ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಆಂಥೋನಿ ಮಾರಿಯಾ ಇಮ್ಯಾನುಯೆಲ್ 'ಪ್ರಜಾವಾಣಿ'ಗೆ ತಿಳಿಸಿದರು.

'ದೇಶದ ಬೇರೆಯ ಭಾಗದ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸಲು ಅಂಚೆ ಇಲಾಖೆಯ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಗ್ರಾಹಕರು ತಮ್ಮ ವಿಳಾಸ ನಮೂದಿಸಿ ಖರೀದಿಸಿದರೆ ಅಂಚೆ ಇಲಾಖೆಯು ತೂಕ, ಕಿ.ಮೀ. ಅನ್ವಯ ಡೆಲಿವರಿ ಶುಲ್ಕ ವಿಧಿಸುತ್ತದೆ. ಅದನ್ನು ಗ್ರಾಹಕರೇ ಪಾವತಿಸಬೇಕಾಗುತ್ತದೆ' ಎಂದರು.

'ಪ್ರಸ್ತುತ, ಮಂಡಳಿಯು ಬೇಳೆ ಸಂಸ್ಕರಣಾ ಘಟಕದಿಂದ ಭೀಮಾ ಪಲ್ಸಸ್ ತೊಗರಿ ಬೇಳೆಯ ಪ್ಯಾಕಿಂಗ್ ಮಾಡುತ್ತಿಲ್ಲ. ಜಿಐ ನೋಂದಾಯಿತ ರೈತರಿಂದ ತೊಗರಿ ಖರೀದಿಸಿ, ಅದನ್ನು ನಾಲ್ಕು ಖಾಸಗಿ ದಾಲ್ ಮಿಲ್‌ಗಳಲ್ಲಿ ಸಂಸ್ಕರಣೆ ಮಾಡಲಾಗುತ್ತಿದೆ. ಈ ಮಿಲ್‌ಗಳು ಸಹ ಜಿಐ ನೋಂದಣಿಯಾಗಿವೆ. ಕಲಬುರಗಿ ನಗರದ ಮೂರು ಹಾಗೂ ಶಹಾಬಾದ್‌ನ ಒಂದು ಖಾಸಗಿ ದಾಲ್ ಮಿಲ್ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

ಒಂದು ಕೆ.ಜಿ. ಬೇಳೆ 'ಪ್ರೀಮಿಯಂ'ಗೆ ₹210 ಹಾಗೂ 'ಸ್ಪೆಷಲ್'ಗೆ ₹185 ದರ ನಿಗದಿಪಡಿಸಲಾಗಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನ • 10 ದಿನಗಳ ಕಸ್ಟಡಿ ಕೋರಿದ್ದ ಇ.ಡಿ

ಸೊರೇನ್‌ಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ/ಪಿಟಿಐ

ರಾಂಚಿ/ನವದೆಹಲಿ: ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿರುವ ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹಾಗೂ ಜೆಎಂಎಂ ಕಾರ್ಯಕಾರಿ ಅಧ್ಯಕ್ಷ ಹೇಮಂತ್ ಸೊರೇನ್ ಅವರನ್ನು ಇಲ್ಲಿನ ವಿಶೇಷ ಪಿಎಂಎಲ್‌ಎ ನ್ಯಾಯಾಲಯವು ಒಂದು ದಿನದ ಮಟ್ಟಿಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಿದೆ.

'ಸೊರೇನ್ ಅವರನ್ನು 10 ದಿನಗಳ ಕಸ್ಟಡಿಗೆ ನೀಡುವಂತೆ ಇ.ಡಿ ಕೋರಿತ್ತು. ಸೊರೇನ್ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ರಾಜೀವ್ ರಂಜನ್, ನ್ಯಾಯಾಲಯ ತನ್ನ ಆದೇಶವನ್ನು ಶುಕ್ರವಾರಕ್ಕೆ ಕಾಯ್ದಿರಿಸಿದ್ದು, ಆದೇಶ ಬರುವವರೆಗೆ ಜೆಎಂಎಂ ನಾಯಕನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ' ಎಂದು ವಕೀಲರು ಗುರುವಾರ ತಿಳಿಸಿದ್ದಾರೆ.

'ಬಂಧನ ಆದೇಶ ಸ್ವೀಕರಿಸಲು ನಿರಾಕರಿಸಿದ್ದ ಹೇಮಂತ್': 'ಜೆಎಂಎಂ ನಾಯಕ ಹೇಮಂತ್ ಸೊರೇನ್ ಅವರನ್ನು ಬಂಧಿಸಿರುವ ಬಗ್ಗೆ ಬುಧವಾರ ಸಂಜೆ 5 ಗಂಟೆಗೆ ಮಾಹಿತಿ ನೀಡಲಾಗಿತ್ತಾದರೂ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಲು ಬಯಸಿ ಬಂಧನದ ಆದೇಶ ಸ್ವೀಕರಿಸಲಿಲ್ಲ' ಎಂದು ಜಾರಿ ನಿರ್ದೇಶನಾಲಯ ಗುರುವಾರ ಹೇಳಿದೆ.

'ಅವರ ಬಂಧನದ ಬಗ್ಗೆ ಸಂಜೆ 5 ಗಂಟೆಗೆ ಅವರಿಗೆ (ಸೊರೇನ್) ಮಾಹಿತಿ ನೀಡಲಾಯಿತು. ತನ್ನ ಬಂಧನದ ಬಗ್ಗೆ ಪತ್ನಿ ಕಲ್ಪನಾ ಸೊರೇನ್ ಅವರಿಗೆ ತಿಳಿಸಲು ಅವಕಾಶ ನೀಡಲಾಯಿತು. ಆದರೆ, ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮೊದಲು ಆದೇಶ ಸ್ವೀಕರಿಸಲು ಹಿಂದೇಟು ಹಾಕಿದರು' ಎಂದು ಕೇಂದ್ರ ತನಿಖಾ ಸಂಸ್ಥೆಯು ಹೇಮಂತ್ ಅವರನ್ನು ಪಿಎಂಎಲ್‌ಎ ನ್ಯಾಯಾಲಯದಿಂದ ಕಸ್ಟಡಿಗೆ ಕೋರುವಾಗ ಹೇಳಿತು.

'ರಾಂಚಿಯಲ್ಲಿ ಒಟ್ಟು 8.5 ಎಕರೆ ವಿಸ್ತೀರ್ಣದ ಒಂದು ಡಜನ್ ಜಮೀನುಗಳನ್ನು ಜೆಎಂಎಂ ನಾಯಕ ಅಕ್ರಮವಾಗಿ ಸ್ವಾಧೀನಪಡಿಸಿಕೊಂಡು ಅನುಭೋಗದಲ್ಲಿದ್ದಾರೆ. ಹಣ ಅಕ್ರಮ ವರ್ಗಾವಣೆ ತಡೆ ಕಾನೂನಿನಡಿ ಇದು ಅಪರಾಧವಾಗಿದೆ' ಎಂದು ಇ.ಡಿ ಆರೋಪಿಸಿದೆ.

ವಿಧಾನಸಭೆ ಬಲಾಬಲ: 81 ಸದಸ್ಯ ಬಲದ ಜಾರ್ಖಂಡ್ ವಿಧಾನಸಭೆಯಲ್ಲಿ 43 ಶಾಸಕರ ಬೆಂಬಲವಿರುವುದಾಗಿ ಜೆಎಂಎಂ ನೇತೃತ್ವದ ಮೈತ್ರಿಕೂಟವು ವಿಡಿಯೊ ಬಿಡುಗಡೆ ಮಾಡಿದೆ.

ಬಹುಮತಕ್ಕೆ 41 ಶಾಸಕರ ಬೆಂಬಲ ಬೇಕಿದೆ. ಜೆಎಂಎಂ-ಕಾಂಗ್ರೆಸ್-ಆರ್‌ಜೆಡಿ ಮೈತ್ರಿಕೂಟವು 47 ಶಾಸಕರನ್ನು ಹೊಂದಿದ್ದು, ಇದರಲ್ಲಿ ಸೊರೇನ್ ಅವರ ಪಕ್ಷದ 29, ಕಾಂಗ್ರೆಸ್‌ನ 17, ಆರ್‌ಜೆಡಿಯ ಒಬ್ಬ ಶಾಸಕರು.

ಬಿಜೆಪಿ 25 ಶಾಸಕರನ್ನು ಹೊಂದಿದೆ. ಆಲ್ ಜಾರ್ಖಂಡ್ ವಿದ್ಯಾರ್ಥಿ ಒಕ್ಕೂಟದಲ್ಲಿ ಮೂವರು, ಎನ್‌ಸಿಪಿ ಮತ್ತು ಎಡಪಕ್ಷಗಳ ತಲಾ ಒಬ್ಬರು ಹಾಗೂ ಮೂವರು ಸ್ವತಂತ್ರ ಶಾಸಕರು ಇದ್ದಾರೆ.

'ಸೊರೇನ್ ಬಂಧನ ಬಿಜೆಪಿ ಬುಡಕಟ್ಟು ವಿರೋಧಿ ಮನಸ್ಥಿತಿ'

ಆತಿಶಿ

ನವದೆಹಲಿ(ಪಿಟಿಐ): ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಹಾಗೂ ಜೆಎಂಎಂ ನಾಯಕ ಹೇಮಂತ್ ಸೊರೇನ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿರುವುದು ಕೇಂದ್ರದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರದ 'ಬುಡಕಟ್ಟು ವಿರೋಧಿ' ಮನಸ್ಥಿತಿಯನ್ನು ತೋರಿಸುತ್ತದೆ ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಗುರುವಾರ ಆರೋಪಿಸಿದೆ.

'ಲೋಕಸಭೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ವಿರೋಧ ಪಕ್ಷಗಳ ಮೇಲಿನ ದಾಳಿಯನ್ನು ತೀವ್ರಗೊಳಿಸುವ ಉದ್ದೇಶದಿಂದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಸೊರೇನ್ ಅವರನ್ನು ಬಂಧಿಸಿದೆ. ಮುಂದಿನ ತಿಂಗಳು ವಿಪಕ್ಷಗಳ ಇನ್ನೂ ಹಲವು ನಾಯಕರನ್ನು ಬಂಧಿಸುವುದು ಖಾತ್ರಿ' ಎಂದು ದೆಹಲಿ ಸಚಿವೆ ಹಾಗೂ ಪಕ್ಷದ ನಾಯಕ ಆತಿಶಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇ.ಡಿ ವಿಚಾರಣೆಗೆ ಹಾಜರಾದ ಎನ್‌ಸಿಪಿ ಶಾಸಕ ರೋಹಿತ್

ಮುಂಬೈ(ಪಿಟಿಐ): ಹಣದ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಎನ್‌ಸಿಪಿ ಶಾಸಕ ಹಾಗೂ ಪಕ್ಷದ ವರಿಷ್ಠ ಶರದ್ ಪವಾರ್ ಮೊಮ್ಮಗ ರೋಹಿತ್ ಪವಾರ್ ಅವರು ಜಾರಿ ನಿರ್ದೇಶನಾಲಯದ (ಇ.ಡಿ) ಮುಂದೆ ಗುರುವಾರ ವಿಚಾರಣೆಗೆ ಹಾಜರಾದರು.

ಮಹಾರಾಷ್ಟ್ರ ರಾಜ್ಯ ಸಹಕಾರ ಬ್ಯಾಂಕ್ ಹಗರಣಕ್ಕೆ ನಂಟಿನ ಹಣದ ಅಕ್ರಮ ವರ್ಗಾವಣೆ ಆರೋಪವನ್ನು ರೋಹಿತ್ ಎದುರಿಸುತ್ತಿದ್ದಾರೆ. ಕಳೆದ ಹತ್ತು ದಿನಗಳಲ್ಲಿ ಎರಡನೇ ಬಾರಿ ರೋಹಿತ್ ವಿಚಾರಣೆಗೆ ಹಾಜರಾದಂತಾಗಿದೆ.

ದಕ್ಷಿಣ ಮುಂಬೈನ ಬಲ್ಲಾರ್ಡ್ ಎಸ್ಟೇಟ್‌ನಲ್ಲಿರುವ ಇ.ಡಿ ಕಚೇರಿಗೆ ತೆರಳಿದ್ದ ರೋಹಿತ್ ಜೊತೆ ಅವರ ಕುಟುಂಬದ ಸದಸ್ಯರೂ ಇದ್ದರು.

ಇಂದು 'ಸುಪ್ರೀಂ' ವಿಚಾರಣೆ

ತಮ್ಮ ಬಂಧನ ಪ್ರಶ್ನಿಸಿ ಹೇಮಂತ್ ಸೊರೇನ್ ಅವರು ಜಾರಿ ನಿರ್ದೇಶನಾಲಯ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಶುಕ್ರವಾರ ವಿಚಾರಣೆ ನಡೆಯಲಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ, ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಅರ್ಜಿಯ ವಿಚಾರಣೆಗೆ ಸಮ್ಮತಿಸಿದೆ.

'ಚುನಾವಣೆ ವೇಳೆ ಇ.ಡಿ. ದಾಳಿ ಸರಿಯಲ್ಲ'

ಜೈಪುರ: ಚುನಾವಣೆಗೆ ಮುನ್ನ ಜಾರಿ ನಿರ್ದೇಶನಾಲಯವನ್ನು ಬಳಸಿ ಕಾರ್ಯಾಚರಣೆ ನಡೆಸುವುದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದುದು ಮತ್ತು ಈ ನಡೆಯು ಕೇವಲ ರಾಜಕಾರಣಿ ಗಳಷ್ಟೇ ಅಲ್ಲ, ಎಲ್ಲ ನಾಗರಿಕರೂ ಆತಂಕ ಪಡುವಂತಹುದು ಎಂದು ಆರ್‌ಬಿಐ ನಿವೃತ್ತ ಗವರ್ನರ್ ರಘುರಾಮ್ ರಾಜನ್ ಹೇಳಿದರು.

'ಜೈಪುರ ಲಿಟರೇಚರ್ ಫೆಸ್ಟಿವಲ್'ನಲ್ಲಿ ಗುರುವಾರ ಮಾತನಾಡಿ, ಜಾರ್ಖಂಡ್‌ನಲ್ಲಿ ಹೇಮಂತ್ ಸೊರೇನ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಬುಧವಾರ ಅವರನ್ನು ಬಂಧಿಸಿದ ಪ್ರಕರಣವನ್ನು ಉಲ್ಲೇಖಿಸಿ, 'ಯಾರ ನ್ನಾದರೂ ಬಂಧಿಸವುದೆಂದರೆ ಅವರನ್ನು ಜೈಲಿಗೆ ಹಾಕುವುದಷ್ಟೇ ಆಗಿರುವುದಿಲ್ಲ. ಬದಲಾಗಿ ಜನರಿಗೆ ವಿರೋಧ ಪಕ್ಷವನ್ನು ಆಯ್ಕೆ ಮಾಡಿಕೊಳ್ಳಲು ಇರುವ ಸ್ವಾತಂತ್ರ್ಯವನ್ನು ಕಸಿದು ಕೊಂಡಂತಾಗುತ್ತದೆ. ವಿರೋಧ ಪಕ್ಷದ ನಾಯಕರನ್ನು ಜೈಲಿಗಟ್ಟಿದರೆ ಜನರಿಗೆ ಆಯ್ಕೆಗಳೆಲ್ಲಿರುತ್ತವೆ?' ಎಂದಿದ್ದಾರೆ.

'ಗರ್ಭಪಾತಕ್ಕೆ ಅವಕಾಶ ನಿರಾಕರಣೆ'

28 ವಾರಗಳ ಭ್ರೂಣ ತೆಗೆಸಲು ಅನುಮತಿ ಕೋರಿದ್ದ ಅರ್ಜಿ

ನವದೆಹಲಿ (ಪಿಟಿಐ): 20 ವರ್ಷ ವಯಸ್ಸಿನ ಅವಿವಾಹಿತೆಗೆ ಗರ್ಭಪಾತದ ಮೂಲಕ 28 ವಾರಗಳ ಭ್ರೂಣ ತೆಗೆಸಲು ದೆಹಲಿ ಹೈಕೋರ್ಟ್ ಗುರುವಾರ ಅವಕಾಶ ನಿರಾಕರಿಸಿದೆ. ವೈದ್ಯಕೀಯ ವರದಿ ಪ್ರಕಾರ ಭ್ರೂಣದ ಬೆಳವಣಿಗೆ ಸಹಜವಾಗಿದೆ. ಗರ್ಭಪಾತಕ್ಕೆ ಅನುಮತಿ ನೀಡಲು ಸಾಧ್ಯವಿಲ್ಲ ಎಂದಿದೆ.

ಗರ್ಭಪಾತಕ್ಕೆ ಅನುಮತಿ ಕೋರಿ ಅರ್ಜಿ ಸಲ್ಲಿಸಿರುವ ಮಹಿಳೆಯು, ತಾನು ವ್ಯಕ್ತಿಯೊಬ್ಬರ ಜೊತೆ ಒಪ್ಪಿತ ಸಂಬಂಧದಲ್ಲಿ ಇದ್ದುದಾಗಿ ಮತ್ತು ಗರ್ಭಿಣಿ ಆಗಿರುವ ವಿಚಾರ ತೀರಾ ಈಚೆಗೆ ತಿಳಿದುಬಂದಿದ್ದಾಗಿ ಅರ್ಜಿಯಲ್ಲಿ ಹೇಳಿದ್ದಾರೆ.

'ನನ್ನ ಕಕ್ಷೀದಾರ ಮಹಿಳೆಗೆ ತಾನು ಗರ್ಭಿಣಿ ಎಂಬ ವಿಚಾರ ತಿಳಿದಿದ್ದೇ ಜನವರಿ 25ರಂದು. ತಾನು ಮಗು ಪಡೆಯುವ ಪರಿಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಗರ್ಭಪಾತ ಮಾಡಿ ಎಂದು ವೈದ್ಯರಿಗೆ ಮನವಿ ಮಾಡಿದ್ದರು. ಆದರೆ ಈಗಾಗಲೇ 24 ವಾರಗಳು ಕಳೆದಿರುವುದರಿಂದ ಗರ್ಭಪಾತ ಮಾಡಲು ಸಾಧ್ಯವಿಲ್ಲ ವೈದ್ಯರು ಎಂದು ಹೇಳಿದರು' ಎಂದು ಮಹಿಳೆ ಪರ ವಕೀಲರು ಕೋರ್ಟ್‌ಗೆ ಹೇಳಿದರು.

ಮಹಿಳೆಯ ಕುಟುಂಬ ಸದಸ್ಯರಿಗೆ ಆಕೆಯು ಗರ್ಭಿಣಿ ಆಗಿರುವ ವಿಚಾರ ತಿಳಿದಿಲ್ಲ. ಆಕೆ ಅವಿವಾಹಿತೆ ಆಗಿರುವ ಕಾರಣ ಈ ಮನವಿಯನ್ನು ಪರಿಗಣಿಸಬೇಕು ಎಂದು ಅವರು ಕೋರ್ಟ್‌ಗೆ ಮನವಿ ಮಾಡಿದರು.

ಅಲ್ಲದೇ, ಆಕೆಯ ಮಾನಸಿಕ ಮತ್ತು ದೈಹಿಕ ಆರೋಗ್ಯದ ಬಗ್ಗೆ ತಿಳಿಯಲು ಆಕೆಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸುವಂತೆ ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ (ಏಮ್ಸ್) ನಿರ್ದೇಶನ ನೀಡಬೇಕು ಎಂದು ಕೂಡಾ ವಕೀಲರು ಕೋರ್ಟ್‌ಗೆ ಮನವಿ ಮಾಡಿದರು.

ಆದರೆ ಮನವಿಯನ್ನು ಕೋರ್ಟ್ ತಿರಸ್ಕರಿಸಿತು.

ಎಎಂಯುಗೆ ಅಲ್ಪಸಂಖ್ಯಾತ ಸ್ಥಾನಮಾನ ತೀರ್ಪು ಕಾಯ್ದಿರಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯಕ್ಕೆ (ಎಎಂಯು) ಅಲ್ಪಸಂಖ್ಯಾತ ಸ್ಥಾನಮಾನ ನೀಡುವ ಕುರಿತ ತೀರ್ಪನ್ನು ಸುಪ್ರೀಂ ಕೋರ್ಟ್ ಗುರುವಾರ ಕಾಯ್ದಿರಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಏಳು ನ್ಯಾಯಮೂರ್ತಿಗಳ ಪೀಠವು ವಾದಿ-ಪ್ರತಿವಾದಿಗಳ ವಾದಗಳನ್ನು ಕಳೆದ ಎಂಟು ದಿನಗಳಿಂದ ಆಲಿಸಿದೆ. ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಸೂರ್ಯಕಾಂತ್, ಜೆ.ಬಿ. ಪಾರ್ದಿವಾಲ, ದೀಪಂಕರ್ ದತ್ತಾ, ಮನೋಜ್ ಮಿಶ್ರಾ ಹಾಗೂ ಸತೀಶ್ ಚಂದ್ರ ಶರ್ಮಾ ಪೀಠದಲ್ಲಿದ್ದಾರೆ.

ಎಎಂಯುಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡುವ ಕುರಿತ ವಿಷಯವು ಕಳೆದ ಹಲವು ದಶಕಗಳಿಂದ ಕಾನೂನು ಜಟಿಲದಲ್ಲಿ ಸಿಲುಕಿಕೊಂಡಿದೆ.

ಈ ವಿಷಯವನ್ನು ಬಗೆಹರಿಸುವ ಸಲುವಾಗಿ ಪ್ರಕರಣದ ವಿಚಾರಣೆಯನ್ನು ಏಳು ನ್ಯಾಯಮೂರ್ತಿಗಳ ಪೀಠಕ್ಕೆ ವಹಿಸಬೇಕೆಂದು 2019ರ ಫೆಬ್ರುವರಿ 12ರಂದು ಸುಪ್ರೀಂ ಕೋರ್ಟ್ ಆದೇಶಿಸಿತ್ತು.

ದಟ್ಟ ಮಂಜು ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ಗುರುವಾರ ದಟ್ಟ ಮಂಜು ವ್ಯಾಪಿಸಿದ್ದರಿಂದಾಗಿ ಪ್ರವಾಸಿಗರು ಛತ್ರಿಗಳನ್ನು ಹಿಡಿದೇ ಸಾಗುವಂತಾಯಿತು –ಪಿಟಿಐ ಚಿತ್ರ

ಜರ್ಮನಿ: ವಿಮಾನಗಳ ಸಂಚಾರ ರದ್ದು

ಬರ್ಲಿನ್ (ಎಪಿ): ಜರ್ಮನಿಯ ಪ್ರಮುಖ ವಿಮಾನ ನಿಲ್ದಾಣಗಳ ಭದ್ರತಾ ಸಿಬ್ಬಂದಿ ಗುರುವಾರ ಕರ್ತವ್ಯಕ್ಕೆ ಹಾಜರಾಗದೇ ಪ್ರತಿಭಟನೆ ನಡೆಸಿದ್ದರಿಂದ ಹಲವು ವಿಮಾನಗಳ ಸಂಚಾರದಲ್ಲಿ ವ್ಯತ್ಯಯವಾಯಿತು. ಇದರಿಂದಾಗಿ ಲಕ್ಷಾಂತರ ಪ್ರಯಾಣಿಕರು ಪರದಾಡಿದರು.

ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 'ವೆರ್.ಡಿ ಯೂನಿಯನ್' ಪ್ರತಿಭಟನೆಗೆ ಕರೆಕೊಟ್ಟಿತ್ತು.

ಫ್ರಾಂಕ್‌ಫರ್ಟ್, ಬರ್ಲಿನ್, ಕೊಲಾಗ್ನೆ, ಹಂಬರ್ಗ್, ಸ್ಟಟ್‌ಗರ್ಟ್, ಲೇಪ್ಸಿಗ್, ಹನ್ನೊವೆರ್, ಡ್ರೆಸ್ಡೆನ್, ಬ್ರೆಮೆನ್ ಮತ್ತು ಎರ್ಫರ್ಟ್ ವಿಮಾನ ನಿಲ್ದಾಣಗಳ ಭದ್ರತಾ ಸಿಬ್ಬಂದಿ ಗುರುವಾರ ಕರ್ತವ್ಯಕ್ಕೆ ಗೈರಾಗಿದ್ದರು.

ಬರ್ಲಿನ್, ಹಂಬರ್ಗ್ ಮತ್ತು ಸ್ಟಟ್‌ಗರ್ಟ್ ವಿಮಾನ ನಿಲ್ದಾಣಗಳಲ್ಲಿ ಪ್ರತಿಭಟನೆ ಆರಂಭವಾಗುವ ಮೊದಲೇ ಎಲ್ಲ ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಗಿತ್ತು.

ಸಂಜಯ್ ಸಿಂಗ್ ಜಾಮೀನು ಅರ್ಜಿ: ಇ.ಡಿಗೆ ನೋಟಿಸ್

ಸಂಜಯ್ ಸಿಂಗ್

ನವದೆಹಲಿ: ದೆಹಲಿ ಅಬಕಾರಿ ನೀತಿಯಲ್ಲಿನ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನದಲ್ಲಿರುವ ಎಎಪಿ ಸಂಸದ ಸಂಜಯ್ ಸಿಂಗ್ ಅವರು ಫೆಬ್ರುವರಿ 4ರಿಂದ 10ರ ವರೆಗೆ ಸಂಸತ್ ಅಧಿವೇಶನದಲ್ಲಿ ಭಾಗಿಯಾಗಲು ಮಧ್ಯಂತರ ಜಾಮೀನು ಕೋರಿ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಈ ಬಗ್ಗೆ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ ಎಂ.ಕೆ ನಾಗ್ಪಾಲ್ ಅವರು, ಫೆಬ್ರುವರಿ 3ರೊಳಗಾಗಿ ಈ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಜಾರಿ ನಿರ್ದೇಶನಾಲಯಕ್ಕೆ ಸೂಚನೆ ನೀಡಿದ್ದಾರೆ.

ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಸಂಜಯ್‌ಸಿಂಗ್ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಆರೋಪಿಸಿ ಇ.ಡಿಯು 2023ರ ಅಕ್ಟೋಬರ್‌ನಲ್ಲಿ ಸಂಜಯ್‌ಸಿಂಗ್ ಅವರನ್ನು ಬಂಧಿಸಿತ್ತು.

ಜ್ಞಾನವಾಪಿ ಮಸೀದಿಯ ನೆಲಮಹಡಿಯಲ್ಲಿ ಪೂಜೆ

ಒಂದನೇ ಪುಟದಿಂದ


ಜ್ಞಾನವಾಪಿ ಮಸೀದಿಯ ನೆಲಮಹಡಿಯಲ್ಲಿ ಅರ್ಚಕರು ಪೂಜೆ ಸಲ್ಲಿಸಿದ್ದಾರೆ

'ಯಾವುದೇ ಕಾನೂನು ನೆರವು ಲಭಿಸದಂತೆ ತಡೆಯುವ ಉದ್ದೇಶದಿಂದ ಯೋಗಿ ಆದಿತ್ಯನಾಥ ಸರ್ಕಾರವು ನ್ಯಾಯಾಲಯದ ಆದೇಶವನ್ನು ಆತುರದಿಂದ ಪಾಲಿಸಿದೆ' ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು 'ಎಕ್ಸ್' ಮಾಧ್ಯಮದಲ್ಲಿ ಟೀಕಿಸಿದ್ದಾರೆ.

'ನ್ಯಾಯಾಲಯದ ಆದೇಶವನ್ನು ಜಾರಿಗೊಳಿಸುವಾಗ ಕೆಲವು ಪ್ರಕ್ರಿಯೆಗಳನ್ನು ನಿರ್ವಹಿಸಬೇಕು. ಈಗ ನಾವು ನೋಡುತ್ತಿರುವುದು ಅಂತಹ ಸರಿಯಾದ ಪ್ರಕ್ರಿಯೆಯನ್ನು ಮೀರಿದ ಸಂಘಟಿತ ಪ್ರಯತ್ನವಷ್ಟೆ' ಎಂದು ಹೇಳಿದ್ದಾರೆ.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ನಡೆಸಿರುವ ವೈಜ್ಞಾನಿಕ ಸಮೀಕ್ಷೆಯ ವರದಿಯನ್ನು ಬಹಿರಂಗಗೊಳಿಸಿದ ಮರುದಿನ ನ್ಯಾಯಾಧೀಶರಾದ ಎ.ಕೆ. ವಿಶ್ವೇಶ ಅವರು ಈ ಆದೇಶ ನೀಡಿದ್ದರು.

ಔರಂಗಜೇಬನ ಆಡಳಿತದಲ್ಲಿ ಹಿಂದೂ ದೇವಾಲಯದ ಮೇಲೆ ಮಸೀದಿ ಕಟ್ಟಲಾಗಿತ್ತು ಎಂದು ಸಮೀಕ್ಷೆಯ ವರದಿಯಲ್ಲಿ ಹೇಳಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಅಲಹಾಬಾದ್ ಹೈಕೋರ್ಟ್‌ಗೆ ಅರ್ಜಿ

ಲಖನೌ: ವಾರಾಣಸಿ ಜಿಲ್ಲಾ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿಯು ಗುರುವಾರ ಅಲಹಾಬಾದ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಇದೇ ವೇಳೆ ಮಸೀದಿ ಸಮಿತಿ ಸಲ್ಲಿಸಿರುವ ಅರ್ಜಿಯ ಕುರಿತು ಯಾವುದೇ ಆದೇಶ ನೀಡುವ ಮೊದಲು ವಿಚಾರಣೆ ನಡೆಸಬೇಕೆಂದು ಕೋರಿ ಹಿಂದೂ ಅರ್ಜಿದಾರರ ಪರ ವಕೀಲರು ಕೂಡ ಹೈಕೋರ್ಟ್‌ಗೆ ಕೇವಿಯೆಟ್ ಸಲ್ಲಿಸಿದ್ದಾರೆ.

'ತುರ್ತಾಗಿ ವಿಚಾರಣೆ ನಡೆಸಬೇಕೆಂದು ಮಸೀದಿ ಸಮಿತಿ ಪರ ವಕೀಲರು ಕೋರಿದ್ದರು. ಆದರೆ ಸಾಮಾನ್ಯ ಪ್ರಕ್ರಿಯೆಯಂತೆ ಅರ್ಜಿಯನ್ನು ವಿಚಾರಣೆಗೆ ಪಟ್ಟಿಮಾಡುವುದಾಗಿ ಹೈಕೋರ್ಟ್ ತಿಳಿಸಿದೆ' ಎಂದು ಮೂಲಗಳು ಹೇಳಿವೆ.

ಜಿಲ್ಲಾ ನ್ಯಾಯಾಲಯವು ನೀಡಿರುವ ಆದೇಶವನ್ನು ರದ್ದುಗೊಳಿಸಬೇಕು ಮತ್ತು ಅರ್ಜಿಯ ವಿಚಾರಣೆ ನಡೆಯುವವರೆಗೂ ಯಾವುದೇ ಪ್ರಕ್ರಿಯೆ ನಡೆಸದಂತೆ ತಡೆಯಾಜ್ಞೆ ನೀಡಬೇಕು ಎಂದು ಮಸೀದಿ ಸಮಿತಿಯು ಅರ್ಜಿಯಲ್ಲಿ ಕೋರಿದೆ.

ಇದಕ್ಕೂ ಮೊದಲು, ವಾರಾಣಸಿ ಜಿಲ್ಲಾ ನ್ಯಾಯಾಲಯವು ನೀಡಿರುವ ಆದೇಶವನ್ನು ಪ್ರಶ್ನಿಸಿ ಅಲಹಾಬಾದ್ ಹೈಕೋರ್ಟ್ ಮೊರೆಹೋಗುವಂತೆ ಸುಪ್ರೀಂ ಕೋರ್ಟ್ ಗುರುವಾರ ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿಗೆ ಸೂಚಿಸಿತ್ತು. ಈ ವಿಚಾರವಾಗಿ ತುರ್ತು ವಿಚಾರಣೆ ನಡೆಸಬೇಕೆಂದು ಸಮಿತಿ ಪರ ವಕೀಲರು ಸುಪ್ರೀಂ ಕೋರ್ಟ್‌ಗೆ ಕೋರಿದ್ದರು.

ಅಲಹಾಬಾದ್ ಹೈಕೋರ್ಟ್‌ಗೆ ತೆರಳುವಂತೆ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಸೂಚಿಸಿರುವುದಾಗಿ ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಾರ್ ಮಸೀದಿ ಸಮಿತಿಗೆ ಮನವರಿಕೆ ಮಾಡಿದ್ದರು.

'ಉತ್ತರದ ವಿಪರೀತ ಚಳಿಗೆ ಸೈಬೀರಿಯಾ ಶೀತ ಹವೆ ಕಾರಣ'

ನವದೆಹಲಿ(ಪಿಟಿಐ): ದೇಶದ ಉತ್ತರ ಭಾಗದಲ್ಲಿ ಶೀತ ಮಾರುತಗಳು ಬೀಸುತ್ತಿರುವುದಕ್ಕೆ ಸೈಬೀರಿಯಾದಿಂದ ಬೀಸುವ ಶೀತ ಮತ್ತು ಶುಷ್ಕ ಹವೆ ಕಾರಣ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಈ ಕುರಿತು ಮೊಹಾಲಿಯ ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ (ಐಐಎಸ್‌ಇಆರ್) ಸಂಶೋಧಕರು ಕೈಗೊಂಡಿದ್ದ ಅಧ್ಯಯನದ ವರದಿಯು 'ವೆದರ್ ಅಂಡ್ ಕ್ಲೈಮೇಟ್ ಎಕ್ಸ್‌ಟ್ರೀಮ್ಸ್' ನಿಯತ ಕಾಲಿಕದಲ್ಲಿ ಪ್ರಕಟವಾಗಿದೆ. ಹವಾಮಾನ ವೈಪರೀತ್ಯ ಹಾಗೂ ಮುಂದಿನ ದಿನಗಳಲ್ಲಿ ವಾತಾವರಣದಲ್ಲಿ ಕಂಡುಬರುವ ವ್ಯತ್ಯಾಸದ ಬಗ್ಗೆ ಈ ಅಧ್ಯಯನವು ಬೆಳಕು ಚೆಲ್ಲುತ್ತದೆ. ಯುರೇಷಿಯಾದ ಈಶಾನ್ಯ ಭಾಗದಲ್ಲಿ ನವೆಂಬರ್‌ನಿಂದ ಫೆಬ್ರುವರಿ ನಡುವೆ ಶೀತ ಮತ್ತು ಶುಷ್ಕ ಗಾಳಿಯು ಭಾರಿ ಪ್ರಮಾಣದಲ್ಲಿ ಕಂಡುಬರುತ್ತದೆ. ಇದನ್ನು 'ಸೈಬೀರಿಯನ್ ಹೈ' ಎಂದು ಕರೆಯಲಾಗುತ್ತದೆ.

'ಈ ವಿದ್ಯಮಾನವೇ ಉತ್ತರ ಭಾರತ ದಲ್ಲಿ ಶೀತ ವಾತಾವರಣಕ್ಕೆ ಕಾರಣ ಹಾಗೂ ಚಳಿಗಾಲದಲ್ಲಿ ತಾಪಮಾನ ವಿಪರೀತ ವಾಗಿ ಇಳಿಕೆಯಾಗುವುದರ ಕುರಿತು ತಿಳಿದುಕೊಳ್ಳಲು ಅಧ್ಯಯನ ನೆರವಾಗುತ್ತದೆ' ಎಂದು ಪ್ರೊ.ರಾಜು ಅಟ್ಟದ ನೇತೃತ್ವದ ತಂಡ ನಡೆಸಿದ ಸಂಶೋಧನೆ ಹೇಳುತ್ತದೆ. ಐಐಎಸ್‌ಇಆರ್‌ನ ಕೆ.ಎಸ್.ಅಧೀರ, ಬ್ರೆಜಿಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಸ್ಪೇಸ್ ರಿಸರ್ಚ್‌ನ ವಿ.ಬ್ರಹ್ಮಾನಂದ ರಾವ್ ಅವರು ಸಹ ತಂಡದಲ್ಲಿದ್ದರು.

ಟಿಎಂಸಿ ಜೊತೆ ಸೀಟು ಹಂಚಿಕೆಯ ವಿಶ್ವಾಸ ವ್ಯಕ್ತಪಡಿಸಿದ ಕಾಂಗ್ರೆಸ್

ಜೈರಾಮ್ ರಮೇಶ್

ಜಂಗೀಪುರ (ಪಿಟಿಐ) : ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರ ಅಸಮ್ಮತಿಯ ನಡುವೆಯೂ ಪಶ್ಚಿಮ ಬಂಗಾಳದಲ್ಲಿ ಲೋಕಸಭಾ ಚುನಾವಣೆಯ ಸೀಟು ಹಂಚಿಕೆ ವಿಚಾರದಲ್ಲಿ ಟಿಎಂಸಿಯೊಂದಿಗಿನ ಮೈತ್ರಿಯನ್ನು ಮುಂದುವರಿಸುವ ವಿಶ್ವಾಸವನ್ನು ಕಾಂಗ್ರೆಸ್ ವ್ಯಕ್ತಪಡಿಸಿದೆ.

ಮುರ್ಷಿದಾಬಾದ್ ಜಿಲ್ಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, '2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸುವುದೇ ನಮ್ಮ ಗುರಿ' ಎಂದು ಹೇಳಿದರು.

'ಮೈತ್ರಿ ಕೂಟದಲ್ಲಿ ಕೊಡು-ಕೊಳ್ಳುವಿಕೆ ಸಾಮಾನ್ಯ. ಎಲ್ಲ ಪಕ್ಷಗಳಿಗೆ ಸಮಾಧಾನವಾಗುವ ರೀತಿಯಲ್ಲಿ ಒಮ್ಮತದಿಂದ ಸೀಟು ಹಂಚಿಕೆ ಮಾಡುವ ವಿಶ್ವಾಸವಿದೆ. ಮಮತಾ ಬ್ಯಾನರ್ಜಿ ಅವರು ಇಂಡಿಯಾ ಮೈತ್ರಿಕೂಟಕ್ಕೆ ತಮ್ಮ ಬದ್ಧತೆಯನ್ನು ತೋರಿದ್ದು, ಅವರ ನಿಲುವನ್ನು ನಾವು ಸ್ವಾಗತಿಸುತ್ತೇವೆ' ಎಂದರು.

ಕಾಂಗ್ರೆಸ್‌ಗೆ ಎರಡು ಕ್ಷೇತ್ರ ಬಿಟ್ಟುಕೊಡುವುದಾಗಿ ಮೊದಲು ಮಮತಾ ಹೇಳಿದ್ದರು. ಅದಕ್ಕೆ ಕಾಂಗ್ರೆಸ್ ಒಪ್ಪಿರಲಿಲ್ಲ. ಈಗ ರಾಜ್ಯವನ್ನು ತಾವೊಬ್ಬರೇ ಬಿಜೆಪಿ ಎದುರಿಸುವುದಾಗಿ ಹೇಳಿದ್ದಾರೆ.

ಈ ನಡುವೆಯೇ ಮೈತ್ರಿ ಮುಂದುವರಿಯುವುದಾಗಿ ಜೈರಾಮ್ ರಮೇಶ್ ಹೇಳಿರುವುದು ಕುತೂಹಲ ಮೂಡಿಸಿದೆ.

ಎಚ್–1ಬಿ ವೀಸಾ ಶುಲ್ಕದಲ್ಲಿ ಭಾರಿ ಏರಿಕೆ

ವಾಷಿಂಗ್ಟನ್(ಪಿಟಿಐ): ವಲಸಿಗರಲ್ಲದವರಿಗೆ ನೀಡುವ ಎಚ್–1ಬಿ, ಎಲ್–1 ಮತ್ತು ಇಬಿ–5 ವೀಸಾಗಳ ಶುಲ್ಕವನ್ನು ಅಮೆರಿಕ ಸರ್ಕಾರ ಏರಿಕೆ ಮಾಡಿದೆ.

2016ರ ಬಳಿಕ ಇದೇ ಮೊದಲ ಬಾರಿಗೆ ಶುಲ್ಕ ಏರಿಕೆ ಮಾಡಲಾಗಿದ್ದು, ಇದು ಏ.1ರಿಂದ ಜಾರಿಗೆ ಬರಲಿದೆ ಎಂದು ಮೂಲಗಳು ತಿಳಿಸಿವೆ. ಎಚ್1–ಬಿ ವೀಸಾಕ್ಕೆ ಅರ್ಜಿ ಸಲ್ಲಿಸುವ (ಫಾರಂ ಐ–129) ಶುಲ್ಕವನ್ನು ಡಾಲರ್ 460 (₹38,177) ರಿಂದ 780ಕ್ಕೆ (₹ 64,735) ಏರಿಕೆ ಮಾಡಲಾಗಿದೆ.

ಎಲ್ 1 ವೀಸಾದ ಶುಲ್ಕವನ್ನು 460 ಡಾಲರ್‌ನಿಂದ (₹38,177) 1,385 ಡಾಲರ್‌ಗೆ (ಅಂದಾಜು ₹1.14 ಲಕ್ಷ) ಏರಿಕೆ ಮಾಡಲಾಗಿದೆ. ಇಬಿ–5 ವೀಸಾದ ಶುಲ್ಕವನ್ನು 3,675 ಡಾಲರ್‌ನಿಂದ (ಅಂದಾಜು ₹3 ಲಕ್ಷ) 11,160 ಡಾಲರ್‌ಗೆ (ಅಂದಾಜು ₹9.25 ಲಕ್ಷ) ಹೆಚ್ಚಿಸಿರುವುದಾಗಿ ಅಮೆರಿಕ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಬಿ–5 ವೀಸಾ ಯೋಜನೆಯನ್ನು ಅಮೆರಿಕ 1990ರಲ್ಲಿ ಪರಿಚಯಿಸಿತ್ತು.

ಸಂಕ್ಷಿಪ್ತ ಸುದ್ದಿ

'ಗೆಲುವಿಗಾಗಿ ಪ್ರತಿಪಕ್ಷ ನಾಯಕರಿಗೆ ಜೈಲು'

ಮಮತಾ ಬ್ಯಾನರ್ಜಿ

ಶಾಂತಿಪುರ (ಪಿಟಿಐ): 'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಗೆಲ್ಲುವ ಸಲುವಾಗಿ ಪ್ರತಿಪಕ್ಷಗಳ ನಾಯಕರನ್ನು ಬಿಜೆಪಿ ಜೈಲಿಗೆ ಹಾಕಿಸುತ್ತಿದೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದ ಬೆನ್ನಲ್ಲೇ, ಮಮತಾ ಅವರು ಈ ಹೇಳಿಕೆ ನೀಡಿದ್ದಾರೆ.

ನಾಡಿಯಾ ಜಿಲ್ಲೆಯ ಶಾಂತಿಪುರದಲ್ಲಿ ಗುರುವಾರ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ನೀವು ಬೆದರಿಸಬಹುದು ಮತ್ತು ಭಾರತದಲ್ಲಿರುವ ಎಲ್ಲರನ್ನೂ ಜೈಲಿಗೆ ಕಳುಹಿಸಬಹುದು. ನನ್ನನ್ನೂ ನೀವು ಜೈಲಿಗೆ ಹಾಕಬಹುದು. ಆದರೆ, ನಾನು ಖಂಡಿತವಾಗಿಯೂ ಹೊರಗೆ ಬರುತ್ತೇನೆ' ಎಂದು ಹೇಳಿದರು.

'ನಮ್ಮೆಲ್ಲರನ್ನು ಕಳ್ಳರು (ಪ್ರತಿಪಕ್ಷಗಳ ನಾಯಕರು) ಹಾಗೂ ನಿಮ್ಮನ್ನು ನೀವು ಸಾಧುಗಳು ಎಂದು ಕರೆದುಕೊಳ್ಳಬಹುದು. ನೀವು ಅಡುಗೆ ಅನಿಲದ ದರವನ್ನು ಹೆಚ್ಚಿಸಿದ್ದೀರಿ. ಗ್ರಾಮೀಣ ಆವಾಸ್ ಯೋಜನೆಯಡಿ ರಸ್ತೆ ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡುತ್ತಿಲ್ಲ. ನೀವು ಕಳ್ಳರ ಜಮೀನ್ದಾರರೇ ಹೊರತು ಬೇರೇನೂ ಅಲ್ಲ. ನಿಮ್ಮ ಕೈಯಲ್ಲಿ ಅಧಿಕಾರವಿದೆ ಎಂಬ ಕಾರಣಕ್ಕೆ ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದ್ದೀರಾ. ನಾಳೆ ಏನಾಗಲಿದೆ' ಎಂದು ಪ್ರಶ್ನಿಸಿದರು.

ಅಲ್ಲದೇ, ಬಿಜೆಪಿಯು ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಹೇರುವುದಾಗಿ ಹೆದರಿಸುತ್ತಿದೆ. ಆದರೆ, ಎನ್‌ಆರ್‌ಸಿ ಜಾರಿಯಾಗುವುದಕ್ಕೆ ಬಿಡುವುದಿಲ್ಲ. ಪೌರತ್ವ ತಿದ್ದುಪಡಿ ಕಾಯ್ದೆ ಕುರಿತು ಬಿಜೆಪಿ ಸುಳ್ಳು ಹೇಳುತ್ತಿದೆ. ಇವೆಲ್ಲವೂ ಅವರ ರಾಜಕೀಯ ಆಟಗಳು ಎಂದು ಟೀಕಿಸಿದರು.

ಚಂಡೀಗಢ ಮೇಯರ್ ಚುನಾವಣೆ 'ಸುಪ್ರೀಂ' ಮೆಟ್ಟಿಲೇರಿದ ಎಎಪಿ

ನವದೆಹಲಿ: ಚಂಡೀಗಢ ನಗರ ಪಾಲಿಕೆ ಮೇಯರ್ ಚುನಾವಣಾ ಫಲಿತಾಂಶಕ್ಕೆ ತಡೆ ನೀಡಲು ನಿರಾಕರಿಸಿದ ಪಂಜಾಬ್–ಹರಿಯಾಣ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಎಎಪಿ ಕೌನ್ಸಿಲರ್ ಕುಲದೀಪ್ ಕುಮಾರ್ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಬುಧವಾರ ತಡೆ ನೀಡಲು ನಿರಾಕರಿಸಿದ್ದ ಹೈಕೋರ್ಟ್, ವಿಚಾರಣೆಯನ್ನು ಮೂರು ವಾರ ಮುಂದೂಡಿತ್ತು. ಮೇಯರ್ ಸ್ಥಾನದ ಚುನಾವಣೆಯಲ್ಲಿ 16 ಮತ ಪಡೆದಿದ್ದ ಬಿಜೆಪಿಯ ಮನೋಜ್ ಸೋನ್‌ಕರ್ ಗೆದ್ದಿದ್ದರು. ಕಾಂಗ್ರೆಸ್–ಎಎಪಿ ಅಭ್ಯರ್ಥಿ ಕುಮಾರ್ 12 ಮತ ಗಳಿಸಿ ಸೋತಿದ್ದರು. 8 ಮತಗಳು ತಿರಸ್ಕೃತಗೊಂಡಿದ್ದವು.

'ಪಕ್ಷಗಳು ನೇಮಿಸಿದ್ದ ಸದಸ್ಯರಿಗೆ ಮತ ಎಣಿಕೆ ಪ್ರಕ್ರಿಯೆಯನ್ನು ಗಮನಿಸಿಕೊಳ್ಳಲು ಚುನಾವಣಾಧಿಕಾರಿ ಅವಕಾಶ ನೀಡಿರಲಿಲ್ಲ. ಈಗ ಹೈಕೋರ್ಟ್ ನ್ಯಾಯಮೂರ್ತಿ ಮೇಲ್ವಿಚಾರಣೆಯಲ್ಲಿ ಹೊಸದಾಗಿ, ನ್ಯಾಯಯುತವಾಗಿ ಚುನಾವಣೆ ನಡೆಸಬೇಕು' ಎಂದು ಅರ್ಜಿದಾರರು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅರ್ಜಿಯಲ್ಲಿ ಹೇಳಿದ್ದಾರೆ.

'ಸಂಧಾಯಕ್' ನೌಕೆಗೆ ಶೀಘ್ರದಲ್ಲೇ ಚಾಲನೆ

ನವದೆಹಲಿ (ಪಿಟಿಐ): ತನ್ನ ನೂತನ ಸರ್ವೇಕ್ಷಣಾ ನೌಕೆ 'ಸಂಧಾಯಕ್' ಕಾರ್ಯಾಚರಣೆಗೆ ಶೀಘ್ರದಲ್ಲೇ ವಿಶಾಖಪಟ್ಟಣದಲ್ಲಿ ಭಾರತೀಯ ನೌಕಾಪಡೆಯು ಚಾಲನೆ ನೀಡಲಿದೆ ಎಂದು ನೌಕಾಪಡೆ ಮುಖ್ಯಸ್ಥರು ತಿಳಿಸಿದ್ದಾರೆ.

ರಕ್ಷಣಾ ಸಚಿವ ರಾಜನಾಥ ಸಿಂಗ್, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್. ಹರಿಕುಮಾರ್ ಮತ್ತು ಉಪ ಅಡ್ಮಿರಲ್ ರಾಜೇಶ್ ಪೆಂಡಾರ್ಕರ್ ಅವರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಕೋಲ್ಕತ್ತದ ಎಂ/ಎಸ್ ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಆ್ಯಂಡ್ ಎಂಜಿನಿಯರ್ಸ್ (ಜಿಆರ್‌ಎಸ್‌ಇ) ಅವರು ನೌಕಾಪಡೆಗಾಗಿ ನಾಲ್ಕು ಸರ್ವೇಕ್ಷಣಾ ನೌಕೆಗಳನ್ನು ನಿರ್ಮಿಸುತ್ತಿದ್ದಾರೆ. ಅದರಲ್ಲಿ ನೌಕಾಪಡೆಗೆ ಸೇರ್ಪಡೆಯಾದ ಮೊದಲ ನೌಕೆ 'ಸಂಧಾಯಕ್'. ಇದನ್ನು ಡಿಸೆಂಬರ್ 4ರಂದು ಸಂಸ್ಥೆಯು ನೌಕಾಪಡೆಗೆ ಹಸ್ತಾಂತರಿಸಿತ್ತು ಎಂದು ಅವರು ತಿಳಿಸಿದ್ದಾರೆ.

ಈ ನೌಕೆಗಳು ಬಂದರು, ಕರಾವಳಿ ತೀರ, ಹಡುಗು ಮಾರ್ಗ, ಸಮುದ್ರದ ಆಳದಲ್ಲಿ ಭದ್ರತಾ ಪರಿಶೀಲನೆ ನಡೆಸುತ್ತದೆ. ಅಲ್ಲದೇ, ನೌಕಾಪಡೆಯ ಹಲವು ಬಗೆಯ ಕಾರ್ಯಾಚರಣೆಗಳನ್ನು ಕೈಗೊಳ್ಳುವಂತೆಯೂ ಈ ನೌಕೆಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಜೈಪುರ ಲಿಟರೇಚರ್ ಫೆಸ್ಟಿವಲ್ ಪ್ರಾರಂಭ

ಸಾಹಿತ್ಯದ ಮಹಾಮೇಳದಲ್ಲಿ ಪ್ರಜಾಪ್ರಭುತ್ವದ್ದೇ ಪ್ರತಿಧ್ವನಿ

• ರಾಜಲಕ್ಷ್ಮಿ ಕೋಡಿಬೆಟ್ಟು

ಹೋಟೆಲ್ ಕ್ಲಾರ್ಕ್ಸ್ ಅಮೀರ್‌ನಲ್ಲಿ ಬುಧವಾರ ಜೈಪುರ ಲಿಟರೇಚರ್ ಫೆಸ್ಟಿವಲ್ ಅನ್ನು ರಾಜಸ್ಥಾನದ ಉಪಮುಖ್ಯಮಂತ್ರಿ ದಿಯಾ ಕುಮಾರಿ ದೀಪ ಬೆಳಗಿಸಿ ಉದ್ಘಾಟಿಸಿದರು.

ಜೈಪುರ: ಸಾಹಿತ್ಯ ಮತ್ತು ಸಂಸ್ಕೃತಿಯ ಬೃಹತ್ ಜಾತ್ರೆ 'ಜೈಪುರ ಲಿಟರೇಚರ್ ಫೆಸ್ಟಿವಲ್'ನ ಮೊದಲ ದಿನವಾದ ಗುರುವಾರ ಪ್ರಜಾಪ್ರಭುತ್ವ ವ್ಯವಸ್ಥೆಯ ಕುರಿತು ಪದೇ ಪದೇ ಮಾತುಗಳು ಕೇಳಿಬಂದವು. 'ಒಂದು ರಾಷ್ಟ್ರ ಒಂದು ಚುನಾವಣೆ' ಎಂಬ ಪರಿಕಲ್ಪನೆಯೊಂದಿಗೆ ಮುನ್ನುಗ್ಗುತ್ತಿರುವ ಸಂದರ್ಭದಲ್ಲಿ ಒಂದು ರಾಷ್ಟ್ರದಲ್ಲಿರುವ ವೈವಿಧ್ಯದ ಬಗ್ಗೆ ಗಮನಹರಿಸುವ ಅವಕಾಶವನ್ನು ಕಳೆದುಕೊಳ್ಳಬಾರದು ಎಂದು ನಿವೃತ್ತ ಚುನಾವಣಾ ಆಯುಕ್ತರಾದ ಎಸ್.ವೈ.ಖುರೇಶಿ ಅಭಿಪ್ರಾಯಪಟ್ಟರು.

'ಪ್ರಜಾಪ್ರಭುತ್ವ, ಚುನಾವಣೆ ಮತ್ತು ನಾಗರಿಕತೆ' ಗೋಷ್ಠಿಯಲ್ಲಿ ಮಾತನಾಡಿ, 'ಭಾರತೀಯ ಪ್ರಜಾಪ್ರಭುತ್ವದಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಗ್ರಾಮ ಪಂಚಾಯಿತಿಗೆ ಪ್ರತ್ಯೇಕವಾದ, ವಿಭಿನ್ನ ರೀತಿಯ ಅಧಿಕಾರವಿದೆ. ಒಂದು ರಾಜ್ಯದ ಸಮಸ್ಯೆಯು ಮತ್ತೊಂದು ರಾಜ್ಯದಲ್ಲಿ ಇರುವುದಿಲ್ಲ. ಗ್ರಾಮ ಪಂಚಾಯಿತಿಯಲ್ಲಿ ಎದುರಾಗುವ ಸಮಸ್ಯೆಗಳೇ ಬೇರೆ ರೀತಿಯದ್ದು. ಪ್ರಸ್ತುತ, ಒಂದು ರಾಷ್ಟ್ರ ಒಂದು ಚುನಾವಣೆ ಎಂಬ ಪರಿಕಲ್ಪನೆಯಿಂದ ಚುನಾವಣಾ ವ್ಯವಸ್ಥೆಗೆ ಆಗುವ ಲಾಭಗಳ ಬಗ್ಗೆಯಷ್ಟೇ ಚರ್ಚೆಯಾಗುತ್ತಿದೆಯೇ ಹೊರತು, ಅದು ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹೇಗೆ ಬಲಪಡಿಸುತ್ತದೆ ಎಂಬ ನಿಟ್ಟಿನಲ್ಲಿ ಚರ್ಚೆಗಳು ನಡೆಯುತ್ತಿಲ್ಲ. ಅಂತಿಮವಾಗಿ ಪ್ರಜಾಪ್ರಭುತ್ವವು ಜನರಿಂದ ಜನರಿಗಾಗಿ ರೂಪುಗೊಂಡ ವ್ಯವಸ್ಥೆ ಎಂಬುದನ್ನು ನಾವು ಮರೆಯಬಾರದು' ಎಂದು ಹೇಳಿದರು. ಹಿರಿಯ ಪತ್ರಕರ್ತ ಗಿರೀಶ್ ಕುಬೇರ್ ಈ ಮಾತಿಗೆ ಸಹಮತ ವ್ಯಕ್ತಪಡಿಸಿ, ಸಂಸದರೂ ಸೇರಿ ಪ್ರಧಾನಿಯನ್ನು ಆಯ್ಕೆ ಮಾಡುವುದು ಪ್ರಜಾಪ್ರಭುತ್ವದ ಲಕ್ಷಣ ಎನ್ನುವುದನ್ನು ನೆನಪಿನಲ್ಲಿಡಬೇಕು' ಎಂದರು.

ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ನಡೆಯುವ ರಾಜಕೀಯ ಚಳವಳಿಗಳಿಗೆ ಏಕರಾಷ್ಟ್ರ ಏಕ ಚುನಾವಣೆ ತೊಡಕಾದೀತು ಎಂದು ರಾಜಕೀಯ ವಿಜ್ಞಾನಿ ಯಾಶಾ ಮಾಂಕಾ ಅಭಿಪ್ರಾಯಟ್ಟರು.

ಬೂಕರ್ ಪ್ರಶಸ್ತಿ ವಿಜೇತ ಕೃತಿ 'ದ ಪ್ರೊಫೆಟ್ ಸಾಂಗ್' ನ ಲೇಖಕ ಪೌಲ್ ಲಿಂಚ್ ಅವರು ತಮ್ಮ ಪುಸ್ತಕದ ಕುರಿತು ಮಾತನಾಡಿದ ಗೋಷ್ಠಿಯಲ್ಲಿಯೂ ಪ್ರಜಾಪ್ರಭುತ್ವ ಮತ್ತು ನಿರಂಕುಶ ಪ್ರಭುತ್ವಕ್ಕೆ ಸಂಬಂಧಿಸಿದ ಮಾತುಗಳು ಪ್ರಸ್ತಾಪವಾದವು. ಒಂದು ದೇಶದ ಸಾಮಾಜಿಕ ವ್ಯವಸ್ಥೆಯು ಹೇಗೆ ನಿಧಾನವಾಗಿ ನಿರಂಕುಶವಾಗುತ್ತ ಸಾಗುತ್ತದೆ ಎಂಬುದನ್ನು ಗಮನಿಸಿಯೇ ಈ ಕೃತಿಯನ್ನು ಬರೆದಿರುವೆ. ನಾಪತ್ತೆಯಾದವರ ಸುಳಿವಿಲ್ಲದೇ ಅವರ ಕುಟುಂಬಗಳು ಹೇಗೆ ಬಳಲುತ್ತವೆ ಎಂಬ ವಿಷಯ ಆಧರಿಸಿದ ಕಾದಂಬರಿಯಿದು ಎಂದು ಹೇಳಿದರು.

ಕುಮಾರ ಗಂಧರ್ವರ ಕೃತಿಗಳ ಮುದ

ನಗರದ ಹೋಟೆಲ್ ಕ್ಲಾರ್ಕ್ಸ್ ಅಮೀರ್‌ನಲ್ಲಿ ಗುರುವಾರ ಸುದೀರ್ಘ ಶಂಖನಾದದ ಹಿನ್ನೆಲೆಯಲ್ಲಿ 'ಜೈಪುರ್ ಲಿಟರೇಚರ್ ಫೆಸ್ಟಿವಲ್'ಗೆ ರಾಜಸ್ಥಾನದ ಉಪಮುಖ್ಯಮಂತ್ರಿ ದಿಯಾ ಕುಮಾರಿ ಚಾಲನೆ ನೀಡಿದರು. ಇದಕ್ಕೂ ಮುನ್ನ ಪ್ರಸಿದ್ಧ ಗಾಯಕ ಪಂಡಿತ್ ಕುಮಾರ್ ಗಂಧರ್ವ ಅವರ ಜನ್ಮ ಶತಮಾನ ವರ್ಷದ ಹಿನ್ನೆಲೆಯಲ್ಲಿ ಅವರ ಮಗಳಾದ ಕಲಾಪಿನಿ ಕೋಮ್ಕಲಿ ಸಂಗೀತ ಕಛೇರಿ ನಡೆಸಿಕೊಟ್ಟರು. ಕಿಕ್ಕಿರಿದ ಶ್ರೋತೃ ಸಮೂಹವು, ಕುಮಾರ ಗಂಧರ್ವ ಅವರು ಹಾಡಿದ್ದ ಪ್ರಸಿದ್ಧ ಕಬೀರರ ಕೃತಿಗಳನ್ನು ಮತ್ತೆ ಹಾಡುವಂತೆ ಕೇಳಿ, ಆನಂದಿಸಿತು. ಬಳಿಕ ಕವಿ ಗುಲ್ಜಾರ್ ಅವರ ಮಾತು, ಶಾಯರಿಗಳು ವಾತಾವರಣಕ್ಕೆ ಕಾವ್ಯದ ಸೊಬಗನ್ನು ತುಂಬಿದವು.

ಪೊಲೀಸರ ನಿಯಂತ್ರಣದಲ್ಲಿ ಪಿಟಿಐ ಕಚೇರಿ: ವರದಿ

ಇಮ್ರಾನ್ ಪಕ್ಷದ ಕಚೇರಿಯಲ್ಲಿ ಶೋಧ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ತೆಹ್ರೀಕ್–ಎ–ಇನ್ಸಾಫ್ (ಪಿಟಿಐ) ಪಕ್ಷದ ಆಡಳಿತ ಕಚೇರಿಯಲ್ಲಿ ಪೊಲೀಸರು ಮತ್ತು ಭದ್ರತಾ ಸಿಬ್ಬಂದಿ ಶೋಧ ಕೈಗೊಂಡಿದ್ದಾರೆ ಎಂದು 'ದಿ ಡಾನ್' ದಿನಪತ್ರಿಕೆ ಗುರುವಾರ ವರದಿ ಮಾಡಿದೆ.

'ಮಫ್ತಿಯಲ್ಲಿದ್ದ ಪೊಲೀಸರು ಕಚೇರಿಯೊಳಗೆ ಪ್ರವೇಶಿಸಿ, ಇಡೀ ಆವರಣವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡಿದ್ದಾರೆ. ಪಕ್ಷದ ಸದಸ್ಯರು ಕಚೇರಿ ಪ್ರವೇಶಿಸುವುದಕ್ಕೆ ನಿರ್ಬಂಧ ಹೇರಿದ್ದಾರೆ' ಎಂದು ವರದಿ ತಿಳಿಸಿದೆ.

ತೋಷಖಾನ ಭ್ರಷ್ಟಾಚಾರ ಪ್ರಕರಣದಲ್ಲಿ ಇಮ್ರಾನ್ ಮತ್ತು ಅವರ ಪತ್ನಿ ಬುಶ್ರಾ ಬೀಬಿ ಅವರಿಗೆ ಪಾಕಿಸ್ತಾನದ ನ್ಯಾಯಾಲಯವೊಂದು ಬುಧವಾರ 14 ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು. ಅದರ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಇಸ್ಲಾಮಾಬಾದ್‌ನ ಸೆಕ್ಟರ್ ಜಿ–8ನಲ್ಲಿ ಬುಧವಾರ ಪಿಟಿಐ ಪಕ್ಷದ ಸಭೆ ಆಯೋಜಿಸಲಾಗಿತ್ತು. ಅದಕ್ಕೂ ಮುನ್ನ ಪೊಲೀಸರು ಕಚೇರಿಯನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡಿದ್ದಾರೆ. ಆದರೂ ಪಿಟಿಐ ಪಕ್ಷವು ವರ್ಚುವಲ್ ಆಗಿ ಸಭೆಯನ್ನು ನಡೆಸಿದೆ ಎಂದು ಮೂಲಗಳು ಹೇಳಿವೆ.

ಶೋಧ ಕೈಗೊಂಡಿಲ್ಲ: ಪಿಟಿಐ ಕಚೇರಿಯಲ್ಲಿ ಶೋಧ ನಡೆಸಲಾಗಿದೆ ಎಂಬ ವರದಿಯನ್ನು ಇಸ್ಲಾಮಾಬಾದ್ ಪೊಲೀಸರು ಅಲ್ಲಗಳೆದಿದ್ದಾರೆ.

'ಮ್ಯಾಜಿಸ್ಟ್ರೇಟ್ ಅವರ ಅನುಮತಿ ಇಲ್ಲದೆ ಶೋಧ ಕೈಗೊಳ್ಳಲು ಸಾಧ್ಯವಿಲ್ಲ. ಪಿಟಿಐ ಕಚೇರಿಯಲ್ಲಿ ಶೋಧ ನಡೆಸುವಂತೆ ನಮಗೆ ಯಾವುದೇ ಆದೇಶ ಬಂದಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಇಮ್ರಾನ್ ಮತ್ತು ಅವರ ಪತ್ನಿಗೆ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿದೆ. ತೀರ್ಪನ್ನು ವಿರೋಧಿಸಿ ಪಿಟಿಐ ಪಕ್ಷದಿಂದ ಪ್ರತಿಭಟನೆ ನಡೆಯುವ ಸಾಧ್ಯತೆಯಿತ್ತು. ಕಚೇರಿಗೆ ಭದ್ರತೆ ಒದಗಿಸಲು ಪೊಲೀಸರು ಅಲ್ಲಿಗೆ ತೆರಳಿದ್ದಾರೆ. ಕಚೇರಿಯ ಒಳಗೆ ಪ್ರವೇಶಿಸಿಲ್ಲ' ಎಂದಿದ್ದಾರೆ.

ಅರ್ಜಿ ವಾಪಸ್ ಕಳುಹಿಸಿದ 'ಸುಪ್ರೀಂ'

ಫೆಬ್ರುವರಿ 8ರಂದು ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸಲು ತಮಗೆ ಅವಕಾಶ ನಿರಾಕರಿಸುವುದನ್ನು ಪ್ರಶ್ನಿಸಿ ಇಮ್ರಾನ್ ಸಲ್ಲಿಸಿದ್ದ ಅರ್ಜಿಯನ್ನು ಪಾಕಿಸ್ತಾನದ ಸುಪ್ರೀಂ ಕೋರ್ಟ್, ಅವರಿಗೇ ವಾಪಸ್ ಮಾಡಿದೆ.

'ಇಮ್ರಾನ್ ಸಲ್ಲಿಸಿರುವ ಅರ್ಜಿಯು ಅಪೂರ್ಣವಾಗಿರುವ ಕಾರಣ ವಾಪಸ್ ಕಳುಹಿಸಿದೆ. ಪೂರ್ಣಗೊಳಿಸಿ ಸಲ್ಲಿಸುವಂತೆ ಸೂಚಿಸಿದೆ' ಎಂದು 'ದಿ ಡಾನ್' ಪತ್ರಿಕೆ ಗುರುವಾರ ವರದಿ ಮಾಡಿದೆ.

ಮುಂಬರುವ ಚುನಾವಣೆಯಲ್ಲಿ ಲಾಹೋರ್ ಮತ್ತು ಮಿಯಾನ್‌ವಾಲಿ ಕ್ಷೇತ್ರಗಳಿಂದ ಸ್ಪರ್ಧಿಸಲು ಇಮ್ರಾನ್ ಸಲ್ಲಿಸಿದ್ದ ನಾಮಪತ್ರಗಳನ್ನು ಚುನಾವಣಾ ಆಯೋಗ ತಿರಸ್ಕರಿಸಿತ್ತು.

ಭಾರತ– ಇಂಗ್ಲೆಂಡ್ ಎರಡನೇ ಟೆಸ್ಟ್ ಇಂದಿನಿಂದ • ಹೊಸಪ್ರತಿಭೆಗಳ ಮೇಲೆ ನಿರೀಕ್ಷೆಯ ಭಾರ

ರೋಹಿತ್ ಶರ್ಮಾ ಪಡೆಗೆ ಅಗ್ನಿಪರೀಕ್ಷೆ

ಅಭ್ಯಾಸದಲ್ಲಿ ತೊಡಗಿರುವ ಭಾರತ ತಂಡದ ಯಶಸ್ವಿ ಜೈಸ್ವಾಲ್ –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ವಿಶಾಖಪಟ್ಟಣ: ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರ ಮುಂದೆ ಈಗ ಹಲವು ಸವಾಲುಗಳಿವೆ.

ಅನುಭವಿ ಆಟಗಾರರ ಗೈರುಹಾಜರಿಯಲ್ಲಿ ಹೊಸ ಹುಡುಗರ ದಂಡು ಕಟ್ಟಿಕೊಂಡು ಇಂಗ್ಲೆಂಡ್ ವಿರುದ್ಧ ಶುಕ್ರವಾರ ಆರಂಭವಾಗುವ ಎರಡನೇ ಟೆಸ್ಟ್ ಪಂದ್ಯದಲ್ಲಿ ಜಯಿಸಬೇಕು. ಇದಲ್ಲದೇ ತಮ್ಮ ಬ್ಯಾಟಿಂಗ್ ಲಯವನ್ನೂ ಕಂಡುಕೊಳ್ಳಬೇಕು. ಪ್ರವಾಸಿ ತಂಡದ 'ಬಾಝ್‌ಬಾಲ್' ತಂತ್ರಕ್ಕೆ ತಿರುಗೇಟು ನೀಡಬೇಕು. ಕಳೆದ 12 ವರ್ಷಗಳಿಂದ ತವರಿನಲ್ಲಿ ಟೆಸ್ಟ್ ಸರಣಿಯಲ್ಲಿ ಸೋಲದಿರುವ ದಾಖಲೆಯನ್ನು ಮುಂದುವರಿಸಬೇಕು. ಹೀಗೆ ಸವಾಲುಗಳ ಸಾಲು ಬೆಳೆಯುತ್ತದೆ.

ಐದು ಪಂದ್ಯಗಳ ಸರಣಿಯಲ್ಲಿ ಇಂಗ್ಲೆಂಡ್ ಬಳಗವು ಈಗಾಗಲೇ 1–0 ಮುನ್ನಡೆ ಸಾಧಿಸಿದೆ. ಹೈದರಾಬಾದಿನಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಭಾರತದ ಬ್ಯಾಟರ್‌ಗಳು ಗುರಿ ಸಾಧಿಸಲು ವಿಫಲರಾಗಿದ್ದರು. ಆ ಪಂದ್ಯದಲ್ಲಿ ಉತ್ತಮವಾಗಿ ಆಡಿದ್ದ ಆಲ್‌ರೌಂಡರ್ ರವೀಂದ್ರ ಜಡೇಜ ಮತ್ತು ಕೆ.ಎಲ್. ರಾಹುಲ್ ಅವರು ಗಾಯಗೊಂಡು ಹೊರ ಬಿದ್ದಿದ್ದಾರೆ. ವಿರಾಟ್ ಕೊಹ್ಲಿ ಸರಣಿಯ ಮೊದಲೆರಡೂ ಪಂದ್ಯಗಳಿಂದ 'ರಜೆ' ಪಡೆದಿದ್ದಾರೆ. ಅನುಭವಿ ಬೌಲರ್ ಮೊಹಮ್ಮದ್ ಶಮಿ ಕೂಡ ಇಲ್ಲ. ಈಗ ಹೊಸ ಪ್ರತಿಭೆಗಳ ಪ್ರಯೋಗಕ್ಕೆ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ನಾಯಕ ರೋಹಿತ್ ಸಿದ್ಧವಾಗಿದ್ದಾರೆ.

ನಾಯಕನೊಂದಿಗೆ ಇನಿಂಗ್ಸ್ ಆರಂಭಿಸುವ ಯಶಸ್ವಿ ಜೈಸ್ವಾಲ್, ನಂತರದ ಕ್ರಮಾಂಕದಲ್ಲಿ ಆಡುವ ಶುಭಮನ್ ಗಿಲ್, ಶ್ರೇಯಸ್ ಅಯ್ಯರ್ ತಮ್ಮ ಲಯಕ್ಕೆ ಮರಳಬೇಕಿದೆ. ಮುಂಬೈನ ಸರ್ಫರಾಜ್ ಖಾನ್ ಮತ್ತು ಮಧ್ಯಪ್ರದೇಶದ ರಜತ್ ಪಾಟೀದಾರ್ ಅವರು ಟೆಸ್ಟ್ ಪಂದ್ಯದಲ್ಲಿ ಪದಾರ್ಪಣೆಯ ಅವಕಾಶ ಪಡೆಯುವ ಸಾಧ್ಯತೆ ಇದೆ. ಅವರು ತಮ್ಮ ದೇಶಿ ಕ್ರಿಕೆಟ್‌ನ ಅಮೋಘ ಆಟವನ್ನು ಇಲ್ಲಿಯೂ ಮುಂದುವರಿಸಿದರೆ ತಂಡಕ್ಕೆ ಲಾಭ ಖಚಿತ.

ವೇಗದ ಬೌಲಿಂಗ್ ಹೊಣೆ ಜಸ್‌ಪ್ರೀತ್ ಬೂಮ್ರಾ ಮೇಲಿದೆ. ಇಲ್ಲಿಯ ಕ್ರೀಡಾಂಗಣವು ಸ್ಪಿನ್ ಬೌಲಿಂಗ್‌ಗೆ ಹೆಚ್ಚು ನೆರವು ನೀಡುವ ಲಕ್ಷಣಗಳಿವೆ. ಆದ್ದರಿಂದ ಆರ್. ಅಶ್ವಿನ್ ಮತ್ತು ಅಕ್ಷರ್ ಪಟೇಲ್ ಅವರ ಹೊಣೆ ಹೆಚ್ಚಲಿದೆ. ಅಶ್ವಿನ್ ಅವರಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ 500 ವಿಕೆಟ್ ಮೈಲುಗಲ್ಲು ತಲುಪಲು ಇನ್ನೂ ನಾಲ್ಕು ವಿಕೆಟ್‌ಗಳ ಅಗತ್ಯವಿದೆ.

ಇನ್ನೊಂದೆಡೆ ಮೊದಲ ಪಂದ್ಯದಲ್ಲಿ ಅಮೋಘ ಜಯ ಸಾಧಿಸಿದ ಸಂತಸದಲ್ಲಿ ಬೆನ್ ಸ್ಟೋಕ್ಸ್ ಬಳಗ ಇದೆ. ತಂಡದ ಅನುಭವಿ ಸ್ಪಿನ್ನರ್ ಜ್ಯಾಕ್ ಲೀಚ್ ಗಾಯಗೊಂಡಿರುವುದರಿಂದ ಹೊಸಬ ಶೋಯಬ್ ಬಷೀರ್ ಅವರಿಗೆ ಅವಕಾಶ ನೀಡಿದೆ. ಅಲ್ಲದೇ ಅನುಭವಿ ಆಟಗಾರ ಜೋ ರೂಟ್ ಬೌಲಿಂಗ್‌ನಲ್ಲಿಯೂ ಮಿಂಚುತ್ತಿರುವುದರಿಂದ ಸ್ಟೋಕ್ಸ್ ಬಳಗದ ಬಲ ಹೆಚ್ಚಿದೆ. ಹೈದರಾಬಾದ್ ಟೆಸ್ಟ್‌ನಲ್ಲಿ ರೂಟ್ ಅವರು 48 ಓವರ್ ಬೌಲಿಂಗ್ ಮಾಡಿದ್ದರು. ಅ ಪಂದ್ಯದಲ್ಲಿ ಮೊದಲ ಇನಿಂಗ್ಸ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ಇಂಗ್ಲೆಂಡ್ ಎರಡನೇ ಇನಿಂಗ್ಸ್‌ನಲ್ಲಿ ಭರ್ಜರಿ ತಿರುಗೇಟು ನೀಡಿತ್ತು. ತಮ್ಮ ಚೊಚ್ಚಲ ಪಂದ್ಯದಲ್ಲಿ ಮಿಂಚಿದ್ದ ಇಂಗ್ಲೆಂಡ್‌ನ ಸ್ಪಿನ್ನರ್ ಟಾಮ್ ಹಾರ್ಟ್ಲಿ ಭಾರತ ತಂಡಕ್ಕೆ ಸೋಲಿನ ರುಚಿ ತೋರಿಸಿದ್ದರು.

ಬೌಲರ್‌ಗಳಿಗೂ ಬ್ಯಾಟಿಂಗ್ ಅಭ್ಯಾಸ!

ಗುರುವಾರ ನೆಟ್ಸ್‌ನಲ್ಲಿ ಭಾರತದ ಬೌಲರ್‌ಗಳಿಗೂ ಬ್ಯಾಟಿಂಗ್ ಪಾಠವನ್ನು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹೇಳಿಕೊಟ್ಟರು. ಅಗ್ರ ಬ್ಯಾಟರ್‌ಗಳು ವಿಫಲರಾದರೆ ಕೆಳಕ್ರಮಾಂಕದ ಆಟಗಾರರಿಂದ ರನ್‌ಗಳು ತಂಡದ ಖಾತೆ ಸೇರಲಿ ಎಂಬ ಯೋಜನೆ ಅವರದ್ದು.

ಅದಕ್ಕಾಗಿಯೇ ಜಸ್‌ಪ್ರೀತ್ ಬೂಮ್ರಾ ಸೇರಿದಂತೆ ಬೌಲರ್‌ಗಳು ನೆಟ್ಸ್‌ನಲ್ಲಿ ಬ್ಯಾಟಿಂಗ್ ತಾಲೀಮು ನಡೆಸಿದರು. ಇನ್ನೊಂದೆಡೆ ರೋಹಿತ್ ಶರ್ಮಾ ಅವರು ತಮ್ಮ ಆರಂಭಿಕ ಜೊತೆಗಾರ ಯಶಸ್ವಿ ಜೈಸ್ವಾಲ್ ಅವರೊಂದಿಗೆ ಬಹಳ ಹೊತ್ತು ಸಮಾಲೋಚನೆ ನಡೆಸಿದರು. ಶುಭಮನ್ ಗಿಲ್ ಅವರಿಗೆ ಕೌಶಲಗಳ ಸುಧಾರಣೆಗೆ ದ್ರಾವಿಡ್ ಮಾರ್ಗದರ್ಶನ ನೀಡಿದರು.

ಸಿರಾಜ್ ಮತ್ತು ಅಶ್ವಿನ್ ಹೆಚ್ಚು ಹೊತ್ತು ಬೌಲಿಂಗ್ ಅಭ್ಯಾಸದಲ್ಲಿ ನಿರತರಾಗಿದ್ದರು.

ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಬೌಲಿಂಗ್ ಅಭ್ಯಾಸ ನಡೆಸಿದರು –ಪಿಟಿಐ ಚಿತ್ರ

ಜಸ್‌ಪ್ರೀತ್ ಬೂಮ್ರಾ

ಮುಖ್ಯಾಂಶಗಳು

- ಅಶ್ವಿನ್ 500ರ ಕ್ಲಬ್ ಸೇರಲು ಬೇಕು ನಾಲ್ಕು ವಿಕೆಟ್
- ಪಿಚ್ ಸ್ಪಿನ್ನರ್‌ಗಳಿಗೆ ನೆರವು ನೀಡುವ ಸಾಧ್ಯತೆ
- ಸರ್ಫರಾಜ್ ಖಾನ್‌ಗೆ ಅವಕಾಶ ನಿರೀಕ್ಷೆ

ಪಂದ್ಯ ಆರಂಭ ಬೆಳಿಗ್ಗೆ 9.30
ನೇರಪ್ರಸಾರ ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ಶ್ರೇಯಸ್ ಅಯ್ಯರ್, ಕೆ.ಎಸ್. ಭರತ್ (ವಿಕೆಟ್‌ಕೀಪರ್), ಧ್ರುವ ಜುರೇಲ್ (ವಿಕೆಟ್ ಕೀಪರ್), ಜಸ್‌ಪ್ರೀತ್ ಬೂಮ್ರಾ(ಉಪನಾಯಕ), ಆರ್. ಅಶ್ವಿನ್, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ಆವೇಶ್ ಖಾನ್, ರಜತ್ ಪಾಟೀದಾರ್, ಸರ್ಫರಾಜ್ ಖಾನ್, ವಾಷಿಂಗ್ಟನ್ ಸುಂದರ್, ಸೌರಭ್ ಕುಮಾರ್.

ಇಂಗ್ಲೆಂಡ್: ಬೆನ್ ಸ್ಟೋಕ್ಸ್ (ನಾಯಕ), ಬೆನ್ ಡಕೆಟ್, ಜ್ಯಾಕ್ ಕ್ರಾಲಿ, ಜೋ ರೂಟ್, ಓಲಿ ಪೋಪ್, ಜಾನಿ ಬೆಸ್ಟೊ, ಬೆನ್ ಫೋಕ್ಸ್ (ವಿಕೆಟ್‌ಕೀಪರ್), ರೆಹಾನ್ ಅಹಮದ್, ಟಾಮ್ ಹಾರ್ಟ್ಲಿ, ಶೋಯಬ್ ಬಷೀರ್, ಜೇಮ್ಸ್ ಆ್ಯಂಡರ್ಸನ್.

ನಿಕಿನ್ ಮುಂದೆ ಕಠಿಣ ಸವಾಲು

ರಣಜಿ ಕ್ರಿಕೆಟ್: ಕರ್ನಾಟಕ– ರೈಲ್ವೇಸ್ ಹಣಾಹಣಿ ಇಂದು

ಸೂರತ್: ಹದಿನೈದು ತಿಂಗಳುಗಳ ಹಿಂದಷ್ಟೇ ಕರ್ನಾಟಕ ತಂಡಕ್ಕೆ ಕಾಲಿಟ್ಟಿದ್ದ 'ಮೈಸೂರು ಹುಡುಗ' ನಿಕಿನ್ ಜೋಸ್ ಶುಕ್ರವಾರ ಲಾಲ್‌ಭಾಯಿ ಕ್ರೀಡಾಂಗಣದಲ್ಲಿ ಆರಂಭವಾಗುವ ರೈಲ್ವೇಸ್ ವಿರುದ್ಧದ ರಣಜಿ ಪಂದ್ಯದಲ್ಲಿ ನಾಯಕತ್ವ ವಹಿಸಲಿದ್ದಾರೆ.

ಈಚೆಗೆ ಅಗರ್ತಲಾದಿಂದ ಸೂರತ್‌ಗೆ ಪ್ರಯಾಣಿಸುವ ವಿಮಾನದಲ್ಲಿ ನಾಯಕ ಮಯಂಕ್ ಅಗರವಾಲ್ ಅವರು ನೀರೆಂದು ಭಾವಿಸಿ ರಾಸಾಯನಿಕ ದ್ರಾವಣವೊಂದನ್ನು ಕುಡಿದು ಅಸ್ವಸ್ಥರಾಗಿದ್ದರು. ಅದರಿಂದಾಗಿ ಅವರು ಅಗರ್ತಲಾದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬೆಂಗಳೂರಿಗೆ ಮರಳಿದ್ದಾರೆ. ಆದ್ದರಿಂದ ಉಪನಾಯಕರಾಗಿದ್ದ ನಿಕಿನ್ ಹೆಗಲಿಗೆ ನಾಯಕತ್ವದ ಹೊಣೆ ಬಿದ್ದಿದೆ.

ತಂಡವು ಆಡಿರುವ ಕಳೆದ ನಾಲ್ಕು ಪಂದ್ಯಗಳಲ್ಲಿ ಎರಡರಲ್ಲಿ ಜಯ ಸಾಧಿಸಿದೆ. ಒಂದು ಡ್ರಾ ಮತ್ತು ಇನ್ನೊಂದರಲ್ಲಿ ಸೋಲನುಭವಿಸಿದೆ. ಇದೇ ಋತುವಿನಲ್ಲಿ ಪದಾರ್ಪಣೆ ಮಾಡಿರುವ ಐವರು ಆಟಗಾರರು ಇದ್ದಾರೆ. ಅಲ್ಲದೆ, ಅನುಭವಿ ಆಟಗಾರರಾಗಿರುವ ಮನೀಷ್ ಪಾಂಡೆ ಮತ್ತು ಆರ್. ಸಮರ್ಥ್ ತಂಡದಲ್ಲಿದ್ದಾರೆ. ಎಲ್ಲರೊಂದಿಗೂ ಸಮನ್ವಯ ಸಾಧಿಸಿಕೊಂಡು ತಂಡವನ್ನು ಗೆಲುವಿನತ್ತ ಮುನ್ನಡೆಸುವ ಸವಾಲು 23 ವರ್ಷದ ನಿಕಿನ್ ಮುಂದಿದೆ.

13 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿರುವ ನಿಕಿನ್ ಖಾತೆಯಲ್ಲಿ 696 ರನ್‌ಗಳಿವೆ. ಇತ್ತೀಚೆಗೆ ಮೈಸೂರಿನಲ್ಲಿ ಗೋವಾ ಎದುರು ಅವರು ಶತಕ ಗಳಿಸಿದ್ದರು. ಆದರೆ ಅಗರ್ತಲಾದಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದರು.

ಆ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಕಿಶನ್ ಬೆದರೆ ಎರಡೂ ಇನಿಂಗ್ಸ್‌ಗಳಲ್ಲಿ ಗಮನ ಸೆಳೆಯುವಂತಹ ಆಟವಾಡಿದ್ದರು. ಇದೀಗ ಮಯಂಕ್ ಅನುಪಸ್ಥಿತಿಯಲ್ಲಿ ಸಮರ್ಥ್ ಅವರೊಂದಿಗೆ ಡೇಗಾ ನಿಶ್ಚಲ್ ಅವರು ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತವಾಗಿದೆ. ಉಳಿದಂತೆ ವೇಗಿಗಳು ಉತ್ತಮ ಲಯದಲ್ಲಿದ್ದಾರೆ. ಆದರೆ ಸ್ಪಿನ್ ವಿಭಾಗದಲ್ಲಿ ಅನುಭವದ ಕೊರತೆ ಇದೆ.

ಬೌಲರ್‌ಗಳನ್ನು ಪರಿಣಾಮಕಾರಿಯಾಗಿ ದುಡಿಸಿಕೊಳ್ಳಬೇಕಾದ ಸವಾಲು ನಿಕಿನ್ ಮುಂದಿದೆ. ಏಕೆಂದರೆ ರೈಲ್ವೇಸ್ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ.

ನಾಲ್ಕು ಪಂದ್ಯಗಳಲ್ಲಿ ಆಡಿರುವ ರೈಲ್ವೇಸ್ ಎರಡರಲ್ಲಿ ಡ್ರಾ ಮಾಡಿಕೊಂಡಿದೆ. ಒಂದು ಸೋತಿದೆ. ಕಳೆದ ಪಂದ್ಯದಲ್ಲಿ ಗುಜರಾತ್ ವಿರುದ್ಧ ಜಯಿಸಿತ್ತು. ಅದರಲ್ಲಿ ಆಶುತೋಷ್ ಶರ್ಮಾ ಶತಕ ಹೊಡೆದಿದ್ದರು. ಯುವರಾಜ್ ಸಿಂಗ್ ಐದು ವಿಕೆಟ್ ಗಳಿಸಿದ್ದರು. ಇದರಿಂದ ಭರ್ತಿ ಆತ್ಮವಿಶ್ವಾಸದಲ್ಲಿರುವ ತಂಡವು ಕರ್ನಾಟಕಕ್ಕೆ ಕಠಿಣ ಪೈಪೋಟಿಯೊಡ್ಡಲು ಸಿದ್ಧವಾಗಿದೆ.

ಇಲ್ಲಿಯ ಪಿಚ್ ಸ್ಪರ್ಧಾತ್ಮಕವಾಗಿದೆ. ದಿನಗಳೆದಂತೆ ಸ್ಪಿನ್ನರ್‌ಗಳಿಗೂ ನೆರವಾಗಬಹುದು. ನಮ್ಮ ತಂಡವು ಸಮತೋಲನದಿಂದ ಕೂಡಿದೆ. ಸಮರ್ಥ್ ಮತ್ತು ನಿಶ್ಚಲ್ ಇನಿಂಗ್ಸ್ ಆರಂಭಿಸುವರು.

ಪಿ.ವಿ. ಶಶಿಕಾಂತ್, ಕರ್ನಾಟಕದ ಕೋಚ್

ನಿಕಿನ್ ಜೋಸ್

ತಂಡಗಳು: ಕರ್ನಾಟಕ: ನಿಕಿನ್ ಜೋಸ್ (ನಾಯಕ), ಆರ್. ಸಮರ್ಥ್, ಮನೀಷ್ ಪಾಂಡೆ, ಶರತ್ ಶ್ರೀನಿವಾಸ್ (ವಿಕೆಟ್ ಕೀಪರ್), ಕೆ.ವಿ. ಅನೀಶ್, ವೈಶಾಖ ವಿಜಯಕುಮಾರ್, ವಿ. ಕೌಶಿಕ್, ಕೆ. ಶಶಿಕುಮಾರ್, ಸುಜಯ್ ಸತೇರಿ (ವಿಕೆಟ್‌ಕೀಪರ್), ಡಿ. ನಿಶ್ಚಲ್, ವಿದ್ವತ್ ಕಾವೇರಪ್ಪ, ಎಂ. ವೆಂಕಟೇಶ್, ಕಿಶನ್ ಬೆದರೆ, ಎ.ಸಿ. ರೋಹಿತ್ ಕುಮಾರ್, ಅಭಿಲಾಷ್ ಶೆಟ್ಟಿ, ಹಾರ್ದಿಕ್ ರಾಜ್.

ರೈಲ್ವೇಸ್: ಪ್ರಥಮ್ ಸಿಂಗ್ (ನಾಯಕ), ಅಭಿಷೇಕ್ ಸ್ವಾನ್ ಅಹುಜಾ (ವಿಕೆಟ್‌ಕೀಪರ್), ವಿವೇಕ್ ಸಿಂಗ್, ಅರಿಂದಮ್ ಘೋಷ್, ಮೊಹಮ್ಮದ್ ಸೈಫ್, ಕರ್ಣ ಶರ್ಮಾ, ಶಿವಂ ಚೌಧರಿ, ಆಶುತೋಷ್ ಶರ್ಮಾ, ಹಿಮಾಂಶು ಸಂಗ್ವಾನ್, ಯುವರಾಜ್ ಸಿಂಗ್, ಆಕಾಶ್ ಪಾಂಡೆ, ರಾಹುಲ್ ಶರ್ಮಾ, ಕುನಾಲ್ ಯಾದವ್, ಆದರ್ಶ್ ಸಿಂಗ್, ರಾಜ್ ಚೌಧರಿ, ನಿಶಾಂತ್ ಕುಶ್ವಾಹ, ಸಾಹೆಬ್ ಯುವರಾಜ್.

ಪಂದ್ಯ ಆರಂಭ: ಬೆಳಿಗ್ಗೆ 9.30
(ಮಾಹಿತಿ: ಬಿಸಿಸಿಐ ಡಾಟ್ ಟಿವಿ ವೆಬ್‌ಸೈಟ್)

ತಮಿಳುನಾಡು ವಿರುದ್ಧ ಪಂದ್ಯಕ್ಕೆ ಮಯಂಕ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೆನ್ನೈನಲ್ಲಿ ಇದೇ 9ರಿಂದ ತಮಿಳುನಾಡು ವಿರುದ್ಧ ನಡೆಯಲಿರುವ ರಣಜಿ ಕ್ರಿಕೆಟ್ ಪಂದ್ಯದ ವೇಳೆಗೆ ಮಯಂಕ್ ಅಗರವಾಲ್ ಸಂಪೂರ್ಣ ಚೇತರಿಸಿಕೊಂಡು ಕಣಕ್ಕಿಳಿಯುವ ನಿರೀಕ್ಷೆ ಇದೆ.

ಮೂರು ದಿನಗಳ ಹಿಂದೆ ಅಗರ್ತಲಾದಿಂದ ಸೂರತ್‌ಗೆ ತೆರಳುವ ವಿಮಾನದಲ್ಲಿ ಮಯಂಕ್ ಅವರು ನೀರು ಎಂದು ಭಾವಿಸಿ ರಾಸಾಯನಿಕ ದ್ರಾವಣವೊಂದನ್ನು ಸೇವಿಸಿ ಅಸ್ವಸ್ಥರಾಗಿದ್ದರು. ನಂತರ ಅವರನ್ನು ಅಗರ್ತಲಾದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಬಾಯಿ ಮತ್ತು ಗಂಟಲಿನಲ್ಲಿ ಬೊಬ್ಬೆಗಳಾಗಿದ್ದವು. ಬುಧವಾರ ಅವರು ಬೆಂಗಳೂರಿಗೆ ಮರಳಿ ತಮ್ಮ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ವೈದ್ಯರ ಸಲಹೆ ಮೇರೆಗೆ ಔಷಧೋಪಚಾರ ಪಡೆಯುತ್ತಿದ್ದಾರೆ.

ಮಯಂಕ್

'ಬಾಯಿಯಲ್ಲಿ ಬೊಬ್ಬೆಗಳೆದ್ದ ಕಾರಣ ಆಹಾರ ಸೇವನೆ ಕಷ್ಟವಾಗಿತ್ತು. ಚಿಕಿತ್ಸೆಗೆ ವೇಗವಾಗಿ ಸ್ಪಂದಿಸುತ್ತಿರುವ ಮಯಂಕ್ ಚೇತರಿಸಿ ಕೊಳ್ಳುತ್ತಿದ್ದಾರೆ. ದ್ರವಾಹಾರವನ್ನೂ ತೆಗೆದುಕೊಳ್ಳುತ್ತಿದ್ದಾರೆ. ಇನ್ನೊಂದು ನಾಲ್ಕೈದು ದಿನಗಳಲ್ಲಿ ಸಂಪೂರ್ಣ ಗುಣಮುಖ ರಾಗುವ ಭರವಸೆ ಇದೆ. ಚೆನ್ನೈನಲ್ಲಿ ನಡೆಯುವ ಪಂದ್ಯದಲ್ಲಿ ಆಡಲು ಅವರು ಸಿದ್ಧರಾಗುವುದು ಬಹುತೇಕ ಖಚಿತ' ಎಂದು ಮಯಂಕ್ ಅವರ ಆಪ್ತ ಮೂಲಗಳು ತಿಳಿಸಿವೆ.

ಯು–19 ಕ್ರಿಕೆಟ್: ಸೆಮಿಗೆ ಲಗ್ಗೆಯಿಡಲು ಭಾರತ ಸಜ್ಜು

ಬ್ಲೂಮ್‌ಫೊಂಟೇನ್ (ಪಿಟಿಐ): ನೇಪಾಳ ತಂಡದ ವಿರುದ್ಧ ಶುಕ್ರವಾರ ನಡೆಯಲಿರುವ ಸೂಪರ್ ಸಿಕ್ಸ್ ಹಂತದ ಕೊನೆಯ ಪಂದ್ಯದಲ್ಲಿ ಜಯಗಳಿಸುವ ಮೂಲಕ ಭಾರತ ತಂಡವು ಐಸಿಸಿ 19 ವರ್ಷದೊಳಗಿನವರ ಏಕದಿನ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ಗೆ ಭರ್ಜರಿ ಯಾಗಿ ಲಗ್ಗೆಯಿಡಲು ತವಕದಿಂದ ಇದೆ.

ಎರಡು ಸೂಪರ್ ಸಿಕ್ಸ್ ಗುಂಪುಗಳಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಈ ಟೂರ್ನಿಯ ಸೆಮಿಫೈನಲ್ ತಲುಪಲಿವೆ. ನೇಪಾಳ ಇದುವರೆಗೆ ಒಂದೂ ಜಯಗಳಿಸಿಲ್ಲ.

ಉದಯ್ ಸಹಾರನ್ ನೇತೃತ್ವದ ಪ್ರಬಲ ತಂಡ ಮೂರೂ ಪಂದ್ಯಗಳಲ್ಲಿ ಜಯಗಳಿಸಿದ್ದು ಆರು ಪಾಯಿಂಟ್ಸ್ ಗಳಿಸಿದೆ. ಭಾರತ ತಂಡಕ್ಕೆ ಆಯ್ಕೆಯಾಗಿರುವ ಸರ್ಫರಾಜ್ ಖಾನ್ ಅವರ ಸೋದರ ಮುಶೀರ್ ಖಾನ್ ಟೂರ್ನಿಯಲ್ಲಿ 325 ರನ್ ಗಳಿಸಿದ್ದು, ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ನ್ಯೂಜಿಲೆಂಡ್ ವಿರುದ್ಧ ಅವರು 126 ಎಸೆತಗಳಲ್ಲಿ 131 ರನ್ ಬಾರಿಸಿದ್ದು ಒಳ್ಳೆಯ ಲಯದಲ್ಲಿದ್ದಾರೆ. ಇವರೊಂದಿಗೆ ನಾಯಕ ಸಹಾರನ್, ವಿಕೆಟ್ ಕೀಪರ್ ಅರವಳ್ಳಿ ಅವಿನಾಶ್, ಅರ್ಷಿನ್ ಕುಲಕರ್ಣಿ ಕೂಡ ಕೆಲವು ಪಂದ್ಯಗಳಲ್ಲಿ ಮಿಂಚಿದ್ದಾರೆ.

ಎಡಗೈ ಸ್ಪಿನ್ನರ್ ಸೌಮಿ ಕುಮಾರ್ ಪಾಂಡೆ ಆ ಪಂದ್ಯದಲ್ಲಿ ನಾಲ್ಕು ವಿಕೆಟ್ ಪಡೆದು ಮಿಂಚಿದ್ದರು. ಬೌಲರ್‌ಗಳ ಯಾದಿಯಲ್ಲಿ ಅವರು ಪಾಕ್‌ನ ಉಬೇದ್ ಶಾ ಮತ್ತು ದಕ್ಷಿಣ ಆಫ್ರಿಕಾ ಕ್ವೆನಾ ಮಫಕಾ ಜತೆ (12 ವಿಕೆಟ್) ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 1.30

ಥಾಯ್ಲೆಂಡ್ ಮಾಸ್ಟರ್ಸ್ ಬ್ಯಾಡ್ಮಿಂಟನ್

ಮಿಥುನ್‌ಗೆ ಮಣಿದ ಶ್ರೀಕಾಂತ್

ಬ್ಯಾಂಕಾಕ್ (ಪಿಟಿಐ): ಭಾರತದ ಮಿಥುನ್ ಮಂಜುನಾಥ್, ಥಾಯ್ಲೆಂಡ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ, ಸ್ವದೇಶದ ಕಿದಂಬಿ ಶ್ರೀಕಾಂತ್ ಅವರಿಗೆ ಸೋಲಿನ ಆಘಾತ ನೀಡಿ ಗುರುವಾರ ಎಂಟರ ಘಟ್ಟ ತಲುಪಿದರು. ಆರನೇ ಶ್ರೇಯಾಂಕದ ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಮಹಿಳೆಯರ ಡಬಲ್ಸ್‌ನಲ್ಲಿ ಎಂಟರ ಘಟ್ಟಕ್ಕೆ ಮುನ್ನಡೆಯಿತು.

ಮೂರು ಗೇಮ್‌ಗಳ ಪಂದ್ಯದಲ್ಲಿ ಕನ್ನಡಿಗ ಮಿಥುನ್ ಮಂಜುನಾಥ್ ಅವರಿಗೆ 21–9, 13–21, 21–17 ರಿಂದ ತಮಗಿಂತ ಮೇಲಿನ ಕ್ರಮಾಂಕದ ಶ್ರೀಕಾಂತ್ ಅವರನ್ನು ಸೋಲಿಸಲು 54 ನಿಮಿಷ ಬೇಕಾಯಿತು. ಹಾಲಿ ರಾಷ್ಟ್ರೀಯ ಚಾಂಪಿಯನ್ ಆಗಿರುವ ಮಿಥುನ್, ವಿಶ್ವ ರ‍್ಯಾಂಕಿಂಗ್‌ನಲ್ಲಿ 63ನೇ ಸ್ಥಾನದಲ್ಲಿದ್ದಾರೆ. ಅವರು ಎಂಟರ ಘಟ್ಟದ ಪಂದ್ಯದಲ್ಲಿ ನೆದರ್ಲೆಂಡ್ಸ್‌ನ ಮಾರ್ಕ್ ಕ್ಯಾಲಿಯೌ ಅವರನ್ನು ಎದುರಿಸಲಿದ್ದಾರೆ.

ಅರ್ಹತಾ ಸುತ್ತನ್ನು ದಾಟಿ ಬಂದಿದ್ದ ಭಾರತದ ಎಸ್.ಶಂಕರ್ ಮುತ್ತುಸಾಮಿ ಸುಬ್ರಮಣಿಯನ್ ಅವರ ಸವಾಲೂ ಅಂತ್ಯಗೊಂಡಿತು. ಚೀನಾ ತೈಪಿಯ ಚುನ್ ಯಿ ಲಿನ್ 21–9, 21–11 ರಿಂದ ಸುಬ್ರಮಣಿಯನ್ ಅವರನ್ನು ಹಿಮ್ಮೆಟ್ಟಿಸಿದರು.

ಮಿಥುನ್ ಮಂಜುನಾಥ್

ಅಶ್ಮಿತಾ ಚಾಲಿಹಾ ಮಹಿಳಾ ಸಿಂಗಲ್ಸ್ 16ರ ಸುತ್ತಿನ ಪಂದ್ಯದಲ್ಲಿ ಚೀನಾ ತೈಪಿಯ ಯು ಪೊ ಪೈ ಅವರನ್ನು 21–12, 15–21, 21–17 ರಲ್ಲಿ ಸೋಲಿಸಿದರು. ಆದರೆ ಭಾರತದ ಇನ್ನೋರ್ವ ಆಟಗಾರ್ತಿ ಮಾಳವಿಕಾ ಬನ್ಸೋಡ್ ಹೊರಬಿದ್ದರು. ಅವರು 22–24, 7–21ರಲ್ಲಿ ಸ್ಥಳೀಯ ಆಟಗಾರ್ತಿ ಬುಸಾನನ್ ಒಂಗ್ಬಮ್‌ರುಂಗ್‌ಫನ್ ಅವರಿಗೆ ಶರಣಾದರು.

ಮುನ್ನಡೆ: ಟ್ರಿಸಾ ಜೋಳಿ ಮತ್ತು ಗಾಯತ್ರಿ ಅವರು ಡಬಲ್ಸ್ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಸ್ವದೇಶದ ತನಿಶಾ ಕ್ರಾಸ್ಟೊ–ಅಶ್ವಿನಿ ಪೊನ್ನಪ್ಪ ಅವರನ್ನು 21–15, 24–22 ರಿಂದ ಸೋಲಿಸಿದರು. ಅವರು ಎಂಟರ ಘಟ್ಟದ ಪಂದ್ಯದಲ್ಲಿ ಇಂಡೊನೇಷ್ಯಾದ ಫ್ಯಾಬ್ರಿಯಾನ ದ್ವಿಪುಜಿ ಕುಸುಮಾ– ಅಮೇಲಿಯಾ ಪ್ರಥ್ವಿ ಅವರನ್ನು ಎದುರಿಸಲಿದ್ದಾರೆ.

ಬಜೆಟ್: ಕ್ರೀಡಾ ಸಚಿವಾಲಯಕ್ಕೆ ₹45 ಕೋಟಿ ಹೆಚ್ಚುವರಿ ಹಂಚಿಕೆ

ನವದೆಹಲಿ (ಪಿಟಿಐ): ಕ್ರೀಡಾ ಸಚಿವಾಲಯಕ್ಕೆ, ಗುರುವಾರ ಮಂಡಿಸಲಾದ ಕೇಂದ್ರದ ಮಧ್ಯಂತರ ಬಜೆಟ್‌ನಲ್ಲಿ ₹3,432.32 ಕೋಟಿ ಹಂಚಿಕೆ ಮಾಡಲಾಗಿದ್ದು, ಇದು ಕಳೆದ ವರ್ಷಕ್ಕೆ ಹೋಲಿಸಿದರೆ ₹45 ಕೋಟಿ ಹೆಚ್ಚು.

ಈ ಹಿಂದಿನ ಬಜೆಟ್‌ನಲ್ಲಿ ₹3,396 ಕೋಟಿ ಹಂಚಿಕೆ ಮಾಡಲಾಗಿತ್ತು. ಕ್ರೀಡಾ ಸಚಿವಾಲಯದ ಪ್ರಮುಖ ಯೋಜನೆಯಾದ ಖೇಲೊ ಇಂಡಿಯಾಕ್ಕೆ ₹900 ಕೋಟಿ ಹಂಚಿಕೆ ಮಾಡಲಾಗಿದೆ. ಇದು ಈ ಹಿಂದಿನ ಬಜೆಟ್‌ನಲ್ಲಿ ಮೀಸಲಿಟ್ಟಿದ್ದ ಮೊತ್ತಕ್ಕಿಂತ ₹20 ಕೋಟಿ ಹೆಚ್ಚು.

ಕ್ರೀಡಾಪಟುಗಳಿಗೆ ಶಿಬಿರಗಳನ್ನು ನಡೆಸುವ, ಅಥ್ಲೀಟುಗಳಿಗೆ ಮೂಲ ಸೌಕರ್ಯ, ಕ್ರೀಡಾ ಸಲಕರಣೆ ಪೂರೈಸುವ ಮತ್ತು ಕೋಚ್‌ಗಳ ನೇಮಕ ಮಾಡುವ ಭಾರತ ಕ್ರೀಡಾ ಪ್ರಾಧಿಕಾರಕ್ಕೆ ಹಂಚಿಕೆಯಾದ ಮೊತ್ತದಲ್ಲಿ ಕಳೆದ ಬಾರಿಗಿಂತ ₹26.83 ಕೋಟಿ ಏರಿಕೆ ಮಾಡಲಾಗಿದೆ. ಈ ಹಿಂದೆ ₹795.77 ಕೋಟಿ ಹಂಚಿಕೆ ಯಾಗಿತ್ತು.

ಪಿ.ಟಿ.ಉಷಾ

ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ ಘಟಕಕ್ಕೂ ₹22.30 ಕೋಟಿ ಹಂಚಿಕೆ ಮಾಡಲಾಗಿದ್ದು, ಕಳೆದ ಬಾರಿಗಿಂತ (₹21.73) ಸ್ವಲ್ಪ ಹೆಚ್ಚು.

ಉಷಾ ಸ್ವಾಗತ: ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ ಅವರು ಹೆಚ್ಚುವರಿ ಮೊತ್ತದಿಂದ ಅಥ್ಲೀಟುಗಳ ವಿಶೇಷ ತರಬೇತಿ ಕಾರ್ಯಕ್ರಮಗಳಿಗೆ ನೆರವಾಗಲಿದೆ ಎಂದು ಹೇಳಿದ್ದಾರೆ.

ಒಲಿಂಪಿಕ್ ವರ್ಷದಲ್ಲಿ ಕ್ರೀಡಾಪಟುಗಳ ತರಬೇತಿ ಕಾರ್ಯಕ್ರಮಕ್ಕೆ ನೆರವು ಹೆಚ್ಚಿಸಿರುವುದು ಸಕಾರಾತ್ಮಕ ಅಂಶ ಎಂದು ಅವರು ಪಿಟಿಐಗೆ ತಿಳಿಸಿದ್ದಾರೆ.

ಪ್ರೊ ಕಬಡ್ಡಿ: ಹೈದರಾಬಾದ್‌ನಲ್ಲಿ ಫೆ.26ರಿಂದ ಪ್ಲೇಆಫ್ ಪಂದ್ಯಗಳು

ಬೆಂಗಳೂರು: ಪ್ರೊ ಕಬಡ್ಡಿ ಲೀಗ್‌ನ 10ನೇ ಆವೃತ್ತಿಯ ಪ್ಲೇಆಫ್ ಪಂದ್ಯಗಳು ಮತ್ತು ಫೈನಲ್ ಪಂದ್ಯ ಹೈದರಾಬಾದ್‌ನ ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿವೆ.

ಫೆ.28ರಂದು ಸೆಮಿಫೈನಲ್ ಮತ್ತು ಮಾರ್ಚ್ 1ರಂದು ಫೈನಲ್ ನಡೆಯಲಿವೆ. ಲೀಗ್ ಹಂತದಲ್ಲಿ ಮೊದಲೆರಡು ಸ್ಥಾನ ಪಡೆಯುವ ತಂಡಗಳು ನೇರವಾಗಿ ಸೆಮಿಫೈನಲ್ ಪ್ರವೇಶ ಪಡೆಯಲಿವೆ.

ಮೂರನೇ, ನಾಲ್ಕನೇ, ಐದನೇ ಮತ್ತು ಆರನೇ ಸ್ಥಾನ ಪಡೆಯುವ ತಂಡಗಳು ಫೆ.26ರಂದು ಎಲಿಮಿನೇಷನ್ ಹಂತದಲ್ಲಿ ಸೆಣಸಲಿವೆ. ಮೂರನೇ ಸ್ಥಾನ ಪಡೆದ ತಂಡವು ಆರನೇ ಸ್ಥಾನ ಪಡೆದ ತಂಡವನ್ನು ಎಲಿಮಿನೇಟರ್ 1ರಲ್ಲಿ ಮತ್ತು ನಾಲ್ಕನೇ ಸ್ಥಾನ ಪಡೆದ ತಂಡವು ಐದನೇ ಸ್ಥಾನ ಪಡೆದ ತಂಡವನ್ನು ಎಲಿಮಿನೇಟರ್ 2ರಲ್ಲಿ ಎದುರಿಸಲಿದೆ.

ಎಲಿಮಿನೇಟರ್ 1ರ ವಿಜೇತ ತಂಡವು ಲೀಗ್‌ನಲ್ಲಿ ಅಗ್ರ ಸ್ಥಾನ ಪಡೆಯುವ ತಂಡದೊಂದಿಗೆ ಮತ್ತು ಎಲಿಮಿನೇಟರ್ 2ರ ವಿಜೇತ ತಂಡವು ಲೀಗ್ ಹಂತದಲ್ಲಿ ಎರಡನೇ ಸ್ಥಾನ ಪಡೆಯುವ ತಂಡದೊಂದಿಗೆ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ದೆಹಲಿ ಲೆಗ್‌ನ ಪಂದ್ಯಗಳು ಶುಕ್ರವಾರದಿಂದ ತ್ಯಾಗರಾಜ್ ಕ್ರೀಡಾ ಸಂಕೀರ್ಣನಲ್ಲಿ ನಡೆಯಲಿವೆ.

22.6 ಕೋಟಿ ಮಂದಿ ವೀಕ್ಷಣೆ: ಪ್ರೊ ಕಬಡ್ಡಿ ಲೀಗ್‌ನ 10ನೇ ಆವೃತ್ತಿಯ ಆರಂಭಿಕ 90 ಪಂದ್ಯಗಳನ್ನು ದಾಖಲೆಯ 22.6 ಕೋಟಿ ಮಂದಿ ವೀಕ್ಷಣೆ ಮಾಡಿದ್ದಾರೆ. 9ನೇ ಆವೃತ್ತಿಗೆ ಹೋಲಿಕೆ ಮಾಡಿದರೆ ವೀಕ್ಷಕರ ಸಂಖ್ಯೆ ಶೇ 17ರಷ್ಟು ಹೆಚ್ಚಳವಾಗಿದೆ ಎಂದು ಪಿಕೆಎಲ್‌ನ ಅಧಿಕೃತ ಪ್ರಸಾರಕರಾದ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಹೇಳಿದೆ.

ಇಸ್ಲಾಮಾಬಾದ್‌ನಲ್ಲಿ ಫೆ.3 ಮತ್ತು 4ರಂದು ಡೇವಿಸ್ ಕಪ್ ವಿಶ್ವಗುಂಪಿನ ಪಂದ್ಯವಾಡಲು ಪಾಕಿಸ್ತಾನಕ್ಕೆ ತೆರಳಿದ ಭಾರತ ತಂಡವನ್ನು ಭಾರತೀಯ ಹೈಕಮಿಷನ್‌ನ ಮುಖ್ಯಸ್ಥೆ ಗೀತಿಕಾ ಶ್ರೀವಾಸ್ತವ ಮತ್ತು ಹೈಕಮಿಷನ್‌ನ ಅಧಿಕಾರಿಗಳು ಬುಧವಾರ ರಾತ್ರಿ ಬರಮಾಡಿಕೊಂಡರು.

'ಚಾಲೆಂಜರ್ ಟೂರ್ನಿಗಳತ್ತ ಗಮನ'

ಚೆನ್ನೈ (ಪಿಟಿಐ): ಭಾರತದ ಟೆನಿಸ್ ಆಟಗಾರರು ಸದ್ಯ ಚಾಲೆಂಜರ್ ಟೂರ್ನಿಗಳಲ್ಲಿ ಆಡುವ ಕಡೆ ಗಮನಹರಿಸಬೇಕು. ವಿದೇಶಗಳಲ್ಲಿ ಆಡುವ ಬದಲು ದೇಶದ ಪ್ರಮುಖ ಟೂರ್ನಿಗಳಲ್ಲಿ ಆಡುವುದು ಒಳ್ಳೆಯದು ಎಂದು ಮಾಜಿ ಟೆನಿಸ್ ತಾರೆ ವಿಜಯ್ ಅಮೃತರಾಜ್ ಗುರುವಾರ ಇಲ್ಲಿ ಸಲಹೆ ನೀಡಿದರು.

ಬ್ಯೋನ್ ಬೋರ್ಗ್, ಜಾನ್ ಮೆಕೆನ್ರೊ ಮತ್ತು ರಾಡ್ ಲೇವರ್ ಅಂಥ ಘಟಾನುಘಟಿ ಆಟಗಾರರನ್ನು ತಮ್ಮ ಉತ್ತುಂಗದ ದಿನಗಳಲ್ಲಿ ಸೋಲಿಸಿದ್ದ ಅವರು, ಇಲ್ಲಿ ಆರಂಭವಾಗುವ ಚಾಲೆಂಜರ್ ಟೂರ್ನಿಗೆ ಪೂರ್ವಭಾವಿಯಾಗಿ ಪಿಟಿಐ ಜೊತೆ ಮಾತನಾಡಿದರು.

ಸಂಕ್ಷಿಪ್ತ ಸುದ್ದಿ

ಚಿತ್ರ ನಿರ್ಮಾಪಕನ ಮಗ ಅಗ್ನಿದೇವ್ ಕ್ರಿಕೆಟ್ ಸಾಧನೆ

ನವದೆಹಲಿ (ಪಿಟಿಐ): 'ನನ್ನ ತಂದೆಯವರು ಚಿತ್ರ ನಿರ್ಮಾಪಕರಾಗಿದ್ದಾರೆ. ಆದ್ದರಿಂದ ನನಗೆ ಚಿತ್ರರಂಗದ ಪ್ರವೇಶ ಸುಲಭವಾಗಿತ್ತು. ಆದರೂ ಸಿನೆಮಾಗಳತ್ತ ನನಗೆ ಮೊದಲಿನಿಂದಲೂ ಒಲವು ಇರಲಿಲ್ಲ. ಕ್ರಿಕೆಟ್ ಆಟದತ್ತಲೇ ಹೆಚ್ಚು ಸೆಳೆತವಿತ್ತು' ಎಂದು ಮಿಜೋರಾಂ ಕ್ರಿಕೆಟ್ ತಂಡದ ಆಟಗಾರ ಅಗ್ನಿದೇವ್ ಚೋಪ್ರಾ ಹೇಳಿದ್ದಾರೆ.

ಬಾಲಿವುಡ್ ಚಿತ್ರ ನಿರ್ಮಾಪಕ, ನಿರ್ದೇಶಕ ವಿಧು ವಿನೋದ್ ಚೋಪ್ರಾ ಅವರ ಮಗ ಅಗ್ನಿದೇವ್ ರಣಜಿ ಕ್ರಿಕೆಟ್ ಟೂರ್ನಿಯಲ್ಲಿ ಮಿಂಚುತ್ತಿದ್ದಾರೆ. ಈಚೆಗೆ ನಡೆದ ಪ್ಲೇಟ್ ಗುಂಪಿನ ಪಂದ್ಯದಲ್ಲಿ ಅವರು ಮೇಘಾಲಯ ಎದುರು ಶತಕ ಗಳಿಸಿದ್ದರು. ಅವರು ಒಟ್ಟು ನಾಲ್ಕು ಪಂದ್ಯಗಳಿಂದ 767 ರನ್ ಗಳಿಸಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಾಲ್ಯದಿಂದಲೂ ನನಗೆ ಹಲವರು ಈ ಪ್ರಶ್ನೆ ಕೇಳಿದ್ದಾರೆ. ಆದರೆ ನನ್ನ ತಂದೆ ಯಾವತ್ತೂ ನನ್ನ ಆಸೆಗೆ ಅಡ್ಡ ಬಂದಿಲ್ಲ. ಯಾವುದೇ ಕೆಲಸ ಮಾಡಿದರು ಶ್ರೇಷ್ಠ ರೀತಿಯಲ್ಲಿ ಮಾಡಬೇಕು ದೊಡ್ಡದು, ಸಣ್ಣದು ಎಂಬ ತಾರತಮ್ಯ ಬೇಡ ಎಂದು ನನಗೂ ಮತ್ತು ನನ್ನ ಸಹೋದರಿಗೆ ಅಪ್ಪ ಹೇಳಿದ್ದರು. ಕ್ರಿಕೆಟ್‌ನಲ್ಲಿ ಸಾಧನೆ ಮಾಡಲು ಅವಕಾಶ ಕೊಟ್ಟರು' ಎಂದರು.

ಅಗ್ನಿದೇವ್ ಅವರು 19 ವರ್ಷದೊಳಗಿನ ಮತ್ತು 23 ವರ್ಷದೊಳಗಿನವರ ಕ್ರಿಕೆಟ್‌ನಲ್ಲಿ ಮುಂಬೈ ತಂಡಗಳನ್ನು ಪ್ರತಿನಿಧಿಸಿದ್ದಾರೆ.

ಲೈಂಗಿಕ ದೌರ್ಜನ್ಯ ಆರೋಪ: ತಂಡ ತ್ಯಜಿಸಿದ ಇಟೊ

ದೋಹಾ (ಎಎಫ್‌ಪಿ): ಇಬ್ಬರು ಮಹಿಳೆಯರು, ತಮ್ಮ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ ಮಾಡಿರುವ ಬಗ್ಗೆ ಮಾಧ್ಯಮ ಗಳಲ್ಲಿ ವರದಿ ಪ್ರಕಟವಾದ ಬೆನ್ನಲ್ಲೇ ಮಿಡ್‌ಫೀಲ್ಡರ್ ಜುನ್ಯಾ ಇಟೊ ಅವರು ಏಷ್ಯನ್ ಕಪ್‌ನಲ್ಲಿ ಆಡುತ್ತಿರುವ ತಂಡದಿಂದ ಹೊರನಡೆದಿದ್ದಾರೆ ಎಂದು ಜಪಾನ್ ಫುಟ್‌ಬಾಲ್ ಸಂಸ್ಥೆ ಗುರುವಾರ ತಿಳಿಸಿದೆ. ಆದರೆ ತಮ್ಮ ವಿರುದ್ಧದ ಆರೋಪವನ್ನು ಇಟೊ ಅಲ್ಲಗಳೆದಿದ್ದಾರೆ.

ಮಾನಸಿಕ ಶಾಂತಿ ಮತ್ತು ದೈಹಿಕ ಸ್ವಾಸ್ಥ್ಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಇಟೊ ಅವರು ತಂಡ ತ್ಯಜಿಸಿದ್ದಾರೆ ಎಂದು ಜಪಾನ್ ಫುಟ್‌ಬಾಲ್ ಸಂಸ್ಥೆ ತಿಳಿಸಿದೆ. ಕಳೆದ ವರ್ಷ ಒಸಾಕಾದಲ್ಲಿ ನಡೆದಿತ್ತೆನ್ನಲಾದ ಈ ಪ್ರಕರಣದ ಬಗ್ಗೆ ಭಿನ್ನ ರೀತಿಯ ಹೇಳಿಕೆಗಳು ಕೇಳಿಬಂದಿವೆ. ಈ ಪ್ರಕರಣವನ್ನು ಎಚ್ಚರಿಕೆಯಿಂದ ನಿರ್ವಹಿಸಲಾಗುತ್ತದೆ ಎಂದೂ ಅದು ಹೇಳಿದೆ.

ಪಶ್ಚಿಮ ಬಂಗಾಳ ಚಾಂಪಿಯನ್

ಶಿವಮೊಗ್ಗ: ಪಶ್ಚಿಮ ಬಂಗಾಳ ತಂಡ ನೇರ ಸೆಟ್‌ಗಳಿಂದ ಗುಜರಾತ್ ತಂಡವನ್ನು ಸೋಲಿಸಿ ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯಾ ಆಶ್ರಯದ 67ನೇ ರಾಷ್ಟ್ರೀಯ 19 ವರ್ಷದೊಳಗಿನ ಬಾಲಕಿಯರ ವಾಲಿಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಕಿರೀಟ ಧರಿಸಿತು. ನೆಹರೂ ಕ್ರೀಡಾಂಗಣದಲ್ಲಿ ಗುರುವಾರ ಹೊನಲು ಬೆಳಕಿನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಪಶ್ಚಿಮ ಬಂಗಾಳ 25–14, 25–15, 25–23 ರಿಂದ ಜಯಗಳಿಸಿತು. ಬಂಗಾಳದ ಆಟಗಾರ್ತಿಯರು ಮೊದಲ ಎರಡು ಸೆಟ್‌ಗಳನ್ನು ಸುಲಭವಾಗಿ ಗೆದ್ದರು. ಮೂರನೇ ಸೆಟ್‌ನಲ್ಲಿ ಮಾತ್ರ ಗುಜರಾತ್ ತಂಡ ತೀವ್ರ ಪ್ರತಿರೋಧ ಒಡ್ಡಿತು.

ಬೀಮನ್ ಚಿನ್ನದ ಪದಕಕ್ಕೆ ದಕ್ಕಿತು ₹3.65 ಕೋಟಿ

ನ್ಯೂಯಾರ್ಕ್ (ಎಎಫ್‌ಪಿ): ಅಮೆರಿಕದ ಲಾಂಗ್‌ಜಂಪ್ ದಿಗ್ಗಜ ಬಾಬ್ ಬೀಮನ್ ಅವರು 1968ರ ಮೆಕ್ಸಿಕೊ ಸಿಟಿ ಒಲಿಂಪಿಕ್ಸ್‌ನಲ್ಲಿ ಗೆದ್ದ ಚಿನ್ನದ ಪದಕಕ್ಕೆ ಹರಾಜಿನಲ್ಲಿ ಗುರುವಾರ ₹3.65 ಕೋಟಿ (4,41,000 ಡಾಲರ್) ಮೊತ್ತಕ್ಕೆ ಮಾರಾಟವಾಗಿದೆ.

'ಈ ಪದಕ ನನ್ನಿಂದ ಬೇರೆಯವರ ಪಾಲಾಗುವ ಸಮಯ ಬಂದಿದೆ' ಎಂದು 77 ವರ್ಷದ ಬೀಮನ್ ಅವರು ಕ್ರಿಸ್ಟೀಸ್‌ನಲ್ಲಿ ಹರಾಜಿಗೆ ಮುನ್ನ ಗುರುವಾರ ಸುದ್ದಿಸಂಸ್ಥೆಗೆ ತಿಳಿಸಿದರು.

ಬೀಮನ್ 1968ರ ಒಲಿಂಪಿಕ್ಸ್‌ನಲ್ಲಿ 8.9 ಮೀ. (29 ಅಡಿ ಎರಡೂಕಾಲು ಇಂಚು) ದೂರ ಜಿಗಿದು ಚಾರಿತ್ರಿಕ ಸಾಧನೆ ದಾಖಲಿಸಿದ್ದರು. ಒಲಿಂಪಿಕ್ಸ್‌ನಲ್ಲಿ ಆ ದಾಖಲೆ ಇದುವರೆಗೆ ಅಭೇದ್ಯವಾಗಿ ಉಳಿದುಕೊಂಡಿದೆ.

ಹಾಕಿಪಟು ಉತ್ತಯ್ಯ ನಿಧನ

ಬೆಂಗಳೂರು: ಭಾರತ ತಂಡವನ್ನು ಪ್ರತಿನಿಧಿಸಿದ್ದ ಹಾಕಿ ಆಟಗಾರ ಎ.ಎಸ್. ಉತ್ತಯ್ಯ (83) ಗುರುವಾರ ಬೆಳಿಗ್ಗೆ ನಿಧನರಾದರು. 1970ರ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದ ಭಾರತ ತಂಡದಲ್ಲಿ ಅವರು ಆಡಿದ್ದರು. ರಾಷ್ಟ್ರೀಯ ಹಾಕಿ ಟೂರ್ನಿಗಳಲ್ಲಿ ಅವರು ಕರ್ನಾಟಕ ಮತ್ತು ಸರ್ವಿಸಸ್ ತಂಡಗಳನ್ನು ಪ್ರತಿನಿಧಿಸಿದ್ದರು.